ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟೀಂ ಇಂಡಿಯಾ ಸೆಮಿಫೈನಲ್‌ಗೆ
ಪಾಕ್ ಔಟ್

ಹೈವೋಲ್ಟೇಜ್ ಪಂದ್ಯದಲ್ಲಿ ಟೀಂ ಇಂಡಿಯಾಗೆ ಭರ್ಜರಿ ಜಯ

ಚಾಂಪಿಯನ್ಸ್ ಟ್ರೋಫಿಯಿಂದ ಪಾಕ್ ತಂಡ ಬಹುತೇಕ ಔಟ್

ದುಬೈ ಕ್ರೀಡಾಂಗಣದಲ್ಲಿ ಶತಕದೊಂದಿಗೆ ಗುಡುಗಿದ ಕೊಹ್ಲಿ

51ನೇ ಶತಕದ ಬಲ, 14 ಸಾವಿರ ರನ್‌ಗಳ ಗಡಿ ದಾಟಿದ ವಿರಾಟ್

ಸಂಕ್ಷಿಪ್ತ ಸ್ಕೋರ್

ಪಾಕಿಸ್ತಾನ 49.4 ಓವರ್‌ಗಳಲ್ಲಿ **241** ರನ್‌ಗಳಿಗೆ ಆಲೌಟ್

ಭಾರತ 42.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ **244** ರನ್

ಸೊಂಪಾದ ಪುಟಗಳು

ಕೈ ಪಾಳಯದಲ್ಲಿ ಕಾಣಿಸುತ್ತಿದೆ ತೃತೀಯ ಶಕ್ತಿ
ಮೂರ್ತಿಪೂಜೆ ಆರ್.ಟಿ.ವಿಠ್ಠಲಮೂರ್ತಿ 6

ಕ್ರಿಕೆಟ್ ದುಡ್ಡು; ದುಬೈನಲ್ಲಿ ಜಾತ್ರೆ!
ವಿದೇಶವಾಸಿ ಕಿರಣ್ ಉಪಾಧ್ಯಾಯ ಬಹೈನ್ 7

ದಾರಿದೀಪೋಕ್ತಿ

ಜನರಿಗೆ ಯಾವತ್ತೂ ನಿಮ್ಮ ಉಪದೇಶ ಬೇಕಿರುವುದಿಲ್ಲ. ಕೆಲವು ಸಲ ಅವರ ಕೈ ಹಿಡಿದು ಅವರು ಹೇಳುವುದನ್ನು ಗಮನವಿಟ್ಟು ಕೇಳಿದರೂ ಸಾಕು. ಅವರನ್ನು ಅರ್ಥ ಮಾಡಿಕೊಂಡರೆ ಇನ್ನೂ ಒಳ್ಳೆಯದು. ಅವರಿಗೆ ಅದಕ್ಕಿಂತ ಹೆಚ್ಚಿನ ಖುಷಿ ಬೇರೆ ಯಾವುದರಿಂದಲೂ ಸಿಗದು.

ವಕ್ರತುಂಡೋಕ್ತಿ



ನಿಮ್ಮ ಮುಂದಿರುವವರು ಎರಡು ಸಲ ಆಕಳಿಸಿದರೆ, ಇನ್ನು ಶೇ.ಹತ್ತರಷ್ಟು ಬ್ಯಾಟರಿ ಉಳಿದಿದೆ ಎಂದರ್ಥ.

ಫನ್‌ತರಂಗ

- ರಘುಪತಿ ಶೃಂಗೇರಿ -



ಬೃಹತ್ ಹೋರಾಟಕ್ಕೆ ಕನ್ನಡಪರ ಸಂಘಟನೆಗಳಿಂದ ಕರೆ
ಕರ್ನಾಟಕ - ಮಹಾರಾಷ್ಟ್ರ ಮಧ್ಯೆ ಭಾನುವಾರವೂ ಬಸ್ ಸ್ಥಗಿತ

ಕಂಡಕ್ಟರ್ ಮೇಲೆ ಹಲ್ಲೆ ರಾಜ್ಯಾದ್ಯಂತ ಆಕ್ರೋಶ

ಬೆಳಗಾವಿ: ಕನ್ನಡ ನೆಲದಲ್ಲೇ ಕನ್ನಡಿಗರ ಹಲ್ಲೆ ಮಾಡುವುದಲ್ಲದೆ ನಕಲಿ ಪೋಕ್ಸೊ ಪ್ರಕರಣ ದಾಖಲಿಸುವ ಮೂಲಕ ಕನ್ನಡಿಗರ ಮೇಲೆ ಮರಾಠಿ ಪುಂಡರ ದಬ್ಬಾಳಿಕೆಗೆ ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾಗಿದ್ದು, ಘಟನೆ ಖಂಡಿಸಿ ಬೃಹತ್ ಹೋರಾಟಕ್ಕೆ ಕನ್ನಡಪರ ಸಂಘಟನೆಗಳು ಪ್ರತಿಭಟನೆಗೆ ಕರೆ ನೀಡಿವೆ.

ಬೆಳಗಾವಿ ತಾಲೂಕಿನ ಸಣ್ಣ ಬಾಳೇಕುಂದ್ರಿ ಗ್ರಾಮದಲ್ಲಿ ಕಂಡಕ್ಟರ್ ಮೇಲೆ ಹಲ್ಲೆ ನಡೆದಿರುವ ಘಟನೆ ಸಂಬಂಧಿಸಿದಂತೆ ಈವರೆಗೂ ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿ ತುಟಿ ಬಿಚ್ಚದೆ ಇರುವುದು, ಎಂಇಎಸ್ ಮುಖಂಡರು ಅವಹೇಳನಕಾರಿ ಹೇಳಿಕೆ ನೀಡಿದರೂ ಕ್ರಮ ಕೈಗೊಳ್ಳದ ಪೊಲೀಸರ ನಡೆಗೆ ಆಕ್ರೋಶ ವ್ಯಕ್ತವಾಗುತ್ತಿದೆ. ಕಂಡಕ್ಟರ್ ವಿರುದ್ಧ ಪೋಕ್ಸೊ ಪ್ರಕರಣ ವಾಪಸ್ ಪಡೆದು ಮರಾಠಿ ಪುಂಡರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಅವರು ಮಂಗಳವಾರ ಬೆಳಗಾವಿಗೆ ಬರುವಂತೆ ಕನ್ನಡಿಗರಿಗೆ ಕರೆ ನೀಡಿದ್ದಾರೆ.

ಬಸ್ ಸಂಚಾರ ಸ್ಥಗಿತ: ಪ್ರಯಾಣಿಕರ ಪರದಾಟ

ಸಾರಿಗೆ ಸಂಸ್ಥೆಯ ಬಸ್ ನಿರ್ವಾಹಕ ಮತ್ತು ಚಾಲಕನ ಮೇಲಿನ ಹಲ್ಲೆ ಪ್ರಕರಣದಿಂದಾಗಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಮಧ್ಯೆ ಸ್ಥಗಿತಗೊಂಡಿದ್ದ ಬಸ್‌ಗಳ ಸಂಚಾರ ಭಾನುವಾರವೂ ಮುಂದುವರಿಯಿತು. ಕೊಲ್ಹಾಪುರ, ಇಚಲಕರಂಜಿ, ಸಾತಾರಾ, ಪುಣೆ, ಮುಂಬೈ ಮತ್ತಿತರ ಕಡೆ ತೆರಳಲು ಬೆಳಗ್ಗೆಯೇ ನೂರಾರು ಪ್ರಯಾಣಿಕರು ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣಕ್ಕೆ ಧಾವಿಸಿದ್ದರು. ಆದರೆ, ಭಾನುವಾರ ಸಂಜೆಯವರೆಗೂ ಬೆಳಗಾವಿಯಿಂದ ಯಾವೊಂದು ಬಸ್ ಕೊಲ್ಹಾಪುರಕ್ಕೆ ತೆರಳದ್ದರಿಂದ ಪ್ರಯಾಣಿಕರು ಪರದಾಡುವಂತಾಗಿದೆ. ಕೆಲವರು ನಿಪ್ಪಾಣಿ ತಾಲೂಕಿನ ಕೊಗನೊಳ್ಳಿ ಬಳಿಯ ಕರ್ನಾಟಕ-ಮಹಾರಾಷ್ಟ್ರ ಗಡಿಯವರೆಗೆ ಹೋಗುತ್ತಿದ್ದ ಬಸ್‌ಗಳಲ್ಲೇ ಹಲವರು ಪ್ರಯಾಣ ಬೆಳೆಸಿದರು. ಇನ್ನೂ ಹಲವರು ಪ್ರಯಾಣವನ್ನೇ ಮುಂದೂಡಿ ತಮ್ಮ ಮನೆಗಳತ್ತ ಮರಳಿದರು.

ಪುಣೆಯ ಸ್ವಾರಗೇಟ್‌ನಲ್ಲಿ ಶಿವಸೇನೆ ಹಾಗೂ ಎಂಎನ್‌ಎಸ್ ಪುಂಡರು ರಾಜ್ಯದ ಅಂಬಾರಿ ಬಸ್‌ಗೆ ಮಸಿ ಬಳಿದಿರುವುದು.

ನಾಲಗೆ ಹರಿಬಿಟ್ಟ ಎಂಇಎಸ್ ಮುಖಂಡ

ಕಂಡಕ್ಟರ್ ಮೇಲೆ ಯುವತಿಗೆ ಲೈಂಗಿಕ ದೌರ್ಜನ್ಯ ನೀಡಿರುವ ಆರೋಪದ ಮೇಲೆ ಪೋಕ್ಸೊ ಪ್ರಕರಣ ದಾಖಲಾಗಿದೆ. ಇಂಥವರ ಪರವಾಗಿ ಹೋರಾಟ ಮಾಡುವ ಕನ್ನಡಪರ ಹೋರಾಟಗಾರರು ನಾಲಾಯಕರು ಎಂದು ಎಂಇಎಸ್ ಮುಖಂಡ ಶುಭಂ ಸೆಳಕೆ ನಾಲಗೆ ಹರಿಬಿಟ್ಟಿದ್ದಾನೆ.

ರಾಜ್ಯದ ವಿರುದ್ಧ ಪಿತೂರಿ ಸಹಿಸುವುದಿಲ್ಲ

ಬೆಂಗಳೂರು: ಈ ನೆಲದ ನೀರು, ಅನ್ನ, ಗಾಳಿ ಸೇವಿಸಿ ಕನ್ನಡದ ವಿರುದ್ಧ ಮಾತನಾಡುವುದು, ರಾಜ್ಯದ ವಿರುದ್ಧ ಪಿತೂರಿ ನಡೆಸುವುದನ್ನು ಸಹಿಸಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ನಮ್ಮ ನೆಲದಲ್ಲೇ ಇದ್ದುಕೊಂಡು ಕನ್ನಡಿಗರ ತೇಜೋವಧೆ ಮಾಡುವುದು ಅಕ್ಷಮ್ಯ. ಅನೇಕ ಕನ್ನಡಪರ ಹೋರಾಟಗಾರರ ಹೇಳಿಕೆಗಳನ್ನು ಗಮನಿಸಿದ್ದೇನೆ. ಇದರ ವಿರುದ್ಧ ಕನ್ನಡಿಗರು ಧ್ವನಿ ಎತ್ತಬೇಕು. ಷಡ್ಯಂತ್ರ, ಪಿತೂರಿ ಮಾಡುವವರನ್ನು ಸರಕಾರ ಹತ್ತಿಕ್ಕಬೇಕು ಎಂದು ಒತ್ತಾಯಿಸಿದರು.

ಬಂಧಿತರ ಸಂಖ್ಯೆ 5ಕ್ಕೆ ಏರಿಕೆ

ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಮೇಲೆ ಮಾರಿಹಾಳ ಠಾಣೆ ಪೊಲೀಸರು ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದು ಬಂಧಿತ ಆರೋಪಿಗಳ ಸಂಖ್ಯೆ 5ಕ್ಕೆ ಏರಿಕೆಯಾಗಿದೆ. ನಗರದ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಒಬ್ಬ ಅಪ್ರಾಪ್ತನ ಜತೆಗೆ ಮೋಹನ್ ಹಂಚಿನಮನಿ (25) ಎಂಬಾತನನ್ನು ಬಂಧಿಸಿ ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಶನಿವಾರ ತುಮರಿ ದತ್ತು ಚಂದಗಡಕರ (33), ರಾಹುಲ್ ರಾಜು ನಾಯ್ಡು (28), ಬಾಳು ಸುರೇಶ್ ಗೊಂಜೇಕರ (28) ಎಂಬುವವರನ್ನು ಪೊಲೀಸರು ಬಂಧಿಸಿದ್ದರು.

ನಡೆದಿರುವ ಘಟನೆಗಳ ಕುರಿತಂತೆ ಕರ್ನಾಟಕ ಸರಕಾರ ಸ್ಪಷ್ಟ ನಿಲುವು ತೆಗೆದುಕೊಳ್ಳುವವರೆಗೆ ಮತ್ತು ನಮ್ಮ ಆಡಳಿತದೊಂದಿಗೆ ಚರ್ಚೆಯಲ್ಲಿ ತೊಡಗುವವರೆಗೆ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಸ್ ಸೇವೆಗಳನ್ನು ಸ್ಥಗಿತಗೊಳಿಸಲಾಗುವುದು.
- ಪ್ರತಾಪ್ ಸರ್‌ನಾಯಕ್ ಮಹಾರಾಷ್ಟ್ರ ಸಾರಿಗೆ ಸಚಿವ

ಮಾನ್ಯ ಗೃಹ ಸಚಿವರು ಕೂಡಲೇ ಮಧ್ಯೆ ಪ್ರವೇಶಿಸಿ ಮಹದೇವಪ್ಪ ವಿರುದ್ಧದ ಪ್ರಕರಣ ಹಿಂದಕ್ಕೆ ಪಡೆಯಲಿ. ಇದು ನನ್ನ ಆಗ್ರಹ. ಈ ಸಂಘರ್ಷ ಹೀಗೆ ಮುಂದುವರಿಯಲಿ ಎಂಬುದು ಅವರ ಆಸೆಯಾದರೆ ನಾವೇನೂ ಮಾಡಲು ಸಾಧ್ಯವಿಲ್ಲ. ಕರ್ನಾಟಕದ ಶಾಂತಿ ಕದಡಿದರೆ ಅದಕ್ಕೆ ಸರಕಾರವೇ ಹೊಣೆ ಹೊರಬೇಕಾಗುತ್ತದೆ.
ಟಿ.ಎ.ನಾರಾಯಣಗೌಡ ಕರವೇ ರಾಜ್ಯಾಧ್ಯಕ್ಷ

ಬಿಜೆಪಿಯ ಬಣ ಬಡಿದಾಟದ ನಡುವೆಯೂ ಹೋರಾಟ
ಸಂಘ ಪರಿವಾರದ ನೇತೃತ್ವದಲ್ಲಿ ಬಹಿರಂಗ ಸಮಾವೇಶ

ಮೈಸೂರಿನಲ್ಲಿ ಇಂದು ಕೇಸರಿ ಬಲಪ್ರದರ್ಶನ?

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮೈಸೂರಿನ ಉದಯಗಿರಿ ಕಲ್ಲು ತೂರಾಟ ಪ್ರಕರಣವನ್ನು ವಿರೋಧಿಸಿ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ವಿವಿಧ ಹಿಂದೂ ಪರ ಸಂಘಟನೆಗಳು ಮೈಸೂರಿನಲ್ಲಿ ಬೃಹತ್ ಸಮಾವೇಶಕ್ಕೆ ಕರೆ ನೀಡಿವೆ. ಪ್ರತಿಭಟನೆ, ಬಹಿರಂಗ ಸಮಾವೇಶಕ್ಕೆ ಗೃಹ ಇಲಾಖೆ ಅನುಮತಿ ನಿರಾಕರಿಸಿದ್ದರೂ ಸಮಾವೇಶಕ್ಕೆ ಮುಂದಾಗಿರುವುದಕ್ಕೆ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಭಾರಿ ಬಿಗಿ ಭದ್ರತೆ ಒದಗಿಸಲಾಗಿದೆ.

ಕಲ್ಲು ತೂರಾಟ ಪ್ರಕರಣವನ್ನು ವಿರೋಧಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ವತಿಯಿಂದ ಸೋಮವಾರ ಜನಾಂದೋಲನ ಜಾಥಾ ಆಯೋಜಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ದಲಿತ ಜಾಗೃತಿ ಮಹಾಸಭಾದಿಂದಲೂ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಆದರೆ ಈ ಎರಡೂ ಸಮಾವೇಶಗಳಿಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಆದರೆ ಎರಡೂ ಸಂಘಟನೆಗಳು ಪ್ರತ್ಯೇಕ ಸಮಾವೇಶಕ್ಕೆ ತಯಾರಿ ನಡೆಸಿರುವುದರಿಂದ ಮೈಸೂರು ಬೂದಿಮುಚ್ಚಿದ ಕೆಂಡವಾಗಿದೆ.

ರಾಷ್ಟ್ರ ಸುರಕ್ಷಾ ಜನಾಂದೋಲನಾ ಸಮಿತಿ ಆಯೋಜಿಸಿರುವ ಸಮಾವೇಶಕ್ಕೆ ಬಿಜೆಪಿಯೂ ಬೆಂಬಲಿಸಿದ್ದು, ಮೈಸೂರು ಜಾಥಾ ನಡೆಸುವುದಾಗಿ ರಾಜ್ಯಾಧ್ಯಕ್ಷ ವಿಜಯೇಂದ್ರ ಘೋಷಿಸಿದ್ದಾರೆ. ಆದರೆ ಈ ಸಮಾವೇಶ ಸಂಘ ಪರಿವಾರದಿಂದ ನಡೆಯುತ್ತಿರುವುದರಿಂದ ಪಕ್ಷದ ಕಾರ್ಯಕ್ರಮವಾಗುವುದಿಲ್ಲ ಎನ್ನುವ ಮಾತುಗಳು ಕೇಳಿಬಂದಿವೆ. ಈ ಸಮಾವೇಶದಲ್ಲಿ ವಿಜಯೇಂದ್ರ ಮಾತ್ರವಲ್ಲದೇ, ಯತ್ನಾಳ್ ಬಣದಲ್ಲಿ ಗುರುತಿಸಿಕೊಂಡಿರುವ ಹಲವು ನಾಯಕರು ಭಾಗವಹಿಸುವ ಸಾಧ್ಯತೆಯಿದೆ. ಹೀಗಾಗಿ ಯತ್ನಾಳ್ ಬಣ ನಾಯಕರು ಹಾಗೂ ವಿಜಯೇಂದ್ರ ಬಣದವರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

ನೇತೃತ್ವದ ಗೊಂದಲ

ಉದಯಗಿರಿ ಗಲಾಟೆ ಪ್ರಕರಣವನ್ನು ವಿರೋಧಿಸಿ ಸೋಮವಾರ ಮೈಸೂರಿನಲ್ಲಿ ನಡೆಯಲಿರುವ ಬೃಹತ್ ಸಮಾವೇಶವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ರಾಜ್ಯ ಬಿಜೆಪಿ ವತಿಯಿಂದ ನಡೆಯುತ್ತಿರುವ ಮೈಸೂರು ಚಲೋ ಎಂದು ಹೇಳಿದ್ದಾರೆ. ಆದರೆ ಇನ್ನೊಂದೆಡೆ ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ನಾಯಕರು ಇದು ಬಿಜೆಪಿಯಿಂದ ಆಯೋಜಿಸಿರುವ ಕಾರ್ಯಕ್ರಮವಲ್ಲ. ಸಂಘ ಪರಿವಾರದ ಕಾರ್ಯಕ್ರಮವಾಗಿದ್ದು, ಅದರಲ್ಲಿ ಯಾರೆಲ್ಲ ಭಾಗವಹಿಸಲಿದ್ದಾರೆ ಎನ್ನುವುದು ಸ್ಪಷ್ಟವಿಲ್ಲ ಎಂದಿದ್ದಾರೆ. ಈ ಮೂಲಕ ಗಲಭೆ ಪ್ರಕರಣದ ವಿರುದ್ಧದ ಹೋರಾಟದಲ್ಲಿಯೂ ಬಿಜೆಪಿಯಲ್ಲಿ ಬಣ ಬಡಿದಾಟವಿರುವುದು ಸ್ಪಷ್ಟವಾಗಿದೆ.

ಮೈಸೂರಿನಲ್ಲಿ ಕರ್ಫ್ಯೂ ಜಾರಿ

ಅನುಮತಿ ನಿರಾಕರಣೆ ನಡುವೆಯೂ ಪ್ರತಿಭಟನೆಗೆ ಮುಂದಾಗಿರುವ ವಿವಿಧ ಸಂಘಟನೆಗಳ ನಿಲುವಿನ ವಿರುದ್ಧ ಮೈಸೂರು ಪೊಲೀಸರು ಕ್ರಮಕ್ಕೆ ಮುಂದಾಗಿದ್ದು, ಸೋಮವಾರ ಮೈಸೂರು ನಗರದಾದ್ಯಂತ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ. ಈ ಕುರಿತು ಆದೇಶ ಹೊರಡಿಸಿರುವ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಭಾನುವಾರ ಮಧ್ಯರಾತ್ರಿಯಿಂದ ಸೋಮವಾರ ಮಧ್ಯರಾತ್ರಿವರೆಗೆ ಬಿಎನ್‌ಎಸ್ ಕಾಯ್ದೆ 163ರ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದ್ದಾರೆ.

ನಾನು ಮೈಸೂರಿಗೆ ತೆರಳಲಿದ್ದೇನೆ. ರಾಜ್ಯ ಸರಕಾರ ಕಾನೂನು-ಸುವ್ಯವಸ್ಥೆ ವಿಚಾರದಲ್ಲಿ ಸಂಪೂರ್ಣ ವಿಫಲವಾಗಿದೆ. ಉದಯಗಿರಿ ಘಟನೆ, ಪೊಲೀಸ್ ಠಾಣೆಗೆ ಪುಡಾರಿಗಳು ನುಗ್ಗಿ ದಾಂಧಲೆ ಮಾಡಿದವರನ್ನು ರಕ್ಷಿಸುವ ಕೆಲಸವನ್ನು ಕಾಂಗ್ರೆಸ್ ಸರಕಾರ ಮಾಡುತ್ತಿದೆ.
- ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯದ ಹಲವೆಡೆ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಅಧಿಕ ಉಷ್ಣಾಂಶ

ಮುಂದಿನ 5 ದಿನ ಬಿಸಿಲ ಧಗೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಧಗೆ ದಿನದಿಂದ ದಿನಕ್ಕೆ ಹೆಚ್ಚಲಾರಂಭಿಸಿದ್ದು, ಮುಂದಿನ ಐದು ದಿನಗಳಲ್ಲಿ ಕೆಲವೆಡೆ ಉಷ್ಣಾಂಶದಲ್ಲಿ 4ರಿಂದ 5 ಡಿಗ್ರಿ ಸೆಲ್ಸಿಯಸ್ ವರೆ ಹೆಚ್ಚಳವಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ಹಲವೆಡೆ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಅಧಿಕ ಉಷ್ಣಾಂಶ ದಾಖಲಾಗಿದೆ. ಬಹುತೇಕ



ಜಿಲ್ಲೆಗಳಲ್ಲಿ ನಿತ್ಯ ಗರಿಷ್ಠ ಉಷ್ಣಾಂಶವು 35 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ಮುಂದಿನ ಐದು ದಿನಗಳಲ್ಲಿ ಏರುಗತಿ ಪಡೆಯುವ ಸಾಧ್ಯತೆಯಿದ್ದು, ಕರಾವಳಿ ಮತ್ತು ಉತ್ತರ ಒಳನಾಡಿನಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 5 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗುವ ಸಂಭವವಿದೆ. ದಕ್ಷಿಣ ಒಳನಾಡಿನಲ್ಲಿ ಎರಡು ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಸೋಮವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಲೀ.ಗೆ 300 ರು. ದಾಟಿದ ತೆಂಗಿನಕಾಯಿ ಎಣ್ಣೆ | ಸನ್ ಫ್ಲವರ್, ಪಾಮ್ ಆಯಿಲ್ 10-20 ರು. ಹೆಚ್ಚಳ

ಅಡುಗೆ ಎಣ್ಣೆ ಬೆಲೆ ಏರಿಕೆ ಬರೆ

ಬೆಂಗಳೂರು: ಬಸ್, ಮೆಟ್ರೋ, ಹಾಲು ದರ ಏರಿಕೆಯ ಬೆನ್ನಲ್ಲೇ ಈಗ ಜನಸಾಮಾನ್ಯರಿಗೆ ಅಡುಗೆ ಎಣ್ಣೆಯ ಬೆಲೆ ಏರಿಕೆಯ ಬರೆ ಬಿದ್ದಿದೆ. ಅದರಲ್ಲೂ ತೆಂಗಿನಕಾಯಿ ಎಣ್ಣೆ ದರ ಲೀಟರ್‌ಗೆ 300 ರು. ಗಡಿ ದಾಟಿದೆ.

ಜಾಗತಿಕ ಮಟ್ಟದಲ್ಲಿ ಪೂರೈಕೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಸೂರ್ಯಕಾಂತಿ ಎಣ್ಣೆಯ ದರ ಏರಿಕೆಯಾಗಿದೆ. ಪ್ರಮುಖವಾಗಿ ಸನ್ ಫ್ಲವರ್, ಪಾಮ್ ಆಯಿಲ್, ಕಡಲೇಕಾಯಿ ಎಣ್ಣೆ, ಅರಳೆ ಎಣ್ಣೆ ಹಾಗೂ ಸಾಸಿವೆ ಎಣ್ಣೆ ದರ 10-20 ರು. ಹೆಚ್ಚಾಗಿದೆ ಎನ್ನುತ್ತಾರೆ ಖಾದ್ಯತೈಲ ವ್ಯಾಪಾರಿಗಳು.

ತೆಂಗಿನ ಎಣ್ಣೆ ದರ ಏರಿಕೆ ಯಾಕೆ?: ಸಾಧಾರಣವಾಗಿ ಮಾರ್ಚ್ ಮಧ್ಯಭಾಗದಿಂದ ರಾಜ್ಯದಲ್ಲಿ ಬಿಸಿಲು ಹೆಚ್ಚಾಗುತ್ತದೆ. ಆದರೆ ಈ ಬಾರಿ ಜನವರಿ ಕೊನೆಯಿಂದಲೇ ಉಷ್ಣಾಂಶ ಏರಿಕೆಯಾಗುತ್ತಿದ್ದು, ಎಳೆನೀರಿಗೆ ಹೆಚ್ಚು

- ಎಳನೀರು ಮಾರಾಟ ಹೆಚ್ಚಳ ಕಾರಣ ಕೊಬ್ಬರಿ ಪೂರೈಕೆಯಾಗುತ್ತಿಲ್ಲ
- ಒಂದು ಲೀಟರ್ ತೆಂಗಿನಕಾಯಿ ಎಣ್ಣೆ ಬೆಲೆಯಲ್ಲಿ 50 ರು. ಹೆಚ್ಚಳ
- ಅಡುಗೆ ಎಣ್ಣೆಯ ಬೆಲೆ ಹೆಚ್ಚಳದಿಂದ ಕಂಗಾಲಾದ ಜನಸಾಮಾನ್ಯರು

ಬಳಕೆಯಾಗುತ್ತಿವೆ. ಇದರ ಜತೆ ಕೊಬ್ಬರಿಯ ದರವೂ ಏರಿಕೆಯಾಗಿದೆ.

1 ವರ್ಷದಿಂದ ಕ್ವಿಂಟಾಲ್‌ಗೆ 8 ರಿಂದ 8,500 ರು. ಇದ್ದ ಕೊಬ್ಬರಿ ಪ್ರಸ್ತುತ 14,500 ರಿಂದ 15 ಸಾವಿರ ರು. ಗಳಿಗೆ ಏರಿಕೆಯಾಗಿದೆ. ಎಳನೀರು ಯಥೇಚ್ಛವಾಗಿ ಮಾರಾಟವಾಗುತ್ತಿರುವ ಕಾರಣ ಕೊಬ್ಬರಿ ಬೇಡಿಕೆ ಪ್ರಮಾಣದಲ್ಲಿ ಪೂರೈಕೆಯಾಗುತ್ತಿಲ್ಲ. ಇದರ ನೇರ ಪರಿಣಾಮ ತೆಂಗಿನ ಎಣ್ಣೆಯ ಮೇಲೆ ಬಿದ್ದಿದೆ. ಇದರಿಂದಾಗಿ ತೆಂಗಿನ ಎಣ್ಣೆ ದರ ಏರಿಕೆಯಾಗುತ್ತಿದೆ. ಹೀಗಾಗಿ ಒಂದು ಲೀಟರ್ ತೆಂಗಿನಕಾಯಿ ಎಣ್ಣೆ ಬೆಲೆಯಲ್ಲಿ 50 ರು. ಹೆಚ್ಚಾಗಿದೆ.

ಅಡುಗೆ ಎಣ್ಣೆಯನ್ನು ಅಕ್ರಮವಾಗಿ ಗೋಡಾನ್‌ಗಳಲ್ಲಿ ಸಂಗ್ರಹಿಸಿ ಇಡಲಾಗುತ್ತಿದೆ ಎಂಬ ಆರೋಪವೂ ಕೇಳಿ ಬರುತ್ತಿದೆ. ಈ ಬಗ್ಗೆ ಆಹಾರ ಹಾಗೂ ನಾಗರಿಕ ಇಲಾಖೆಯ ಅಧಿಕಾರಿಗಳು ಗಮನ ಹರಿಸಬೇಕು ಎಂದು ಎಪಿಎಂಸಿ ವ್ಯಾಪಾರಿಗಳ ಸಂಘ ಒತ್ತಾಯಿಸಿದೆ.

ಕಾಸಿಲ್ಲದೆ ಸಾಮರಸ್ಯ ಸಾರುವಲ್ಲಿ ಸೋತ ಸಂಸ್ಥೆ | ಕನ್ನಡ ಹೋರಾಟಗಾರರ ಆಕ್ರೋಶ

ಉದ್ದೇಶ ಮರೆತ ಮರಾಠ ನಿಗಮ, ನಿಲ್ಲದ ಗಡಿತಂಟೆ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ಮರಾಠಿ ಮಾತನಾಡಲಿಲ್ಲ ಎಂಬ ಕಾರಣಕ್ಕೆ ಸಾರಿಗೆ ನಿಗಮದ ಕಂಡಕ್ಟರ್ ಮಹದೇವ ಹುಕ್ಕೇರಿ ಅವರ ಮೇಲೆ ಬೆಳಗಾವಿ ತಾಲೂಕಿನ ಸಣ್ಣ ಬಾಳೇಕುಂದ್ರಿ ಗ್ರಾಮದಲ್ಲಿ ಮರಾಠಿ ಪುಂಡರು ಹಲ್ಲೆ ಮಾಡಿರುವ ಘಟನೆ ಈಗ ರಾಜಕೀಯ ಚರ್ಚೆಗೆ ದಾರಿ ಮಾಡಿದೆ. ಅದರಲ್ಲೂ ರಾಜ್ಯ ಮರಾಠ ಅಭಿವೃದ್ಧಿ ನಿಗಮದ ಔಚಿತ್ಯದ ಪ್ರಶ್ನೆಗಳು ಉದ್ಭವವಾಗಿವೆ.

ಗಡಿ ಜಿಲ್ಲೆ ಬೆಳಗಾವಿಯಲ್ಲಿ ಮರಾಠಿ ಮಾತನಾಡಲಿಲ್ಲ ಎನ್ನುವ ಕಾರಣಕ್ಕೆ ಕನ್ನಡಿಗ ಕಂಡಕ್ಟರ್‌ಗೆ ಹಲ್ಲೆ ಮಾಡಿದ್ದೂ ಅಲ್ಲದೆ ಪೋಕ್ಸೋ ಪ್ರಕರಣವನ್ನೂ ದಾಖಲಿಸುವುದಾದರೆ, ರಾಜ್ಯದಲ್ಲಿ ಮರಾಠ ಸಮುದಾಯದ ಅಭಿವೃದ್ಧಿ ನಿಗಮದ ಉದ್ದೇಶ ಈಡೇರುತ್ತಿದೆಯೇ ಎನ್ನುವುದು ನಾಡಿನ ಸಾಹಿತಿ, ಹೋರಾಟಗಾರರ ಮೂಲಪ್ರಶ್ನೆಯಾಗಿದೆ. ಮರಾಠಿ ಭಾಷಿಗರು ಮತ್ತು ಕನ್ನಡಿಗರ ನಡುವಿನ ಶಾಂತಿ ಮತ್ತು ಸಾಮರಸ್ಯದ ಉದ್ದೇಶಕ್ಕಾಗಿ (ದೇಶದ ಯಾವುದೇ ರಾಜ್ಯದಲ್ಲೂ ಕನ್ನಡಿಗರ ಅಭಿವೃದ್ಧಿ ನಿಗಮ ಸ್ಥಾಪಿಸದಿದ್ದರೂ) ರಾಜ್ಯದಲ್ಲಿ 2020ರ ನವೆಂಬರ್‌ನಲ್ಲಿ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿತ್ತು. ರಾಜ್ಯದಲ್ಲಿರುವ ಮರಾಠಿ ಭಾಷಿಗರ ಶ್ರೇಯೋಭಿವೃದ್ಧಿ, ಅದೇ ರೀತಿ ಗಡಿಯಲ್ಲಿರುವ ಕನ್ನಡಿಗರ ರಕ್ಷಣೆಯಂಥ ಪರಸ್ಪರ ಸಹಕಾರಗಳು ದೊರೆಯಲಿವೆ ಎನ್ನುವುದು ನಿಗಮದ ಸ್ಥಾಪಿಸಿದ ಅಂದಿನ ಬಿಜೆಪಿ ಸರಕಾರದ ಸಮರ್ಥನೆಯಾಗಿತ್ತು. ಆದರೆ ಈಗ ನಿಗಮ ಕಾಸು-ಕರಿಮಣಿ ಏನೂ ಇಲ್ಲದೆ ಬಡಕಲಾಗಿ ತನ್ನ ಮೂಲ ಚಿಂತನೆ ಎಲ್ಲವನ್ನೂ ಮರೆತು ಬೆಪ್ಪಾಗಿ ಕುಳಿತಿದೆ. → 4

ನಿಗಮದ ಹಿಂದಿನ ಕರಾಮತ್ತೇನು?

ಈ ಹಿಂದೆ ಕೇಂದ್ರ ಸಚಿವರಾಗಿದ್ದ ಸುರೇಶ್ ಅಂಗಡಿ ನಿಧನದ ನಂತರ ಬೆಳಗಾವಿ ಲೋಕಸಭೆ ಮತ್ತು ಆಪರೇಷನ್ ಕಮಲ ಪರಿಣಾಮ ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಎದುರಾಗಿತ್ತು. ಈ ಮೂರು ಕ್ಷೇತ್ರಗಳಲ್ಲೂ ಮರಾಠಿ ಸಮುದಾಯದವರು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಅಂದಿನ ಬಿಜೆಪಿ ಸರಕಾರ ತೀವ್ರ ವಿರೋಧದ ನಡುವೆಯೂ ಮರಾಠ ಅಭಿವೃದ್ಧಿ ನಿಗಮದ ಸ್ಥಾಪಿಸಿತ್ತು. ಇದಕ್ಕೆ ಕನ್ನಡ ಹೋರಾಟಗಾರರು, ಸಾಹಿತಿಗಳು, ಲೇಖಕರಿಂದ ಭಾರೀ ವಿರೋಧ ವ್ಯಕ್ತವಾಗಿತ್ತು. ಕನ್ನಡಿಗರಿಗೆ ಖಾಲಿ ತಟ್ಟೆ, ಮರಾಠಿಗರಿಗೆ ಮೃಷ್ಟಾನ್ನ ಎಂದು ಸಾಹಿತಿ ಜಿ.ಎ.ಸಿದ್ದರಾಮಯ್ಯ ಜರಿದಿದ್ದರು. ಕೆಲವು ಕಡೆ ಬಿಜೆಪಿ ಶಾಸಕರೇ ಇದಕ್ಕೆ ಅಪಸ್ವರ ಎತ್ತಿದ್ದರು. ಮರಾಠ ಮತ್ತು ಕನ್ನಡಿಗರ ನಡುವೆ ನಿರಂತರ ಹೋರಾಟ ನಡೆಯುತ್ತಿರುವ ವೇಳೆ ಮರಾಠ ಅಭಿವೃದ್ಧಿ ನಿಗಮ ಸ್ಥಾಪಿಸುವುದು ಅರ್ಥಹೀನ. ಇದರಿಂದ ಸಾಮರಸ್ಯ ಮೂಡುವುದಿಲ್ಲ ಎಂದು ಡಾ.ಜಿ.ಪರಮೇಶ್ವರ್ ವಿರೋಧಿಸಿದ್ದರು.

ಈ ಬಾರಿ ಕಡಿಮೆ ಅನುದಾನ ಸಿಕ್ಕಿದ್ದು, ವೇತನ ಮತ್ತು ನಿರ್ವಹಣೆಗೆ ಆಗಿದೆ. ಒಂದಷ್ಟು ಕೆಲಸ ಮಾಡಿದ್ದೇವೆ. ಮುಂದಿನ ವರ್ಷ ಹೆಚ್ಚು ಅನುದಾನ ಸಿಗುವ ನಿರೀಕ್ಷೆ ಇದೆ.
-ಡಾ.ಪ್ರಕಾಶ್ ಆರ್. ಪಾಗೋಜಿ ನಿಗಮ ವ್ಯವಸ್ಥಾಪಕ ನಿರ್ದೇಶಕ

ಚುನಾವಣಾ ಉದ್ದೇಶಕ್ಕಾಗಿ ನಿಗಮ ಸ್ಥಾಪಿಸಿ ಈಗ ಮುಚ್ಚುವ ಬದಲು ಅನುದಾನ ಸ್ಥಗಿತಗೊಳಿಸಲಾಗಿದೆ. ಇದರಿಂದ ಕನ್ನಡ-ಮರಾಠಿ ಸಾಮರಸ್ಯ ಸಾಧ್ಯವೇ? **- ಮುಖ್ಯಮಂತ್ರಿ ಚಂದ್ರು** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ಶಂಕಿತ ನಕ್ಸಲ್ ಬಂಧನ

ಬೆಂಗಳೂರು: ನೆರೆಯ ತಮಿಳುನಾಡಿನ ಗಡಿ ಹೊಸೂರಿನಲ್ಲಿ ಶಂಕಿತ ನಕ್ಸಲ್ ಒಬ್ಬನನ್ನು ಕೇರಳದ ಆ್ಯಂಟಿ ನಕ್ಸಲ್ ಸ್ಕ್ವಾಡ್ ತಂಡ ಬಂಧಿಸಿ ವಶಕ್ಕೆ ಪಡೆದಿದೆ. ಬಂಧಿತ ಶಂಕಿತ ನಕ್ಸಲ್ ಸಂತೋಷ್ ಮೋಸ್ಟ್ ವಾಂಟೆಡ್ 20 ನಕ್ಸಲರ ಪೈಕಿ 7 ನೆಯವನಾಗಿದ್ದು ಬಂಧನದ ನಂತರ ತೀವ್ರ ವಿಚಾರಣೆಗೆ ಒಳಪಡಿಸಿ ಈತನ ಜತೆ ಬಂದಿರುವ ನಕ್ಸಲರ ಮಾಹಿತಿ ಪಡೆಯಲಾಗುತ್ತಿದೆ, ಇವರಲ್ಲಿ ಅನೇಕರು ಬೆಂಗಳೂರಿಗೆ ಬಂದು ಆಶ್ರಯ ಪಡೆಯಲು ಸಂಚು ಮಾಡಿದ್ದರೇ ಎಂಬ ಶಂಕೆ ಇದ್ದು ಎಷ್ಟು ಮಂದಿ ಎಲ್ಲೆಲ್ಲಿ ಅವಿತಿದ್ದಾರೆ ಎಂಬ ಮಾಹಿತಿ ಕಲೆ ಹಾಕುತ್ತಿರುವುದಾಗಿ ಕೆಎಟಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 20 ಮಂದಿ ವಾಂಟೆಡ್ ನಕ್ಸಲರ ಪಟ್ಟಿಯಲ್ಲಿ 5 ಮಹಿಳಾ ನಕ್ಸಲರಿದ್ದಾರೆ ಎಂದು ಹೇಳಲಾಗಿದೆ.

ಡಬ್ಲ್ಯುಪಿಸಿಗೆ ನಿಂದನೆ: ಎಫ್ಐಆರ್

ಬೆಂಗಳೂರು: ಕರ್ತವ್ಯ ನಿರತ ಮಹಿಳಾ ಪೇದೆಗೆ ನಿಂದಿಸಿದ್ದ ಆರೋಪದ ಅಡಿ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಎಫ್ಐಆರ್ ದಾಖಲಾಗಿದೆ. ಹೊಂಗಸಂದ್ರದ ನಿವಾಸಿಗಳಾದ ಲೋಕೇಶ್ ಹಾಗೂ ರವಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು. ಹುಳಿಮಾವು ಸಂಚಾರ ಠಾಣೆಯ ವಾಣಿಶ್ರೀ ಅವರು ಹುಳಿಮಾವು ಸಾಯಿಬಾಬಾ ದೇವಸ್ಥಾನದ ಜಂಕ್ಷನ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆ ಸಂದರ್ಭದಲ್ಲಿ ವಾಹನ ನಿಲುಗಡೆ ಮಾಡುವಂತೆ ವಾಣಿಶ್ರೀ ಅವರು ಸೂಚನೆ ನೀಡಿದ್ದರು. ಆಗ ವಾಣಿಶ್ರೀ ಅವರನ್ನು ಆರೋಪಿಗಳು ಅವಾಚ್ಯ ಪದಗಳಿಂದ ನಿಂದಿಸಿದ್ದರು. ವಾಣಿಶ್ರೀ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮಧ್ಯರಾತ್ರಿ ನಡುರಸ್ತೆಯಲ್ಲಿಯೇ ಕೊಚ್ಚಿ ಕೊಲೆ। ಸ್ನೇಹಿತರೊಂದಿಗೆ ಪಾರ್ಟಿ ಮುಗಿಸಿ ಬರುವಾಗ ಹಲ್ಲೆ

ರೌಡಿಶೀಟರ್ ಹೈದರ್ ಅಲಿ ಭೀಕರ ಹತ್ಯೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕಾಂಗ್ರೆಸ್ ಮುಖಂಡ, ಬಿಡಿಎ ಅಧ್ಯಕ್ಷ ಎನ್.ಎ ಹ್ಯಾರಿಸ್ ಬೆಂಬಲಿಗ ರೌಡಿ ಹೈದರ್ ಆಲಿಯನ್ನು ನಡುರಸ್ತೆಯಲಿಯೇ ಕೊಚ್ಚಿ ಕೊಲೆ ಮಾಡಿರುವ ಭೀಕರ ಘಟನೆ ನಡೆದಿದೆ.

ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಅವರ ಬೆಂಬಲಿಗ, ರೌಡಿ ಹೈದರ್ ಎಂಬಾತನನ್ನು ಮಧ್ಯರಾತ್ರಿ ನಡುರಸ್ತೆಯಲ್ಲಿಯೇ ದುಷ್ಕರ್ಮಿಗಳ ಗುಂಪೊಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ದಾಳಿಯನ್ನು ತಡೆಯಲು ಯತ್ನಿಸಿದ ಹೈದರ್ ಅಲಿ ಸ್ನೇಹಿತನ ಮೇಲೆಯೂ ದುಷ್ಕರ್ಮಿಗಳು ಹಲ್ಲೆ ಮಾಡಿದ್ದಾರೆ. ತೀವ್ರವಾಗಿ ಗಾಯಗೊಂಡಿರುವ ಆತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಅಶೋಕನಗರ ಪೊಲೀಸ್ ಠಾಣೆ ವ್ಯಾಪ್ತಿಯ ಆನೆಪಾಳ್ಯ ನಿವಾಸಿ ಹೈದರ್ ಅಲಿ (38) ಶನಿವಾರ ರಾತ್ರಿ ಸ್ನೇಹಿತರೊಂದಿಗೆ ಪಾರ್ಟಿ ಮಾಡಿದ್ದಾನೆ. ಜೆ.ಪಿ.ನಗರದಲ್ಲಿ ಜಿಮ್ ಒಂದರ ಮಾಲೀಕನೂ ಆಗಿರುವ ಸ್ನೇಹಿತ ತಡರಾತ್ರಿ 1.15 ರ ಸುಮಾರಿಗೆ ಹೈದರ್ ಅಲಿಯನ್ನು ಆನೆಪಾಳ್ಯದಲ್ಲಿರುವ ಅವರ ಮನೆಗೆ ಬಿಡಲು ದ್ವಿಚಕ್ರ ವಾಹನದಲ್ಲಿ ಕರೆದೊಯ್ಯುತ್ತಿದ್ದ. ಆ ವೇಳೆ ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದ ದುಷ್ಕರ್ಮಿಗಳ ಗುಂಪು ಶಾಂತಿನಗರದ ಫುಟ್ಬಾಲ್ ಆಟದ ಮೈದಾನದ ಗೇಟ್ ಮುಂಭಾಗದಲ್ಲಿ ಹೈದರ್ ಅಲಿ ಮತ್ತು ಸ್ನೇಹಿತ ತೆರಳುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿ ಕೆಳಗೆ ಬೀಳಿಸಿದ್ದಾರೆ.

ತಕ್ಷಣ ಏಳೆಂಟು ಮಂದಿಯ ಗುಂಪು ಹೈದರ್ ಅಲಿ ಮೇಲೆ ಮಚ್ಚು, ಲಾಂಗ್‌ಗಳಿಂದ ಭೀಕರವಾಗಿ ಹಲ್ಲೆ ನಡೆಸಿ ಕೊಚ್ಚಿ ಪರಾರಿಯಾಗಿದೆ. ದಾಳಿಯಿಂದ ಗಾಯಗೊಂಡ ಹೈದರ್ ಅಲಿಯನ್ನು ಬೌರಿಂಗ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಲಾಗಿತ್ತು.

ಬೆಂಬಲಿಗರ ದಾಂಧಲೆ

ಹೈದರ್ ಅಲಿ ಮೇಲೆ ದಾಳಿಯಾಗಿ ಆತ ಮೃತಪಟ್ಟಿದ್ದಾನೆ ಎಂಬ ಸುದ್ದಿ ಹರಡುತ್ತಿದ್ದಂತೆ ಅಶೋಕನಗರ ಹಾಗೂ ಆನೆಪಾಳ್ಯ ಮುಂತಾದ ಪ್ರದೇಶಗಳಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಬೆಂಬಲಿಗರು ಬೌರಿಂಗ್ ಆಸ್ಪತ್ರೆಯ ಮುಂದೆ ಜಮಾಯಿಸಿ ಮಚ್ಚು, ಲಾಂಗುಗಳನ್ನು ಪ್ರದರ್ಶನ ಮಾಡಿದ್ದಾರೆ. ತಕ್ಷಣವೇ ಪೊಲೀಸರು ಮಧ್ಯಪ್ರವೇಶ ಮಾಡಿದ್ದು, ಗುಂಪನ್ನು ಚದುರಿಸಿದ್ದಾರೆ. ಪರಿಸ್ಥಿತಿ ಹತೋಟಿಯಲ್ಲಿದ್ದು, ಆರೋಪಿಗಳ ಬಂಧನಕ್ಕೆ ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ. ಶನಿವಾರ ರಾತ್ರಿಯಿಂದಲೇ ಪೊಲೀಸರು ಆರೋಪಿಗಳ ಬೆನ್ನತ್ತಿದ್ದು, ಸಿಸಿಟಿವಿ ದೃಶ್ಯಾವಳಿಗಳನ್ನೂ ಪರಿಶೀಲನೆ ನಡೆಸಿದ್ದಾರೆ. ಕ್ರೈಂ ಸೀನ್ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಮಹತ್ವದ ಮಾಹಿತಿಗಳನ್ನು ಕಲೆ ಹಾಕಿದ್ದಾರೆ.ಹೈರ್ದ ಅಲಿಯ ಸ್ನೇಹಿತನ ಹೇಳಿಕೆ ಆಧರಿಸಿ ಅಶೋಕ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದೂರು ದಾಖಲಿಸಲಾಗಿದೆ.

> ಮಧ್ಯರಾತ್ರಿ 1.30ರ ಸುಮಾರಿಗೆ ಹೈದರ್ ಅಲಿ ಕೊಲೆ ನಡೆದಿದೆ. ಆನೆಪಾಳ್ಯದ ಮನೆಗೆ ಹೋಗುವಾಗ ಕಾರು ಅಡ್ಡಗಟ್ಟಿ ಕೊಲೆಗೈದಿದ್ದಾರೆ. ಕೊಲೆಯಾದ ಹೈದರ್ ಅಲಿ ಯಾವ ರಾಜಕೀಯ ಮುಖಂಡ ಅಲ್ಲ. ಹೈದರ್ ಅಲಿ ಅಣ್ಣ ಸಾಮಾಜಿಕ ಕಾರ್ಯಕರ್ತನಾಗಿದ್ದಾನೆ. ಈಗಾಗಲೇ ತನಿಖೆ ಆರಂಭಿಸಲಾಗಿದ್ದು, ತಪ್ಪಿತಸ್ಥರನ್ನು ಶೀಘ್ರವೇ ಬಂಧಿಸಲಾಗುವುದು.
> – ಎಚ್.ಟಿ. ಶೇಖರ್, ಡಿಸಿಪಿ ಕೇಂದ್ರ ವಿಭಾಗ

ಆ ವೇಳೆಗಾಗಲೇ ಆತ ಮೃತಪಟ್ಟಿದ್ದಾನೆಂದು ವೈದ್ಯರು ಘೋಷಿಸಿದರು. ಹೈದರ್ ಅಲಿ ಅಶೋಕ ನಗರ ಪೊಲೀಸ್ ಠಾಣೆಯ ರೌಡಿಶೀಟರ್. ಈತನ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ ಯತ್ನ, ಮಾರಣಾಂತಿಕ ಹಲ್ಲೆ, ಹಲ್ಲೆ ಸೇರಿದಂತೆ 11 ಪ್ರಕರಣಗಳು ದಾಖಲಾಗಿವೆ.

2014ರಿಂದಲೂ ರೌಡಿಶೀಟರ್

2014ರಿಂದಲೂ ರೌಡಿಶೀಟರ್ ಆಗಿದ್ದ ಈತನ ವಿರುದ್ಧ 2022ರಲ್ಲಿ ಕೊನೆಯ ಬಾರಿಗೆ ಪ್ರಕರಣ ದಾಖಲಾಗಿತ್ತು. ಮಾದಕದ್ರವ್ಯಗಳಿಗೆ ಸಂಬಂಧಪಟ್ಟಂತೆ ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ಈತನ ವಿರುದ್ಧ ಪ್ರಕರಣ ದಾಖಲಾಗಿದೆ. ಯಾವುದೇ ರೌಡಿ ಗುಂಪಿನ ಜತೆ ಗುರುತಿಸಿಕೊಂಡಿರುವ ಬಗ್ಗೆ ಈವರೆಗೂ ಮಾಹಿತಿ ಇಲ್ಲ ಎಂದು ಹೇಳಲಾಗಿದೆ. ಹೈದರ್ ಅಲಿ ಅವರ ಸಹೋದರ ಕಾಂಗ್ರೆಸ್‌ನಲ್ಲಿ ಸಕ್ರಿಯ ಕಾರ್ಯಕರ್ತರಾಗಿದ್ದು ಖುದ್ದು ಹೈದರ್ ಅಲಿ ಕೂಡ 2023ರ ವಿಧಾನಸಭಾ ಚುನಾವಣೆಯಲ್ಲಿ ಎನ್.ಎ.ಹ್ಯಾರಿಸ್ ಪರವಾಗಿ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದ ಎಂದು ತಿಳಿದುಬಂದಿದೆ.

ಬಿಡದಿ ಸಮೀಪದ ಟೊಯೋಟಾ ಕಾರ್ಖಾನೆಗೆ ಬಿಟ್ಟುಕೊಟ್ಟಿದ್ದ ಭೂಮಿ

18.47 ಕೋಟಿ ಪರಿಹಾರಕ್ಕೆ ಉಳಿದಿರುವುದು ಇಬ್ಬರು ವೃದ್ಧರು ಮಾತ್ರ

ಎರಡೂವರೆ ದಶಕದ ಬಳಿಕ ಭೂ ಪರಿಹಾರ

ಬೆಂಗಳೂರು: ರಾಮನಗರ ಜಿಲ್ಲೆ ಬಿಡದಿ ಸಮೀಪ ಟೊಯೋಟಾ ಕಾರ್ಖಾನೆ ಸ್ಥಾಪನೆಗಾಗಿ ಭೂಸ್ವಾಧೀನ ಪಡಿಸಿಕೊಂಡಿದ್ದಕ್ಕೆ 25 ವರ್ಷಗಳ ಕಾಲ ಅಲೆದಾಡಿಸಿದ ನಂತರ ಕೊನೆಗೂ ಕೆಐಎಡಿಬಿ ಪರಿಹಾರ ಮಂಜೂರು ಮಾಡಿದೆ. 25 ವರ್ಷಗಳ ಕಾಲ ಅಲೆದಾಡಿಸಿ ಕೊನೆಗೂ 18.47 ಕೋಟಿ ಭೂ ಪರಿಹಾರ ಬಿಡುಗಡೆ ಮಾಡಿದೆ. ಆದರೆ, ಪರಿಹಾರವನ್ನು ಪಡೆಯಲು ಬದುಕಿರುವುದು ಕೇವಲ ಇಬ್ಬರು ವಯೋವೃದ್ಧ ರೈತರು ಮಾತ್ರ.

ಹೈಕೋರ್ಟ್, ಸುಪ್ರೀಂ ಕೋರ್ಟ್ ಒಳಗೊಂಡಂತೆ ಬಹುತೇಕ ಎಲ್ಲಾ ನ್ಯಾಯಾಲಯಗಳು ತಕ್ಷಣವೇ ಪರಿಹಾರ ನೀಡುವಂತೆ ನೀಡಿದ ಆದೇಶಗಳಿಗೆ ಕೆಐಎಡಿಬಿ ಇದುವರೆಗೆ ಯಾವುದೇ ಮನ್ನಣೆ ನೀಡಿರಲಿಲ್ಲ. ಕೆಐಎಡಿಬಿ ಜಪ್ತಿ ಆದೇಶ ನೀಡುತ್ತಿದ್ದಂತೆ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಪರಿಹಾರ ಬಿಡುಗಡೆ ಮಾಡಿದೆ. ಪರಿಹಾರ ನೀಡುವಂತೆ ರಾಮನಗರ ಜಿಲ್ಲಾ ನ್ಯಾಯಾಲಯ, ಹೈಕೋರ್ಟ್, ಸುಪ್ರೀಂ ಕೋರ್ಟ್ ನೀಡಿದ ಆದೇಶಗಳು ಜಾರಿಯಾಗಿರಲಿಲ್ಲ.

ಕೆಐಎಡಿಬಿ ಕಚೇರಿ ಜಪ್ತಿಗೆ ಆದೇಶ: ಎರಡು ತಿಂಗಳ ಹಿಂದೆ ಸುಪ್ರೀಂ ಕೋರ್ಟ್ ಮತ್ತೊಮ್ಮೆ ಖಡಕ್ ಆದೇಶ ನೀಡಿ ಎರಡು ತಿಂಗಳೊಳಗಾಗಿ ಪರಿಹಾರದ ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಇಡುವಂತೆ ಸೂಚಿಸಿತ್ತು. ಪರಿಹಾರ ವಿಳಂಬವಾದ ಕಾರಣ ಮಹಾರಾಣಿ ಕಾಲೇಜು ಪಕ್ಕದಲ್ಲಿರುವ ಕೆಐಎಡಿಬಿ ಕಚೇರಿಯನ್ನು ಜಪ್ತಿ ಮಾಡುವಂತೆ ಆದೇಶಿಸಿತ್ತು.

ಶುಕ್ರವಾರ ಕೋರ್ಟ್ ಅಮೀನ್ ಅವರ ಜತೆ ಬಿಡದಿ ರೈತರು ಕಚೇರಿ ಜಪ್ತಿಗೆ ಮುಂದಾದಾಗ 38 ರೈತರಿಗೆ 18.47 ಕೋಟಿ ರುಪಾಯಿ ಪರಿಹಾರವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟಿರುವುದಾಗಿ ದಾಖಲೆ ಒದಗಿಸಿದರು. ಇದರಿಂದ ಕಚೇರಿ ಜಪ್ತಿಮಾಡಲು ಮುಂದಾಗಿದ್ದ ರೈತರು ಕೆಐಎಡಿಬಿ ಆದೇಶ ಪ್ರತಿ ಪಡೆದು ವಾಪಸ್ ಆದರು.

ತಂದೆ ಪರವಾಗಿ ಮಗನ ಹೋರಾಟ: ರೈತರಿಗೆ ಪರಿಹಾರ ಒದಗಿಸಲೇಬೇಕೆಂದು ಹಠತೊಟ್ಟು ಎರಡೂವರೆ ದಶಕಗಳಿಂದ ತ್ರಿವಿಕ್ರಮನಂತೆ ಹೋರಾಟ ನಡೆಸಿದ್ದ ಕೋಟೆ ಶಿವಣ್ಣ 8 ತಿಂಗಳ ಹಿಂದೆ ಮೃತಪಟ್ಟಿದ್ದರು. ಅವರ ಪುತ್ರ ಗಿರೀಶ್ ಶಿವಣ್ಣ ಇದೀಗ ಹೋರಾಟದ ನೇತೃತ್ವ ವಹಿಸಿಕೊಂಡಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಗಿರೀಶ್ ಶಿವಣ್ಣ, ನಮ್ಮ ತಂದೆ ಬದುಕಿದ್ದಾಗ ಪರಿಹಾರದ ಹಣ ದೊರೆತಿದ್ದರೆ ಹೋರಾಟ ಸಾರ್ಥಕವಾಗುತ್ತಿತ್ತು. ಹೃದಯ ಶೂನ್ಯ ಅಧಿಕಾರಿಗಳು ಮತ್ತು ಹೃದಯಹೀನ ಸರಕಾರ ಪರಿಹಾರ ನೀಡುವುದನ್ನು ವಿಳಂಬ ಮಾಡಿದೆ ಎಂದರು. ಕೆಐಎಡಿಬಿ 1998 ರಲ್ಲಿ ಭೂ ಸ್ವಾಧೀನಮಾಡಿಕೊಂಡಿತ್ತು. ಶಾನಮಂಗಲ, ಬಾನಂದೂರು, ಅಬ್ಬಿನ ಕುಂಟೆ ಗ್ರಾಮಗಳ ಬಹುತೇಕ ಸಣ್ಣ ಮತ್ತು ಅತಿಸಣ್ಣ ರೈತರು ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ್ದರು. 2003 ರ ಆಗಸ್ಟ್ 26 ರಂದು ಹೈಕೋರ್ಟ್ ರೈತರಿಗೆ ಪರಿಹಾರ ನೀಡುವಂತೆ ಸ್ಪಷ್ಟವಾಗಿ ನಿರ್ದೇಶನ ನೀಡಿತ್ತು. ಆದರೆ ಕೆಐಎಡಿಬಿ ಸಬೂಬುಗಳನ್ನು ಹೇಳುತ್ತಿತ್ತು. ಆದರೆ ಸುಪ್ರೀಂ ಕೋರ್ಟ್ ಬಡ್ಡಿ ಸಮೇತನ ಪರಿಹಾರ ನೀಡುವಂತೆ ನೀಡಿದ ಆದೇಶದ ನಂತರ ಎಚ್ಚೆತ್ತುಕೊಂಡ ಕೆಐಎಡಿಬಿ ಅಧಿಕಾರಿಗಳು ಪರಿಹಾರ ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸಿದೆ. ತಬರನ ಕಥೆಯಂತಾಗಿದ್ದ ಕೃಷಿಕರ ಗೋಳು ಇದೀಗ ತಾರ್ಕಿಕ ಅಂತ್ಯಕ್ಕೆ ತಲುಪಿದೆ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ:914/ 2024

ಅರ್ಜಿದಾರರು: 1. ಶ್ರೀಮತಿ. ಸಾಕಮ್ಮ ಕೋಂ ಲೇಟ್ ವೆಂಕಟಪ್ಪ ಬಿನ್ ಲೇಟ್ ತಿಮ್ಮಯ್ಯ ವಯಸ್ಸು 78 ವರ್ಷ, ವಾಸ:– ಪಿಚ್ಚನಕೆರೆ ಗ್ರಾಮ, ಕೊಟ್ಟಗಾಳು ಅಂಚೆ ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ, 2. ಗ್ರಾಮ ಲೆಕ್ಕಾಧಿಕಾರಿಗಳು, ಪಿಚ್ಚನಕೆರೆ ವೃತ್ತ ಹಾರೋಹಳ್ಳಿ ಹೋಬಳಿ , ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಾಯಿ ಮತ್ತು 2 ರಿಂದ 4ನೇ ಅರ್ಜಿದಾರರ ಅಜ್ಜಿರವರು ಆದ , ಶ್ರೀಮತಿ .ಈರಜಮ್ಮ ಕೋಂ ಲೇಟ್ ತಿಮ್ಮಯ್ಯ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಟ್ಟಗಾಳು ಅಂಚೆ, ಪಿಚ್ಚನಕೆರೆ ಗ್ರಾಮದಲ್ಲಿ ದಿನಾಂಕ:04.05.1981 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು. ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 04.04.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2025 ರ 22.02.2025 ನೇ ತಾರೀಖು ಈ ದಿನ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ
ವಕೀಲರು,ಕನಕಪುರ ಟೌನ್
ಸ್ಥಳ: ಕನಕಪುರ
ದಿನಾಂಕ:22.02.2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ:913/ 2024

ಅರ್ಜಿದಾರರು: 1. ಶ್ರೀಮತಿ. ಸಾಕಮ್ಮ ಕೋಂ ಲೇಟ್ ವೆಂಕಟಪ್ಪ ಬಿನ್ ಲೇಟ್ ತಿಮ್ಮಯ್ಯ ವಯಸ್ಸು 78 ವರ್ಷ, ವಾಸ:– ಪಿಚ್ಚನಕೆರೆ ಗ್ರಾಮ, ಕೊಟ್ಟಗಾಳು ಅಂಚೆ ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ, 2. ಗ್ರಾಮ ಲೆಕ್ಕಾಧಿಕಾರಿಗಳು, ಪಿಚ್ಚನಕೆರೆ ವೃತ್ತ ಹಾರೋಹಳ್ಳಿ ಹೋಬಳಿ , ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಂದೆ ಮತ್ತು 2 ರಿಂದ 4ನೇ ಅರ್ಜಿದಾರರ ತಾತನವರು ಆದ , ಶ್ರೀ.ತಿಮ್ಮಯ್ಯ ಬಿನ್ ಲೇಟ್ ಒಡಗಲದಾಸಪ್ಪ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಟ್ಟಗಾಳು ಅಂಚೆ, ಪಿಚ್ಚನಕೆರೆ ಗ್ರಾಮದಲ್ಲಿ ದಿನಾಂಕ:11.11.1962 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು. ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 04.04.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2025 ರ 22.02.2025 ನೇ ತಾರೀಖು ಈ ದಿನ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ
ವಕೀಲರು,ಕನಕಪುರ ಟೌನ್
ಸ್ಥಳ: ಕನಕಪುರ
ದಿನಾಂಕ:22.02.2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ, ಕನಕಪುರ ಟೌನ್
ಕ್ರಿಮಿನಲ್ ಮಿಸ್. ಸಂಖ್ಯೆ :740 / 2024

ಅರ್ಜಿದಾರರು: 1. ಶ್ರೀ. ಹೇಮಂತ್.ಆರ್ ಬಿನ್ ರಾಜು ವಯಸ್ಸು ಸುಮಾರು 24 ವರ್ಷ, 2. ಶ್ರೀ. ವಿನಯ್.ಆರ್ ಬಿನ್ ರಾಜು ವಯಸ್ಸು ಸುಮಾರು 20 ವರ್ಷ, 3. ಶ್ರೀಮತಿ. ಮಂಜುಳ ಕೋಂ ರಾಜು ವಯಸ್ಸು ಸುಮಾರು 38 ವರ್ಷ, 4. ಶ್ರೀ. ರಾಜು.ವಿ ಬಿನ್ ಲೇಟ್ ವೆಂಕಟಯ್ಯ ವಯಸ್ಸು ಸುಮಾರು 45 ವರ್ಷ, 1 ರಿಂದ 4ನೇ ಅರ್ಜಿದಾರರ ವಿಳಾಸ ನೀಲಶೆಟ್ಟರ ಬೀದಿ, ರಾಮನಗರ ಮುಖ್ಯ ರಸ್ತೆ, ಕನಕಪುರ ಟೌನ್, ರಾಮನಗರ ಜಿಲ್ಲೆ –562117 5. ಶ್ರೀಮತಿ. ಲಕ್ಷ್ಮೀ ಕೋಂ ರವಿಚಂದ್ರ ಬಿನ್ ಲೇಟ್ ವೆಂಕಟಯ್ಯ ವಯಸ್ಸು ಸುಮಾರು 42 ವರ್ಷ, ವಿಳಾಸ:– 2ನೇ ಅಡ್ಡರಸ್ತೆ, ಶ್ರೀರಾಂಪುರ, ಕನಕಪುರ ಟೌನ್, ರಾಮನಗರ ಜಿಲ್ಲೆ –562117

ವಿರುದ್ಧ

ಎದುರುದಾರರು: 1.ಆಯುಕ್ತರು ಕನಕಪುರ ನಗರಸಭೆ, ಕನಕಪುರ ಟೌನ್ –562117

ಪತ್ರಿಕಾ ಪ್ರಕಟಗಾಗಿ ಕರಡು ಪ್ರತಿ

ಮೇಲ್ಕಂಡ ಅರ್ಜಿದಾರರು ಶ್ರೀಮತಿ ಲೇಟ್ ಜಯಮ್ಮ ಕೋಂ ಲೇಟ್ ವೆಂಕಟಯ್ಯರವರು ದಿನಾಂಕ 05/11/2018 ರಂದು ನೀಲೆ ಶೆಟ್ಟರ ಬೀದಿ, ರಾಮನಗರ ಮುಖ್ಯ ರಸ್ತೆ, ಕನಕಪುರ ಟೌನ್ , ರಾಮನಗರ ಜಿಲ್ಲೆಯಲ್ಲಿ ಮೃತರಾಗಿದ್ದು . ಅವರ ಮರಣ ಮರಣ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾರಿಗಾದರು ಹಿತಾಶಕ್ತಿ ಇದ್ದಲ್ಲಿ ಅವರು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥ–ವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ : 28.03.2025 ರಂದು ಮುಂದಿನ ಸುನಾವಣೆಗಾಗಿ ಮುಂದೂಡಲ್ಪಟ್ಟಿದೆ. ಮೇಲಡ ದಿನಾಂಕದಂದು ಬೆಳಿಗ್ಗೆ 11–00 ಘಂಟೆಗೆ ಸರಿಯಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಪಕ್ಷೀಯ ಆದೇಶ ಹೊರಡಿಸುತ್ತದೆ.

ದಿನಾಂಕ 12-02-2025 ರಂದು ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,

ಅರ್ಜಿದಾರರ ಪರ ವಕೀಲರು
ಗಿರೀಶ್.ಎಸ್.ಎಸ್.
ವಕೀಲರು
ಸ್ಥಳ: ಕನಕಪುರ.
ದಿನಾಂಕ:05.02.2025

ಪ್ರೀತಿ ನಿರಾಕರಿಸಿದ್ದಕ್ಕೆ ಯುವತಿಯ ಸ್ಕೂಟಿ, ಕಾರಿಗೆ ಬೆಂಕಿಯಿಟ್ಟ ಪ್ರೇಮಿ

ಬೆಂಗಳೂರು: ಪ್ರೀತಿಸುವಂತೆ ಯುವತಿಯ ಹಿಂದೆ ಬಿದ್ದಿದ್ದ ಯುವಕನ ಬೇಡಿಕೆ ನಿರಾಕರಿಸಿದ್ದಕ್ಕೆ ಆಕೆಯ ದ್ವಿಚಕ್ರ ವಾಹನ ಹಾಗೂ ಕಾರಿಗೆ ಬೆಂಕಿ ಹಚ್ಚಿರುವ ಘಟನೆ ಸಿಕೆ ಅಚ್ಚುಕಟ್ಟು ಹಾಗೂ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದಿದೆ.

ಬಿಕಾಂ ಓದುತ್ತಿದ್ದ ಯುವಕ ಪ್ರೀತಿಗೆ ಒಳಗಾಗಿ ಯುವತಿಯೊಬ್ಬಳ ಹಿಂದೆ ಬಿದ್ದು ತನ್ನ ನಿವೇದನೆ ತಿಳಿಸಿದ್ದು, ಇದಕ್ಕೆ ಯುವತಿ ಒಲ್ಲೆ ಎಂದಿದ್ದಕ್ಕೆ ಯುವಕ ಸೇಡಿಗಾಗಿ ಯುವತಿಗೆ ಸೇರಿದ ಎರಡು ಮನೆಗಳಿಗೆ ತೆರಳಿ ವಾಹನಗಳಿಗೆ ಬೆಂಕಿ ಹಚ್ಚಿ ದುಷ್ಕೃತ್ಯ ಮೆರೆದಿದ್ದಾನೆ. ರಾತ್ರಿ 12.30ರ

ಸುಮಾರಿನಲ್ಲಿ ಇಬ್ಬರು ಸ್ನೇಹಿತರೊಂದಿಗೆ ದ್ವಿಚಕ್ರ ವಾಹನದಲ್ಲಿ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣಾ ವ್ಯಾಪ್ತಿಯ ಪಾಪಯ್ಯ ಲೇಔಟ್‌ನ ಬನಗಿರಿ ಬಡಾವಣೆಯಲ್ಲಿರುವ ಯುವತಿಯ ಮನೆಯ ಮುಂದೆ ನಿಲ್ಲಿಸಲಾಗಿದ್ದ ಬೈಕ್ ಹಾಗೂ ಸ್ಕೂಟಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದಾನೆ.

ನಂತರ ಅಲ್ಲಿಂದ ಸುಬ್ರಹ್ಮಣ್ಯಪುರ ಠಾಣಾ ವ್ಯಾಪ್ತಿಯ ಅರೆಹಳ್ಳಿಯ ಬಳಿ ಇರುವ ಮತ್ತೊಂದು ಮನೆಗೆ 1.30 ರ ವೇಳೆ ತೆರಳಿ ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ಕಾರಿಗೆ ಬೆಂಕಿ ಹಚ್ಚಿದ್ದಾನೆ. ಬೆಂಕಿಯ ಜ್ವಾಲೆ ಪಕ್ಕದ ಕಾರಿಗೂ ಆವರಿಸಿ ಸುಟ್ಟು ಕರಕಲಾಗಿವೆ. ದಟ್ಟ ಹೊಗೆ ಹಾಗೂ ಬೆಂಕಿಯನ್ನು ಕಂಡ ಅಪಾರ್ಟ್‌ಮೆಂಟ್ ನಿವಾಸಿಗಳು ಕೂಡಲೇ ಪಾರ್ಕಿಂಗ್ ಸ್ಥಳಕ್ಕೆ ತೆರಳಿ ಬೆಂಕಿಯನ್ನು ನಂದಿಸಿ ಸಂಭವಿಸಬಹುದಾದ ದೊಡ್ಡ ಅನಾಹುತ ತಪ್ಪಿಸಿದ್ದಾರೆ. ಎರಡು ಘಟನೆಗಳ ಬಗ್ಗೆ ಸಿಕೆ ಅಚ್ಚುಕಟ್ಟು ಹಾಗೂ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಯುವಕ ಹಾಗೂ ಆತನ ಸ್ನೇಹಿತನ ಪತ್ತೆಗಾಗಿ ಪೊಲೀಸರು ಬಲೆ ಬಿಸಿದ್ದಾರೆ.

ಡಿವೈಎಸ್ಪಿ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್: ಆರೋಪಿ ಬಂಧನ

ಬೆಂಗಳೂರು: ಲೋಕಾಯುಕ್ತ ಡಿವೈಎಸ್‌ಪಿ ಹೆಸರಿನಲ್ಲಿ ಸರಕಾರಿ ಅಧಿಕಾರಿಗಳಿಗೆ ಬ್ಲ್ಯಾಕ್ ಮೇಲ್ ಮಾಡುತ್ತಿದ್ದ ಆರೋಪಿಯನ್ನು ನಗರ ಪೊಲೀಸರು ಬಂಧಿಸಿದ್ದಾರೆ. ವಜಾಗೊಂಡ ರಾಜ್ಯ ಮೀಸಲು ಪಡೆಯ ಪೊಲೀಸ್ ಕಾನ್ಸ್‌ಟೇಬಲ್ ಮುರುಗಪ್ಪ ಬಂಧಿತ ಆರೋಪಿ. ಮುರುಗಪ್ಪ ವಿರುದ್ಧ ರಾಜ್ಯದ ವಿವಿಧ ಠಾಣೆಯಲ್ಲಿ 60ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ. ಲೋಕಾಯುಕ್ತ ಹೆಸರಿನಲ್ಲಿ ಅಧಿಕಾರಿಗಳಿಗೆ ಆರೋಪಿ ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡುತ್ತಿದ್ದ. ಲೋಕಾಯುಕ್ತ ಡಿವೈಎಸ್‌ಪಿ ಬಸವರಾಜು ಆರ್. ಮಗದುಮ್ ದೂರಿನ ಮೇರೆಗೆ ವಿಧಾನಸೌಧ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು. ಆರೋಪಿ ಮುರುಗಪ್ಪ ಅಪರಿಚಿತ ನಂಬರ್‌ನಿಂದ ಸರಕಾರಿ ಅಧಿಕಾರಿಗಳಿಗೆ ಕರೆಮಾಡಿ, ಲೋಕಾಯುಕ್ತ ಡಿವೈಎಸ್‌ಪಿ ಅಂತ ಪರಿಚಯ ಮಾಡಿಕೊಳ್ಳುತ್ತಿದ್ದನು. ನಿಮ್ಮ ವಿರುದ್ಧ ಅಕ್ರಮ ಆಸ್ತಿ ಗಳಿಕೆ ಕೇಸ್ ಹಾಕಲಾಗುತ್ತಿದೆ ಅಂತ ಬೆದರಿಕೆ ಹಾಕುತ್ತಿದ್ದ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸಬಾರದು ಎಂದರೇ ಹಣ ನೀಡಿ ಎಂದು ಬೇಡಿಕೆ ಇಡುತ್ತಿದ್ದ . ಇದೇ ರೀತಿ ಮುರುಗಪ್ಪ ಹಲವು ಸರಕಾರಿ ಅಧಿಕಾರಿಗಳ ಬೆದರಿಸಿ ಹಣ ವಸೂಲಿ ಮಾಡಿದ್ದ. ಬ್ಲ್ಯಾಕ್‌ಮೇಲ್ ಆರೋಪದ ಮೇಲೆ ಮುರುಗಪ್ಪ ಹಲವು ಬಾರಿ ಜೈಲು ಸೇರಿದ್ದ. ಬಿಡುಗಡೆಯಾದ ಬಳಿಕ ಮತ್ತೆ ಲೋಕಾಯುಕ್ತ ಹೆಸರಿನಲ್ಲಿ ಬೆದರಿಕೆ ಹಾಕುತ್ತಿದ್ದ ಎಂದು ತಿಳಿದುಬಂದಿದೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ ಅಭಿಮತ

ಹಾಸ್ಯ ಸಾಹಿತ್ಯಕ್ಕೆ ಅ.ರಾ.ಮಿತ್ರ ಕೊಡುಗೆ ಅಪಾರ

ಬೆಂಗಳೂರು: ನಾಡಿನ ಸಾಹಿತ್ಯದಲ್ಲಿ ಹಾಸ್ಯ, ವಿಡಂಬನೆ ಮೂಲಕವೇ ಅ.ರಾ ಮಿತ್ರ ಅವರು ಛಾಪು ಮೂಡಿಸಿದ್ದಾರೆ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರರು ಅಭಿಪ್ರಾಯಪಟ್ಟರು. ಭಾರತೀಯ ವಿದ್ಯಾಭವನ, ರಮಣಶ್ರೀ ಸಮೂಹ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕಂಬಾರರು, ಹಾಸ್ಯ, ವಿಡಂಬನೆ ಮೂಲಕ ನಾಡಿನ ಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿರುವ ಅ. ರಾ.ಮಿತ್ರ ಅವರ ಕೊಡುಗೆ ಶ್ಲಾಘನೀಯ. ಸಜ್ಜನರಲ್ಲಿ ಸಜ್ಜನ ಮನೋಧರ್ಮದ ಅ. ರಾ. ಮಿತ್ರ ಹೆಸರಿಗೆ ತಕ್ಕಂತೆ ತುಂಬು ಹಾಸ್ಯ ಪ್ರಿಯರು. ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇಯಾದ ಕೊಡುಗೆ ನೀಡಿದ ಅ.ರಾ. ಮಿತ್ರ ಅವರಿಗೆ ಶತ್ರುಗಳಿಲ್ಲ. ಅವರ ಒಡನಾಟಕ್ಕೆ ಬಂದವರೆಲ್ಲರೂ ಮಿತ್ರರೇ ಆಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೇಘದೂತ, ಛಂದೋಮಿತ್ರ ಕೃತಿಗಳ ಬಗ್ಗೆ ಶತಾವಧಾನಿ ಆರ್.ಗಣೇಶ್, ಮಹಾಭಾರತದ ಪಾತ್ರ ಸಂಗತಿಗಳು ಕೃತಿಯ ಬಗ್ಗೆ ಸೂರ್ಯಪ್ರಕಾಶ ಪಂಡಿತ್, ವಚನಕಾರರು ಮತ್ತು ಶಬ್ದಕಲ್ಪ ಕೃತಿಯ ಬಗ್ಗೆ ಸಿ. ಸೋಮಶೇಖರ, ಸ್ಮರಣೀಯರು, ಟಿ.ಪಿ.ಕೈಲಾಸಂ ಕೃತಿಯ ಬಗ್ಗೆ ವೈ.ವಿ.ಗುಂಡೂರಾವ್, ಲಲಿತ ಪ್ರಬಂಧಗಳು, ಪ್ರೇಮನದಿಯ ದಡಗಳಲ್ಲಿ ಕೃತಿಯ ಬಗ್ಗೆ ಎಂ.ಎಸ್. ನರಸಿಂಹಮೂರ್ತಿ ಹಾಗೂ ರಾಮಾಯಣ ಮಿತ್ರ ಕೃತಿಯ ಬಗ್ಗೆ ಅರ್ಚನಾ, ರಮಣಶ್ರೀ ಸಂಸ್ಥೆಯ ಡಾ. ಷಡಕ್ಷರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಿತ್ರ ಅವರ ಬರಹಗಳಲ್ಲಿ ಅಕ್ಷರಗಳ ಚಮತ್ಕಾರವಿದೆ: ಶತಾವಧಾನಿ ಆರ್.ಗಣೇಶ್ ಮಾತನಾಡಿ, ಮಿತ್ರ ಅವರ ಬರಹಗಳಲ್ಲಿ ಅಕ್ಷರಗಳ ಚಮತ್ಕಾರ ಕಾಣಬಹುದಾಗಿದೆ. ಹಾಸ್ಯದ ಜತೆಗೆ ಸಾಮಾಜಿಕ ವಿಮರ್ಶೆಯನ್ನೂ ಅವರು ಕೃತಿಗಳಲ್ಲಿ ಮಾಡಿದ್ದಾರೆ. ಅಶ್ಲೀಲತೆ, ಕ್ಲಿಷ್ಟತೆ ಇಲ್ಲದ ಸಹಜ ಹಾಸ್ಯ ಅವರದ್ದಾಗಿದ್ದು, ಮಿತ್ರ ಅವರು ಪರಿಪೂರ್ಣ ಹಾಗೂ ಧ್ವನಿ ಪೂರ್ಣವಾದ ಕಾವ್ಯವನ್ನು ಸೃಷ್ಟಿಸಿದ್ದಾರೆ. ಆದರೆ ವಿಮರ್ಶಾ ಲೋಕವು ಅವರ ಗಂಭೀರ ಸಾಹಿತ್ಯಕ್ಕೆ ಅಷ್ಟಾಗಿ ಮನ್ನಣೆ ನೀಡದ ಪರಿಣಾಮ, ಇಲ್ಲಿ ಅವರಿಗೆ ಹಾಗೂ ಅವರ ಸಾಹಿತ್ಯಕ್ಕೆ ಸೂಕ್ತ ಸ್ಥಾನಮಾನ ದೊರೆಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಭಾರತೀಯ ವಿದ್ಯಾಭವನ, ರಮಣಶ್ರೀ ಸಮೂಹ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲಲಿತಾ ಮತ್ತು ಅ.ರಾ. ಮಿತ್ರ ದಂಪತಿಯನ್ನು ಅಭಿನಂದಿಸಲಾಯಿತು. ಈ ವೇಳೆ ಲೇಖಕಿ ಎಸ್.ಆರ್. ಲೀಲಾ, ಲೇಖಕ ಎನ್. ರಾಮನಾಥ್, ವಾಗ್ಮಿ ಪ್ರೊ.ಕೃಷ್ಣೇಗೌಡ, ರಮಣಶ್ರೀ ಸಮೂಹ ಸಂಸ್ಥೆಯ ಎಸ್.ಷಡಕ್ಷರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆನೇಕಲ್ ಸಮೀಪದ ಅಲಯನ್ಸ್ ವಿವಿಯ ಸಿಎಸ್‌ಆರ್ ನಿಧಿಯಿಂದ ಆನೇಕಲ್ ಪೊಲೀಸ್ ಠಾಣೆಗೆ ಗಸ್ತು ವಾಹನ ಕೊಡುಗೆಯಾಗಿ ನೀಡಿದರು. ಪ್ರೊ. ಅಭಯ್ ಛಬ್ಬಿ ಅವರು ಡಿವೈಎಸ್‌ಪಿ ಮೋಹನ್ ಕುಮಾರ್ ಅವರಿಗೆ ಕೀಲಿ ಹಸ್ತಾಂತರಿಸಿದರು. ಇನ್ಸ್‌ಪೆಕ್ಟರ್ ತಿಪ್ಪೇಸ್ವಾಮಿ, ಸುರೇಖಾ ಶೆಟ್ಟಿ ಉಪಸ್ಥಿತರಿದ್ದರು.

ನಮೂನೆ ಸಂಖ್ಯೆ. ಐಎನ್‌ಸಿ–26
[ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗಾಯಿಸುವುದರ ಬಗ್ಗೆ ಜಾಹೀರಾತು
ಕೇಂದ್ರ ಸರ್ಕಾರದ ಎದುರು
(ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ)
ಇವರ ಎದುರು
ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ 2013 ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು 2014 ರ ಷರತ್ತು (ಎ)ಯ ಉಪ–ನಿಯಮ(5) ರ ನಿಯಮ 30 ಇವುಗಳ ವಿಷಯವಾಗಿ
ಮತ್ತು
ಟೆಕ್ಟ್ರಾನಿಕ್ಸ್ (ಇಂಡಿಯ) ಪ್ರೈವೇಟ್ ಲಿಮಿಟೆಡ್ ("ಕಂಪನಿ")
ಸಿಐಎನ್: ಯು74140ಕೆಎ1996ಪಿಟಿಸಿ020729
ನೋಂದಾಯಿತ ಕಚೇರಿ: ಸಲಾರ್‌ಪುರಿಯ ಪ್ರೀಮಿಯ, ಸರ್ವೆ ನಂ. 16, ಕಾಡುಬೀಸನಹಳ್ಳಿ ವರ್ತೂರು ಹೋಬಳಿ, ಸರ್ಜಾಪುರ ಹೊರವರ್ತುಲ ರಸ್ತೆ, ಬೆಂಗಳೂರು–560103, ಕರ್ನಾಟಕ ಭಾರತ, ...ಅರ್ಜಿದಾರ

ಸಾರ್ವಜನಿಕರಿಗೆ ಈ ಸೂಚನೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಸೆಕ್ಷನ್ 13(4)ರ ಕಂಪನಿ ಕಾಯಿದೆ, 2013ನ್ನು ಓದಿಕೊಂಡಂತೆ ಮೇಲಿನ ನಿಯಮಗಳಂತೆ ಕೇಂದ್ರ ಸರ್ಕಾರದ ಮುಂದೆ (ಪ್ರಾದೇಶಿಕ ನಿರ್ದೇಶಕರಿಗೆ ಅಧಿಕಾರ ನಿಯೋಜಿಸಲಾಗಿದೆ) ಕಂಪನಿಯ ನೋಂದಾಯಿತ ಕಚೇರಿಯನ್ನು "ಕರ್ನಾಟಕ ರಾಜ್ಯ"ದಿಂದ "ಮಹಾರಾಷ್ಟ್ರ ರಾಜ್ಯ"ಕ್ಕೆ ವರ್ಗಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಲಾಗುವುದು ಎಂದು ಡಿಸೆಂಬರ್ 18, 2024 ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ವಿಶೇಷ ನಿರ್ಣಯವನ್ನು ಅಂಗೀಕರಿಸಲಾಯಿತು.

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಚೇರಿಯ ಪ್ರಸ್ತಾವಿತ ಬದಲಾವಣೆಯಿಂದ ತೊಂದರೆ ಯಾಗುತ್ತಿದೆ ಎಂದಾದರೆ, ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್‌ನ್ನು, ಎಂಸಿಎ–21 ಪೋರ್ಟಲ್ (www.mca.gov.in) ಮೂಲಕ ಸಲ್ಲಿಸಿ, ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ, 3ನೇ ಮಹಡಿ, ಕಾರ್ಪೋರೇಟ್ ಭವನ, ಬಂದಲಗುಡ, ನಾಗೋಲೆ, ತಟ್ಟಿಯನ್‌ನರಮ್ ಗ್ರಾಮ, ಹಯಾತ್ ನಗರ ಮಂಡಲ, ರಂಗ ರೆಡ್ಡಿ ಜಿಲ್ಲೆ, ಹೈದರಾಬಾದ್ –500 068, ತೆಲಂಗಾಣ, ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು ದಿನಗಳ (14) ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ. "ಸಲಾರ್‌ಪುರಿಯ ಪ್ರೀಮಿಯ, ಸರ್ವೆ ನಂ. 16, ಕಾಡುಬೀಸನಹಳ್ಳಿ ವರ್ತೂರು ಹೋಬಳಿ, ಸರ್ಜಾಪುರ ಹೊರವರ್ತುಲ ರಸ್ತೆ, ಬೆಂಗಳೂರು–560103, ಕರ್ನಾಟಕ ಭಾರತ".

ಟೆಕ್ಟ್ರಾನಿಕ್ಸ್ (ಇಂಡಿಯ) ಪ್ರೈವೇಟ್ ಲಿಮಿಟೆಡ್
ಸಹಿ/–
ಶ್ರೀಹರಿ ಗೋಪಾಲ್ ಕುಲಕರ್ಣಿ
(ನಿರ್ದೇಶಕರು)
ಡಿಐಎನ್: 08943627
ದಿನಾಂಕ: 24.02.2025
ಸ್ಥಳ: ಬೆಂಗಳೂರು

ಏಳು ದಿನಗಳಲ್ಲಿ 112 ಪ್ರಕರಣ, 5.60 ಲಕ್ಷ ರು. ವಸೂಲಿ: ಡಾ.ರಾಮ್ ಪ್ರಸಾತ್ ಮನೋಹರ್

ಜಲಮಂಡಳಿಯಿಂದ ದಂಡ ಅಭಿಯಾನ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕುಡಿಯುವ ನೀರನ್ನು ಪೋಲು ಮಾಡುವವರ ವಿರುದ್ಧ ಜಲಮಂಡಳಿಯು ದಂಡ ಅಭಿಯಾನವನ್ನು ಚುರುಕುಗೊಳಿಸಿದ್ದು, ಏಳು ದಿನಗಳಲ್ಲಿ 112 ಪ್ರಕರಣದಿಂದ 5.60 ಲಕ್ಷ ರು. ದಂಡ ವಸೂಲಿ ಮಾಡಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಈ ಕುರಿತು ಮಾಹಿತಿ ನೀಡಿ, ಮುಂಬರುವ ಬೇಸಿಗೆಯಲ್ಲಿ ಎಲ್ಲರಿಗೂ ಶುದ್ಧ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡುವ ನಿಟ್ಟಿನಲ್ಲಿ ಫೆ.17ರಂದು, ಕುಡಿಯುವ ನೀರನ್ನು ಅನಗತ್ಯ ಪೋಲು ಮಾಡದಂತೆ ಸುತ್ತೋಲೆ ಹೊರಡಿಸಲಾಗಿತ್ತು. ಪ್ರಸ್ತುತ ನಗರದಲ್ಲಿ ಪ್ರತಿದಿನ ಉಷ್ಣಾಂಶ ಏರುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಳೆಯ ಕೊರತೆಯಿಂದ ಅಂತರ್ಜಲ ಕುಸಿತವಾಗಿದ್ದು, ಮುಂದಿನ ಬೇಸಿಗೆಯಲ್ಲಿ ಅಂತರ್ಜಲ ಕುಸಿತದಿಂದ ನೀರಿನ ಅಭಾವ ಎದುರಾಗಬಹುದು ಎಂದು ಐಐಎಸ್‌ಸಿ ವಿಜ್ಞಾನಿಗಳು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಈಗಿನಿಂದಲೇ ಸಾರ್ವಜನಿಕರು ಕುಡಿಯುವ ನೀರನ್ನು ಸಮರ್ಪಕವಾಗಿ ಬಳಸುವುದು ಹಾಗೂ ಅನಗತ್ಯವಾಗಿ ಪೋಲು ಮಾಡುವುದನ್ನು ತಡೆಯುವುದು ಈ ಆದೇಶದ ಉದ್ದೇಶವಾಗಿತ್ತು ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯಿದೆ – 1964 ರ ಕಲಂ 33 ಮತ್ತು 34 ರ ಅನುಸಾರ ಬೆಂಗಳೂರು ನಗರದಲ್ಲಿ ಕುಡಿಯುವ ನೀರನ್ನು, ವಾಹನಗಳ ಸ್ವಚ್ಛತೆಗೆ, ಕೈದೋಟಕ್ಕೆ, ಕಟ್ಟಡ ನಿರ್ಮಾಣಕ್ಕೆ, ಮನೋರಂಜಕವಾಗಿ ಕಾರಂಜಿಯಂತಹ ಆಕರ್ಷಕ ವ್ಯವಸ್ಥೆಗೆ, ಸಿನಿಮಾ ಮಂದಿರ ಮತ್ತು ಮಾಲುಗಳಲ್ಲಿನ ಕುಡಿಯುವ ನೀರಿನ ಹೊರತು ಇನ್ನಿತರೆ ಬಳಕೆಗೆ, ರಸ್ತೆ ನಿರ್ಮಾಣ ಹಾಗೂ ಸ್ವಚ್ಛತೆಗೆ ಶುದ್ಧ ಕುಡಿಯುವ ನೀರಿನ ಬಳಕೆಯನ್ನು ಮಾಡುವುದನ್ನು ನಿಷೇಧಿಸಲಾಗಿದೆ ಎಂದು

ಹೇಳಿದರು. ಫೆ. 23 ರ ವರೆಗೆ ಒಟ್ಟಾರೆಯಾಗಿ 112 ಪ್ರಕರಣಗಳು ದಾಖಲಾಗಿದ್ದು, ದಕ್ಷಿಣ ವಲಯದಲ್ಲಿ ಹೆಚ್ಚು ಪ್ರಕರಣಗಳು (33) ದಾಖಲಾಗಿವೆ. ಉತ್ತರ ವಲಯದಲ್ಲಿ 23, ಪಶ್ಚಿಮ ವಲಯದಲ್ಲಿ 28, ಪೂರ್ವ ವಲಯದಲ್ಲಿ 28 ಪ್ರಕರಣಗಳು ದಾಖಲಾಗಿವೆ.

ಶುದ ಕುಡಿಯುವ ನೀರು ಪೋಲು ಮಾಡಬೇಡಿ

ಸಾರ್ವಜನಿಕರು ಮುಂಬರುವ ನೀರಿನ ಕೊರತೆಯನ್ನು ಕಡೆಗಣಿಸಿ, ನಿಷೇಧಿಸಿರುವಂತಹ ಕಾರ್ಯಗಳಿಗೆ ಶುದ್ಧ ನೀರಿನ ಬಳಕೆಯನ್ನು ಇನ್ನೂ ಮುಂದುವರಿಸಿರುವುದು ಸರಿಯಲ್ಲ. ಕಳೆದ 7 ದಿನಗಳಲ್ಲಿ ನಮ್ಮ ಮಂಡಳಿ ಸಿಬ್ಬಂದಿ ಕುಡಿಯುವ ನೀರನ್ನು ಪೋಲು ಮಾಡಿದವರ ವಿರುದ್ಧ ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿದ ದಂಡ ವಸೂಲಿ ಮಾಡಲು ಮುಂದಾಗಿದ್ದೇವೆ ಎಂದು ಮಾಹಿತಿ ನೀಡಿದರು. ನಗರಕ್ಕೆ ಸುಮಾರು 100 ಕಿ.ಮೀಗಳ ದೂರದಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಅಂತರ್ಜಲ ಕುಸಿತದಿಂದ ನೀರಿನ ಕೊರತೆ ಹೆಚ್ಚಾಗಬಹುದು ಎನ್ನುವ ಎಚ್ಚರಿಕೆಯಿಂದ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರು ಅಮೂಲ್ಯ ಶುದ್ಧ ಕುಡಿಯುವ ನೀರನ್ನು ಅನಗತ್ಯವಾಗಿ ಪೋಲು ಮಾಡುವುದನ್ನು ನಿಲ್ಲಿಸಬೇಕು. ಈ ಮೂಲಕ ಅಗತ್ಯವಿರುವ ಜನರಿಗೆ ಹಾಗೂ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಮಂಡಳಿಯ ಜತೆ ಕೈಜೋಡಿಸಬೇಕು. ಮುಂದಿನ ದಿನಗಳಲ್ಲಿ ದಂಡ ಅಭಿಯಾನವನ್ನು ಇನ್ನಷ್ಟು ವ್ಯಾಪಕಗೊಳಿಸಲಾಗುವುದು ಎಂದರು.

ಕುಡಿಯುವ ನೀರು ಮಾರಾಟದಲ್ಲೂ ವಂಚನೆ

ಬೆಂಗಳೂರು: ನಗರದಲ್ಲಿ ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಬಿಬಿಎಂಪಿ ಜನರಿಗೆ ಶುದ್ಧ ನೀರನ್ನು ಪೂರೈಕೆ ಮಾಡಲು 600ಕ್ಕೂ ಅಧಿಕ ಶುದ್ಧ ನೀರಿನ ಘಟಕಗಳನ್ನು ನಿರ್ಮಾಣ ಮಾಡಿದ್ದು, ಆದರೆ ಸದ್ಯ ನಗರದಲ್ಲಿ ಕುಡಿಯುವ ನೀರಿನ ಹೊಸ ವಂಚನೆಯೊಂದು ಬೆಳಕಿಗೆ ಬಂದಿದೆ.

ನಗರದಲ್ಲಿ ಹಲವು ಅಂಗಡಿಗಳು ಶುದ್ಧ ಕುಡಿಯುವ ನೀರನ್ನು ಮನೆ ಬಾಗಿಲಿಗೆ ಪೂರೈಕೆ ಮಾಡುತ್ತವೆ. ಆದರೆ ಇದರ ದರಗಳು ಹೆಚ್ಚಾದ ಕಾರಣ ಜನರಿಗೆ ಅನುಕೂಲ ಮಾಡಿಕೊಡಲು ಬಿಬಿಎಂಪಿ 5 ರು ಗೆ ನೀರು ಸಿಗುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಆರಂಭಿಸಿದೆ.

ಆದರೆ ಇದನ್ನು ಉಪಯೋಗಿಸಿಕೊಳ್ಳುವ ಅಂಗಡಿಗಳು ಜನರನ್ನು ವಂಚಿಸುತ್ತಿವೆ. ಈ ಶುದ್ಧ ಕುಡಿಯುವ ನೀರಿನ ಘಟಕದಿಂದ 5 ರು.ಗೆ ನೀರು ತುಂಬಿಕೊಂಡು ಹೋಗುವ ಕೆಲವು ಅಂಗಡಿಗಳನ್ನು ಅದನ್ನು ಎರಡು, ಮೂರು ಪಟ್ಟು ದರಕ್ಕೆ ಜನರಿಗೆ ಮಾರಾಟವನ್ನು ಮಾಡುತ್ತಿವೆ. ಮನೆಯ ಸಮೀಪ ಶುದ್ಧ ಕುಡಿಯುವ ನೀರಿನ ಘಟಕ ಇಲ್ಲದವರು, ಅಲ್ಲಿಂದ ನೀರು ತರಲು ವಾಹನ ವ್ಯವಸ್ಥೆ ಇಲ್ಲದ ಜನರು ಅಂಗಡಿಗಳ ಮೊರೆ ಹೋಗಿದ್ದಾರೆ.

ಕೆಲ ಅಂಗಡಿಗಳು ಜನರ ಈ ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡಿದ್ದು, 5 ರು.ಗೆ 20 ಲೀ. ಕ್ಯಾನ್ ತುಂಬಾ ನೀರು ತುಂಬಿಕೊಂಡು ಹೋಗಿ, ಅದನ್ನು ಜನರಿಗೆ ಮೂರು ಪಟ್ಟು ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತವೆ. ನಗರದ ಹಲವು ಪ್ರದೇಶಗಳಲ್ಲಿ ಈ ಮಾದರಿ ಮಾರಾಟ ನಡೆಯುತ್ತಿದೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಕುಡಿಯುವ ನೀರಲ್ಲಿ ಕಾರ್ ಸ್ವಚ್ಛತೆ

12 ವಾಟರ್ ಕ್ಯಾನ್ ತುಂಬಿಸಿದ ವ್ಯಕ್ತಿ

ನಗರದ ಅಂಗಡಿಯೊಂದರಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಯೋರ್ವ ಮಾರುತಿ ಓಮಿನಿ ಕಾರ್‌ನಲ್ಲಿ ಬಂದು 12 ಕ್ಯಾನ್‌ನಲ್ಲಿ ಶುದ್ಧ ನೀರಿನ ಘಟಕದಿಂದ ನೀರನ್ನು ತೆಗೆದುಕೊಂಡು ಹೋಗಿದ್ದು , ಆ ಅಂಗಡಿಯಿಂದ ಮನೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತದೆ. ಆದರೆ ಅವರು ಶುದ್ಧ ಕುಡಿಯುವ ನೀರಿನ ಘಟಕದಿಂದ 5 ರು.ಗೆ ನೀರನ್ನು ತೆಗೆದುಕೊಂಡು ಹೋಗಿ ಅದನ್ನು ಜನರಿಗೆ 25 ರಿಂದ 30 ರು.ಗೆ ಮಾರಾಟ ಮಾಡುವುದು ತಿಳಿದು ಬಂದಿತು. ಈ ಮಾದರಿಯಲ್ಲಿ ನಗರದ ಹಲವು ಕಡೆ ನಡೆಯುತ್ತಿದೆ ಎಂಬ ಮಾಹಿತಿಯೂ ಈಗ ಹೊರಬರುತ್ತಿದೆ. ನಗರದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಖಾಸಗಿ ವ್ಯಕ್ತಿಗಳು ನಿರ್ವಹಣೆ ಮಾಡುತ್ತಾರೆ. ಹಲವು ಕಡೆಗಳಲ್ಲಿ ದಿನದ 24 ಗಂಟೆಯೂ ಈ ಘಟಕ ಕಾರ್ಯ ನಿರ್ವಹಣೆ ಮಾಡುತ್ತದೆ. ರಾತ್ರಿ ವೇಳೆ ಯಾರೂ ಇಲ್ಲದಾಗ 10, 15 ಕ್ಯಾನ್ ನೀರನ್ನು ತುಂಬಿಕೊಂಡು ಹೋಗಿ ಅದನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ ಎನ್ನುವುದು ಬೆಳಕಿಗೆ ಬಂದಿದೆ.

ಸಮಾಚಾರ ಸಣ್ಣದಲ್ಲ

ರಾಘವೇಂದ್ರ ಸ್ವಾಮಿ 430ನೇ ವರ್ಧಂತಿ

ತುಮಕೂರು: ಇಡೀ ಜಿಲ್ಲೆಯಲ್ಲಿ ಅತೀ ಪುರಾತನವಾದ ಸುಮಾರು 500 ವರ್ಷ ಇತಿಹಾಸವುಳ್ಳ ಶ್ರೀ ವಿಜಯೀಂದ್ರತೀರ್ಥ ಪ್ರತಿಷ್ಠಾಪಿತ ಮುಖ್ಯಪ್ರಾಣದೇವರು ಇರುವ ನಗರದ ಚಿಕ್ಕಪೇಟೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ (ದೊಡ್ಡರಾಯರ ಮಠ) ಮಾ.1ರ ಶನಿವಾರ ಶ್ರೀ ರಾಘವೇಂದ್ರ ಸ್ವಾಮಿಯ 404 ನೇ ವರ್ಷದ ಪಟ್ಟಾಭಿಷೇಕ ಹಾಗೂ ಮಾ.6ರ ಗುರುವಾರದಂದು 430 ನೇ ವರ್ಷದ ವರ್ಧಂತಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಮಹೋತ್ಸವದ ಅಂಗವಾಗಿ ರಾಘವೇಂದ್ರ ಸ್ವಾಮಿಗೆ ವಿಶೇಷ ಫಲ, ಪಂಚಾಮೃತ ಅಭಿಷೇಕ, ಕನಕಾಭಿಷೇಕ, ಶ್ರೀ ರಾಘವೇಂದ್ರ ಸ್ತೋತ್ರ ಪಾರಾಯಣ, ರಥೋತ್ಸವ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಹಾಗೂ ಸಹಸ್ರಾರು ಭಕ್ತರಿಗೆ ಪ್ರಸಾದ ವಿನಿಯೋಗ ಹಮ್ಮಿಕೊಳ್ಳಲಾಗಿದೆ. ಮಾ. 1 ರಿಂದ 6 ರವರೆಗೆ ಪ್ರತಿದಿನ ಸಂಜೆ 6:30ಕ್ಕೆ ಮರುತಾಚಾರ್ಯರಿಂದ ಶ್ರೀ ರಾಘವೇಂದ್ರ ವಿಜಯದ ಬಗ್ಗೆ ಪ್ರವಚನ ಏರ್ಪಡಿಸಲಾಗಿದೆ. ಭಕ್ತರು ಆಗಮಿಸಿ ಶ್ರೀ ರಾಘವೇಂದ್ರ ಸ್ವಾಮಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ದೊಡ್ಡರಾಯರ ಮಠದ ಗುರುರಾಜ ಆಚಾರ್ಯ(ದೂ:9844081764) ತಿಳಿಸಿದ್ದಾರೆ.

ರೈತರಿಗೆ ಸದಸ್ಯತ್ವ ನೀಡದೆ ಏಕಪಕ್ಷೀಯ ಧೋರಣೆ

ಚಿಂತಾಮಣಿ: ರೈತರಿಗೆ ಸದಸ್ಯತ್ವ ನೀಡದೆ ಏಕ ಪಕ್ಷ ಧೋರಣೆ ನಡೆಸಿ ಚುನಾವಣೆ ನಡೆಸುತ್ತಿರುವುದಾಗಿ ವಕೀಲ ದಯಾನಂದ,ನಾರಾಯಣ್ ಮೂರ್ತಿ, ರವಿ, ಮಣಿಕಂಠಾಚಾರಿ ಮೊದಲಾದವರು ಆರೋಪ ಮಾಡಿದ್ದಾರೆ. ತಾಲೂಕಿನ ಹಿರೇಕಟ್ಟಿಗೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಆಡಳಿತ ಮಂಡಳಿಯ ಚುನಾವಣೆ ಭಾನುವಾರ ನಡೆಯುತ್ತಿದ್ದು ಚುನಾವಣಾ ಅಧಿಕಾರಿ ಏಕಪಕ್ಷೀಯವಾಗಿ ಚುನಾವಣೆ ನಡೆಸುತ್ತಿದ್ದಾರೆ. ಆದರೆ ಮತದಾರರು ಆರೋಪಿಸಿದ್ದಾರೆ. ಚುನಾವಣೆಗೂ ಮೊದಲು ಈ ಬಗ್ಗೆ ರೈತರಿಗೆ,ಹಾಗೂ ಸ್ಥಳೀಯರಿಗೆ, ಸಮರ್ಪಕವಾದ ಮಾಹಿತಿ ತಿಳಿಸದೆ ಮತ್ತು ಬಹಿರಂಗವಾಗಿ ಪ್ರಚಾರ ಪಡಿಸದೆ,ಚುನಾವಣೆಯನ್ನು ಘೋಷಣೆ ಮಾಡಿರುವುದು ಕಾನೂನುಬಾಹಿರವಾಗಿದೆ .ಈ ಕುರಿತು ಕಾನೂನು ಹೋರಾಟ ಮಾಡುವುದಾಗಿ ಅವರು ವಿವರಿಸಿದರು. ಸಂಘದ ಚುನಾವಣೆ ರೈತರಿಗೆ ಮಾಹಿತಿ ನೀಡಿ ಚುನಾವಣೆ ನಡೆಸಬೇಕಾಗಿತ್ತು .ಆದರೆ ಮಾಹಿತಿನ್ನೇಯೆ ನೀಡದೆ ಚುನಾವಣೆ ನಡೆಸು ತ್ತಿರುವುದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ವೀಣಾ ಕೃಷ್ಣಗೌಡ,ಮಂಜುನಾಥ್ ಶಿಲ್ಪ,ಮುನಿ ವೆಂಕಟಪ್ಪ, ಆಂಜನಪ್ಪ, ಶ್ರೀನಿವಾಸ್ ರೆಡ್ಡಿ,ನಾಗರಾಜ್, ಇದ್ದರು.

ಫೆ. 26ರಿಂದ ತಮ್ಮಣ್ಣ ಸ್ವಾಮಿಯ ಜಾತ್ರೆ

ಚಿಕ್ಕನಾಯಕನಹಳ್ಳಿ: ತಾಲೂಕಿನ ಹುಳಿಯಾರು ಹೋಬಳಿ ದಬ್ಬಗುಂಟೆ ಪುಣ್ಯಕ್ಷೇತ್ರದಲ್ಲಿ ಫೆ. 28ರ ಶುಕ್ರವಾರ ಶ್ರೀ ತಮ್ಮಣ್ಣ ಸ್ವಾಮಿಯ ಶಿವರಾತ್ರಿ ಜಾತ್ರಾ ಮಹೋತ್ಸವ ವೈಭವಯುತವಾಗಿ ನಡೆಯಲಿದೆ. ಅಂದು ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದ್ದು, ಜಾತ್ರೆಯ ದಿನ ರಾಜ್ಯದ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸುವ ಭಕ್ತರಿಗೆ ಶ್ರೀ ತಮ್ಮಣ್ಣ ಸ್ವಾಮಿ ಗೆಳೆಯರ ಬಳಗದ ವತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಫೆ. 26ರ ಬುಧವಾರ ಕ್ಯಾತೆದೇವರಹಟ್ಟಿಯಲ್ಲಿ ಮಹಾಶಿವರಾತ್ರಿ ಉಪವಾಸ, ಜಾಗರಣೆ, ಗಂಗಾಸ್ನಾನ, ಅಭಿಷೇಕ, ವಸ್ತ್ರಾಧಾರಣೆ, ಬೆಳಗಿನ ಜಾವ ಪೂಜೆ ಏರ್ಪಡಿಸಲಾಗಿದೆ. ಫೆ.27ರ ಗುರುವಾರ ಗಾಣದಾಳು ಗಡಿಯಲ್ಲಿರುವ ಅಯ್ಯನ ಗುಡ್ಡೆ ಹಾಗೂ ಬಸವನ ಗುಡ್ಡೆಗಳಿಗೆ ಅಭಿಷೇಕ, ವಸ್ತ್ರಾಧಾರಣೆ ಮಹಾಮಂಗಳಾರತಿ, ಸ್ವಾಮಿ ಉತ್ಸವ. ನಂತರ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ದೇವಾಲಯದ ಕಮಿಟಿ ತಿಳಿಸಿದೆ. ಮಾ. 1ರ ಶನಿವಾರ ಮುಡಿ ತೆಗೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಿನಿ ಬಸ್ ಪಲ್ಟಿ ಹಲವರಿಗೆ ಗಾಯ

ತುಮಕೂರು: ನಾಮಕರಣಕ್ಕೆ ತೆರಳುತ್ತಿದ್ದ ಮಿನಿ ಬಸ್ ಪಲ್ಟಿಯಾಗಿ ಹಲವರಿಗೆ ಗಂಭೀರ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಾಗಿರುವ ಘಟನೆ ನಡೆದಿದೆ. ನಾಮಕರಣಕ್ಕೆ ತೆರಳುತ್ತಿದ್ದ ಮಿನಿ ಬಸ್ ಪಲ್ಟಿಯಾಗಿರುವ ಘಟನೆ ದೊಡ್ಡಬಳ್ಳಾಪುರ ತಾಲೂಕಿನ ಮೇಷ್ಟ್ರು ಮನೆ ಗೇಟ್ ಬಳಿ ನಡೆದಿದೆ. ಬಸ್ ನಲ್ಲಿ ಸುಮಾರು 25 ಜನ ಪ್ರಯಾಣ ಮಾಡುತ್ತಿದ್ದರು. ಬಸ್ ಪಲ್ಟಿಯಾದ ಹಿನ್ನೆಲೆ ಹಲವರಿಗೆ ಗಂಭೀರ ಗಾಯಗಳಾಗಿದ್ದು, ಗಾಯಾಳುಗಳನ್ನು ವಿವಿಧ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತುಮಕೂರಿನ ಶಿರಾದಿಂದ ಯಲಹಂಕಕ್ಕೆ ಹೊರಟಿತ್ತು. ಘಟನಾ ಸ್ಥಳಕ್ಕೆ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

{ಶಿವರಾಜ ತಂಗಡಗಿ } ಸಚಿವ

ಪ್ರತಿಭಟನೆಗೆ ಪಕ್ಷಾತೀತವಾಗಿ ಎಲ್ಲ ಪಕ್ಷದ ಮುಖಂಡರು ಬೆಂಬಲಿಸಿದ್ದಾರೆ. ಈ ವಿಷಯವಾಗಿ ನಾನು ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಶಾಸಕ ರಾಘವೇಂದ್ರ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಬಯ್ಯಾಪುರ ಹಾಗೂ ನಾನು ಸೇರಿ ಚರ್ಚೆ ಮಾಡಿದ್ದೇವೆ.

ಮೂರುದಿನದ ಅಭಿಯಾನದಲ್ಲಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಕೇವಲ-2418 | ಅನಧಿಕೃತ ಆಸ್ತಿಗಳ ಮಾಲೀಕರಿಗೆ ನಗರಸಭೆಯಿಂದ 2ದಿನ ಅವಕಾಶ

ಬಿ-ಖಾತಾ ಅಭಿಯಾನ ಯಶಸ್ಸಿಗೆ ನಗರಸಭೆ ವಿಫಲ

ಮುನಿರಾಜು ಎಂ ಅರಿಕೆರೆ ಚಿಕ್ಕಬಳ್ಳಾಪುರ

ಅನಧಿಕೃತ ರೆವಿನ್ಯೂ ಬಡಾವಣೆ, ಮನೆ, ನಿವೇಶನ ಇತ್ಯಾದಿ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದು ಅಧಿಕೃತವಾಗಿ ಆಸ್ತಿಯ ಹಕ್ಕು ನೀಡಲು ಉದ್ದೇಶಿಸಿರುವ ಬಿ-ಖಾತಾ ಅಭಿಯಾನದ ಪ್ರಗತಿ ಚಿಕ್ಕಬಳ್ಳಾಪುರ ನಗರಸಭೆಯಲ್ಲಿ ನಿರೀಕ್ಷಿತ ಗುರಿಮುಟ್ಟುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದು ಇದೊಂತರ ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ.

ಹೌದು ರಾಜ್ಯದಲ್ಲಿ ಅನಧಿಕೃತ ಬಡಾವಣೆಗಳಿಗೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ಸರಕಾರ 90 ದಿನಗಳ ಅವಧಿ ನಿಗದಿಪಡಿಸಿ ಒನ್ ಟೈಮ್ ಸೆಟಲ್‌ಮೆಂಟ್ ಎಂಬಂತೆ ಬಿಖಾತಾ ಆಂದೋಲನಕ್ಕೆ ಫೆ.20ರಂದು ಚಾಲನೆ ನೀಡಿದೆ. ಮುಖ್ಯಮಂತ್ರಿಗಳೇ ವಿಡಿಯೋ ಕಾನ್ಫರೆನ್ಸ್ ನಡೆಸಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ನಗರಸಭೆ ಪುರಸಭೆ, ಪಟ್ಟಣಸಭೆ ಆಯುಕ್ತರಿಗೆ ಈ ಸಂಬಂಧ ಖಡಕ್ ಸೂಚನೆ ನೀಡಿದ್ದು ಭ್ರಷ್ಟಾಚಾರಕ್ಕೆ ಆಸ್ಪದ ನೀಡದಂತೆ ಅಭಿಯಾನ ಯಶಸ್ವಿಗೊಳಿಸಲು ಸೂಚಿಸಿದ್ದರು.

ಮುಖ್ಯಮಂತ್ರಿಗಳ ಆದೇಶವನ್ನು ಗಂಭೀರವಾಗಿ ತೆಗೆದುಕೊಂಡ ಶಾಸಕ ಪ್ರದೀಪ್ ಈಶ್ವರ್ ಫೆ.18 ರಿಂದಲೇ ಕ್ಷೇತ್ರದಲ್ಲಿ ಬೀಡುಬಿಟ್ಟು ನಗರವಾಸಿಗಳಿಗೆ ಬಿ-ಖಾತೆ ಮಾಡಿಸಿಕೊಳ್ಳುವಂತೆ ಮನವರಿಕೆ ಮಾಡುತ್ತಾ ವ್ಯಾಪಕವಾದ ಪ್ರಚಾರ ನೀಡಿದ್ದರು. ಆದರೂ ಜನತೆ ಎಚ್ಚೆತ್ತುಕೊಂಡು ಖಾತೆ ಮಾಡಿಸಿಕೊಳ್ಳಲು ಮುಂದೆ ಬಾರದಿರುವುದು ಅಚ್ಚರಿಗೆ ಕಾರಣವಾಗಿದೆ.

ಮೂರುದಿನ-2418 ಅರ್ಜಿ:

ಚಿಕ್ಕಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಬಾಕಿಯಿರುವ ಒಟ್ಟು ಖಾತೆಗಳ ಸಂಖ್ಯೆ-14648.ಈ ಅಭಿಯಾನ ಪ್ರಾರಂಭವಾದ ಫೆ.20ರಿಂದ 23ರ ಶನಿವಾರದವರೆಗೆ ಕ್ರಮವಾಗಿ ಮೊದಲದಿ716, ಎರಡನೇ ದಿನ-871, ಮೂರನೇ ದಿನ-831 ಒಟ್ಟು 2418 ಮಂದಿಯಷ್ಟೇ ಬಿ-ಖಾತೆಗೆ ನಿಗಧಿಪಡಿಸಿರುವ ಎಲ್ಲಾ ದಾಖಲೆಗಳೊಂದಿಗೆ 31 ವಾರ್ಡುಗಳಲ್ಲಿ ಅರ್ಜಿ ಸಲ್ಲಿಸಿದ್ದಾರೆ.

11 ಸ್ಲಂಗಳಿಗೆ ಖಾತಾ ಭಾಗ್ಯವಿಲ್ಲ:

ಚಿಕ್ಕಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಹತ್ತಾರು ವರ್ಷಗಳಿಂದ ಅಕ್ರಮವಾಗಿ ತಲೆಯೆತ್ತಿರುವ ಕೊಳಚೆ ಪ್ರದೇಶಗಳ ಸಂಖ್ಯೆ 11 ಇವೆ.ಈ ಪೈಕಿ ಕೆಲವೆಡೆ ಸರಕಾರವೇ ಇವರಿಗೆ ಮನೆಗಳನ್ನು ನಿರ್ಮಿಸಿಕೊಟ್ಟಿದೆ.ಉಳಿದವರು ಅವರೇ ಮನೆ ಕಟ್ಟಿಕೊಂಡು ವಾಸವಿದ್ದಾರೆ. ಆದರೆ ಸರಕಾರ ಕೊಟ್ಟಿರುವ ಮನೆಗಳಿಗೂ ಕೂಡ ಈವರೆಗೆ ಹಕ್ಕುಪತ್ರ ನೀಡಿಲ್ಲ. ಇವರು ಏನು ಮಾಡಬೇಕು,ಹಕ್ಕುಪತ್ರವನ್ನು ತೋರಿಸಿ ಎ ಖಾತೆ ಪಡೆಯಬಹುದು.ಇವರ ಬಳಿ ಯಾವ ದಾಖಲೆಯೂ ಇಲ್ಲದ ಕಾರಣ ಸಾವಿರಾರು ಮಂದಿ ಬಿಖಾತಾ ಅಭಿಯಾನದಿಂದ ದೂರುಉಳಿಯುವಂತಾಗಿದೆ.ನಮ್ಮ ಶಾಸಕರು 90 ದಿನಗಳ ಒಳಗೆ ಕನಿಷ್ಟ ಬಿಖಾತೆ ಮಾಡಿಸಿಕೊಡಲು ಏನಾದರೂ ಯೋಜನೆ ರೂಪಿಸುತ್ತಾರೆ ಎಂಬ ನಿರೀಕ್ಷೆಯಲ್ಲಿ ಇವರಿದ್ದಾರೆ.

ಗೊಂದಲ ಮುಗಿದಿಲ್ಲ:

ಈ ಅಭಿಯಾನದಲ್ಲಿಯೇ ಒಂದು ವೇಳೆ ಅರ್ಜಿ ಸಲ್ಲಿಸಿ ಅನಧಿಕೃತ ರೆವಿನ್ಯೂ ಬಡಾವಣೆ, ಮನೆ, ನಿವೇಶನ ಇತ್ಯಾದಿ ಆಸ್ತಿಗಳಿಗೆ ಬಿ ಖಾತಾ ಮಾಡಿಸಿಕೊಂಡರೆ ಭವಿಷ್ಯದಲ್ಲಿ ಅವರಿಗೆ ಎ ಖಾತಾ ದೊರೆಯುವುದೇ ಇಲ್ಲ ಎಂಬ ಸುದ್ದಿಯಿಂದ ಜನತೆಗೆ ಗೊಂದಲ ಸೃಷ್ಟಿಸಿದೆ. ಈ ಬಗ್ಗೆ ಮಾಹಿತಿ ನೀಡದಿರುವುದರಿಂದ ನಗರಸಭೆ ಆಡಳಿತ ಮತ್ತು ಶಾಸಕರ ನಡುವೆ ಶೀತಲ ಸಮರ ಕಾರಣವಾಗಿವೆ. ಇದನ್ನು ಹೀಗೇ ಬಿಟ್ಟರೆ ಚಿಕ್ಕಬಳ್ಳಾಪುರದಲ್ಲಿ ಶಾಸಕರು ನಿರೀಕ್ಷೆ ಮಾಡಿದಷ್ಟು ಯಶಸ್ಸು ದೊರೆಯುವುದಿಲ್ಲ ಎಂಬುದು ಸಾರ್ವಜನಿಕರ ಮಾತಾಗಿದೆ.



ಬಿಖಾತಾ ಅಭಿಯಾನದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಶಾಸಕ ಪ್ರದೀಪ್ ಈಶ್ವರ್

ಸರಕಾರ ಸೌಲಭ್ಯ ಬಳಸಿಕೊಂಡರೆ ನೀವೇ ಜಾಣರು

ಮೂರು ದಿನಗಳ ಬಿ-ಖಾತಾ ಅಭಿಯಾನ ನಿರೀಕ್ಷಿತ ಫಲ ನೀಡದ ಹಿನ್ನೆಲೆಯಲ್ಲಿ ನಗರಸಭೆ ಆಯುಕ್ತರು ಎರಡು ದಿನ ಅಭಿಯಾನವನ್ನು ವಿಸ್ತರಣೆ ಮಾಡಿ ಶನಿವಾರ ಸಂಜೆ ಆದೇಶ ಹೊರಡಿಸಿದ್ದಾರೆ. ಈಗಲಾದರೂ ಜನತೆ ಯಾವುದೇ ಗೊಂದಲಗಳಿಗೆ ಆಸ್ಪದ ನೀಡದೆ ಸರಕಾರ ನೀಡಿರುವ ಸುವರ್ಣಾವಕಾಶದ ಸದುಪಯೋಗಕ್ಕೆ ಮುಂದಾಗುವುದು ಒಳಿತು. ಆಗ ಮಾತ್ರವೇ ಈ ಅಭಿಯಾನಕ್ಕೆ ಕೀರ್ತಿ ಬರಲಿದೆ ಎನ್ನುವುದು ಕೊಳಗೇರಿ ಜನರ ಅಭಿಪ್ರಾಯವಾಗಿದೆ. ಬಿ-ಖಾತಾ ಅಭಿಯಾನವನ್ನು 90 ದಿನಗಳ ನಂತರ ಯಾವುದೇ ಕಾರಣಕ್ಕೂ ಮುಂದುವರಿಸುವುದಿಲ್ಲ ಎಂಬುದನ್ನು ಸರಕಾರ ಸ್ಪಷ್ಟವಾಗಿ ಹೇಳಿದ್ದರೂ ಕೂಡ ನಗರವಾಸಿಗಳಿಗೆ ಇದರ ಮಹತ್ವ ಅರಿವಾಗದಿರುವುದು ವಿಚಿತ್ರವಾದರೂ ಸತ್ಯ. ಸರಕಾರವೇ ನೀಡಿರುವ ಅವಕಾಶವನ್ನು ಪಡೆದುಕೊಂಡವರು ಜಾಣರಾದರೆ ಕಳೆದುಕೊಂಡವರು ಪರಿತಪಿಸುವುದಂತೂ ಖಚಿತ.

ಬಿಖಾತಾ ಅಭಿಯಾನದಲ್ಲಿ ನಿವಾಸಿಗಳಿಂದ ಅರ್ಜಿಸ್ವೀಕರಿಸುತ್ತಿರುವ ನಗರಸಭೆ ಸಿಬ್ಬಂದಿ ಮುಖಂಡರ



ನಗರಸಭಾ ಕಾರ್ಯಾಲಯ, ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆ

ದಿನಾಂಕ: 22-02-2025

ಕಛೇರಿ ಆದೇಶ

ವಾರ್ಡುವಾರು ನಡೆಯುತ್ತಿರುವ ಬಿ ಖಾತಾ ಅಭಿಯಾನವನ್ನು ಮತ್ತೆ ಎರಡು ದಿನ ವಿಸ್ತರಣೆ ಮಾಡಿ ನಗರಸಭೆ ಹೊರಡಿಸಿರುವ ಆದೇಶ ಪ್ರತಿ

ಡಿಜಿಟಲ್ ಅಪರಾಧ ಕಡಿವಾಣಕ್ಕೆ ಸೈಬರ್ ಸುರಕ್ಷತಾ ಕೇಂದ್ರ

ತುಮಕೂರು: ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 25,000 ಸೈಬರ್ ಪ್ರಕರಣಗಳು ದಾಖಲಾಗುತ್ತಿವೆ. ಇದರಲ್ಲಿ ಶೇ.20 ರಷ್ಟು ಪ್ರಕರಣ ಪತ್ತೆ ಹಚ್ಚಲು ಸಾಧ್ಯವಾಗುತ್ತಿದೆ. ಇನ್ನುಳಿದ ಪ್ರಕರಣ ಪತ್ತೆ ಹಾಕಲು ಸಂಶೋಧನಾತ್ಮಕವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸರಕಾರದ ಮಟ್ಟದಲ್ಲಿ ಚಿಂತನೆ ನಡೆಸಲಾಗಿದೆ. ಅದರ ಜತೆಗೆ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಡಿಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಸೈಬರ್ ಸೆಕ್ಯೂರಿಟಿ ಸೆಂಟರ್‌ನ್ನು ತುಮಕೂರಿನಲ್ಲಿ ತೆರೆಯಲು ತಯಾರಿ ನಡೆಸಲಾಗಿದೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಗೃಹ ಸಚಿವನಾಗಿದ್ದ ಕಾಲಘಟ್ಟದಲ್ಲಿ ಇದರ ಸ್ಥಾಪನೆಗೆ ಸರಕಾರ ಮಟ್ಟದಲ್ಲಿಚಿಂತನೆ ನಡೆಸಲಾಗಿತ್ತು. ಈಗ ಪೊಲೀಸ್ ಇಲಾಖೆ ಸೇರಿದಂತೆ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ಸೈಬರ್ ಸೆಕ್ಯೂರಿಟಿ ವಿಭಾಗದ ಜತೆಗೆ ಸೇರಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಸೈಬರ್ ಸೆಕ್ಯೂರಿಟಿ ಸೆಂಟರ್ ಸದ್ಯವೇ ಆರಂಭಿಸಲಾಗುವುದು ಎಂದರು.

ಸೈಬರ್ ಸೆಕ್ಯೂರಿಟಿ ಕೋರ್ಸ್ ನ ವಿದ್ಯಾರ್ಥಿಗಳಿಗೂ ಪೂರಕವಾಗುವಂತೆ ಚೆನ್ನೈನ ಕಂಪನಿಯೊಂದರ ಸಹಯೋಗದೊಂದಿಗೆ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಸೈಬರ್ ಸೆಕ್ಯೂರಿಟಿ ಕೇಂದ್ರ ಶೀಘ್ರವಾಗಿ ಉದ್ಘಾಟನೆಗೊಳ್ಳಲಿದ್ದು, ಶೈಕ್ಷಣಿಕ ಚಟುವಟಿಕೆ ಜತೆಗೆ ಸಾರ್ವಜನಿಕರಿಗೆ ಆಗುವ ಡಿಜಿಟಲ್ ವ್ಯವಹಾರದ ಮೋಸ, ವಂಚನೆ ಪ್ರಕರಣಗಳನ್ನು ಬೇಗ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಸದಸ್ಯರಾದ ಕನ್ನಿಕಾ ಪರಮೇಶ್ವರಿ, ಸಾಹೇ ವಿಶ್ವ ವಿದ್ಯಾಲಯದ ಉಪಕುಲಪತಿ ಡಾ.ಕೆ.ಬಿ.ಲಿಂಗೇಗೌಡ, ರಿಜಿಸ್ಟ್ರಾರ್ ಅಶೋಕ್ ಮೆಹ್ತಾ, ಸಾಹೇ ವಿವಿ ಕುಲಾಧಿಪತಿಗಳ ಸಲಹೆಗಾರ ಡಾ.ವಿವೇಕ ವೀರಯ್ಯ, ಎಸ್‌ಎಸ್ ಐಟಿ ಪ್ರಾಂಶುಪಾಲ ಡಾ. ಎಂ.ಎಸ್. ರವಿಪ್ರಕಾಶ್, ಎಸ್ಟೇಟ್ ಮ್ಯಾನೇಜರ್ ಡಾ.ಜಿ.ಡಿ.ಶಿವರಾಜು, ಮೆಡಿಕಲ್ ಕಾಲೇಜಿನ ಸಾನಿಕೊಪ್ಪ, ಉಪಪ್ರಾಂಶುಪಾಲ ಡಾ ಪ್ರಭಾಕರ್, ಎಸ್‌ಎಸ್‌ಎಸ್‌ಇ ಕಾಲೇಜಿನ ಪ್ರಾಂಶುಪಾಲ ಡಾ.ಎಲ್ ಸಂಜೀವ್ ಕುಮಾರ್, ಜಿಲ್ಲಾ ಪಂಚಾಯಿತಿ ಸಿಇಓ ಜಿ ಪ್ರಭು ಸೇರಿದಂತೆ ವಿವಿಧ ವಿಭಾಗಗಳು ಮುಖ್ಯಸ್ಥರು ಹಾಜರಿದ್ದರು.

ನೂತನವಾಗಿ ಆರಂಭಿಸಲಾದ ಪರಂ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಸಚಿವ ಪರಮೇಶ್ವರ್ ಚಾಲನೆ ನೀಡಿದರು.

> **ಶ್ರೀ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜ್‌ನಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುವ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಡೇಟಾ ಸೈನ್ಸ್ ಮತ್ತು ಸೈಬರ್ ಸೆಕ್ಯೂರಿಟಿಯಂತಹ ವಿನೂತನ ತಂತ್ರಜ್ಞಾನದ ನೂತನ ಕೋರ್ಸ್ ಈಗಾಗಲೇ ಆರಂಭಿಸಿದ್ದು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕವಾಗಿ ಟಾಪ್‌ಎಂಡ್ ಸೌಲಭ್ಯಗಳನ್ನು ನೀಡಿ ಅವರು ವಿಶ್ವಮಟ್ಟದ ಸ್ಪರ್ಧಾತ್ಮಕವಾಗಿ ಸಜ್ಜುಗೊಳಿಸುವ ಗುರುತರ ಹೊಣೆಗಾರಿಕೆ ನಮ್ಮ ಮೇಲಿದೆ.**
> -ಡಾ. ಜಿ ಪರಮೇಶ್ವರ್, ಗೃಹ ಸಚಿವ

ಪ್ಲಾಸ್ಟಿಕ್ ತ್ಯಜಿಸಿ, ಉಕ್ಕು ಬಳಸಿ

ಕೋಲಾರ: ಗ್ರಾಮಗಳಲ್ಲಿ ಪರಿಶುದ್ಧ ಗಾಳಿಗೆ ಪೂರ್ವಿಕರು ಅಶ್ವತ್ಥಕಟ್ಟೆ ನಿರ್ಮಿಸಿ ಅರಳಿ ಮತ್ತು ಬೇವಿನ ಮರಗಳು ಬೆಳೆಸಿ ಪೂಜನೀಯ ಭಾವನೆಯಿಂದ ಕಾಣುತ್ತಿದ್ದು ಇದೀಗ ಅಂತಹ ವಾತಾವರಣ ಮಾಯವಾಗಿರುವುರಿಂದಾಗಿ ಜನರಲ್ಲಿ ಜಾಗೃತಿ ಮೂಡಿಸಿ ಪರಿಸರ ಪೂರಕ ಗಿಡ-ಮರಗಳನ್ನು ನೆಟ್ಟು ಬೆಳೆಸುವ ಕಾರ್ಯ ಆಗಬೇಕು ಎಂದು ಗ್ರಾಮವಿಕಾಸ ಸಂಸ್ಥೆ ನಿರ್ದೇಶಕ ಎಂ.ವಿ. ನರಸಿಂಹರಾವ್ ಹೇಳಿದರು.

ಭಾರತೀಯ ಕಿಸಾನ್ ಸಂಘದಿಂದ ಹೊನ್ನಶೆಟ್ಟಹಳ್ಳಿ ಕೆರೆಯಲ್ಲಿ ಗಂಗಾ ಪೂಜೆ ಹಾಗೂ ಭಾರತ ಮಾತಾ ಪೂಜೆಗೆ ಚಾಲನೆ ನೀಡಿ ಮಾತನಾಡಿ, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕೆಂದರು. ಮದುವೆ ಮುಂತಾದ ಶುಭ ಸಮಾರಂಭಗಳಿಗೆ ಸ್ಟೀಲ್ ಲೋಟಗಳನ್ನು ಉಚಿತವಾಗಿ ಗ್ರಾಮವಿಕಾಸದಿಂದ ವ್ಯವಸ್ಥೆ ಮಾಡಲಾಗುತ್ತಿದ್ದು ಆಸಕ್ತರು ಇದರ ಪ್ರಯೋಜನಕ್ಕೆ ಮುಂದಾಗುವ ಮೂಲಕ ಪ್ಲಾಸ್ಟಿಕ್ ನಿರ್ಮೂಲನಕ್ಕೆ ಕೈ ಜೋಡಿಸಬೇಕೆಂದು ಮನವಿ ಮಾಡಿದರು. ಬೆಂಗಳೂರಿನ ಅರ್ಕ ಜುವೆಲ್ಲರಿ ಉದ್ಯಮಿ ನಂಗಲಿ ಕೆ. ಸತೀಶ್ ಕುಮಾರ್, ಬಿಜೆಪಿ ಮುಖಂಡ ಪಿ.ಎಂ. ರಘುನಾಥ್ ಮಾತನಾಡಿದರು. ಬಿಕೆಎಸ್ ದಕ್ಷಿಣ ಪ್ರಾಂತ ಕಾರ್ಯಕಾರಿ ಸದಸ್ಯ ಎ.ಅಪ್ಪಾಜಿಗೌಡ, ತಾಲೂಕು ಅಧ್ಯಕ್ಷ ಉಗಣಿ ಆರ್.ನಾರಾಯಣಗೌಡ, ನಗರ ಘಟಕದ ಅಧ್ಯಕ್ಷ ಆರ್. ಶ್ರೀನಿವಾಸ್, ಜಿಲ್ಲಾ ಉಪಾಧ್ಯಕ್ಷ ಅರಹಳ್ಳಿ ಶ್ರೀನಿವಾಸ ಗೌಡ, ಜಿಲ್ಲಾ ಕೋಶಾಧ್ಯಕ್ಷ ಲಾಯರ್ ವಿ.ಜಯಪ್ಪ, ಜಿಲ್ಲಾ ಮಾಜಿ ಅಧ್ಯಕ್ಷ ಕೆ. ರೋಹನ್‌ಕುಮಾರ್, ಗ್ರಾಮೀಣ ಮಹಿಳಾ ಒಕ್ಕೂಟದ ಅಧ್ಯಕ್ಷೆ ಎಂ.ಜಿ. ಪಾಪಮ್ಮ, ಎಂ.ಎಸ್.ಗಿರಿಜಾ ಇದ್ದರು.

ಕೋಲಾರದ ಹೊನ್ನಶೆಟ್ಟಿಹಳ್ಳಿಯಲ್ಲಿ ನಡೆದ ಭಾರತೀಯ ಕಿಸಾನ್ ಸಂಘದ ಗಂಗಾ ಪೂಜೆಯಲ್ಲಿ ಎಂವಿಎನ್ ರಾವ್ ಮಾತನಾಡಿದರು.

ಆದಿಜಾಂಬವಂತಸ್ವಾಮಿ ಜಾತ್ರೆ

ಕೋಲಾರ: ಆದಿಜಾಂಬವಂತಸ್ವಾಮಿ ದೇವಸ್ಥಾನದ ಅಭಿವೃದ್ಧಿ ಮತ್ತು ಸೇವಾ ಟ್ರಸ್ಟ್ ವತಿಯಿಂದ ಮುಳಬಾಗಿಲು ತಾಲೂಕಿನ ಆವಣಿ ಗ್ರಾಮದಲ್ಲಿ ನೆಲೆಸಿರುವ ಆದಿಜಾಂಭವಂತಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿ ಜಾತ್ರಾ ಪೂಜಾ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು. ಜಾಂಬವಂತಸ್ವಾಮಿಗೆ ಜೇನುತುಪ್ಪ ಅಭಿಷೇಕ, ಹೂವಿನ ಅಲಂಕಾರ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗನಡೆಯಿತು. ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕ ಸಮೃದ್ಧಿ ಮಂಜುನಾಥ್, ಸಂಸದ ಮಲ್ಲೇಶ್‌ಬಾಬು ಭಾಗವಹಿಸಿದ್ದು ಸಮುದಾಯದ ಮುಖಂಡರಾದ ಕೋಲಾರದ ಎಂ. ಶ್ರೀನಿವಾಸ್, ಕೆ.ಮಂಜುನಾಥ್, ಕೆ.ನಾರಾಯಣಪ್ಪ, ವಿ.ಶ್ರೀನಿವಾಸ್, ಹಾರೋಹಳ್ಳಿ ಸುರೇಶ್, ದಾಮೋದರ್, ಕಾಂಕ್ರೀಟ್ ಮೇಸ್ತ್ರಿ ನಾಗರಾಜ್, ಬಿಸಿಎಂ ರಾಮಕೃಷ್ಣಪ್ಪ, ವಿಜಯಕುಮಾರ್, ನಾರಾಯಣಸ್ವಾಮಿ ಅವರು ಆವಣಿಗೆ ತಂದಿದ್ದ ಪುಷ್ಪ ಪಲ್ಲಕ್ಕಿ ಜನಮೆಚ್ಚುಗೆ ಗಳಿಸಿತು.



ಆವಣಿ ಆದಿಜಾಂಭವಂತ ಸ್ವಾಮಿ ಜಾತ್ರೆಗೆ ಕೋಲಾರದಿಂದ ಪುಷ್ಪಪಲ್ಲಕ್ಕಿ ತರಲಾಗಿತ್ತು.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಬದ್ಧ: ಡಾ.ಎಂ.ಸಿ.ಸುಧಾಕರ್

ಎಂಟು ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಸಚಿವರ ಚಾಲನೆ

ಚಿಂತಾಮಣಿ: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಜನಪರವಾದ ಆಡಳಿತ ನಡೆಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದೆ.ರಾಜ್ಯದ ಸಮಗ್ರ ಅಭಿವೃದ್ಧಿಗೆ ನಮ್ಮ ಸರಕಾರ ಕಟಿಬದ್ಧವಾಗಿದ್ದು ಯಾವುದೇ ಕಾರಣಕ್ಕೂ ಜನಪರ ಯೋಜನೆಗಳನ್ನು ನಿಲ್ಲಿಸುವ ಮಾತೇ ಇಲ್ಲ. ಈಬಾರಿಯ ಬಜೆಟ್‌ನಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಅನುದಾನ ಕೇಳಲಾಗಿದೆ ಎಂದು ಉನ್ನತಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ತಾಲೂಕಿನ ಮಿಂಡಿಗಲ್ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ 20ಲಕ್ಷ ರು. ವೆಚ್ಚದ ಗ್ರಾಮ ಪಂಚಾಯಿತಿ ಕಟ್ಟಡ ಲೋಕಾರ್ಪಣೆ ಮಾಡ ಅವರು ಮಾತನಾಡಿದರು.

ಜಿಲ್ಲಾ ಕೇಂದ್ರದಲ್ಲಿನ ಕನ್ನಡಭವನವನ್ನು ಶೀಘ್ರದಲ್ಲಿಯೇ ಲೋಕಾರ್ಪಣೆ ಮಾಡುವ ಮೂಲಕ ಜನಬಳಕೆಗೆ ನೀಡಲಾಗುವುದು. ಮೊದಲ ಕಾರ್ಯಕ್ರಮವಾಗಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಇಲ್ಲಿಯೇ ಆಯೋಜಿಸಿ ಯಶಸ್ವಿಗೊಳಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿ, ನಂದಿಬೆಟ್ಟದ ರೋಪ್ ವೇ, ಶಿಡ್ಲಘಟ್ಟದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ, ಚಿಕ್ಕಬಳ್ಳಾಪುರ ನಗರ ಹೊರವಲಯದಲ್ಲಿ ಸುಸಜ್ಜಿತವಾದ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೂ ಅನುದಾನ ಮೀಸಲಿಟ್ಟು ಅಡಿಗಲ್ಲು ಹಾಕಲಾಗುವುದು ಎಂದರು.

ಜಿಲ್ಲೆಯ ಪ್ರಗತಿಯ ಜತೆಗೆ ಚಿಂತಾಮಣಿ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಮ್ಮ ಸರಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಚಿಂತಾಮಣಿ ತಾಲೂಕಿನಲ್ಲಿ ಹತ್ತು ಹಲವು ಅಭಿವೃದ್ಧಿ ಕೆಲಸಗಳು ಪ್ರಗತಿಯಲ್ಲಿವೆ. ನಲ್ಲಗುಟ್ಟಹಳ್ಳಿಯಿಂದ ವೇಗಲಹಳ್ಳಿ ಕ್ರಾಸ್‌ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ, ಜುಂಜನಹಳ್ಳಿ ಹಾಗೂ ಕಾಪ್ಪಲ್ಲಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲು ಯೋಜಿಸಿರುವ ಶುದ್ಧ ಕುಡಿಯುವ ನೀರಿನ ಘಟಕ,ಬೊಮ್ಮಾಲಟಪುರ ಹತ್ತಿರ ನೂತನವಾಗಿ ನಿರ್ಮಿಸಲು ಯೋಜಿಸಿರುವ ಚೆಕ್ ಡ್ಯಾಂನ ಕಾಮಗಾರಿಗಳ ಭೂಮಿಪೂಜೆ ಸೇರಿದಂತೆ 8 ಕೋಟಿ ವೆಚ್ಚದ ವಿವಿಧ ಗ್ರಾಮಗಳಲ್ಲಿ ರಸ್ತೆ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಸ್ಕೂಲ್ ಸುಬ್ಬಾರೆಡ್ಡಿ,ಮಾದಮಂಗಳ ಚಂದ್ರಪ್ಪ,ರಘುನಾಥ ರೆಡ್ಡಿ,ಬೈರೆಡ್ಡಿ, ಕಾಂಗ್ರೆಸ್ ನಾಯಕ ಮಾಡಿಕೆರೆ ಮಣಿಕಂಠ ಮತ್ತಿತರರು ಹಾಜರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ನಗರಸಭೆಯಾಗಿ ಜಾಜೂರು ಗ್ರಾಪಂ ಪರಿವರ್ತನೆ

ಅರಸೀಕೆರೆ: ನಗರಕ್ಕೆ ಹೊಂದಿಕೊಂಡಿರುವ ಜಾಜೂರು ಗ್ರಾಮ ಪಂಚಾಯಿತಿಯನ್ನು ಮುಂದಿನ ಬಾರಿ ನಗರಸಭೆಯಾಗಿ ಪರಿವರ್ತಿಸಲಾಗುವುದು, ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸಿದ್ಧತೆ ನಡೆಯುತ್ತಿದೆ ಎಂದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ, ಶಾಸಕ ಕೆ. ಎಂ. ಶಿವಲಿಂಗೇಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರ ಹೊರವಲಯದ ಜಾಜೂರು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಲೀಲಾಬಾಯಿ ಚಂದ್ರಶೇಖರನಾಯ್ಕ್ ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ನಗರಸಭೆಗೆ ಸೇರ್ಪಡೆ ಮಾಡಲು ಅಗತ್ಯವಿರುವ ಎಲ್ಲಾ ಲಕ್ಷಣಗಳು ಕಂಡು ಬಂದಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ, ಈ ಹಿಂದೆಯೇ ಇದಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ನಡೆದಿತ್ತು, ಹಲವಾರು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿತ್ತು, ನಡೆದ ಚುನಾವಣೆಯಲ್ಲಿ ಲೀಲಾಬಾಯಿ ಅವರನ್ನು ಅಧ್ಯಕ್ಷೆಯಾಗಿ ಮಾಡುವಲ್ಲಿ ಗ್ರಾಮ ಪಂಚಾಯಿತಿ ಎಲ್ಲಾ ಸದಸ್ಯರುಗಳ ಆದರ್ಶ ಮೆಚ್ಚುಗೆ ಆಗುತ್ತಿದೆ, ನೂತನ ಅಧ್ಯಕ್ಷೆಯು ಎಲ್ಲಾ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವ ನಿಟ್ಟಿನಲ್ಲಿ ಚಿಂತಿಸಬೇಕು ಎಂದರು.

ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ತಹಸೀಲ್ದಾರ್ ಸಂತೋಷ್ ಕುಮಾರ್ ಅವರು, 17 ಸದಸ್ಯರುಗಳ ಬಲವಿರುವ ಈ ಗ್ರಾಮ ಪಂಚಾಯಿತಿಯಲ್ಲಿ ನಿಕಟಪೂರ್ವ ಅಧ್ಯಕ್ಷೆಯಾಗಿದ್ದ ವನಿತಾಬಾಯಿ ಶೇಖರನಾಯ್ಕ್ ಅವರು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಲೀಲಾಬಾಯಿ ಚಂದ್ರಶೇಖರನಾಯ್ಕ್ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಲೀಲಾಬಾಯಿ ಚಂದ್ರಶೇಖರನಾಯ್ಕ್ ಅವರು ಜಾಜೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ತಾಲೂಕಿನ ಕಾಂಗ್ರೆಸ್ ಪಕ್ಷದ ವಿವಿಧ ಮುಖಂಡರು ಹಾಗೂ ಕಾರ್ಯಕರ್ತರು ನೂತನ ಅಧ್ಯಕ್ಷೆಗೆ ಅಭಿನಂದಿಸಿ ಶುಭ ಕೋರಿದರು.

ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಓಂಕಾರಮೂರ್ತಿ, ಉಪಾಧ್ಯಕ್ಷ ಸಿದ್ದೇಶ್, ನಿಕಟಪೂರ್ವ ಅಧ್ಯಕ್ಷೆ ವನಿತಾಬಾಯಿ ಶೇಖರನಾಯ್ಕ್,ಮುಖಂಡರಾದ ಶಶಿಧರ್, ಅಡವಿಸ್ವಾಮಿ, ಧರ್ಮಣ್ಣ, ರಘು ಕೋಡಿಹಳ್ಳಿ, ಧರ್ಮಶೇಖರ್ ಗೀಜಿಹಳ್ಳಿ, ಅಂಬರೀಷ್ ಸಂಕೋಡನಹಳ್ಳಿ, ಕೆಸಿಡಿ ಕುಮಾರ್, ಆನಂದನಾಯ್ಕ್ ಶಂಕರನಹಳ್ಳಿ, ಸಾಕಿ ಮಂಜುನಾಥ್, . ಸಿದ್ದೇಶ್, ರಮೇಶ್, ಉಮೇಶ್ ನಾಗತಿಹಳ್ಳಿ, ಸದಸ್ಯ ಶ್ರೀನಿವಾಸ್ ಕಾಟಿಕೆರೆ, ಅನಿಲ್, ಸ್ವಾಮಿ ಇದ್ದರು.

ಜಾಜೂರು ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ಲೀಲಾಬಾಯಿ ಚಂದ್ರಶೇಖರನಾಯ್ಕ್ ಅವರನ್ನು ಎಂ. ಶಿವಲಿಂಗೇಗೌಡ ಅವರು ಅಭಿನಂದಿಸಿ ಮಾತನಾಡಿದರು.

ಬಿಗಿಭದ್ರತೆಯಲ್ಲಿ ಧ್ವಜಸ್ತಂಭ ತೆರವು

ಕೊರಟಗೆರೆ: ಪೊಲೀಸ್ ಸಿಬ್ಬಂದಿಗಳಿಂದ 10ಕಡೆ ನಾಕಾಬಂದಿ ಹಾಕಿ ಕೊರಟಗೆರೆ ಪಟ್ಟಣಕ್ಕೆ ಯಾವುದೇ ವಾಹನಗಳನ್ನು ಬಿಡದೆ ಮುಖ್ಯರಸ್ತೆಯ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿ ಕತ್ತಲೆಯಲ್ಲಿ 250ಕ್ಕೂ ಅಧಿಕ ಪೊಲೀಸರ ಭದ್ರತೆಯೊಂದಿಗೆ ರಾತ್ರೋರಾತ್ರಿ ಮುಖ್ಯರಸ್ತೆಯಲ್ಲಿನ 30ಅಡಿ ಎತ್ತರದ ಕನ್ನಡ ಧ್ವಜಸ್ತಂಭದ ಕಾರ್ಯಚರಣೆ ಶನಿವಾರ ತಡರಾತ್ರಿ ನಡೆದಿದೆ.

ಕೊರಟಗೆರೆ ಸರಕಾರಿ ಬಸ್‌ನಿಲ್ದಾಣದ ಮುಂಭಾಗದ ಮುಖ್ಯರಸ್ತೆಯಲ್ಲಿ ಕನ್ನಡಪರ ಸಂಘಟನೆಗಳ ನೂರಾರು ಕಾರ್ಯಕರ್ತರು ಸೇರಿ ಕಳೆದ 4ವರ್ಷದ ಹಿಂದೆ ನಿರ್ಮಾಣ ಮಾಡಲಾಗಿದ್ದ 30ಅಡಿ ಎತ್ತರದ ಕನ್ನಡ ಧ್ವಜಸ್ತಂಭವನ್ನು ಅಧಿಕಾರಿಗಳ ತಂಡ ತಡರಾತ್ರಿ 1ಗಂಟೆಗೆ ಪ್ರಾರಂಭಿಸಿ ಸತತ 8ಗಂಟೆಗಳ ಕಾರ್ಯಚರಣೆ ನಡೆಸಿ ಕುರುವೇ ಇಲ್ಲದಂತೆ ಮಾಡಿದ್ದಾರೆ.

ಕನ್ನಡಪರ ಸಂಘಟನೆಗಳ ಕಾರ್ಯಕರ್ತರಿಂದ ನಿರ್ಮಾಣವಾಗಿದ್ದ ಧ್ವಜಸ್ತಂಭದ ಕಾರ್ಯಚರಣೆ ವೇಳೆ ಸ್ಥಳಕ್ಕೆ ಆಗಮಿಸಿ ತೆರವು ತಡೆಯಲು ಯತ್ನಿಸಿದ ಕೊರಟಗೆರೆ ಕರವೇ ಅಧ್ಯಕ್ಷ ಕೆ.ಎನ್.ನಟರಾಜ್ ನನ್ನು ಮುಂಜಾಗ್ರತಾ ಕ್ರಮವಾಗಿ ಡಿವೈಎಸ್ಪಿ ಮಂಜುನಾಥ್ ಆದೇಶದಂತೆ ಪೊಲೀಸರು ತಡರಾತ್ರಿಯೇ ವಶಕ್ಕೆ ಪಡೆದು ನಂತರ ಮಾರನೇಯ ದಿನ ಬೆಳಗ್ಗೆಯೇ ಬಿಡುಗಡೆ ಮಾಡಿ ಕಳುಹಿಸಿದ್ದಾರೆ.

ಭದ್ರತೆಗಾಗಿ 250ಪೊಲೀಸರ ನಿಯೋಜನೆ:

ಮಧುಗಿರಿ ಡಿವೈಎಸ್ಪಿ ಮಂಜುನಾಥ ಮತ್ತು ಕೊರಟಗೆರೆ ತಹಶಿಲ್ದಾರ್ ಮಂಜುನಾಥ.ಕೆ ನೇತೃತ್ವದಲ್ಲಿ ಪಿಡಬ್ಲ್ಯುಡಿ ಎಇಇ ಸ್ವಾಮಿ, ಪಪಂ ಮುಖ್ಯಾಧಿಕಾರಿ ಉಮೇಶ್, ಬೆಸ್ಕಾಂ ಎಇಇ ಪ್ರಸನ್ನಕುಮಾರ್, ಪಿಎಸ್ಐ ಚೇತನ್, ಯೋಗೀಶ್, ರೇಣುಕಾ ಸೇರಿದಂತೆ ಮಧುಗಿರಿ, ಕೊಳಾಲ, ಪಾವಗಡದ ಸುಮಾರು 250ಕ್ಕೂ ಅಧಿಕ ಪೊಲೀಸರು ಮತ್ತು ಪಪಂ ಸಿಬ್ಬಂದಿವರ್ಗ ರಾತ್ರಿಯಿಡಿ ಕಾರ್ಯಚರಣೆ ನಡೆಸಿದ್ದಾರೆ.

ಕೊರಟಗೆರೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಕನ್ನಡ ಧ್ವಜಸ್ತಂಭದ ತೆರವು ಕಾರ್ಯಚರಣೆಯಲ್ಲಿ ಡಿವೈಎಸ್ಪಿ ಮಂಜುನಾಥ ನೇತೃತ್ವದ ತಂಡ.

> **ಮುಖ್ಯ ರಸ್ತೆಯಲ್ಲಿನ ಧ್ವಜಸ್ತಂಭದಿಂದ ಇತ್ತೀಚಿಗೆ ಅಪಘಾತವಾಗಿ ಇಬ್ಬರು ಮೃತಪಟ್ಟಿದ್ದಾರೆ. ನಂತರವು ಅದೇ ಸ್ಥಳದಲ್ಲಿ ಮತ್ತೇ ಅಪಘಾತ ನಡೆದಿವೆ. ಬಸ್ ನಿಲ್ದಾಣದೊಳಗೆ ಸರಕಾರಿ ಬಸ್ ಸಂಚರಿಸಲು ಸಮಸ್ಯೆಯಾಗಿತ್ತು. ಟ್ರಾಫಿಕ್ ಸಮಸ್ಯೆ ಮತ್ತು ಅಪಘಾತ ತಪ್ಪಿಸುವ ಉದ್ದೇಶದಿಂದ ಪೊಲೀಸ್, ಪಿಡಬ್ಲ್ಯುಡಿ, ಕಂದಾಯ ಮತ್ತು ಪಪಂಯಿಂದ ಧ್ವಜಸ್ತಂಭದ ತೆರವು ಕಾರ್ಯಚರಣೆ ನಡೆದಿದೆ.**
> -ಮಂಜುನಾಥ.ಕೆ. ತಹಸೀಲ್ದಾರ್. ಕೊರಟಗೆರೆ

ಸಮಾಚಾರ ಸಣ್ಣದಲ್ಲ

ಕಾರ್ಯಾಧ್ಯಕ್ಷರಾಗಿ ಎಸ್.ಶಿವಮಲ್ಲಪ್ಪ ಆಯ್ಕೆ

ತಿ.ನರಸೀಪುರ: ಕರ್ನಾಟಕ ರಾಜ್ಯ ಪಶು ವೈದ್ಯಕೀಯ ಪರೀಕ್ಷಕರ ಸಂಘದ ಮೈಸೂರು ಜಿಲ್ಲೆಯ ಕಾರ್ಯಾಧ್ಯಕ್ಷರಾಗಿ ಪಟ್ಟಣದ ಪಶುಪಾಲನೆ ಹಾಗೂ ವೈದ್ಯಕೀಯ ಸೇವೆಗಳ ಇಲಾಖೆಯ ಜಾನುವಾರು ಅಧಿಕಾರಿ ಎಸ್. ಶಿವಮಲ್ಲಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಡಿ.ಚಂದ್ರು ತಿಳಿಸಿದ್ದಾರೆ.

ವಾಹನ ನಿಲುಗಡೆಯಲ್ಲಿ ಬದಲಾವಣೆ

ಮಡಿಕೇರಿ: ಎಮ್ಮೆಮಾಡು ಮಖಾಂ ಉರೂಸ್ ಪ್ರಯುಕ್ತ ಸೆ.24 ರಂದು ನಡೆಯಲಿರುವ ಸಾರ್ವಜನಿಕ ಸಮ್ಮೇಳನಕ್ಕೆ ಜಿಲ್ಲೆ ಮತ್ತು ಹೊರ ಜಿಲ್ಲೆ ಹಾಗೂ ಹೊರ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಬರಲಿವೆ. ಅಲ್ಲದೆ ನಾಪೋಕ್ಲುವಿನಲ್ಲಿ ಸಂತೆ ನಡೆಯಲಿರುವುದರಿಂದ ನಾಪೋಕ್ಲು ನಗರದಲ್ಲಿ ವಾಹನದಟ್ಟಣೆ ಹೆಚ್ಚಾಗಿ ಸಾರ್ವಜನಿಕರಿಗೆ ತೊಂದರೆ ಆಗುವ ಸಂಭವವಿದೆ. ಆದ್ದರಿಂದ ನಾಪೋಕ್ಲು ಪಟ್ಟಣದ ಮುಖ್ಯ ರಸ್ತೆಯಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದ್ದು, ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕೆಂದು ನಾಪೋಕ್ಲು ಪೊಲೀಸ್ ಠಾಣಾಧಿಕಾರಿಗಳು ಕೋರಿದ್ದಾರೆ. ನಾಪೋಕ್ಲು ನಗರದಲ್ಲಿ ಸುಗಮ ಸಂಚಾರಕ್ಕಾಗಿ ಎಮ್ಮೆಮಾಡು ಮಖಾಂ ಉರೂಸ್ ಗೆ ಭಾಗವಹಿಸಲು ಬರುವವರು ಹಾಗೂ ಸಾರ್ವಜನಿಕರು ತಮ್ಮ ತಮ್ಮ ವಾಹನವನ್ನು ಕೊಟ್ಟಮುಡಿ ಜಂಕ್ಷನ್ ನಿಂದ ಎಮ್ಮೆಮಾಡು ಜಂಕ್ಷನ್ ವರೆಗೆ ರಸ್ತೆಯ ಎರಡು ಬದಿಯಲ್ಲಿ ನಿಲ್ಲಿಸದಂತೆ ಮನವಿ ಮಾಡಿದ್ದಾರೆ. ಸಾರ್ವಜನಿಕರಿಗೆ ಪಾರ್ಕಿಂಗ್ ಸ್ಥಳ: ಪೊಲೀಸ್ ಮೈದಾನ, ಕಂದಾಯ ಇಲಾಖೆಯ ಮುಂಭಾಗ, ಹಳೆ ಪೊಲೀಸ್ ವಸತಿ ತೆರವು ಮಾಡಿದ ಸ್ಥಳ, ಚೆರಿಯ ಪರುಂಬು ಕ್ರೀಡಾಂಗಣದ ಮುಂಭಾಗ ಮೈದಾನ.

ಚುನಾವಣೆ: ಶಾಸಕರ ನೇತೃತ್ವದಲ್ಲಿ ನಾಮಪತ್ರ

ಕೆ ಆರ್ ಪೇಟೆ: ಹರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ಚುನಾವಣೆಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಶಾಸಕ ಹೆಚ್ ಟಿ ಮಂಜು ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ತಾಲ್ಲೂಕಿನ ಶೀಳನೆರೆ ಹೋಬಳಿ ಹರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಂದಿನ ಐದು ವರ್ಷದ ಅವಧಿಯ ನೂತನ ಆಡಳಿತ ಮಂಡಳಿಯ ಚುನಾವಣೆಯು ಮಾರ್ಚ್ 3ರಂದು ನಡೆಯಲಿದ್ದು ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ಉಸ್ತುವಾರಿ ವಹಿಸಿದ್ದ ಕ್ಷೇತ್ರದ ಜನಪ್ರಿಯ ಶಾಸಕರು ಹೆಚ್ ಟಿ ಮಂಜು ಅವರು ಮಾತನಾಡಿದರು. ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಯೋಗೇಶ್,ಆರ್ಟಿ ಚಂದ್ರು,ನಾಗೇಗೌಡ, ಕಾಳೇಗೌಡ, ಬಸವರಾಜು, ದೀಪು,ತೀರ್ಥಪ್ರಸಾದ್, ಶ್ರೀಧರ್, ಮಂಜೇಗೌಡ, ಶಿವರಾಮೇಗೌಡ,ಮೊಬೈಲ್ ವಿಜಯ್ ಕುಮಾರ್ ,ಲೋಕೇಶ್, ಶಿವರಾಂ, ಸಿದ್ದರಾಮಣ್ಣ, ಶಿವಣ್ಣಶೆಟ್ಟಿ, ಬಾಲು,ಉಮೇಶ್, ಕೆಂಪೇಗೌಡ, ಪ್ರಭಾಕರ್, ಶಾಸಕ ಹೆಚ್ ಟಿ ಮಂಜು ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಸೇರಿದಂತೆ ಇತರರು ಹಾಜರಿದ್ದರು.

ಸಂಸದರಿಂದ ರೈಲ್ವೆ ಕಾಮಗಾರಿ ವೀಕ್ಷಣೆ

ಚನ್ನಪಟ್ಟಣ: ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಚನ್ನಪಟ್ಟಣದ ಎಲೆಕೇರಿ ಗೇಟ್ ಬಳಿ ಕೇಂದ್ರ ಸರಕಾರದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ರೈಲ್ವೆ ಓವರ್ ಬ್ರಿಡ್ಜ್ ಕಾಮಗಾರಿಯನ್ನು ವೀಕ್ಷಿಸಿದರು. ಈಗಾಗಲೇ ಶೇ 75 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು ಮೇ ಅಂತ್ಯದ ವೇಳೆಗೆ ಸಾರ್ವಜನಿಕರ ಬಳಕೆಗೆ ಸಿದ್ಧವಾಗಲಿದೆ. ಉಳಿಕೆ ಕಾಮಗಾರಿಯನ್ನು ಅಧಿಕಾರಿಗಳು ಶೀಘ್ರ ಮುಕ್ತಾಯ ಮಾಡಿಬಳಕೆಗೆ ಮುಕ್ತ ಮಾಡಬೇಕು ಎಂದು ಸೂಚಿಸಿದರು. ಪ್ರಸ್ತುತ ಪ್ರತಿನಿತ್ಯ ಸುಮಾರು 50 ಕ್ಕೂ ಹೆಚ್ಚು ರೈಲುಗಳು ಚನ್ನಪಟ್ಟಣ ಮೈಸೂರು ಮಧ್ಯೆ ಚಲಿಸುತ್ತಿವೆ ಚನ್ನಪಟ್ಟಣದಲ್ಲಿ 50 ಬಾರಿಯೂ ರೈಲ್ವೆ ಗೇಟ್ ಹಾಕುವುದರಿಂದ ಚನ್ನಪಟ್ಟಣ ನಗರದಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ಓಡಾಡುವವರಿಗೆ ಆನಾನುಕೂಲವಾಗುತ್ತಿದೆ. ಈ ಹಿನ್ನಲೆಯಲ್ಲಿ ರೈಲ್ವೆ ಓವರ್ ಬ್ರಿಡ್ಜ್ ನಿರ್ಮಾಣ ಮಾಡಲಾಗುತ್ತಿದೆ. ಈ ಕಾಮಗಾರಿ ಮುಕ್ತಾಯವಾಗಿ ಸೇವೆಗೆ ಮುಕ್ತವಾದರೆ ಚನ್ನಪಟ್ಟಣ ನಗರ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದು ತಿಳಿಸಿದರು. ನಂತರ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿಯಲ್ಲಿ ನವೀಕರಣಗೊಳ್ಳುತ್ತಿರುವ ರೈಲು ನಿಲ್ದಾಣ ಕಾಮಗಾರಿಯನ್ನು ಇದೇ ವೇಳೆ ಪರಿಶೀಲಿಸಿದರು. ಪ್ರಸ್ತುತ ಇರುವ ರೈಲು ನಿಲ್ದಾಣವನ್ನು ಉನ್ನತೀಕರಣಗೊಳಿಸಲಾಗುತ್ತಿದ್ದು, ಪ್ರಯಾಣಿಕರ ಅನುಕೂಲಕ್ಕಾಗಿ ಸುಸಜ್ಜಿತವಾದ ವಿಶ್ರಾಂತಿ ಕೊಠಡಿ, ಶೌಚಾಲಯ, ಪಾದಚಾರಿ ಮೇಲ್ಸೇತುವೆ ಸೇರಿದಂತೆ ಅನೇಕ ಸೌಲಭ್ಯಗಳನ್ನು ಈ ಯೋಜನೆಯಡಿಯಲ್ಲಿ ಕಲ್ಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಈ ವೇಳೆ ರೈಲ್ವೆ ಇಲಾಖೆ ಅಧಿಕಾರಿಗಳು, ಸ್ಥಳೀಯ ಬಿಜೆಪಿ ಮುಖಂಡರು ಹಾಜರಿದ್ದರು.

{ಬಿ.ವೈ.ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ಸರಕಾರದಿಂದ ದಾಂಧಲೆ ಮಾಡಿದವರನ್ನು ರಕ್ಷಿಸುವ ಕೆಲಸ ನಡೆಯುತ್ತಿದೆ. ರಾಜ್ಯದಲ್ಲಿ ಕಾನೂನು- ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ದರೋಡೆ ಕೊಲೆಗಳು ನಡೆಯುತ್ತಿವೆ. ಬೆಂಗಳೂರು ಸುರಕ್ಷಿತವಾಗಿಲ್ಲ. ಇದೆಲ್ಲದಕ್ಕೂ ರಾಜ್ಯ ಸರಕಾರವೇ ಹೊಣೆ ಹೊರಬೇಕು. ಗೃಹ ಸಚಿವರ ಹೇಳಿಕೆಯನ್ನು ಗಮನಿಸಿದ್ದೇನೆ.

ಜಿಲ್ಲಾಡಳಿತ, ಕನ್ನಡ, ಸಂಸ್ಕೃತಿ ಇಲಾಖೆಯಿಂದ ಸಂತ ಸೇವಾಲಾಲ್ ಜಯಂತಿ, ಶಾಸಕ ಹರೀಶ್‌ಗೌಡ ಭಾಗಿ

ಒಗ್ಗಟ್ಟಿನಿಂದ ಹಕ್ಕು ಪಡೆಯಲು ಸಾಧ್ಯ

ಮೈಸೂರು: ಬಂಜಾರಾ ಸಮುದಾಯಗಳು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು. ಒಗ್ಗಟ್ಟಾಗಿ ಇದ್ದಾಗ ಮಾತ್ರ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದರಲ್ಲಿ ಸಫಲರಾಗುತ್ತೇವೆ ಎಂದು ಶಾಸಕ ಕೆ. ಹರೀಶ್ ಗೌಡ ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಸಂತ ಸೇವಾಲಾಲ್ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಬಂಜಾರ ಸಮುದಾಯ ಎಂಬುದು ಕರ್ನಾಟಕ ರಾಜ್ಯದಲ್ಲಿ ಒಂದು ಚಿಕ್ಕ ಸಮುದಾಯ ಅದರಲ್ಲಿ ಉತ್ತರ ಕರ್ನಾಟಕದಲ್ಲಿ ಹೆಚ್ಚು ಜನಸಂಖ್ಯೆ ಇರುವಂತಹ ಸಮುದಾಯ ಮೈಸೂರಿನ ಭಾಗಗಳಲ್ಲಿ ಏಳರಿಂದ ಎಂಟು ಸಾವಿರ ಜನಸಂಖ್ಯೆ ಮಾತ್ರ ಇದೆ ಎಂದು ಹೇಳಿದರು.

ಚಾಮರಾಜ ಕ್ಷೇತ್ರದಲ್ಲಿ ಬಂಜಾರ ಸಮುದಾಯದವರಿಗೆ ಸಮುದಾಯ ಭವನವನ್ನು ಲೋಕಾರ್ಪಣೆ ಮಾಡಿದ್ದೇವೆ. ಬಂಜಾರ ಸಮುದಾಯ ಕೇಳುವಂತಹ ಮೂಲಭೂತ ಸೌಕರ್ಯಗಳನ್ನು ನಾನು ಒದಗಿಸುತ್ತೇನೆ ಎಂಬ ಭರವಸೆ ನೀಡಿದರು.

ಲಂಬಾಣಿ ಸಮುದಾಯ ಕರ್ನಾಟಕಕ್ಕಿಂತ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಅದರಲ್ಲಿಯೂ ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿರುವುದನ್ನು ನಾವು ಕಾಣಬಹುದಾಗಿದೆ ಎಂದು ತಿಳಿಸಿದರು.

ನಮ್ಮ ಸರಕಾರ ಕಡಿಮೆ ಜನಸಂಖ್ಯೆ ಇರುವ ಸಮುದಾಯಗಳು ಹಾಗೂ ಅಲ್ಪಸಂಖ್ಯಾತ ಸಮುದಾಯಗಳನ್ನು ಮೇಲೆತ್ತುವಂತಹ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡುತ್ತಿದೆ. ನಾನು ಸಹ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವಂತಹ ಲಂಬಾಣಿ ಸಮುದಾಯಗಳ ಅಭಿವೃದ್ಧಿ ಪೂರಕವಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಸಂತ ಸೇವಾಲಾಲ್ ಜಯಂತಿಯನ್ನು ಶಾಸಕ ಕೆ.ಹರೀಶ್‌ಗೌಡ ಅವರು ಉದ್ಘಾಟಿಸಿದರು.

ವಿಧಾನ ಪರಿಷತ್ ನ ಶಾಸಕರಾದ ಸಿ. ಎನ್. ಮಂಜೇಗೌಡ ಮಾತನಾಡಿದರು. ಕಲಬುರಗಿ ಜಿಲ್ಲೆಯ ಅಬಕಾರಿ ಅಧೀಕ್ಷಕ ರಾಮ್ ದೇವಸೋಥ್ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ ಸುದರ್ಶನ್, ಬಂಜಾರಾ ಸೇವಾ ಸಂಘದ ಅಧ್ಯಕ್ಷ ಎಂ.ಸುಂದರ್ , ಉಪಾಧ್ಯಕ್ಷ ತೇಜಾನಾಯಕ್, ಕಾರ್ಯದರ್ಶಿ ಎಂ. ಅನಿಲ್ , ಬಂಜಾರ ಸಮುದಾಯದ ಖಜಾಂಚಿ ಕಾವೇರಿ ಬಾಯಿ, ಬಂಜಾರ ಮಹಿಳಾ ಸಂಘದ ಅಧ್ಯಕ್ಷೆ ಧರಣಿಭಾಯಿ ಸುದರ್ಶನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

> **ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲಂಬಾಣಿ ಸಮುದಾಯಗಳಿಗೆ ಸ್ಥಾನಮಾನ ನೀಡಬೇಕು ಎಂಬ ದೃಷ್ಟಿಯಿಂದ ಬಂಜಾರದ ಸಮುದಾಯಗಳಿಗೆ ಉಪ ನಿರ್ದೇಶಕರನ್ನು ನೇಮಕ ಮಾಡಿದ್ದಾರೆ. ಜೊತೆಗೆ ಬಂಜಾರ ಸಮುದಾಯದ ಪ್ರಾಧಿಕಾರವನ್ನು ನಮ್ಮ ಕಾಂಗ್ರೆಸ್ ಸರಕಾರ ಮಾಡಿದೆ.**
>
> **ಕೆ.ಹರೀಶ್‌ಗೌಡ**, ಶಾಸಕ

ಕಾರ್ಡಿಯಾಕ್ ಯಂತ್ರ ಲೋಕಾರ್ಪಣೆ

ರಾಮನಗರ: ಹೃದಯ ಸಂಬಂಧಿ ಸೇರಿದಂತೆ ವಿವಿಧ ಶಸ್ತ್ರ ಚಿಕಿತ್ಸೆಗಳಿಗೂ ಎಕೋ ಕಾರ್ಡಿಯಕ್ ಯಂತ್ರ ಅತ್ಯವಶ್ಯಕವಾಗಿ ಬೇಕಿದ್ದು, ಸರಕಾರಿ ಆಸ್ಪತ್ರೆಯ ಸೇವೆ ಪಡೆಯಲು ಬರುವ ರೋಗಿಗಳಿಗೆ ನೆರವಾಗಲಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ನಗರದ ಜಿಲ್ಲಾಸ್ಪತ್ರೆಯಲ್ಲಿ ಕೆನರಾಬ್ಯಾಂಕ್ ಕ್ಯಾನ್‌ಫಿನ್ ಹೋಮ್ಸ್ (ಲಿ), ನ ಸಿಎಸ್‌ಆರ್ ಅನುದಾನದಡಿ ಮತ್ತು ರೋಟರಿ ಬೆಂಗಳೂರು ಇವರ ಸಹಯೋಗದಲ್ಲಿ ನೀಡಲಾದ ಇಕೋ ಕಾರ್ಡಿಯಕ್ ಯಂತ್ರ ಲೋಕಾರ್ಪಣೆ ಮಾಡಿ ಮಾತನಾಡಿದರು.

ಸಂದರ್ಭದಲ್ಲಿ ದಿಶಾ ಸದಸ್ಯರಾದ ವಿ.ನರಸಿಂಹಮೂರ್ತಿ, ಶಿವಣ್ಣ, ಶೋಭಾ, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಕೆಎಸ್ಐಸಿ ಮಾಜಿ ಅಧ್ಯಕ್ಷ ಗೌತಮ್‌ಗೌಡ, ಗ್ರಾಮಾಂತರ ಮಂಡಲ ಅಧ್ಯಕ್ಷ ಜಗದೀಶ್, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ. ಮಂಜುನಾಥ್, ಕ್ಯಾನ್‌ಫಿನ್ ಹೋಮ್ಸ್ ನ ರಾಘವೇಂದ್ರ ಮುಖಂಡರುಗಳಾದ ಪ್ರಸಾದ್‌ಗೌಡ, ಎಸ್.ಆರ್. ರಾಮಕೃಷ್ಣಯ್ಯ, ಜಯಕುಮಾರ್, ವೆಂಕಟೇಶ್, ಮಂಜು, ಉಮೇಶ, ಜಾಲಮಂಗಲರಾಜು ಮತ್ತಿತರರು ಇದ್ದರು.

ರಾಮನಗರದ ಜಿಲ್ಲಾಸ್ಪತ್ರೆಯಲ್ಲಿ ಇಕೋ ಕಾರ್ಡಿಯಕ್ ಯಂತ್ರಕ್ಕೆ ಸಂಸದ ಮಂಜುನಾಥ್ ಚಾಲನೆ ನೀಡಿದರು.

ಸೋಮನಹಳ್ಳಿ ರಥೋತ್ಸವ

ಶ್ರೀಸೋಮನಹಳ್ಳಿ ಅಮ್ಮನವರ ರಥೋತ್ಸವವು ಸಂಪನ್ನಗೊಂಡಿತು.

ನಾಗಮಂಗಲ: ತಾಲೂಕಿನ ಇತಿಹಾಸ ಪ್ರಸಿದ್ಧ ಶ್ರೀಸೋಮನಹಳ್ಳಿ ಅಮ್ಮನವರ ಕ್ಷೇತ್ರದಲ್ಲಿ ಭಾನುವಾರ ಮಧ್ಯಾಹ್ನ ನಡೆದ ವಿಜೃಂಭಣೆಯ ಬ್ರಹ್ಮರಥೋತ್ಸವದ ಮೂಲಕ ಕಳೆದ ಹತ್ತು ದಿನಗಳ ಜಾತ್ರಾ ಮಹೋತ್ಸವ ಸಂಪನ್ನಗೊಂಡಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಕಳೆದ ಒಂಭತ್ತು ದಿನಗಳಿಂದ ಅಂಕುರಾರ್ಪಣೆ, ಪಂಚಾಮೃತಾಭಿಷೇಕ, ದನಗಳ ಜಾತ್ರೆ, ಬಿಸಿಲು ಕೊಂಡೋತ್ಸವ, 101 ಮಡೆ ಆರತಿ ಸೇವೆ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಭಾನುವಾರ ಶ್ರೀಸೋಮನಹಳ್ಳಿ ಅಮ್ಮನವರ ಬ್ರಹ್ಮರಥೋತ್ಸವಕ್ಕೆ ಪೂಜೆ ಸಲ್ಲಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ನೆರೆದಿದ್ದ ಸಹಸ್ರಾರು ಮಂದಿ ಭಕ್ತರು ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದ ರಥಕ್ಕೆ ಹಣ್ಣು ಜವನ ಎಸೆದು ಭಕ್ತಿ ಭಾವ ಮೆರೆದರು. ನಾಡಿನ ವಿವಿದೆಡೆಗಳಿಂದ ಆಗಮಿಸಿದ್ದ ಸಹ್ರಾರು ಭಕ್ತರು ಬ್ರಹ್ಮ ರಥೋತ್ಸವಕ್ಕೆ ಸಾಕ್ಷಿ ಯಾಗಿ ತಮ್ಮ ಭಕ್ತಿ ಭಾವ ಸಮರ್ಪಿಸಿದರು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ತುರುವೇಕೆರೆಯ ಗೀತಾ ಮತ್ತು ರಾಜಣ್ಣ ದಂಪತಿ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಿ ದ್ದರು ಸನ್ನಿಧಿಯ ಶ್ರೀಕೋಟೆ ಮಾರಮ್ಮದೇವಿ ಮತ್ತು ಶ್ರೀ ಆಂಜನೇಯ ಸ್ವಾಮಿ, ಶ್ರೀದೊಡ್ಡಮ್ಮ ಹಾಗೂ ಶ್ರೀಚಿಕ್ಕಮ್ಮ ದೇವಿ ದೇವಾಲಯಗಳಲ್ಲಿಯೂ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ರಥೋತ್ಸವದ ಬಳಿಕ ವಡ್ಡರಹಳ್ಳಿ ಗ್ರಾಮಸ್ಥರಿಂದ ವಸಂತೋತ್ಸವ ನಡೆಯಿತು. ಅವಭೃತಾಮೃತ ಮತ್ತು ಅಶ್ವಾರೋಹಣ ಸೇವೆ ನಂತರ ದೇವಿಯನ್ನು ಕಟ್ಟೆಮನೆ ಚಿಣ್ಯದ ಮೂಲಸ್ಥಾನಕ್ಕೆ ಕರೆದೊಯ್ಯಲಾಯಿತು. ಕಳೆದ ಹತ್ತು ದಿನಗಳಿಂದ ನಡೆದ ಜಾತ್ರಾಮಹೋತ್ಸವಕ್ಕೆ ತೆರೆಬಿದ್ದಿತು.

ಕಬಡ್ಡಿ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿ: ಪೊನ್ನಣ್ಣ ಕರೆ

ಮಡಿಕೇರಿ: ಗ್ರಾಮೀಣ ಕ್ರೀಡೆಯಾಗಿ ಖ್ಯಾತಿ ಪಡೆಯುತ್ತಿರುವ ಕಬಡ್ಡಿ ಬಗ್ಗೆ ಮಕ್ಕಳಲ್ಲಿ ಹೆಚ್ಚು ಆಸಕ್ತಿ ಮೂಡಿಸುವ ಕಾರ್ಯವಾಗಬೇಕೆಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಮತ್ತು ವೀರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಹೇಳಿದ್ದಾರೆ

ನಗರದ ಗಾಂಧಿ ಮೈದಾನದಲ್ಲಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ರೋಟರಿ ಜಿಲ್ಲೆ 3181 ನಲ್ಲಿ ರೋಟರಿ ಸದಸ್ಯರಿಗಾಗಿ ಮೊದಲ ಬಾರಿಗೆ ಆಯೋಜಿತ ಕಬಡ್ಡಿ ಪಂದ್ಯಾಟ ಉದ್ಘಾಟಿಸಿ ಮಾತನಾಡಿದ ಎ.ಎಸ್. ಪೊನ್ನಣ್ಣ, ಇತ್ತೀಚಿನ ವರ್ಷಗಳಲ್ಲಿ ಪ್ರೀಮಿಯರ್ ಲೀಗ್ ಮೂಲಕ ಹೆಸರುವಾಸಿಯಾಗುತ್ತಿರುವ ಕಬಡ್ಡಿ ಬಗ್ಗೆ ಮಕ್ಕಳಲ್ಲಿಯೂ ಆಸಕ್ತಿ ಮೂಡಿಸಿ ಪ್ರೋತ್ಸಾಹ ನೀಡುವಂತಾದಲ್ಲಿ ಗ್ರಾಮೀಣ ಕ್ರೀಡೆಯಾದ ಕಬಡ್ಡಿಗೆ ಹೆಚ್ಚಿನ ಬೆಂಬಲ ದೊರಕಿದಂತಾಗುತ್ತದೆ ಎಂದರು.

120 ವರ್ಷಗಳನ್ನು ಜಾಗತಿಕವಾಗಿ ಸಾಮಾಜಿಕ ಸೇವಾ ಕಾಯ9ಗಳಲ್ಲಿ ಪೂರೈಸಿರುವ ರೋಟರಿ ಸಂಸ್ಥೆಯು ಸಾಮಾಜಿಕ ಕಳಕಳಿಯೊಂದಿಗೆ ಕ್ರೀಡಾಕ್ಷೇತ್ರದಲ್ಲಿಯೂ ಯೋಜನೆ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದೂ ಪೊನ್ನಣ್ಣ ಪ್ರಶಂಶಿಸಿದರು.

ರೋಟರಿ ಜಿಲ್ಲೆ 3181 ನ ಗವರ್ನರ್ ವಿಕ್ರಂದತ್ತ ಸಭಾ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡೆಗಳನ್ನು ವಾರ್ಷಿಕವಾಗಿ ಆಯೋಜಿಸುತ್ತಾ ಬಂದಿದ್ದ ರೋಟರಿಯು ಇದೀಗ ಮಡಿಕೇರಿಯಲ್ಲಿ ಜಿಲ್ಲಾ ಮಟ್ಟದಲ್ಲಿಯೇ ಮೊದಲ ಬಾರಿಗೆ ಕಬ್ಬಡಿ ಪಂದ್ಯಾಟ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.

ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪೊನ್ನಚ್ಚನ ಮಧುಸೂದನ್, ಅಮೆಚೂರ್ ಕಬ್ಬಡಿ ಅಸೋಸಿಯೇಷನ್ ನ ನಿವೃತ್ತ ಜಂಟಿ ಕಾರ್ಯದರ್ಶಿ ಹೊಸೂಕ್ಲು ಉತ್ತಪ್ಪ, ರೋಟರಿ ಮಿಸ್ಟಿ ಹಿಲ್ಸ್ ನ ಕಬಡ್ಡಿ ಪಂದ್ಯಾವಳಿ ಸಂಚಾಲಕ ಜಯಂತ್ ಪೂಜಾರಿ ಮಾತನಾಡಿದರು.

ರೋಟರಿ ವಲಯ 6 ರ ಸಹಾಯಕ ಗವರ್ನರ್ ದೇವಣಿರ ಕಿರಣ್, ವಲಯ ಸೇನಾನಿ ಅನಿತಾ ಪೂವಯ್ಯ ವೇದಿಕೆಯಲ್ಲಿದ್ದರು. ರೋಟರಿ ಮಿಸ್ಟಿ ಹಿಲ್ಸ್ ನಿರ್ದೇಶಕ ಅನಿಲ್ ಎಚ್.ಟಿ. ನಿರೂಪಿಸಿದ ಕಾರ್ಯಕ್ರಮದಲ್ಲಿ ಕಬ್ಬಡಿ ಸಮಿತಿಯ ಜಂಟಿ ಸಂಚಾಲಕ ದುಗ್ಗಳ ಕಪಿಲ್ ಸ್ವಾಗತಿಸಿ, ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ಕಟ್ಟೆಮನೆ ಸೋನಜಿತ್ ವಂದಿಸಿದರು. ಗಾಂಧಿ ಮೈದಾನದಲ್ಲಿ ಸುಸಜ್ಜಿತ ರೀತಿಯಲ್ಲಿ ರೂಪಿತವಾದ ಕಬ್ಬಡಿ ಮೈದಾನದಲ್ಲಿ ದಿನವಿಡೀ ರೋಟರಿ ಸದಸ್ಯರ ತಂಡಗಳು ಪಂದ್ಯಾಟದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಕಬಡ್ಡಿ ಪಂದ್ಯಾಟವನ್ನು ಶಾಸಕ ಎ.ಎಸ್.ಪೊನ್ನಣ್ಣ ಅವರು ಉದ್ಘಾಟಿಸಿದರು.

26 ಮಂದಿಯಿಂದ ರಕ್ತದಾನ

ಕೊಡಗು ಜಿಲ್ಲಾ ರೆಡ್ ಕ್ರಾಸ್, ವಿವೇಕಾನಂದ ಯೂತ್ ಮೂವ್ ಮೆಂಟ್ ಮತ್ತು ಜಿಲ್ಲಾ ರಕ್ತನಿಧಿ ಕೇಂದ್ರದ ವತಿಯಿಂದ ಇದೇ ಸಂದರ್ಭ ಆಯೋಜಿತ ರಕ್ತಸಂಗ್ರಹಣಾ ಶಿಬಿರವನ್ನು ಶಾಸಕ ಎ.ಎಸ್. ಪೊನ್ನಣ್ಣ ಉದ್ಘಾಟಿಸಿದರು. 26 ಮಂದಿ ರಕ್ತದಾನ ಮಾಡಿದರು.

ವಿವಿಗಳ ವಿಲೀನ: ಸರಕಾರದ ವಿರುದ್ಧ ಆಕ್ರೋಶ

ಮಂಡ್ಯ: ಹಣಕಾಸಿನ ಹೊರೆಯ ನೆಪವೊಡ್ಡಿ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ವಿಲೀನಗೊಳಿಸಿರುವ ರಾಜ್ಯ ಸರಕಾರ ಆರ್ಥಿಕವಾಗಿ ದಿವಾಳಿಯಾಗಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಆರೋಪಿಸಿದ್ದಾರೆ.

ಆರ್ಥಿಕವಾಗಿ ಸರಕಾರ ಸದೃಢವಾಗಿದೆ ಎಂದು ಬೊಬ್ಬೆ ಹಾಕುವ ಮುಖ್ಯಮಂತ್ರಿಗಳು, ಸಚಿವರು ಹಾಗೂ ಕಾಂಗ್ರೆಸ್ಸಿಗರು, ಕೂಡಲೇ ಶ್ವೇತಪತ್ರ ಬಿಡುಗಡೆ ಮಾಡುವಂತೆ ಅವರು ಪತ್ರಿಕಾ ಪ್ರಕಟಣೆ ಮೂಲಕ ಸವಾಲು ಹಾಕಿದ್ದಾರೆ.

ಮಂಡ್ಯ ವಿಶ್ವವಿದ್ಯಾಲಯವನ್ನು ಮೈಸೂರು ವಿವಿಯೊಂದಿಗೆ ವಿಲೀನ ಸೇರಿದಂತೆ ಹಿಂದಿನ ಬಿಜೆಪಿ ಸರಕಾರ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪನೆ ಯೋಜನೆಯಡಿ 9 ವಿವಿಗಳನ್ನು ಸ್ಥಾಪಿಸಿ ಎಲ್ಲದ್ದಕ್ಕೂ ಕುಲಪತಿಗಳನ್ನೂ ನೇಮಕ ಮಾಡಿತ್ತು. ಆದರೆ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರಕಾರ ಹಣಕಾಸಿನ ಹೊರೆಯ ನೆಪವೊಡ್ಡಿ ವಿಲೀನ ಮಾಡುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ಪೆಟ್ಟು ಕೊಡುತ್ತಿದೆ ಎಂದು ಆರೋಪಿಸಿದ್ದಾರೆ.

ಮಂಡ್ಯ ವಿವಿಯಲ್ಲಿ ಈಗಾಗಲೇ ಒಬ್ಬ ಕುಲಪತಿ ನಾಲ್ಕು ವರ್ಷಗಳ ಕಾಲ ಆಡಳಿತ ನಡೆಸಿದ್ದರು. ಇದೀಗ ಮತ್ತೊಬ್ಬರು ನೇಮಕಗೊಂಡಿದ್ದಾರೆ. ಆದರೂ ಅದಕ್ಕೆ ವಿಶೇಷ ಯೋಜನೆ ರೂಪಿಸಿ ಮಕ್ಕಳ ಶೈಕ್ಷಣಿಕ ಬದುಕಿಗೆ ಕಾಳಜಿ ವಹಿಸದೆ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು ಹಿಂದೆ ಇದ್ದಂತೆ ಮತ್ತೆ ಮೈಸೂರಿನತ್ತ ಪ್ರಯಾಣ ಬೆಳೆಸುವಂತೆ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> **ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಮಂಡ್ಯ ವಿವಿಯನ್ನು ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರ್ಪಡಿಸಲಿಲ್ಲ. ಒಂದು ಕಡೆ ವಿವಿ ಆಡಳಿತ ಮತ್ತೊಂದು ಕಾಲೇಜು ಶಿಕ್ಷಣ ಇಲಾಖೆಯ ಆಡಳಿತದಿಂದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಬೇಸರ ವ್ಯಕ್ತಪಡಿಸಿದ್ದರು. ಆದರೂ ಸರಕಾರ ವಿವಿಗೆ ಕಾಯಕಲ್ಪ ನೀಡುವಲ್ಲಿ ಮುಂದಾಗಲೇ ಇಲ್ಲ.**
>
> **ಸಿ.ಟಿ.ಮಂಜುನಾಥ್**, ಬಿಜೆಪಿ ಜಿಲ್ಲಾ ವಕ್ತಾರ

ವಿಶ್ವವಿದ್ಯಾಲಯಕ್ಕೆ ಅಗತ್ಯವಾಗಿ ಬೇಕಾಗಿರುವ ಅಧ್ಯಾಪಕರು ಮತ್ತು ಸಿಬ್ಬಂದಿಗಳ ನೇಮಕ, ಜೊತೆಗೆ ಕೇಂದ್ರ ಸರಕಾರಕ್ಕೆ ಯುಜಿಸಿ ಅನುದಾನಕ್ಕೆ ಶಿಫಾರಸ್ಸು ಮಾಡುವುದನ್ನು ರಾಜ್ಯ ಸರ್ಕಾರ ಇದೀಗ ಕುಂಟು ನೆಪ ಹೇಳಿಕೊಂಡು ವಿಲೀನಕ್ಕೆ ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಂಡ್ಯ ವಿವಿ ಸ್ಥಾಪನೆಯಿಂದಾಗಿ ಜಿಲ್ಲೆಯ 48 ಕಾಲೇಜುಗಳು ಇಲ್ಲಿಯೇ ವ್ಯವಹರಿಸುವಂತಾಗಿತ್ತು. ಆದರೆ ಮೈಸೂರಿಗೆ ವಿಲೀನವಾದಲ್ಲಿ ಎಲ್ಲ ಕಾಲೇಜುಗಳೂ ಸಹ ಮೈಸೂರು ವಿವಿಯೊಂದಿಗೆ ವ್ಯವಹರಿಸಬೇಕಾದ ಅನಿವಾರ್ಯತೆ ಸೃಷ್ಠಿಯಾಗುತ್ತದೆ. ಜಿಲ್ಲೆಯ ಜನಪ್ರತಿನಿಧಿಗಳು ಸಹ ತುಟಿ ಬಿಚ್ಚದೆ ಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಆರೋಪಿಸಿರು.

ಸರಕಾರ ಕೂಡಲೇ ಮೈಸೂರು ವಿವಿಯೊಂದಿಗೆ ಮಂಡ್ಯ ವಿಶ್ವವಿದ್ಯಾಲಯವನ್ನು ವಿಲೀನ ಮಾಡುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ಮಂಡ್ಯ ವಿವಿಯನ್ನು ಶಕ್ತಿಯುತವಾಗಿ ಬೆಳೆಸಲು ಯೋಜನೆ ರೂಪಿಸಬೇಕು ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಹಕಾರಿ ಸಂಘದ ಅಧ್ಯಕ್ಷರಾಗಿ ಎಸ್.ನಾಗರಾಜು

ತಾಲೂಕಿನ ಸೋಮನಾಥಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್.ನಾಗರಾಜು ಮತ್ತು ಉಪಾಧ್ಯಕ್ಷರಾಗಿ ಸುಂದ್ರಮ್ಮ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ: ತಾಲೂಕಿನ ಸೋಮನಾಥಪುರ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಎಸ್.ನಾಗರಾಜು ಮತ್ತು ಉಪಾಧ್ಯಕ್ಷರಾಗಿ ಸುಂದ್ರಮ್ಮ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಛೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಗಾದಿಗೆ ಕ್ರಮವಾಗಿ ಎಸ್.ನಾಗರಾಜು ಮತ್ತು ಸುಂದ್ರಮ್ಮ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಅಶ್ವಿನ್ ಕುಮಾರ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿದರು.

ಒಟ್ಟು 12 ನಿರ್ದೇಶಕರ ಪೈಕಿ ಚುನಾವಣೆಯಲ್ಲಿ8 ನಿರ್ದೇಶಕರು ಮಾತ್ರ ಹಾಜರಿದ್ದು, ನಾಲ್ವರು ಗೈರಾಗಿದ್ದರು. ಇದೇ ವೇಳೆ ಮಾತನಾಡಿದ ಡಿಸಿಸಿ ಸದಸ್ಯ ಉಕ್ಕಲಗೆರೆ ಬಸವಣ್ಣ, ನೂತನ ಅಧ್ಯಕ್ಷರಿಗೆ ಅಭಿನಂದನೆ ತಿಳಿಸಿದರು. ಸಂಘದ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ರೈತರ ಬೇಡಿಕೆ ಅನುಗುಣವಾಗಿ ಸಾಲ ವಿತರಣೆ, ರಸಗೊಬ್ಬರ ಸರಬರಾಜು, ರೈತರಿಗೆ ಅವಶ್ಯವಿರುವ ಸರ್ಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಸರಿಯಾಗಿ ರೈತರಿಗೆ ಮಾರ್ಗದರ್ಶನವನ್ನು ಸಂಘವು ನೀಡಬೇಕು. ಸರ್ಕಾರದಿಂದ ಸಾಕಷ್ಟು ಅನುದಾನ ಬರುವುದರಿಂದ ಸಚಿವರು ಮತ್ತು ಸಂಸದ ಸಹಕಾರದೊಂದಿಗೆ ಸಂಘವನ್ನು ಅಭಿವೃದ್ಧಿಯ ಕಡೆ ಕೊಂಡೊಯ್ಯುವ ಮೂಲಕ ಅಭಿವೃದ್ಧಿ ಪಥದತ್ತ ಸಂಘವು ಸಾಗಿಸಬೇಕು ಎಂದರು.

ನೂತನ ಅಧ್ಯಕ್ಷರು ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಮತ್ತು ಸ್ಥಳೀಯ ಕಾಂಗ್ರೆಸ್ ಮುಖಂಡ ವಜ್ರೇಗೌಡ ಅವರು ಸಹಕಾರ ನೀಡಿ ನನ್ನನ್ನು ಸಂಘದ ಅಧ್ಯಕ್ಷನ್ನಾಗಿ ಮಾಡಿದ್ದಾರೆ. ಅವರ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ಈ ಭಾಗದ ಎಲ್ಲ ರೈತರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ತಿಳಿಸಿದರು.

ಈ ವೇಳೆ ಪ್ರಥಮ ದರ್ಜೆ ಗುತ್ತಿಗೆದಾರ ಕಗ್ಗಲೀಪುರ ಕೆ.ಎಂ. ಮಧುಕುಮಾರ್, ಮುಖಂಡ ಸಿದ್ದರಾಮು, ಗ್ರಾ.ಪಂ. ಅಧ್ಯಕ್ಷ ರಾಜಣ್ಣ,ಮಾಜಿ ಅಧ್ಯಕ್ಷರಾದ ಪುಟ್ಟಸ್ವಾಮಿ, ಅಶೋಕ್,ಮಹದೇವಣ್ಣ, ಮಾಜಿ ಸದಸ್ಯ ಮಹದೇವಣ್ಣ, ರಾಮಣ್ಣ, ಶೇಖರಪ್ಪ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಸೋಮನಾಥಪುರಕೃಷ್ಣಮೂರ್ತಿ, ಕಾಂತರಾಜು, ಕಗ್ಗಲೀಪುರ ಮಹೇಶ್, ಕಪಾಲಿ ಮಂಜು, ದಿನೇಶ್, ಧರ್ಮೇಂದ್ರ, ರಾಜ ಕುಮಾರ್, ಬಾಲರಾಜು, ಕಗ್ಗಲೀಪುರ ಮಹದೇವಸ್ವಾಮಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರದೀಪ್, ಲೆಕ್ಕಾಧಿಕಾರಿ ರಾಜಣ್ಣ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಮಹಿಳೆಯರ ಮೇಲಿನ ಶೋಷಣೆ ಸಲ್ಲದು

ಮೈಸೂರು: ಕಾನೂನು ಅರಿವು ಎಂಬುದು ಎಲ್ಲರಿಗೂ ಮುಖ್ಯ. ಅದರಲ್ಲೂ ಮಹಿಳೆಯರು ಕಾನೂನಿನ ಬಗ್ಗೆ ಸಮಗ್ರ ಜ್ಞಾನ ಹೊಂದಿರುವುದು ಇಂದು ಅತ್ಯಂತ ಅವಶ್ಯಕ ಎಂದು ಹಿರಿಯ ನ್ಯಾಯವಾದಿ ಕೆ.ಆರ್. ಶಿವಶಂಕರ್ ಹೇಳಿದರು. ವಿಪ್ರ ಪ್ರೊಫೆಷನಲ್ ಫೋರಂನ ಮಹಿಳಾ ವಿಭಾಗ ಮತ್ತು ಶ್ರೀಗುರು ರಾಘವೇಂದ್ರ ಸೇವಾ ಟ್ರಸ್ಟ್ ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಮಹಿಳೆ ಮತ್ತು ಕಾನೂನು ವಿಚಾರಸಂಕಿರಣದ ಶಿಖರೋಪನ್ಯಾಸದಲ್ಲಿ ಅವರು ಮಾತನಾಡಿದರು. ಜ್ಞಾನ ಮತ್ತು ಅದರ ಮೂಲಕ ಪಡೆಯುವ ಅರಿವಿಗೆ ಸರಿಸಮನಾದದ್ದು ಜಗತ್ತಿನಲ್ಲಿ ಯಾವುದು ಇಲ್ಲ. ಆಧುನಿಕ ಕಾಲಘಟ್ಟದಲ್ಲಿ ಎದುರಾಗುವಂತಹ ಹಲವು ರೀತಿಯ ಸಮಸ್ಯೆ , ಶೋಷಣೆ ದೌರ್ಜನ್ಯ ಮತ್ತು ಸಂದಿಗ್ಧ ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸಲು ಮಹಿಳೆಯರು ಕಾನೂನು ಸುವ್ಯವಸ್ಥೆ ಬಗ್ಗೆ ಜ್ಞಾನ ಹೊಂದಿರಬೇಕು ಎಂದು ಸಲಹೆ ನೀಡಿದರು. ಸಮಸ್ಯೆ ಬಂದ ನಂತರ ಅದಕ್ಕೆ ಉತ್ತರಗಳನ್ನು ಹುಡುಕುವುದು ಸೂಕ್ತವಲ್ಲ. ಇರುವ ವ್ಯವಸ್ಥೆಯಲ್ಲಿ ನಾವು ಸುಂದರವಾದ ಬದುಕನ್ನು ರೂಪಿಸಿಕೊಳ್ಳಲು ಬೇಕಾದಂತಹ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿರಬೇಕು ಎಂದರು. ಮಹಿಳಾ ಘಟಕದ ಅಧ್ಯಕ್ಷೆ ಸವಿತಾ, ವಕೀಲ ಚಂದ್ರಶೇಖರ್, ಶ್ರೀಶಾರದಾ ಪಬ್ಲಿಕ್ ಸ್ಕೂಲ್ ಸಿಇಒ ಮಂಜುನಾಥ್ ಶ್ರೀವತ್ಸ, ಉದ್ಯಮಿ ಅಂಜಲಿ ಇತರರು ಹಾಜರಿದ್ದರು.

ಆರ್ಥಿಕ ಬೆಳವಣಿಗೆ: ಸಣ್ಣ ಕೈಗಾರಿಕೆಗಳ ಪಾತ್ರ ಮಹತ್ವದ್ದು

ಮೈಸೂರು: ದೇಶದ ಆರ್ಥಿಕತೆ ಬೆಳವಣಿಯಲ್ಲಿ ಸಣ್ಣ, ಸೂಕ್ಷ್ಮ ಕೈಗಾರಿಕೆಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದ ಆವರಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಮಹಿಳಾ ಉದ್ಯಮಿಗಳಿಂದ ತಯಾರಿಸಲಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ನಂತರದ 80 ಸಾವಿರ ಎಂಎಸ್ಎಂ ಮುಚ್ಚಿ ಹೋಗಿವೆ. ಇದರಿಂದ ಆರ್ಥಿಕತೆಯ ಬೆನ್ನಲೆಬು ಕುಸಿದು ಬಿದ್ದಿತು. ಈಗ ಮತ್ತೆ ಸಣ್ಣ, ಗುಡಿ ಕೈಗಾರಿಗಳು ಬೆಳವಣಿಗೆ ರಾಜ್ಯ ಸರ್ಕಾರ ರೂಪುರೇಷೆಗಳನ್ನು ರೂಪಿಸಿ ಅವಕಾಶಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತಿದೆ ಎಂದರು.

ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ ಮಾತನಾಡಿ, ಮಹಿಳೆಯರಿಗೆ ಉತ್ತೇಜನ ಹಾಗೂ ಪ್ರೋತ್ಸಾಹ ನೀಡಲು ಮೇಳವನ್ನು ಆಯೋಜಿಸಲಾಗಿದೆ. ಈ ಬಾರಿ ಒಟ್ಟಾರೆ 85 ಮಳಿಗೆಗಳಿದ್ದು, ಮಳಿಗೆಗಳಲ್ಲಿ ಮಹಿಳೆಯರಿಂದಲೇ ತಯಾರಿಸಲ್ಪಟ್ಟ ಇಂಜಿನಿಯರಿಂಗ್ ಸಂಬಂಧಿದ ವಸ್ತುಗಳು, ಮಕ್ಕಳ ಆಟಿಕೆಗಳು, ಆಹಾರೋತ್ಪನ್ನಗಳು, ಕರಕುಶಲ ವಸ್ತುಗಳು ಲಭ್ಯವಿದೆ ಎಂದು ಮಾಹಿತಿ ನೀಡಿದರು.

ಮಹಿಳಾ ಉದ್ಯಮಿಗಳಿಂದ ತಯಾರಿಸಲಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಉದ್ಘಾಟಿಸಿದರು.

ಮೈಸೂರು, ಚಾಮರಾಜನಗರ, ಮಂಡ್ಯ ಹಾಸನದ ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಅವಕಾಶ ನೀಡಲಾಗಿದ್ದು, ಬೆಂಗಳೂರು, ಕಲಬುರಗಿ ಸೇರಿದಂತೆ ವಿವಿಧ ಜಿಲ್ಲೆಗಳ ಮಹಿಳೆಯರು ಮಳಿಗೆಗಳನ್ನು ತೆರೆದಿದ್ದಾರೆ. ಮಹಿಳೆಯರ ಮಳಿಗೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಉತ್ತಮವಾದ ಮೂರು ಮಳಿಗೆಗಳಿಗೆ ಪ್ರಶಸ್ತಿಗಳನ್ನು ನೀಡುವುದರ ಜತೆಗೆ ಭಾಗಹಿಸಿದ ಪ್ರತಿಯೊಬ್ಬ ಮಹಿಳೆಗೂ ಪ್ರಮಾಣ ಪತ್ರ ನೀಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಜಂಟಿ ಕಾರ್ಯದರ್ಶಿ ಎನ್.ಸತೀಶ್, ಜೆ.ಎಸ್ .ಬಾಬು, ಖಜಾಂಚಿ ಎಚ್.ಮಂಜುನಾಥ್ ಸೇರಿದಂತೆ ಇತರರು ಹಾಜರಿದ್ದರು.

> **ಗ್ರಾಮೀಣಾಭಿವೃದ್ಧಿ ಸಚಿವನಾಗಿದ್ದ ಸಂದರ್ಭದಲ್ಲಿ ಗುಡಿ ಕೈಗಾರಿಕೆಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆ ರೂಪಿಸಿದ್ದೆ. ಇದರ ಜೊತೆಗೆ ಕಡಕೊಳದ ಬಳಿ ಜಮೀನನ್ನು ಮಹಿಳಾ ಉದ್ಯಮಕ್ಕಾಗಿ ನೀಡಲಾಗಿದೆ. ಮಹಿಳೆಯರಿಗೆ ಸೂಕ್ತ ಅವಕಾಶಗಳನ್ನು ಒದಗಿಸಿದರೆ ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾರೆ.**
>
> **ಡಾ.ಎಚ್.ಸಿ.ಮಹದೇವಪ್ಪ**, ಸಚಿವ

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ಬಿಜೆಪಿ ಪ್ರಶ್ನಿಸಿದೆ. ಆದರೆ ಮೋದಿ ದುರಾಡಳಿತವನ್ನು ನಿರ್ಲಕ್ಷಿಸಿದೆ.2024-25ನೇ ಕೇಂದ್ರ ಬಜೆಟ್‌ನ ಮೊತ್ತ 1.04 ಲಕ್ಷ ಕೋಟಿಯಷ್ಟು ಕಡಿಮೆಯಾಗಿದೆ. ಬಂಡವಾಳ ವೆಚ್ಚ 92,682 ಕೋಟಿ ರು.ಗಳಷ್ಟು ಕಡಿತಗೊಂಡಿದೆ. 2013 ರಲ್ಲಿ 53.11 ಲಕ್ಷ ಕೋಟಿಯಷ್ಟಿದ್ದ ಭಾರತದ ಸಾಲ 2026ರೊಳಗೆ 200.16 ಲಕ್ಷ ಕೋಟಿಗಳಿಗೆ ಮುಟ್ಟಲಿದೆ. ಬಿಜೆಪಿಯ ಆರ್ಥಿಕ ನೀತಿಗಳು ಕೇಂದ್ರ ಮತ್ತು ರಾಜ್ಯಗಳೆರಡಕ್ಕೂ ಮಾರಕವಾಗಿದೆ.

ಮಂಜುನಾಥ್, ಬೆಂಗಳೂರು

ಸ್ವಾಮಿ ಪಡೆದ ಸಾಲ ಮೂಲ ಸೌಕರ್ಯ ಕ್ಷೇತ್ರದಲ್ಲಿ ಬಂಡವಾಳವಾಗಿದೆ. ಮೋದಿ ಸರಕಾರದ ಹೂಡಿಕೆ ಎಲ್ಲರಿಗೂ ಕಾಣುವಂತಹದು. ಅದು ದೇಶಕ್ಕೆ ಬಹುದೊಡ್ಡ ಆರ್ಥಿಕ ಶಕ್ತಿಯಾಗಲಿದೆ.ಆದರೆ ನೀವು ಪಡೆದ ಸಾಲ ಎಲ್ಲಿ ಹೂಡಿಕೆ ಮಾಡಿದ್ದೀರಿ..? ಕಳೆದೆರಡು ವರ್ಷಗಳಿಂದ ನೀವು ಎಲ್ಲದಕ್ಕೂ ಕೇಂದ್ರದತ್ತ ಬೊಟ್ಟು ಮಾಡಿ ತೋರಿಸುತ್ತಿರುವುದರಿಂದ ಜನರು ನಿಮ್ಮ ಧೋರಣೆಗೆ ಬೇಸತ್ತಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
24.02.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಡಾ. ಸುತ್ತೂರು ಎಸ್ ಮಾಲಿನಿ
ವಿಷಯ
ನಮ್ಮನ್ನೇ ಸುಡುವ ಸಿಟ್ಟು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಬೆಂಗಳೂರಿನ ಕರಿಯಪ್ಪ ಕಾಲೋನಿ ಸೇನಾ ಶಾಲೆಯ ರಸ್ತೆಯ ಬಸ್‌ನಿಲ್ದಾಣದ ಹಿಂಭಾಗ ವಿದ್ಯುತ್ ತಂತಿ ಗ್ರಿಲ್ ಅನ್ನು ಸ್ಪರ್ಶಿಸುತ್ತಿರುವುದು.
- **ಪರಿಹಾರ:** ಬೆಂಗಳೂರಿನ ಕರಿಯಪ್ಪ ಕಾಲೋನಿ ಸೇನಾ ಶಾಲೆಯ ರಸ್ತೆಯ ಬಸ್ ನಿಲ್ದಾಣದ ಹಿಂಭಾಗ ಸ್ಥಳಕ್ಕೆ ಜೆಇ ಅವರು ಪವರ್ ಮ್ಯಾನ್‌ಗಳೊಂದಿಗೆ ಭೇಟಿನೀಡಿ ಫೆನ್ಸಿಂಗ್ ಬಳಿ ಹಾಕಲಾಗಿದ್ದ ಡಮ್ಮಿ ಎಲ್ಟಿ ಪವರ್ ಕೇಬಲ್ ಆಗಿದ್ದ ಅಪಾಯಕಾರಿ ಕೇಬಲ್ ತೆರವುಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ಪರಮೇಶ್ವರ್ ನೇತೃತ್ವದ ಸಮಿತಿಯಿಂದ ಇನ್ನೂ ರವಾನೆಯಾಗದ ಪಟ್ಟಿ। ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಕಾರ್ಯಕರ್ತರಿಗೆ ಸಿಗದ ಅಧಿಕಾರ। ಹಿರಿಯ ನಾಯಕರ ಅಧಿಕಾರ ಹಸ್ತಾಂತರ,ವಿವಾದದಲ್ಲಿಯೇ ಮುಗಿಯುತ್ತಿರುವ ಗಲಾಟೆ

ನಿಗಮ-ಮಂಡಳಿಗಳ ನೇಮಕಕ್ಕೆ ನಿರಾಸಕ್ತಿ: ಕಾರ್ಯಕರ್ತರ ಬೇಸರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಒಂದೆಡೆ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಮುಂದುವರಿಕೆಯ ಚರ್ಚೆಗಳು ಬಹುದೊಡ್ಡ ಮಟ್ಟದಲ್ಲಿ ನಡೆಯುತ್ತಿದ್ದರೆ, ಇನ್ನೊಂದೆಡೆ ಪಕ್ಷದ ಕಾರ್ಯಕರ್ತರು ತಮಗೂ 'ಅಧಿಕಾರ' ನೀಡಿ ಎನ್ನುವ ಒತ್ತಡವನ್ನು ಹೇರಲು ಶುರುಮಾಡಿದ್ದಾರೆ.

ಈಗಾಗಲೇ ಪ್ರಮುಖ ನಿಗಮ-ಮಂಡಳಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರನ್ನು ನೇಮಿಸಿರುವ ರಾಜ್ಯ ಸರಕಾರ, ಇತರ ನಿಗಮ ಮಂಡಳಿಗಳಿಗೆ ನಿರ್ದೇಶಕರು ಹಾಗೂ ಸದಸ್ಯರನ್ನು ನೇಮಿಸಲು ಮೀನ-ಮೇಷ ಎಣಿಸುತ್ತಿದೆ. ಸದಸ್ಯ,ನಿರ್ದೇಶಕರನ್ನು ನೇಮಿಸಲು ವರ್ಷದ ಹಿಂದೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದರೂ, ಈವರೆಗೆ ನೇಮಕ ಸಂಬಂಧ ಸ್ಪಷ್ಟ ತೀರ್ಮಾನಕ್ಕೆ ಬಂದಿಲ್ಲ. ಇದು ಹಲವು ಕಾರ್ಯಕರ್ತರ ಬೇಸರಕ್ಕೆ ಕಾರಣವಾಗಿದೆ ಎನ್ನಲಾಗಿದೆ.

ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬರಲು ಕಾಂಗ್ರೆಸ್ ಘೋಷಿಸಿದ್ದ ಗ್ಯಾರಂಟಿಯೊಂದಿಗೆ ಪಕ್ಷದ ಕಾರ್ಯಕರ್ತರು ತಳಮಟ್ಟದಲ್ಲಿ ಮಾಡಿದ ಸಂಘಟನೆಯೂ ಪ್ರಮುಖ ಕಾರಣವಾಗಿದೆ. ಆದರೆ ಅಧಿಕಾರಕ್ಕೆ ಬಂದ ಬಳಿಕ ಪಕ್ಷದ ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ನೀಡುತ್ತಿಲ್ಲ ಎನ್ನುವ ಆರೋಪ ಕೇಳಿಬಂದಿದೆ. ರಾಜ್ಯ ಹಾಗೂ ಜಿಲ್ಲಾ ಮಟ್ಟದ ನಿಗಮಗಳಿಗೆ ಸದಸ್ಯರ ನೇಮಕ ಮಾಡಿದರೆ, ಎಂಟು ಸಾವಿರಕ್ಕೂ ಹೆಚ್ಚು ಮಂದಿಗೆ ಅವಕಾಶ ನೀಡಬಹುದು. ಆದರೆ ಈ ನೇಮಕ ಮಾಡುವುದಕ್ಕೆ ಪಕ್ಷದ ನಾಯಕರು ಆಸಕ್ತಿ ತೋರುತ್ತಿಲ್ಲ ಎಂಬ ಅಸಮಾಧಾನವನ್ನು ಪಕ್ಷದ ಕಾರ್ಯಕರ್ತರು ಹೊರಹಾಕಿದ್ದಾರೆ.

ಡಿಕೆಗೆ ಪಟ್ಟಿ ರವಾನೆ..?

ಮೂಲಗಳ ಪ್ರಕಾರ ಗೃಹ ಸಚಿವ ಡಾ.ಜಿ. ಪರಮೇಶ್ವರ್ ನೇತೃತ್ವದ ಸಮಿತಿಯಿಂದ ನಿಗಮ-ಮಂಡಳಿ ಸದಸ್ಯ, ನಿರ್ದೇಶಕರ ಸ್ಥಾನಕ್ಕೆ 1:3 ಮಾದರಿಯಲ್ಲಿ ಹೆಸರನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ. ಈ ಪಟ್ಟಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಸಲ್ಲಿಕೆಯಾಗಲಿದೆ. ಇದಾದ ಬಳಿಕ ಡಿಕೆಶಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದಾರೆ ಎನ್ನಲಾಗಿದೆ. ನಂತರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಆದರೆ ಈಗಾಗಲೇ ಪಟ್ಟಿ ರವಾನೆಯಾಗಲಿದೆ ಎಂದು ಕಳೆದ ಮೂರು ತಿಂಗಳಿನಿಂದ ಹೇಳಲಾಗುತ್ತಿದ್ದು, ಈ ಬಾರಿಯಾದರೂ ಪಟ್ಟಿ ರವಾನೆಯಾಗಲಿದೆಯೇ ಎನ್ನುವ ಪ್ರಶ್ನೆಯನ್ನು ಕಾರ್ಯಕರ್ತರು ಕೇಳುತ್ತಿದ್ದಾರೆ.

8-10 ಸಾವಿರ ಸದಸ್ಯ ಸ್ಥಾನ ಖಾಲಿಯಿದ್ದು, ಇವುಗಳನ್ನು ಭರ್ತಿಮಾಡುವ ಬದಲು ಹಿರಿಯ ನಾಯಕರು ತಮ್ಮ ತಮ್ಮ ಅಧಿಕಾರಕ್ಕಾಗಿ ಹೋರಾಡುತ್ತಿದ್ದಾರೆ. ಅಧಿಕಾರಕ್ಕೆ ಬರುವ ಮೊದಲು ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ನೀಡುವ ಮಾತುಗಳನ್ನು ಆಡಿದ್ದ ನಾಯಕರೆಲ್ಲ ಇದೀಗ ತಮ್ಮ ಸ್ಥಾನ ಗಟ್ಟಿ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ನಾಯಕರ ಈ ನಡೆಯಿಂದ ಅನೇಕರು ಪಕ್ಷದ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ.

- ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ತಳಮಟ್ಟದ ಕಾರ್ಯಕರ್ತರ ಪರಿಶ್ರಮ ಕಾರಣ
- ಚುನಾವಣೆ ವೇಳೆ ಕಾರ್ಯಕರ್ತರಿಗೆ ಸ್ಥಾನಮಾನ ನೀಡುವ ಭರವಸೆ ನೀಡಿದ್ದ ನಾಯಕರಿಗೆ ಈಗ ತಮ್ಮ ಅಧಿಕಾರದ ಚಿಂತೆ
- ನಾಯಕರ ಉದಾಸೀನ ಧೋರಣೆಗೆ ಕಾಂಗ್ರೆಸ್ ಕಾರ್ಯಕರ್ತರಿಗೆ ತೀವ್ರ ಅಸಮಾಧಾನ, ಆಕ್ರೋಶ
- ಜಿಲ್ಲಾಮಟ್ಟದಲ್ಲಿ 8 ರಿಂದ 10 ಸಾವಿರ ಸದಸ್ಯರ ನೇಮಕಾತಿ ನನೆಗುದಿಗೆ, ಕೂಡಲೇ ನೇಮಕಕ್ಕೆ ಹೆಚ್ಚಿದ ಒತ್ತಡ

ಬಣ ರಾಜಕೀಯ ಬದಿಗಿಟ್ಟು ಕಾರ್ಯಕರ್ತರಿಗೆ ಅವಕಾಶ ನೀಡಿ

ಈಗಾಗಲೇ ಸರಕಾರ ಅಧಿಕಾರಕ್ಕೆ ಬಂದು 21 ತಿಂಗಳು ಕಳೆಯುತ್ತಿದ್ದು, ಮೇ ತಿಂಗಳಿಗೆ ಎರಡು ವರ್ಷ ಪೂರ್ಣಗೊಳ್ಳಲಿದೆ. ಈ ಹಂತದಲ್ಲಿ ಸಂಪುಟ ಪುನಾರಚನೆ ಸೇರಿದಂತೆ ಹಲವು ಚರ್ಚೆಗಳು ಮುನ್ನೆಲೆಗೆ ಬರುತ್ತಿದೆ. ಆದರೆ ಪಕ್ಷದ ಕಾರ್ಯಕರ್ತರಿಗೆ ನೀಡಬಹುದಾದ ಅಧಿಕಾರದ ಬಗ್ಗೆ ಮಾತ್ರ ಬಹುತೇಕ ನಾಯಕರು ಮಾತನಾಡುತ್ತಿಲ್ಲ. ಸ್ಪಷ್ಟ ಬಹುಮತವಿದ್ದಾಗಲೂ, ಕಾರ್ಯಕರ್ತರಿಗೆ ಅವಕಾಶ ನೀಡುವ ಬದಲು ಹಿಂಜರಿಯುತ್ತಿರುವುದು ಸರಿಯಲ್ಲ ಎನ್ನುವ ಬೇಸರವನ್ನು ಹಲವರು ಹೊರಹಾಕಿದ್ದಾರೆ.

ಅಭಿವೃದ್ಧಿಗೆ ಪರಿಶಿಷ್ಟರ ಅನುದಾನ ಬಳಕೆ: ಮಹದೇವಪ್ಪ

ಗ್ಯಾರಂಟಿಗೆ ಎಸ್‌ಸಿಪಿ, ಟಿಎಸ್‌ಸಿಪಿ ಹಣ ಬಳಸಿಲ್ಲ

ಕಲಬುರಗಿ: ಎಸ್‌ಸಿಪಿ, ಟಿಎಸ್‌ಸಿಪಿ ಅನುದಾನದ ಹಣ ಸಾಮಾನ್ಯ ಅನುದಾನದಂತೆ ಎಲ್ಲರಿಗೂ ಬಳಕೆ ಮಾಡಲು ಸಾಧ್ಯವಾಗದು. ಈ ಅನುದಾನವನ್ನು ಪರಿಶಿಷ್ಟ ವರ್ಗ ಮತ್ತು ಜಾತಿಗಳ ಅಭಿವೃದ್ಧಿಗೆ ಬಳಸಲಾಗುತ್ತದೆ. ಗ್ಯಾರಂಟಿ ಯೋಜನೆಗೆ ಬಳಸಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಒಂದು ಯೋಜನೆಗೆ ಇಡೀ ಎಸ್‌ಸಿಪಿ, ಟಿಎಸ್‌ಸಿಪಿ ಹಣ ಬಳಸಲು ಆಗದು. ಬಜೆಟ್ ತಯಾರಿಕೆ ಪೂರ್ವಭಾವಿ ಸಭೆಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಾದ ಹಣ ಬಳಕೆ ದಲಿತ ಸಂಘಟನೆಗಳ ಮುಖಂಡರೊಂದಿಗೆ ನಾನು ಮತ್ತು ಸಿಎಂ ಚರ್ಚಿಸಿದ್ದೇವೆ. ಮುಖಂಡರು ಸರಕಾರಕ್ಕೆ ಸಲಹೆ-ಸೂಚನೆ ನೀಡಿ ಅಭಿನಂದಿಸಿದ್ದಾರೆ ಎಂದರು.

ದಲಿತ ಸಮಾವೇಶದ ಬಗ್ಗೆ ಅಪಸ್ವರ ಇಲ್ಲ. ಕಾಂಗ್ರೆಸ್ ಪಕ್ಷದ ವೇದಿಕೆಯಲ್ಲಿ ಸಮಾವೇಶ ಮಾಡುವಾಗ ಎಲ್ಲರ ವಿಶ್ವಾಸ ತೆಗೆದುಕೊಂಡು ಮಾಡಬೇಕು. ಹೈಕಮಾಂಡ್ ಮಾಡಬೇಡಿ ಎಂದು ಹೇಳಿಲ್ಲ. ಯಾವುದಾದರೂ ವಿಷಯ ಮಾತಾಡುವಾಗ ಪಕ್ಷಕ್ಕೆ ಮುಜುಗರ ಆಗದಂತೆ ಮಾತಾಡುವಂತೆ ಸೂಚಿಸಿದ್ದಾರೆ ಎಂದು ಸಚಿವ ಮಹದೇವಪ್ಪ ತಿಳಿಸಿದರು.

ಪಿಯುಸಿ ಪರೀಕ್ಷೆಯಲ್ಲಿ ಹಿಜಾಬ್ ಗೆ ಅವಕಾಶ ಕಾನೂನಿನ ಚೌಕಟ್ಟಿನಲ್ಲಿ ಏನಿದೆ ನೋಡಿ ಪರಾಮರ್ಶೆ ಮಾಡಿ ತೀರ್ಮಾನಿಸುತ್ತೇವೆ. ತೆಲಂಗಾಣ ಮಾದರಿಯಲ್ಲಿ ರಾಜ್ಯದಲ್ಲಿ ರಂಜಾನ್ ಸಂದರ್ಭದಲ್ಲಿ ಸರಕಾರಿ ಅವಧಿ ಕಡಿಮೆ ಮಾಡುವ ಪ್ರಸ್ತಾವನೆ ಸರಕಾರದ ಮುಂದಿಲ್ಲ.

-**ಎಚ್.ಸಿ. ಮಹದೇವಪ್ಪ,** ಸಮಾಜ ಕಲ್ಯಾಣ ಸಚಿವ

- ಎಸ್‌ಸಿಪಿ, ಟಿಎಸ್‌ಸಿಪಿ ಅನುದಾನದ ಹಣ ಸಾಮಾನ್ಯ ಅನುದಾನದಂತೆ ಎಲ್ಲರಿಗೂ ಬಳಕೆ ಮಾಡಲು ಸಾಧ್ಯವಾಗದು.
- ಒಂದು ಯೋಜನೆಗೆ ಇಡೀ ಎಸ್‌ಸಿಪಿ, ಟಿಎಸ್‌ಸಿಪಿ ಹಣ ಬಳಸಲು ಆಗದು.
- ದಲಿತ ಸಮಾವೇಶದ ಬಗ್ಗೆ ಅಪಸ್ವರ ಇಲ್ಲ

ನಾಯಕತ್ವ ಬದಲಾವಣೆ ಮಾತೇ ಇಲ್ಲ

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಮಾತೇ ಇಲ್ಲ. ಇಂತಹ ನಿರ್ಧಾರವೇನಿದ್ದರೂ ಪಕ್ಷದ ಹೈಕಮಾಂಡ್ ಮಾತ್ರ ಕೈಗೊಳ್ಳುತ್ತದೆ. ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರು ದೇವರಾಜ ಅರಸು ಅವಧಿಗಿಂತಲೂ ಹೆಚ್ಚು ಇರುತ್ತಾರೆ. ಆ ಮೂಲಕ ದಾಖಲೆ ಮುರಿಯುತ್ತಾರೆ. ಯಾರೇ ಮುಖ್ಯಮಂತ್ರಿಯಾದರೂ ಅವಕಾಶ ಸಿಕ್ಕಾಗ ರಾಜ್ಯದ ಅಭಿವೃದ್ಧಿಗೆ ಒತ್ತು ನೀಡಬೇಕಾಗುತ್ತದೆ. ಅದನ್ನೇ ಸಿದ್ದರಾಮಯ್ಯ ಮಾಡುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವರು ಸಿಎಂ ಪರ ಬ್ಯಾಟಿಂಗ್ ಮಾಡಿದರು.

ಹಿರಿಯರ ಹಾದಿಯಲ್ಲಿ ನಡೆಯುತ್ತೇವೆ: ಬಸವರಾಜ ಶಿವಗಂಗಾ

ಪವರ್ ಶೇರಿಂಗ್ ವರಿಷ್ಠರ ನಿರ್ಧಾರ

ದಾವಣಗೆರೆ: ಪವರ್ ಶೇರಿಂಗ್ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಚನ್ನಗಿರಿ ಶಾಸಕ ಬಸವರಾಜ ವಿ. ಶಿವಗಂಗಾ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪವರ್ ಶೇರಿಂಗ್ ಹೈಕಮಾಂಡ್‌ನ ನಿರ್ಧಾರ.ಹಾಗಾಗಿ ಯಾರು ಮಾತನಾಡಬಾರದು ಎಂದರು.

ಸಚಿವ ಕೆ.ಎನ್. ರಾಜಣ್ಣ ಅವರು ಮಾತನಾಡಿದ್ದು ತಪ್ಪು. ನಾವೆಲ್ಲ ಫಸ್ಟ್ ಟೈಂ ಗೆದ್ದಿದ್ದೇವೆ. ಹಿರಿಯರ ಹಾದಿಯಲ್ಲಿ ನಡೆಯುತ್ತೇವೆ. ಅವರು ತಪ್ಪು ಹಾದಿಯಲ್ಲಿ ಹೋದರೆ ನಾವು ಕೂಡ ತಪ್ಪು ದಾರಿಯಲ್ಲಿ ಹೋದಂತಾಗುತ್ತದೆ. ಹೈಕಮಾಂಡ್ ಎಚ್ಚರಿಕೆ ನೀಡಿದರೂ ಮಾತನಾಡುವುದು ತಪ್ಪು.ಒಬ್ಬರ ಕೈಯಿಂದ ಬದಲಾವಣೆ ಆಗುವುದಾದರೆ ಮಾಡಬಹುದಿತ್ತು. ಆದರೆ, ಎಲ್ಲವೂ ಹೈಕಮಾಂಡ್‌ನ ನಿರ್ಧಾರ. ಅದ್ದರಿಂದ ಯಾರು ಮಾತನಾಡಬಾರದು.ಹೀಗೆ ಮಾತನಾಡುತ್ತಾ ಹೋದರೆ ಕಾರ್ಯಕರ್ತರಲ್ಲಿ ಗೊಂದಲವಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಾತಿಗಣತಿ ವರದಿ ಬಿಡುಗಡೆ ಮಾಡಲು ಬಿಡಲ್ಲ

ಯಾವುದೇ ಕಾರಣಕ್ಕೂ ಜಾತಿಗಣತಿ ವರದಿ ಬಿಡುಗಡೆಗೆ ಬಿಡುವುದಿಲ್ಲ ಎನ್ನುವ ಮೂಲಕ ಶಾಸಕ ಬಸವರಾಜ್ ಶಿವಗಂಗಾ ಜಾತಿಗಣತಿ ವರದಿ ಬಿಡುಗಡೆಗೆ ವಿರೋಧ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ಜಾತಿಗಣತಿ ಬಿಡುಗಡೆಗೆ ಬಿಡುವುದಿಲ್ಲ ಎಂದು ನಾನು ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇನೆ. ನಮ್ಮ ಮನೆಗೆ ಬಂದು ಜಾತಿ ಗಣತಿ ಮಾಡಿಲ್ಲ. ಎಲ್ಲಿಯೋ ಕೂತು ಜಾತಿಗಣತಿ ಮಾಡಿದರೆ ಹೇಗೆ ಒಪ್ಪೋದು ಅಂತ. ಮುಖ್ಯಮಂತ್ರಿಗಳು ಜಾತಿಗಣತಿ ವರದಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಗಮನಕ್ಕೆ ತಂದೇ ಬಿಡುಗಡೆ ಮಾಡಬೇಕಲ್ವ ಎಂದು ಪ್ರಶ್ನಿಸಿದರು.

ಕಿಡಿಗೇಡಿಗಳಿಂದ ಭಾಷೆ ವಿಚಾರವಾಗಿ ಗಲಾಟೆ

ಬೆಳಗಾವಿ: ಗಡಿ ಭಾಗದಲ್ಲಿ ಕನ್ನಡ ಹಾಗೂ ಮರಾಠಿ ಭಾಷಿಕರು ಸ್ನೇಹದಿಂದ ಇದ್ದರು ಕೆಲವು ಕಿಡಿಗೇಡಿಗಳು ಭಾಷಾ ವಿಚಾರವಾಗಿ ಗಲಾಟೆ ಎಬ್ಬಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದಿನಿಂದಲೂ ಕೆಲ ಕಿಡಿಗೇಡಿಗಳು ಭಾಷೆ ವಿಚಾರವಾಗಿ ಗಲಾಟೆ ಎಬ್ಬಿಸುತ್ತಿದ್ದಾರೆ. ಕರ್ನಾಟಕ ಹಾಗೂ ಮಹಾರಾಷ್ಟ್ರ ಸರಕಾರ ಬಿಗಿ ಕ್ರಮ ಕೈಗೊಂಡು ಉಭಯ ರಾಜ್ಯಗಳಲ್ಲಿ ಬಸ್ ಸಂಚಾರ ಸುಗಮವಾಗಿ ಸಾಗುವಂತೆ ನೋಡಿಕೊಳ್ಳಬೇಕು. ಜನರಿಗೆ ತೊಂದರೆ ಆಗದಂತೆ ಕ್ರಮವಹಿಸಬೇಕು ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ. ದಿನನಿತ್ಯ ಕೊಲೆ ಸುಲಿಗೆ ಎಗ್ಗಿಲ್ಲದೆ ಸಾಗಿವೆ. ಮಹಿಳೆಯರಿಗೆ ರಾಜ್ಯದಲ್ಲಿ ರಕ್ಷಣೆ ಇಲ್ಲದಂತಾಗಿದೆ. ಭ್ರಷ್ಟಾಚಾರದಲ್ಲಿ ಸರಕಾರ ಮುಳುಗಿ ಹೋಗಿದ್ದು, ಅಧಿಕಾರಿಗಳಿಗೆ ಆತ್ಮಹತ್ಯೆ ಭಾಗ್ಯ ನೀಡಿದೆ ಎಂದು ಕಾರಜೋಳ ಆರೋಪಿಸಿದರು.

ದಲಿತರಿಗೆ ಸಿಎಂ ಹುದ್ದೆ ನೀಡಲಿ

ಕಾಂಗ್ರೆಸ್ ನಲ್ಲಿ ಅಧಿಕಾರಕ್ಕಾಗಿ ಕಚ್ಚಾಟ ನಡೆಯುತ್ತಿದೆ. ಈಗಲಾದರೂ ಕಾಂಗ್ರೆಸ್ ದಲಿತರಿಗೆ ಸಿಎಂ ಹುದ್ದೆ ಘೋಷಣೆ ಮಾಡಲಿ. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಕಾಶ ಇದೆ. ಪರಮೇಶ್ವರ ಅಥವಾ ಮುನಿಯಪ್ಪ ಅವರನ್ನಾದರು ಸಿಎಂ ಮಾಡಲಿ ಎಂದು ಸಂಸದ ಗೋವಿಂದ ಕಾರಜೋಳ ಕಾಂಗ್ರೆಸ್ ನಾಯಕರ ಕಾಲೆಳೆದರು.

ವರಿಷ್ಠರ ಭೇಟಿ ಸಾಧ್ಯತೆ। ಜನಸಂಪನ್ಮೂಲ ಸಚಿವರ ಭೇಟಿಗೆ ಸಮಯ ನಿಗದಿ

ಭಾರತಕ್ಕೆ ಬರುತ್ತಿದ್ದಂತೆ ಡಿಕೆ ದಿಲ್ಲಿ ಪ್ರವಾಸ

ಬೆಂಗಳೂರು: ಕುಟುಂಬದೊಂದಿಗೆ ದುಬೈಗೆ ತೆರಳಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಪಸಾಗುತ್ತಿದ್ದಂತೆ ದೆಹಲಿಗೆ ತೆರಳುತ್ತಿರುವುದು, ಕಾಂಗ್ರೆಸ್‌ನಲ್ಲಿ ಮತ್ತೆ ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಮೂರು ದಿನಗಳ ಹಿಂದೆ ದುಬೈಗೆ ತೆರಳಿರುವ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಬೆಂಗಳೂರಿಗೆ ವಾಪಸಾಗಲಿದ್ದಾರೆ. ಆದರೆ ಬೆಂಗಳೂರಿಗೆ ಆಗಮಿಸಿದ ಬೆನ್ನಲ್ಲೇ, ಮಂಗಳವಾರ ಬೆ.7 ಗಂಟೆಗೆ ದೆಹಲಿಗೆ ತೆರಳಲಿದ್ದಾರೆ. ಮೇಲ್ನೋಟಕ್ಕೆ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿಯಾಗಿ ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ಅನುಮತಿ ನೀಡು ವಂತೆ ಮನವಿ ಮಾಡಲು ಹಾಗೂ ಇತರೆ ನೀರಾವರಿ ಯೋಜನೆಗಳಿಗೆ ಚರ್ಚಿಸುವ ಸಂಬಂಧ ತೆರಳಲಿದ್ದಾರೆ.

ಆದರೆ ಜಲಶಕ್ತಿ ಸಚಿವರನ್ನು ಭೇಟಿಯಾದ ಬಳಿಕ ವಾಪಸಾಗುವುದನ್ನೂ ಕಾಯ್ದಿರಿಸಿರುವುದರಿಂದ ಎಐಸಿಸಿ ನಾಯಕರನ್ನು ಭೇಟಿಯಾಗಲಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿದೆ. ಪ್ರಮುಖವಾಗಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಮುಖ್ಯ ಮಂತ್ರಿ ಮುಂದುವರಿಕೆಗೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ವಿವಾದಕ್ಕೆ ಸಂಬಂಧಿಸಿದಂತೆ ಚರ್ಚಿಸುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬಂದಿದೆ. ಈಗಾಗಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಭೇಟಿಯಾಗಿ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದರು. ಇದರ ಮುಂದಿವರಿದ ಭಾಗದ ರೀತಿಯಲ್ಲಿ ಡಿಕೆಶಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಲಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿದೆ.

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಹೇಳಿಕೆ

ಕೆಪಿಸಿಸಿ ಅಧ್ಯಕ್ಷರ ಹೇಳಿಕೆಗೆ ಪ್ರತಿಕ್ರಿಯಿಸಲ್ಲ

ಹುಬ್ಬಳ್ಳಿ: ಸಚಿವ ಸಂಪುಟ ವಿಸ್ತರಣೆ, ಒಬ್ಬರು ಅಧಿಕಾರದಲ್ಲಿರುವುದು, ಒಬ್ಬರನ್ನು ತೆಗೆದು ಹಾಕಬೇಕು ಎಂದು ಯಾವುದೇ ಸತ್ಯ ಇಲ್ಲದೆ ನಡೆಯುವ ಅನಾವಶ್ಯಕ ಚರ್ಚೆಗಳಲ್ಲಿ ನಾನು ಭಾಗಿಯಾಗುವುದಿಲ್ಲ. ಊಹಾಪೋಹಗಳ ರಾಜಕೀಯದ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ, ಅದು ಕೆಪಿಸಿಸಿ ಅಧ್ಯಕ್ಷರ ಹೇಳಿಕೆಯಾಗಿರಲಿ ಅಥವಾ ಸಚಿವರ ಅಭಿಪ್ರಾಯವಾಗಿರಲಿ ಎಂದು ಸಚಿವ ಎಚ್. ಕೆ. ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ ಚುನಾವಣೆಯೂ ನನ್ನ ನೇತೃತ್ವದಲ್ಲಿಯೇ ನಡೆಯುತ್ತೆ'' ಎಂಬ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಬಗ್ಗೆ ಪ್ರತಿಕ್ರಿಯಿಸಿ, ಇಂಥ ಮಾತು ಅನಾವಶ್ಯಕ. ಇದರ ಬಗ್ಗೆ ನಾನು ಉತ್ತರಿಸಲ್ಲ ಎಂದರು.

ಬಜೆಟ್ ಕುರಿತು ಪ್ರತಿಕ್ರಿಯಿಸಿ, ಸಾಕಷ್ಟು ಕಠಿಣವಾದ ಸನ್ನಿವೇಶವನ್ನು ಎದುರಿಸುತ್ತಿದ್ದೇವೆ. ಕೇಂದ್ರ ಸರಕಾರದವರು ನಮಗೆ ಕೊಡಬೇಕಾದ ಅನುದಾನ ಕೊಡುತ್ತಿಲ್ಲ. ಅವರು ರಾಜ್ಯದ ಅಭಿವೃದ್ಧಿ ಕುಠಿತವಾಗಲಿ ಎಂದು ನೋಡುತ್ತಿದ್ದಾರೆ. ನಮ್ಮ ಮಹತ್ವಾಕಾಂಕ್ಷೆಯ ಯೋಜನೆಗಳಿಂದ ಬಡವರನ್ನು ಮೇಲೆತ್ತಬೇಕು, ಬಡತನವನ್ನು ನಿರ್ಮೂಲನೆ ಮಾಡಬೇಕು ಎಂದು ರಾಜಕೀಯ ಇಚ್ಛಾಶಕ್ತಿಯಿಂದ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಈ ಬಾರಿಯ ಬಜೆಟ್ ಅತ್ಯಂತ ಮಹತ್ವದ ಬಜೆಟ್ ಆಗಿದೆ. 15 ಬಜೆಟ್ ಮಂಡಿಸಿರುವ ಸಿಎಂ ಸಿದ್ದರಾಮಯ್ಯನವರು ಅತ್ಯಂತ ಅಧ್ಯಯನಶೀಲವಾಗಿ, ಚಾಣಾಕ್ಷತನದಿಂದ ಹಾಗೂ ಗಟ್ಟಿ ನಿರ್ಣಯ ತೆಗೆದುಕೊಂಡು ರಾಜ್ಯಕ್ಕೆ ಒಳ್ಳೆಯ ಬಜೆಟ್ ಕೊಡುತ್ತಾರೆಂಬ ವಿಶ್ವಾಸ ನನ್ನಲ್ಲಿದೆ.

-**ಎಚ್. ಕೆ. ಪಾಟೀಲ್,** ಸಚಿವ

ಕಲಬುರಗಿಯ ಜಿಮ್ಸ್ ವೈದ್ಯರ ನಿರ್ಲಕ್ಷ್ಯಕ್ಕೆ ಕುಟುಂಬಸ್ಥರ ಆಕ್ರೋಶ

ಬಾಣಂತಿ ಹೊಟ್ಟೆಯಲ್ಲಿ ಉಳಿದ ಬಟ್ಟೆ

ಕಲಬುರಗಿ: ಇತ್ತೀಚಿನ ದಿನಗಳಲ್ಲಿ ಇಲ್ಲಿನ ಜಿಮ್ಸ್ ಆಸ್ಪತ್ರೆ ಒಂದಿಲ್ಲೊಂದು ವಿಚಾರದಲ್ಲಿ ಪದೇ ಪದೇ ರಾಜ್ಯಾದ್ಯಂತ ಸದಾ ಸುದ್ದಿಯಲ್ಲಿರುವುದು ಸಾಮಾನ್ಯವಾಗಿದೆ. ಈಗ ಮತ್ತೊಂದು ಘಟನೆ ಬೆಳಕಿಗೆ ಬಂದಿದೆ. ವೈದ್ಯರ ನಿರ್ಲಕ್ಷ್ಯದಿಂದ ಸಿಸೇರಿಯನ್ ಆದ ಮಹಿಳೆಯೊಬ್ಬರ ಹೊಟ್ಟೆಯಲ್ಲಿ ಬಟ್ಟೆ ಉಂಡೆ, ಹತ್ತಿ ಬಿಟ್ಟು ಹೊಲಿಗೆ ಹಾಕಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ.

ಫೆ.5ರಂದು ಭಾಗ್ಯಶ್ರೀ ಎಂಬ ಮಹಿಳೆಗೆ ಜಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಆಗಿತ್ತು. ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರು ಹೊಟ್ಟೆಯಲ್ಲೇ ಬಟ್ಟೆ ಉಂಡೆ ಹಾಗೂ ಹತ್ತಿ ಬಿಟ್ಟು ಹೊಲಿಗೆ ಹಾಕಿದ್ದಾರೆ. ತಕ್ಷಣಕ್ಕೆ ಇದು ಮಹಿಳೆಯ ಅರಿವಿಗೆ ಬಂದಿಲ್ಲ. ಒಂದು ವಾರದ ಬಳಿಕ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಈ ವೇಳೆ ಸ್ಕ್ಯಾನಿಂಗ್‌ಗೆ ಬಂದಾಗ ವೈದ್ಯರ ಯಡವಟ್ಟು ಬಯಲಾಗಿದೆ ಎನ್ನಲಾಗಿದೆ.

ಮತ್ತೆ ಶಸ್ತ್ರಚಿಕಿತ್ಸೆ: ಬಳಿಕ ಬಾಣಂತಿಯನ್ನು ಅಫಜಲಪುರ ತಾಲೂಕಿನ ಕರಜಗಿಯ ಪ್ರಾಥಮಿಕ ಕೇಂದ್ರಕ್ಕೆ ಕರೆದೊಯ್ದು ವೈದ್ಯರಿಂದ ಮರು ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ. ಹೊಟ್ಟೆಯಲ್ಲಿದ್ದ ಬಟ್ಟೆ ಉಂಡೆ ಹಾಗೂ ಹತ್ತಿ ತೆಗೆಯಲಾಗಿದೆ. ಆದರೆ, ಕುಟುಂಬಸ್ಥರ ಆರೋಪವನ್ನು ಜಿಮ್ಸ್ ವೈದ್ಯರು ತಳ್ಳಿಹಾಕಿದ್ದಾರೆ.

ಹೆರಿಗೆಯ ನಂತರ ಬ್ಲೀಡಿಂಗ್ ತಡೆಯಲು ಪ್ಯಾಡ್ ಇಡಲಾಗಿತ್ತು. ಎರಡು ದಿನದ ನಂತರ ಮಹಿಳೆ ಬಂದು ಅದನ್ನು ತೆಗೆಸಿಕೊಳ್ಳಬೇಕಾಗಿತ್ತು. ಅವರು ಆಸ್ಪತ್ರೆಗೆ ಬಂದಿರಲಿಲ್ಲ. ಸದ್ಯ ಈಗ ಮಹಿಳೆಗೆ ಯಾವುದೇ ತೊಂದರೆ ಇಲ್ಲ.

-**ಡಾ.ಅಸ್ಮಾ ಬೇಗ್,** ಜಿಲ್ಲಾ ಸರ್ಜನ್, ಕಲಬುರಗಿ

ಯಾರದ್ದೂ ನಿರ್ಲಕ್ಷ್ಯವಿಲ್ಲ

ಈ ಕುರಿತು ಕಲಬುರಗಿ ಡಿಎಚ್‌ಒ ಡಾ. ಶರಣಬಸಪ್ಪ ಕ್ಯಾತನಾಳ್ ಪ್ರತಿಕ್ರಿಯೆ ನೀಡಿ, ಇದರಲ್ಲಿ ಯಾರದ್ದೂ ತಪ್ಪಿಲ್ಲ. ಬಾಣಂತಿ ಹಾಗೂ ವೈದ್ಯರ ಮಧ್ಯೆ ಸಂಪರ್ಕ ಕೊರತೆಯಿಂದಾಗಿ ಇಂತಹ ಘಟನೆ ನಡೆದಿದೆ. ಸಾಮಾನ್ಯವಾಗಿ ಹೆರಿಗೆ ಆದ ಮೇಲೆ ನಾವು ರಕ್ತಸ್ರಾವ ಆದ ಜಾಗಕ್ಕೆ ಹತ್ತಿ ಇಡುತ್ತೇವೆ. ಅದೇ ರೀತಿ ಇಲ್ಲಿಯೂ ಸಹ ಹತ್ತಿ ಮಾತ್ರ ಇಡಲಾಗಿದೆ. ಭಾಗ್ಯಶ್ರೀಗೆ ಸಾಮಾನ್ಯ ಹೆರಿಗೆ ಆಗಿತ್ತು. ಈ ಸಮಯದಲ್ಲಿ ರಕ್ತಸ್ರಾವ ನಿಯಂತ್ರಣಕ್ಕೆ ಆ ಹತ್ತಿ ಇಡಲಾಗಿತ್ತು. ಎರಡು ದಿನ ಬಿಟ್ಟು ಬಂದು ಅದನ್ನು ತೆಗೆಯಲು ವೈದ್ಯರು ಸೂಚಿಸಿದ್ದರು. ಆದರೆ, ಅದನ್ನು ಬಾಣಂತಿಯ ಕಡೆಯವರು ಮಾಡಿಲ್ಲ. ಅದರಿಂದ ಸೋಂಕು ಆಗಿದೆ. ಸದ್ಯ ಬಾಣಂತಿ ಹಾಗೂ ಮಗು ಆರೋಗ್ಯವಾಗಿದ್ದಾರೆ . ಇದರಲ್ಲಿ ಯಾವುದೇ ನಿರ್ಲಕ್ಷ್ಯ ಅಗಿಲ್ಲ. ಇದೊಂದು ಸಹಜ ವೈದ್ಯಕೀಯ ಪ್ರಕ್ರಿಯೆ. ಮಾಹಿತಿ ಕೊರತೆಯಿಂದ ಕುಟುಂಬದವರು ತಂಕಗೊಂಡಿದ್ದರು ಎಂದು ಸ್ಪಷ್ಟಪಡಿಸಿದರು.

ಅಖಿಲ ಭಾರತ ಕುಲಪತಿಗಳ ಸಮ್ಮೇಳನ ಇಂದು

ಚಿಕ್ಕಬಳ್ಳಾಪುರ: ಶ್ರೀಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯವು ಅಖಿಲ ಭಾರತ ಕುಲಪತಿಗಳ ಸಮ್ಮೇಳನ ಆಯೋಜಿಸಿದೆ. ಭಾರತೀಯ ಮೌಲ್ಯಾಧಾರಿತ ಶಿಕ್ಷಣ ಪದ್ಧತಿ ಪರಿಕಲ್ಪನೆಯಡಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಈ ಐತಿಹಾಸಿಕ ಸಮ್ಮೇಳನದಲ್ಲಿ 15 ರಾಜ್ಯಗಳ 50 ಕುಲಪತಿಗಳು ಭಾಗವಹಿಸಲಿದ್ದಾರೆ. ಮುದ್ದೇನಹಳ್ಳಿಯ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಸೋಮವಾರ ಕುಲಪತಿಗಳ ಸಮ್ಮೇಳನ ನಡೆಯುತ್ತಿದ್ದು ಭಾರತೀಯ ಉನ್ನತ ಶಿಕ್ಷಣ ರಂಗವನ್ನು ಮರು ರೂಪಿಸುವ ಪರಿವರ್ತಕ ಉಪಕ್ರಮವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸಮುದಾಯ ಭವನಕ್ಕೆ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಶಂಕುಸ್ಥಾಪನೆ

ಹುಟ್ಟೂರಿನ ಋಣ ತೀರಿಸಲು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ

ಎನ್.ಆರ್.ಪುರ: ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಹುಟ್ಟೂರಿನ ಋಣ ತೀರಿಸಲು ನರಸಿಂಹರಾಜಪುರ ತಾಲೂಕಿನ ಅಭಿವೃದ್ಧಿಗಾಗಿ ಸರಕಾರದಿಂದ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹೇಳಿದ್ದಾರೆ.

ಕಡಹಿನಬೈಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನವಗ್ರಾಮದಲ್ಲಿ ಶಬರೀಶ ಹಿಂದುಳಿದ ವರ್ಗಗಳ ಸೇವಾಸಮಿತಿಯಿಂದ ನಿರ್ಮಿಸಲು ಉದ್ದೇಶಿಸಿರುವ 50 ಲಕ್ಷ ರು. ವೆಚ್ಚದ ಸಮುದಾಯಭವನಕ್ಕೆ ಶಂಕುಸ್ಥಾಪನೆ ನೆರವೇರಿಸಿ ಶ್ರೀನಿವಾಸ್ ಮಾತನಾಡಿದರು.

ಏತನೀರಾವರಿ ಯೋಜನೆ ಅಸಮರ್ಪಕ ನಿರ್ವಹಣೆ: ವಿಧಾನಪರಿಷತ್ ಸದಸ್ಯನಾಗಿದ್ದಾಗ ಸ್ನೇಹಿತ ವಿಂಗ್ ಕಮಾಂಡರ್ ಪೈಲಟ್ ಬಾಬು ಸಲಹೆ ಮೇರೆಗೆ ಈ ಗ್ರಾ.ಪಂ. ವ್ಯಾಪ್ತಿಯಲ್ಲಿ ಬಕ್ರಿಹಳ್ಳ ಏತನೀರಾವರಿ ಯೋಜನೆ ಅನುಷ್ಠಾನಗೊಳಿಸಲಾಗಿತ್ತು. ಹಿಂದಿನ ಕಾಂಗ್ರೆಸ್ ಸರಕಾರದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಉದ್ಘಾಟನೆ ಮಾಡಿಸಲಾಗಿತ್ತು. ಈ ಯೋಜನೆಯಿಂದ ಗ್ರಾಮಗಳ ವ್ಯಾಪ್ತಿಯ 60 ಕೆರೆಗಳಿಗೆ ನೀರು ಪೂರೈಸಲಾಗುತ್ತಿದೆ. ಆದರೆ ಇದನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಬೇಸರ ತಂದಿದೆ ಎಂದರು. ಗಾಂಧಿ ಗ್ರಾಮದ ಸಮುದಾಯ ಭವನಕ್ಕೆ 40ಲಕ್ಷರು. ಬಿಡುಗಡೆಯಾಗಿದೆ. ಯಾವುದೇ ಕಾಮಗಾರಿ ಆರಂಭಿಸಿದರೂ ಅದನ್ನು ಸಂಪೂರ್ಣಗೊಳಿಸಲಾಗಿದೆ ಎಂದರು.

ಶಬರೀಶ ಹಿಂದುಳಿದ ವರ್ಗಗಳ ಸೇವಾ ಸಮಿತಿಯ ಅಧ್ಯಕ್ಷ ಗಾಂಧಿಗ್ರಾಮ ನಾಗರಾಜು, ಕಡಹಿನ ಬೈಲು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸುನಿಲ್ ಕುಮಾರ್. ಸದಸ್ಯ ಎ.ಬಿ.ಮಂಜುನಾಥ್ ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಶಾಂತ್ ಎಲ್.ಶೆಟ್ಟಿ ಮಾತನಾಡಿದರು.

ಕಡಹಿನಬೈಲು ಗ್ರಾ.ಪಂ. ಅಧ್ಯಕ್ಷೆ ಅಶ್ವಿನಿ ಅಧ್ಯಕ್ಷತೆ ವಹಿಸಿದ್ದರು. ಬಗರ್ ಹುಕುಂ ಸಮಿತಿ ಅಧ್ಯಕ್ಷ ಈ.ಸಿ.ಜೋಯಿ, ಗ್ರಾ.ಪಂ. ಸದಸ್ಯರಾದ ಚಂದ್ರಶೇಖರ್, ರವೀಂದ್ರ, ವಾಣಿ ನರೇಂದ್ರ, ಪೂರ್ಣಿಮಾ, ಲಿಲ್ಲಿ ಮಾತುಕುಟ್ಟಿ, ಎಂ.ಟಿ.ಕುಮಾರ್,ಎನ್. ಎಂ.ಕಾಂತರಾಜ್, ಎಂ.ಮಹೇಶ್, ಡಿ.ಆರ್. ಈಶ್ವರ ಇದ್ದರು.

ನರಸಿಂಹರಾಜಪುರ ತಾಲೂಕಿನ ನವಗ್ರಾಮದಲ್ಲಿ ಸಮುದಾಯಭವನ ನಿರ್ಮಾಣಕ್ಕೆ ರಾಜ್ಯಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಹಾಗೂ ಶಾಸಕ ಟಿ.ಡಿ.ರಾಜೇಗೌಡ ಶಂಕುಸ್ಥಾಪನೆ ನೆರವೇರಿಸಿದರು.

ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, ಕಡಹಿನಬೈಲು ಬಕ್ರಿಹಳ್ಳ ಏತನೀರಾವರಿ ಯೋಜನೆಯ ಮುಂದುವರಿದ ಕಾಮಗಾರಿಗೆ ಬಜೆಟ್ ನಲ್ಲಿ 15 ಕೋಟಿ ರು. ಅನುದಾನ ಮೀಸಲಿಡಲು ಮುಖ್ಯಮಂತ್ರಿಗೆ ಮನವಿ ಮಾಡಲಾಗಿದೆ. ಇದರ ನಿರ್ವಹಣೆಗೆ ತುರ್ತಾಗಿ 20 ಲಕ್ಷ ರು. ಅನುದಾನ ಬಿಡುಗಡೆ ಮಾಡಲಾಗಿದೆ. ನನೆಗುದಿಗೆ ಬಿದ್ದಿರುವ ಹೊನ್ನೆಕೂಡಿಗೆ ಏತನೀರಾವರಿ ಯೋಜನೆ ಕೊಳವೆ ಅಳವಡಿಸುವ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಶೀಘ್ರದಲ್ಲೇ ಅರಣ್ಯ ಇಲಾಖೆಯ ಒಪ್ಪಿಗೆ ದೊರೆಯಲಿದೆ. ಕೊಪ್ಪದಿಂದ ಶಿವಮೊಗ್ಗದ ವಿಮಾನ ನಿಲ್ದಾಣದವರೆಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಪ್ರಯತ್ನ ಮುಂದುವರಿಸಲಾಗಿದೆ. ಭೂಮಿ ಹಂಚಿಕೆಗೆ ಸಂಬಂಧಿಸಿದಂತೆ ಇದ್ದ ಕಾರ್ಯಪಡೆ ಅನುಷ್ಠಾನಕ್ಕೆ ತರುವ ಪ್ರಯತ್ನ ಕೊನೆಯ ಹಂತದಲ್ಲಿದೆ. ಅರಣ್ಯ ವ್ಯವಸ್ಥಾಪನಾ ಕಚೇರಿ ಕೊಪ್ಪದಲ್ಲಿ ಆರಂಭವಾಗಲಿದೆ. ಬಿಜೆಪಿ ಸರಕಾರದ ಅವಧಿಯಲ್ಲಿ ತಡೆಯೊಡ್ಡಿದ್ದ 30 ಕೋಟಿ ರು. ಕಾಮಗಾರಿಗಳಿಗೆ ಪುನಃ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಬೆಳಗಾವಿ ಜಿಲ್ಲಾಧಿಕಾರಿ ಮರಾಠಿ ಪ್ರೇಮ

ಬೆಳಗಾವಿ: ಕನ್ನಡಿಗರ ಮೇಲೆ ಮರಾಠಿ ಭಾಷಿಕರ ಪುಂಡಾಟಕ್ಕೆ ಕಡಿವಾಣ ಹಾಕಬೇಕಿದ್ದ ಬೆಳಗಾವಿ ಜಿಲ್ಲಾಧಿಕಾರಿ ಮರಾಠಿ ಪ್ರೇಮ ಮೆರೆಯಲು ಮುಂದಾಗಿದ್ದು ಸದ್ಯ ಇವರ ನಡೆ ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿದೆ. ಮರಾಠಿಗರ ಬಹುದಿನಗಳ ಬೇಡಿಕೆಯಾಗಿದ್ದ ಮರಾಠಿ ಭಾಷಿಕ ಪ್ರದೇಶದಲ್ಲಿ ಮರಾಠಿ ಭಾಷೆಯಲ್ಲೇ ದಾಖಲೆ ನೀಡಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮುಂದಾಗಿದ್ದಾರೆ. ಸದ್ಯ ಇವರ ನಡೆಗೆ ಕನ್ನಡಪರ ಸಂಘಟನೆ ಸದಸ್ಯರು ಸೇರಿದಂತೆ ಗಡಿ ಭಾಗದ ಕನ್ನಡಿಗರು ಜಿಲ್ಲಾಧಿಕಾರಿ ನಡೆಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ ಕೆಲ ದಿನಗಳ ಹಿಂದೆ ಎಂಇಎಸ್ ಮುಖಂಡರ ಜತೆ ರಾಷ್ಟ್ರೀಯ ಖ್ಯಾತರ ಆಯೋಗದ ಸದಸ್ಯರು ಜಿಲ್ಲಾಧಿಕಾರಿಯನ್ನು ಭೇಟಿಯಾಗಿ ಮರಾಠಿ ಭಾಷೆಯಲ್ಲೇ ದಾಖಲೆ ನೀಡುವಂತೆ ಮನವಿ ಮಾಡಿದ್ದಾರೆ. ಇದಕ್ಕೆ ಜಿಲ್ಲಾಧಿಕಾರಿ ಸಮ್ಮತಿ ಸೂಚಿಸಿದ್ದಾರೆ ಎಂದು ಮರಾಠಿ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಕನ್ನಡಪರ ಹೋರಾಟಗಾರ ಅಶೋಕ್ ಚಂದರಗಿ. ಮರಾಠಿ ಭಾಷೆಯಲ್ಲಿ ದಾಖಲೆ ನೀಡುವ ಅಧಿಕಾರ ಕೇವಲ ಸಚಿವ ಸಂಪುಟ ನಿರ್ಧಾರದಿಂದ ಆಗಬೇಕು. ಆದರೆ ಜಿಲ್ಲಾಧಿಕಾರಿ ನನಗೆ ಅಧಿಕಾರ ಇದೆ ಎಂದು ಹೇಳುತ್ತಿದ್ದಾರೆ. ರಾಷ್ಟ್ರೀಯ ಭಾಷಾ ಅಲ್ಪಸಂಖ್ಯಾತರ ಆಯೋಗದ ಮನವಿಗೆ ರಾಜ್ಯ ಸರಕಾರ ಯಾವುದೇ ಕಾರಣಕ್ಕೂ ಸ್ಪಂದಿಸಬಾರದು ಎಂದು ಹೇಳಿದರು.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ

ಸಂಪಾದಕೀಯ

ಹಗ್ಗಜಗ್ಗಾಟ ಇನ್ನಾದರೂ ನಿಲ್ಲಲಿ

ಕರ್ನಾಟಕ ರಾಜ್ಯದ ರಾಜಕೀಯ ವ್ಯವಸ್ಥೆಗೆ ಅದ್ಯಾವ ಕಣ್ಣು ಬಿದ್ದಿದೆಯೋ ಗೊತ್ತಿಲ್ಲ, ಕಳೆದ ಒಂದು ವರ್ಷದಿಂದ ಏನಾದರೊಂದು ಹಗ್ಗಜಗ್ಗಾಟವನ್ನು ನೋಡುತ್ತಲೇ ಕೂರುವಂತಾಗಿ ರಾಜ್ಯದ ಜನರು ಬೇಸತ್ತಿದ್ದಾರೆ. ಯಾವ ದಿಕ್ಕಿನಿಂದ ನೋಡಿದರೂ ವಾತಾವರಣವು ಸುಧಾರಿಸುವ ಲಕ್ಷಣಗಳು ಕಾಣುತ್ತಿಲ್ಲ. ಒಂದೆಡೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆಗೆ ಆಗ್ರಹಿಸಿ ಬಿಜೆಪಿಗರಲ್ಲಿ ಬಣ ಬಡಿದಾಟವು ತಾರಕಕ್ಕೇರಿರಿದ್ದರೆ, ಮತ್ತೊಂದೆಡೆ ಅಧಿಕಾರ ಹಂಚಿಕೆ/ಹಸ್ತಾಂತರಕ್ಕೆ ಸಂಬಂಧಿಸಿದ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸಿಗರಲ್ಲೂ ಒಳಗೊಳಗೇ ಬಣಗಳು ರೂಪುಗೊಂಡಿವೆ, ಈ ಬಣಗಳಿಗೆ ಸೇರಿದವರು ಮುಸುಕಿನೊಳಗಿನ ಗುದ್ದಿನ ರೀತಿಯಲ್ಲಿ ತಮ್ಮದೇ ನೆಲೆಯಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಹೀಗೆ ಆಡಳಿತ ಪಕ್ಷ ಮತ್ತು ವಿಪಕ್ಷಗಳ ಪಾಳಯಗಳಲ್ಲಿ ಒಂದೊಂದು ತೆರನಾಗಿ 'ಹೊಯ್-ಕೈ' ನಡೆಯುತ್ತಿದ್ದರೆ, ಇತ್ತೀಚೆಗೆ ಲಭ್ಯವಾಗಿರುವ ಮಾಹಿತಿಯಂತೆ ರಾಜ್ಯಪಾಲರು ಮತ್ತು ರಾಜ್ಯ ಸರಕಾರದ ನಡುವೆ ಮತ್ತೊಂದು ಸುತ್ತಿನ ಹಗ್ಗಜಗ್ಗಾಟ ಶುರುವಾಗಿದೆ. ಪಂಚಾಯತ್‌ರಾಜ್ ವಿವಿ ತಿದ್ದುಪಡಿ ವಿಧೇಯಕ ಸೇರಿದಂತೆ ಸರಕಾರವು ಕಳಿಸಿದ್ದ ಮೂರು ವಿಧೇಯಕಗಳಿಗೆ ರಾಜ್ಯಪಾಲರು ಸಹಿ ಹಾಕದೆ ವಾಪಸ್ ಕಳಿಸಿರುವುದೇ ಈ ಬೆಳವಣಿಗೆಗೆ ಕಾರಣ. ರಾಜ್ಯ ಸರಕಾರ ಮತ್ತು ರಾಜಭವನದ ನಡುವೆ ಹೀಗೊಂದು ಹಿತಾಸಕ್ತಿಯ ತಿಕ್ಕಾಟ ನಡೆಯುವುದು ಹೊಸದೇನಲ್ಲ; ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ ಮುಂತಾದ ರಾಜ್ಯಗಳಲ್ಲಿ ನಿರಂತರವಾಗಿ ಇಂಥದೊಂದು ಸಂಘರ್ಷ ನಡೆಯುತ್ತಿದ್ದುದನ್ನು ಶ್ರೀಸಾಮಾನ್ಯರು ಕಂಡು-ಕೇಳಿದ್ದಾರೆ. ಇಂಥ ಸಂಘರ್ಷಗಳಾಗಲೀ ಅಥವಾ ಬಿಜೆಪಿ ಮತ್ತು ಕಾಂಗ್ರೆಸ್ ಪಾಳಯಗಳಲ್ಲಿ ಒಳಗೊಳಗೇ ನಡೆಯುತ್ತಿರುವ ಭಿನ್ನಮತೀಯ ಚಟುವಟಿಕೆಗಳಾಗಲೀ ತಹಬಂದಿಗೆ ಬಂದರೆ ಸಾಕು ಎಂದು ಜನರು ನಿರೀಕ್ಷಿಸುವುದು ಸಹಜವಾಗಿಯೇ ಇದೆ. ಏಕೆಂದರೆ, ಜನಕಲ್ಯಾಣ ಮತ್ತು ಅಭಿವೃದ್ಧಿಯ ಆಶಯದೊಂದಿಗೆ ತಾವು ಚುನಾಯಿಸಿ ಕಳಿಸಿದವರು, ಆ ಉದ್ದೇಶದ ಈಡೇರಿಕೆಗೆ ಟೊಂಕ ಕಟ್ಟಲಿ ಎಂಬುದು ಜನರ ನಿರೀಕ್ಷೆಯಾಗಿರುತ್ತದೆ. ಆದರೆ, ದಿನಬೆಳಗಾದರೆ 'ನೀ ಕೊಡೆ, ನಾ ಬಿಡೆ' ಶೈಲಿಯಲ್ಲಿ ಚೌಕಾಸಿ ನಡೆಯುತ್ತಲೇ ಇದ್ದರೆ, ಇಂಥ ಆಶಯಗಳು ಮತ್ತು ನಿರೀಕ್ಷೆಗಳು ನೆರವೇರುವುದು ಯಾವಾಗ? ಈ ಪ್ರಶ್ನೆಯನ್ನು ಸಂಬಂಧಪಟ್ಟವರು ಕೇಳಿಕೊಳ್ಳಲಿ.

ಸೊಂಪಾದಕೀಯ

ಟಿಕೆಟ್, ಟಿಕೆಟ್

ಕರ್ನಾಟಕದಲ್ಲಿ ಕನ್ನಡ ಚಿತ್ರಗಳಿಗೆ ಹಲವು ಸಂಕಟಗಳು. ಕಾಲಕ್ಕೆ ತಕ್ಕಂತೆ ನಡೆಯಬೇಕು ಅನ್ನೋ ನಿಟ್ಟಿನಲ್ಲಿ ಮಲ್ಟಿಪ್ಲೆಕ್ಸ್‌ಗಳು ತಲೆ ಎತ್ತಿದ ಮೇಲೆ ಹಲವಾರು ಸಮಸ್ಯೆಗಳು ತಲೆದೋರಿವೆ. ಅವುಗಳಲ್ಲಿ ಒಂದು ಟಿಕೆಟ್ ದರ. ಅದರಲ್ಲೂ ಬೆಂಗಳೂರಿನಲ್ಲಿ ಟಿಕೆಟ್ ದರದ ಹಾವಳಿ ಹೆಚ್ಚೇ ಆಗಿದೆ. ಸಂಸಾರ ಸಮೇತ ಮಲ್ಟಿಪ್ಲೆಕ್ಸ್‌ಗೆ ಹೋಗಲು ಮಧ್ಯಮ ವರ್ಗದ ಜನ ಹಿಂದೇಟು ಹಾಕುತ್ತಿದ್ದಾರೆ. ದುಬಾರಿ ಟಿಕೆಟ್ ದರ ಅವುಗಳಲ್ಲಿ ಒಂದು ಅಷ್ಟೇ. ಮಾತ್ರವಲ್ಲ, ಮಕ್ಕಳೊಂದಿಗೆ ಚಿತ್ರಮಂದಿರಕ್ಕೆ ಹೋದವರಿಗೆ ಸಿನಿಮಾ ತೋರಿಸುವುದರ ಜತೆಗೆ ಅಲ್ಲಿನ ತಿಂಡಿ ತಿನಿಸುಗಳನ್ನು ಕೊಡಿಸೋದು ದೊಡ್ಡ ಸವಾಲಾಗಿಬಿಡುತ್ತದೆ. ಒಂದು ಮಾಮೂಲಿ ಪಾಪ್‌ಕಾರ್ನ್ ಕೂಡಾ ಕೈಗೆ ಎಟುಕದಷ್ಟು ದುಬಾರಿ. ಇನ್ನು ಮತ್ತಿತರ ಮಾಡರ್ನ್ ತಿನಿಸುಗಳ ಸಹವಾಸಕ್ಕೆ ಹೋಗೋದು ಸಾಹಸದ ವಿಷಯವೇ ಸರಿ. ಆದರೆ ಇದು ಬೆಂಗಳೂರಿನ ಸಮಸ್ಯೆ ಮಾತ್ರ. ಪಕ್ಕದ ಆಂಧ್ರ, ತಮಿಳುನಾಡುಗಳ ಚಿತ್ರಮಂದಿರಗಳಲ್ಲಿ ಟಿಕೆಟ್ ದರ ಸಾಮಾನ್ಯ ಮಟ್ಟದಲ್ಲಿದೆ. ಅಲ್ಲಿನ ಸೂಪರ್ ಸ್ಟಾರ್‌ಗಳ ಸಿನಿಮಾಗಳ ದರ ಕೂಡಾ ಅಲ್ಲಿ ತೀರಾ ಕಡಿಮೆ ಇರುತ್ತದೆ. ಆದರೆ ಅದೇ ಸಿನಿಮಾಗೆ ಬೆಂಗಳೂರಿನಲ್ಲಿ ಮಾತ್ರ ಟಿಕೆಟ್ ದರ ಸಾವಿರ ದಾಟುತ್ತದೆ. ಅದನ್ನು ನೋಡಿ ಇಲ್ಲಿನ ನಮ್ಮ ದೊಡ್ಡ ಬಜೆಟ್ ಸಿನಿಮಾದವರೂ ತಾವೇನೂ ಕಮ್ಮಿ ಇಲ್ಲ ಎನ್ನುವಂತೆ ಟಿಕೆಟ್ ದರ ಏರಿಸುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ಏನು ಅಂತ ಹುಡುಕಿದರೆ ಸರಿಯಾದ ಉತ್ತರ ಸಿಗೋದಿಲ್ಲ. ಬಹುಶಃ ನಮ್ಮ ಸಿನಿಮಾ ಮಂದಿ, ಬೆಂಗಳೂರಿನ ಸಿನಿಮಾ ಪ್ರೇಮಿಗಳು ಅಂದ್ರೆ, ಅಂಬಾನಿ ವಂಶಸ್ಥರು ಅಥವಾ ಮೈಸೂರಿನ ಅಂಬಾರಿ ವಂಶಸ್ಥರು ಅಂತ ತಿಳಿದುಕೊಂಡಿರೋ ಹಾಗಿದೆ. ಇದರ ವಿರುದ್ಧ ನಮ್ಮ ಚಲನಚಿತ್ರ ವಾಣಿಜ್ಯ ಮಂಡಳಿ ಕೆಲ ತಿಂಗಳ ಹಿಂದೆ ಸಭೆ ಕರೆದು, ಟಿಕೆಟ್ ದರವನ್ನು 200 ರುಪಾಯಿ ದಾಟದಂತೆ ನಿಗದಿಪಡಿಸಲು ಸರಕಾರವನ್ನು ಒತ್ತಾಯಿಸಿತ್ತು. ಇಲ್ಲವಾದರೆ ದುಬಾರಿ ಟಿಕೆಟ್ ದರ ವಸೂಲಿ ಮಾಡುವ ಮಲ್ಟಿಪ್ಲೆಕ್ಸ್‌ಗಳಿಗೆ ಮುತ್ತಿಗೆ ಹಾಕುವ ಎಚ್ಚರಿಕೆಯನ್ನೂ ನೀಡಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು. ಒಟ್ಟಿನಲ್ಲಿ ಸಿನಿಮಾ ನೋಡೋದೇ ದುಬಾರಿ ಬಾಬತ್ತು ಆಗಿಬಿಟ್ಟಿದೆ ಕಣ್ರೀ!

ಸಂಪಾದಕರ ಸದ್ಯಶೋಧನೆ

ಚಿಕ್ಕದು ಸುಂದರ

ಜಪಾನಿಯರಲ್ಲಿ ಒಂದು ವಿಶೇಷ ಗುಣವಿದೆ. Small is beautiful ಎಂಬ ಮಾತು ಜಪಾನಿಗೆ ಹೆಚ್ಚು ಅನ್ವರ್ಥಕ. ಅವರು ಎಲ್ಲವನ್ನೂ ಚಿಕ್ಕದಾಗಿ ರೂಪಿಸುತ್ತಾರೆ. ಅದಕ್ಕೆ ಅವರ ಕಣ್ಣುಗಳೂ ಕಾರಣವಿರಬಹುದು. ಯಾಕೆಂದರೆ ಅವರ ಕಣ್ಣುಗಳೂ ಚಿಕ್ಕವು. ಚಿಕ್ಕ ದೇಶವಾದರೂ, ಜಗತ್ತಿನ ಮಹಾನ್ ಶಕ್ತಿಗಳಲ್ಲಿ ಜಪಾನ್ ಒಂದಾಗಿದೆ. ಯಾವುದೇ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಜಪಾನಿಯರನ್ನು ಹೊರತುಪಡಿಸಿ ಯಾವ ಘಟನೆಗಳೂ ಜರುಗುವುದಿಲ್ಲ. ಜಪಾನ್ ಮಹಾನ್ ದೇಶವಾಗಿರಬಹುದು, ಆದರೆ ಅಲ್ಲಿನ ಅಂತರಂಗ ಎಲ್ಲವನ್ನೂ ಸಣ್ಣದಾಗಿ ನೋಡುವುದರಲ್ಲಿ ಕೇಂದ್ರೀಕೃತವಾಗಿದೆ. ಅಲ್ಲಿನ ಕಾರುಗಳು ಚಿಕ್ಕವು, ಮನೆಗಳು ಚಿಕ್ಕವು, ಹೋಟೆಲ್ ರೂಮುಗಳು, ಸಭಾಂಗಣಗಳು ಚಿಕ್ಕವು, ರೆಸ್ಟೋರೆಂಟ್‌ಗಳು ಚಿಕ್ಕವು, ಬಾರ್‌ಗಳು ಚಿಕ್ಕವು, ಅಂಗಡಿಗಳು ಚಿಕ್ಕವು ಮತ್ತು ಬೀದಿಗಳು ಸಹ ಚಿಕ್ಕವು. ಆದರೂ, ಎಲ್ಲವನ್ನೂ ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾಗಿದೆ, 'ಹಿಸುಕಿದ ಗಾತ್ರ'ದ ಹೊರತಾಗಿಯೂ ಜಪಾನಿಯರು ಆರಾಮದಾಯಕ ಮತ್ತು ಸಾಮರಸ್ಯದ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ಜಪಾನಿನ ಭೌಗೋಳಿಕ ಪರಿಸ್ಥಿತಿ ಮೂಲಕಾರಣ. ಮೂಲತಃ ಜಪಾನ್ ಒಂದು ದ್ವೀಪರಾಷ್ಟ್ರ. ಇದು 4 ಪ್ರಮುಖ ದ್ವೀಪಗಳನ್ನು (ಹೊಕ್ಕೈಡೋ, ಹೋನ್ಶೂ, ಶಿಕೋಕು ಮತ್ತು ಕ್ಯೂಶೂ) ಹೊಂದಿದೆ. ಆದರೆ ಜಪಾನಿನ ಒಟ್ಟು ಭೂವಿಸ್ತೀರ್ಣ 3.77 ಲಕ್ಷ ಚದರ ಕಿಲೋಮೀಟರ್ ಮಾತ್ರ. ಇದು ಭಾರತದ ಒಂದು ರಾಜ್ಯದಷ್ಟು ದೊಡ್ಡದಾಗಿರಬಹುದು. ಆದರೆ ಇದರ ಶೇ.70ರಷ್ಟು ಭೂಭಾಗವು ಪರ್ವತಗಳಿಂದ ಕೂಡಿದೆ. ಆದ್ದರಿಂದ, ಅತಿ ಕಡಿಮೆ ಅಥವಾ ಮಿತಿಯಾದ ಜಾಗದಲ್ಲಿ ಹೆಚ್ಚು ಜನರು ವಾಸಿಸುವಂತಾಗಲು ಜಪಾನ್ ತನ್ನ ವಾಸ್ತುಶಿಲ್ಪ ಮತ್ತು ಜೀವನಶೈಲಿಯನ್ನು ರೂಪಿಸಿಕೊಂಡಿದೆ. ಜಪಾನಿನ ನಗರಗಳು ಜನಸಂಖ್ಯೆಯಿಂದ ತುಂಬಿವೆ. ಉದಾಹರಣೆಗೆ, ಟೋಕಿಯೋ ವಿಶ್ವದ ಅತ್ಯಂತ ಜನನಿಬಿಡ ನಗರಗಳಲ್ಲಿ ಒಂದಾಗಿದೆ. ತೀವ್ರ ಜನಸಂಖ್ಯಾ ದಟ್ಟಣೆಯ ಕಾರಣ, ಅಲ್ಲಿನ ಮನೆಗಳು, ಅಪಾರ್ಟ್‌ಮೆಂಟ್‌ಗಳು, ಹೋಟೆಲ್‌ಗಳು, ಬೀದಿಗಳು ಚಿಕ್ಕದಾಗಿವೆ. ಇದಕ್ಕೆ ಸಾಂಸ್ಕೃತಿಕ ಕಾರಣಗಳೂ ಇವೆ. ಜಪಾನಿಯರು ಸ್ಥಳ ಮತ್ತು ಸಂಪತ್ತುಗಳ ಆರ್ಥಿಕ ಬಳಕೆಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಶತಮಾನಗಳ ಕಾಲ, ಜಪಾನಿಯರು 'ಮಿನಿಮಲಿಸಂ' (ಅತ್ಯಂತ ಕಡಿಮೆ ವಸ್ತುಗಳನ್ನು ಬಳಸುವ ಸಂಸ್ಕೃತಿ) ಅನುಸರಿಸುತ್ತಿದ್ದಾರೆ. ಈ ಮಿನಿಮಲಿಸಂ ಬೌದ್ಧ ಧರ್ಮ ಮತ್ತು ಶಿಂಟೋ ಸಂಪ್ರದಾಯಗಳಿಂದ ಪ್ರೇರಿತವಾಗಿದೆ. ಅಲ್ಲಿನ ಮನೆಗಳು ಚಿಕ್ಕದಾಗಿರುವುದಕ್ಕೆ ಈ ಕಾರಣವೂ ಇದೆ. ಅವರು ಕೇವಲ ಅಗತ್ಯ ವಸ್ತುಗಳನ್ನು ಮಾತ್ರ ಬಳಸುತ್ತಾರೆ. ಉದಾಹರಣೆಗೆ, ಫ್ಯೂಟಾನ್ ಮಲಗುವ ಹಾಸಿಗೆಗಳು (ಸಾಮಾನ್ಯ ಹಾಸಿಗೆಯ ಬದಲು ಹೊತ್ತೊಯ್ಯಬಹುದಾದ ಹಾಸಿಗೆ) ಬಳಸುತ್ತಾರೆ, ಇದನ್ನು ಹಗಲು ಹೊತ್ತಿನಲ್ಲಿ ಮಡಿಸಿ ಇಡಬಹುದು. ಹೀಗಾಗಿ, ಜಾಗವನ್ನು ಉಳಿಸಬಹುದು. ಜಪಾನಿನಲ್ಲಿ ಜಾಗ ತುಂಬಾ ದುಬಾರಿ. ಉದಾಹರಣೆಗೆ, ಟೋಕಿಯೋ ಅಥವಾ ಒಸಾಕಾದಂಥ ನಗರಗಳಲ್ಲಿ ಭೂಮಿಯ ದರ ಹೆಚ್ಚು ಆಗಿರುವ ಕಾರಣ ಮನೆಯ ಗಾತ್ರ ಕಡಿಮೆಯಾಗುತ್ತದೆ. ಜನರು ಇಲ್ಲಿನ ಖಾಸಗಿ ಮನೆಗಳನ್ನು ಕೊಳ್ಳಲು ಸಾಧ್ಯವಿಲ್ಲ, ಹೀಗಾಗಿ ಚಿಕ್ಕ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುತ್ತಾರೆ. ಜಪಾನಿನ ರಸ್ತೆಗಳು ತೀರಾ ಚಿಕ್ಕವು. ಹೀಗಾಗಿ, ಕಾರುಗಳ ಗಾತ್ರವೂ ಕೆಲವು ಪಾಶ್ಚಿಮಾತ್ಯ ದೇಶಗಳಿಗಿಂತ ಚಿಕ್ಕದು. ಜಪಾನಿಯರು ದೊಡ್ಡ ಕಾರುಗಳನ್ನು ನಿರ್ಮಿಸಿ ರಫ್ತು ಮಾಡುತ್ತಾರೆ, ಆದರೆ ಸ್ವಂತ ಬಳಕೆಗೆ ಸಣ್ಣ ಕಾರುಗಳನ್ನು ಬಯಸುತ್ತಾರೆ. ಭೂಕಂಪ ಮತ್ತು ಸುನಾಮಿ ಅಪಾಯ ಯಾವತ್ತೂ ಇದ್ದಿದ್ದೇ. ಜಪಾನ್ ಭೂಕಂಪವಲಯ ದೇಶ. ಹೀಗಾಗಿ, ಇಲ್ಲಿನ ಕಟ್ಟಡಗಳು ಭೂಕಂಪವನ್ನು ತಡೆಯುವ ರೀತಿಯಲ್ಲಿ ನಿರ್ಮಾಣಗೊಂಡಿರುತ್ತವೆ. ಹೆಚ್ಚಿನ ಎತ್ತರದ ಕಟ್ಟಡಗಳು ಕಷ್ಟವಾದ್ದರಿಂದ ಚಿಕ್ಕದಾದ, ಶಕ್ತಿಯುತ ಕಟ್ಟಡಗಳನ್ನು ಬಳಸುತ್ತಾರೆ. ತಂತ್ರಜ್ಞಾನ ಮತ್ತು ವಿನ್ಯಾಸದ ಪ್ರಭಾವವೂ ಚಿಕ್ಕ ಸಂಗತಿಗಳನ್ನು ಹೊಂದಲು ಪ್ರೇರಕವಾಗಿವೆ. ಜಪಾನ್ ಅತ್ಯಂತ ಉನ್ನತ ತಂತ್ರಜ್ಞಾನ ರಾಷ್ಟ್ರ. ಆದರೆ, ಇಲ್ಲಿ ಉತ್ತಮ ಬುದ್ಧಿಮತ್ತೆಯಿಂದ ಜಾಗವನ್ನು ಬಳಸುವ ಪರಿ ಬಹಳ ವಿಶೇಷ. ಉದಾಹರಣೆಗೆ, ಚಿಕ್ಕ ಮನೆಗಳಲ್ಲಿಯೇ ಬಹಳ ಅನುಕೂಲಕರ ರೀತಿಯ ಶೆಲ್ಫ್, ಡ್ರಾಯರ್, ಫೋಲ್ಡಬಲ್ ಪೀಠೋಪಕರಣಗಳನ್ನು ಬಳಸುತ್ತಾರೆ.

ಕೈ ಪಾಳಯದಲ್ಲಿ ಕಾಣಿಸುತ್ತಿದೆ ತೃತೀಯ ಶಕ್ತಿ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕಳೆದ ವಾರ ತಮಗೆ ತಲುಪಿದ ಸಂದೇಶದಿಂದ ದಿಲ್ಲಿಯ ಬಿಜೆಪಿ ನಾಯಕರು ಖುಷಿಯಾಗಿದ್ದಾರೆ. ಈ ಸಂದೇಶದ ಪ್ರಕಾರ ಕರ್ನಾಟಕದ ಕಾಂಗ್ರೆಸ್ ಪಾಳಯದಲ್ಲಿ ತೃತೀಯ ಶಕ್ತಿ ತಲೆ ಎತ್ತುತ್ತಿದೆ. ಅಂದ ಹಾಗೆ, ಕರ್ನಾಟಕದ ಕಾಂಗ್ರೆಸ್ ಪಾಳಯದಲ್ಲಿ ಎರಡು ಶಕ್ತಿಗಳಿರುವುದು ರಹಸ್ಯದ ವಿಷಯವೇನಲ್ಲ. ಈ ಪೈಕಿ ಒಂದು ಶಕ್ತಿ ಸಿಎಂ ಸಿದ್ದರಾಮಯ್ಯ ಅವರ ಜತೆಗಿದ್ದರೆ, ಮತ್ತೊಂದು ಶಕ್ತಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಜತೆಗಿದೆ.

ಈ ಎರಡು ಶಕ್ತಿಗಳ ನಡುವೆ ಇರುವ ಭಿನ್ನಾಭಿಪ್ರಾಯವೆಂದರೆ ಅಧಿಕಾರ ಹಂಚಿಕೆಯದು. 2023ರಲ್ಲಿ ಕಾಂಗ್ರೆಸ್ ಪಕ್ಷ ಕರ್ನಾಟಕದ ಅಧಿಕಾರ ಹಿಡಿದಾಗ ಸಿಎಂ ಹುದ್ದೆಗಾಗಿ ಸಿದ್ದು-ಡಿಕೆಶಿ ಮಧ್ಯೆ ಸಂಘರ್ಷನಡೆಯಿತು. ಈ ಸಂದರ್ಭದಲ್ಲಿ ಪರಿಸ್ಥಿತಿ ಯಾವ ಹಂತಕ್ಕೆ ತಲುಪಿತ್ತೆಂದರೆ ಕಾಂಗ್ರೆಸ್ ವರಿಷ್ಠರು ಹಲವು ದಿನಗಳ ಕಾಲ ಪಡಿಪಾಟಲು ಅನುಭವಿಸಿದ್ದರು. ಆದರೆ ಅಂತಿಮವಾಗಿ ಸಿದ್ದರಾಮಯ್ಯ ಅವರಿಗೆ ಪಟ್ಟ ದಕ್ಕಿದಾಗ ದಿಲ್ಲಿಯಿಂದ ಒಂದು ವರ್ತಮಾನ ಹರಿದುಬಂತು. ಅದರ ಪ್ರಕಾರ, ಸಿಎಂ ಹುದ್ದೆಯ ಸಮಸ್ಯೆಯನ್ನು ಬಗೆಹರಿಸಲು ಕಾಂಗ್ರೆಸ್ ವರಿಷ್ಠರು ಸಂಧಾನಸೂತ್ರ ರೂಪಿಸಿದ್ದಾರೆ. ಅದರ ಪ್ರಕಾರ ಮೊದಲ ಅವಧಿಯಲ್ಲಿ ಸಿದ್ದರಾಮಯ್ಯ ಸಿಎಂ ಆಗಲಿದ್ದಾರೆ, ಎರಡನೇ ಅವಧಿಯಲ್ಲಿ ಡಿ.ಕೆ.ಶಿವಕುಮಾರ್ ಸಿಎಂ ಆಗಲಿದ್ದಾರೆ ಎಂಬ ಮಾತು ಹರಡಿಕೊಂಡಿತು.

ಆದರೆ ಸಿದ್ದರಾಮಯ್ಯ ಸಿಎಂ ಆದ ಕೆಲವೇ ದಿನಗಳಲ್ಲಿ ಸರಕಾರದ ಹಲವು ಸಚಿವರು ಉಲ್ಟಾ ಹೊಡೆಯ ತೊಡಗಿದರು. ''ಅಧಿಕಾರ ಹಂಚಿಕೆ ಸಂಬಂಧ ಯಾವ ಒಪ್ಪಂದವೂ ಆಗಿಲ್ಲ. ಹೀಗಾಗಿ ಐದು ವರ್ಷಗಳ ಕಾಲ ಸಿದ್ದರಾಮಯ್ಯ ಅವರೇ ಸಿಎಂ ಆಗಿ ಮುಂದುವರಿಯ ಲಿದ್ದಾರೆ'' ಅಂತ ಇವರು ಹೇಳತೊಡಗಿದಾಗ ಡಿಕೆಶಿ ಮತ್ತವರ ಗ್ಯಾಂಗು ಉರಿದುಕೊಂಡಿದ್ದು ನಿಜ. ಮುಂದೆ ಇದೇ ಕಾರಣಕ್ಕಾಗಿ ಪಕ್ಷದ ವರಿಷ್ಠರ ಮೊರೆಹೋದ ಡಿಕೆಶಿ, ಅಧಿಕಾರ ಹಂಚಿಕೆ ಒಪ್ಪಂದ ಆಗಿಲ್ಲ ಎನ್ನುತ್ತಿದ್ದ ಸಚಿವರ ಬಾಯಿಗೆ ಬೀಗ ಹಾಕಿಸುವ ಕೆಲಸ ಮಾಡತೊಡಗಿದರು. ಆದರೆ ಅದೇನೇ ಮಾಡಿದರೂ ಅಧಿಕಾರ ಹಂಚಿಕೆ ಒಪ್ಪಂದವನ್ನು ಒಪ್ಪಲು ಬಹುತೇಕರು ಸಿದ್ಧರಿಲ್ಲ.

ಇಂಥ ಪರಿಸ್ಥಿತಿಯಲ್ಲಿ ತಲೆ ಎತ್ತಿದ್ದೇ ಸಿದ್ದರಾಮಯ್ಯ ಗ್ಯಾಂಗು. ಈ ಗ್ಯಾಂಗಿನ ಮುಂದೆ ಸೆಟ್ಲ್ ಆದವರೇ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಮಾಜಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ. ಈ 'ಫೋರ್‌ಮ್ಯಾನ್ ಆರ್ಮಿ'ಯ ಪೈಕಿ ಕೆ.ಎನ್. ರಾಜಣ್ಣ ಅವರು ಬೀಡುಬೀಸಾಗಿ ಮಾತನಾಡತೊಡಗಿದರೆ, ಸತೀಶ್ ಜಾರಕಿಹೊಳಿ ಮಾತ್ರ ಬಿಜೆಪಿ ನಾಯಕರಾದ ಗೋವಾದ ಪ್ರಮೋದ್ ಸಾವಂತ್, ಮಹಾರಾಷ್ಟ್ರದ ದೇವೇಂದ್ರ ಫಡ್ನವೀಸ್ ಜತೆ ಸಂಪರ್ಕ ಸಾಧಿಸಿ ಆಟ ಶುರುವಿಟ್ಟುಕೊಂಡರು. ಅರ್ಥಾತ್, ಸಿದ್ದರಾಮಯ್ಯ ಅವರು ಸಿಎಂ ಹುದ್ದೆಯಿಂದ ಕೆಳಗಿಳಿದು ಡಿ.ಕೆ.ಶಿವಕುಮಾರ್ ಸಿಎಂ ಆಗುವ ಸನ್ನಿವೇಶ ಸೃಷ್ಟಿಯಾದರೆ ಕೈ ಶಾಸಕರ ದೊಡ್ಡ ಗುಂಪಿನೊಂದಿಗೆ ಬಿಜೆಪಿ ಕಡೆ ಬರುತ್ತೇವೆ ಎಂಬ ಮೆಸೇಜು ರವಾನಿಸತೊಡಗಿದರು.

ಮೊನ್ನೆ ಮೊನ್ನೆಯಷ್ಟೇ ದಿಲ್ಲಿಗೂ ಹೋಗಿದ್ದ ಸತೀಶ್ ಜಾರಕಿಹೊಳಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೇರ ಸಂದೇಶವನ್ನೂ ರವಾನಿಸಿ ಬಂದರು. ಅದು- ''ಯಾವ ಕಾರಣಕ್ಕೂ ಸಿದ್ದರಾಮಯ್ಯ ಕೆಳಗಿಳಿಯಬಾರದು. ಹಾಗೊಂದು ವೇಳೆ ಇಳಿಯುವುದೇ ಆದರೆ ಅವರ ಜಾಗಕ್ಕೆ ನೀವು ಬರಬೇಕೇ ವಿನಾ ಡಿ.ಕೆ.ಶಿವಕುಮಾರ್ ಅಲ್ಲ. ಒಂದು ವೇಳೆ ಅವರೇ ಬರುವುದಾದರೆ ನಾವು ಅರವತ್ತರಷ್ಟು ಸಚಿವರು, ಶಾಸಕರು ಪಕ್ಷ ತೊರೆಯಲು ಸಿದ್ಧ'' ಎಂಬುದಾಗಿತ್ತು.

ಕುತೂಹಲದ ಸಂಗತಿ ಎಂದರೆ ಖರ್ಗೆಯವರ ಕಿವಿಗೆ ಈ ಮೆಸೇಜು ತಲುಪಿದ ಕೆಲವೇ ದಿನಗಳ ನಂತರ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕೂಡಾ ಖರ್ಗೆಯವರಿಗೆ ಒಂದು ಸಂದೇಶ ರವಾನಿಸಿದ್ದಾರೆ. ಈ ಸಂದೇಶದ ಪ್ರಕಾರ, ''ರಾಜ್ಯ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಮತ್ತು ಡಿಕೆಶಿ ಬಣಗಳು ಹೇಗೆ ತಲೆ ಎತ್ತಿ ನಿಂತಿವೆಯೋ? ಅದೇ ರೀತಿ ಮೂರನೇ ಬಣವೊಂದು ತಲೆ ಎತ್ತಿ ನಿಲ್ಲಲು ಸಿದ್ಧವಾಗಿದೆ ಮತ್ತು ಇದರಲ್ಲಿ ಸಿದ್ದು-ಡಿಕೆಶಿ ಬಣಗಳಿಗೆ ಸೇರದ ಮೂಲ ಕಾಂಗ್ರೆಸ್ಸಿಗರಿದ್ದಾರೆ. ಇವರು ಕೂಡಾ ಸಿದ್ದರಾಮಯ್ಯ ಜಾಗಕ್ಕೆ ಡಿಕೆಶಿ ಬರುವುದನ್ನು ವಿರೋಧಿಸುತ್ತಾರೆ ಮತ್ತು ಅನಿವಾರ್ಯ ಸಂದರ್ಭದಲ್ಲಿ ಖರ್ಗೆಯವರನ್ನು ಹೊರತುಪಡಿಸಿ ಬೇರೊಬ್ಬರನ್ನು ಸಿಎಂ ಜಾಗದಲ್ಲಿ ಅವರು ನೋಡಬಯಸುವುದಿಲ್ಲ. ಹಾಗೇನಾದರೂ ಡಿಕೆಶಿ ಮುಂಚೂಣಿಗೆ ಬರುವುದೇ ಆದರೆ ಮೂಲ ಕಾಂಗ್ರೆಸ್ಸಿಗರೇ ಹೆಚ್ಚಿರುವ ಈ ಮೂರನೇ ಶಕ್ತಿ ಕೈ ಪಾಳಯ ತೊರೆಯಲು ಸಿದ್ಧವಾಗಿದೆ''. ಹೀಗೆ ಯಾವಾಗ ಡಾ.ಜಿ.ಪರಮೇಶ್ವರ್ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮೆಸೇಜು ಮುಟ್ಟಿಸಿದರೋ, ಆಗ ಕಾಂಗ್ರೆಸ್ ಹೈಕಮಾಂಡ್ ತಲ್ಲಣಗೊಂಡಿದೆ. ಕಾರಣ? ಈ ಮುಂಚೆ ಡಿಕೆಶಿ ಸಿಎಂ ಆಗುವುದನ್ನು ಸಿದ್ದರಾಮಯ್ಯ ಹಿಂದಿರುವ ಶಕ್ತಿ ವಿರೋಧಿಸುತ್ತಿದೆ ಎಂಬ ಭಾವನೆ ಇತ್ತು. ಆದರೆ ಈಗ ಸಿದ್ದರಾಮಯ್ಯ-ಡಿಕೆಶಿ ಬಣದ ಜತೆ ಮೂರನೇ ಬಣ ತಲೆ ಎತ್ತುತ್ತಿದೆ ಎಂದರೆ ಇದು ಮುಂದಿನ ದಿನಗಳಲ್ಲಿ ಸರಕಾರ ಅಲುಗಾಡುವ ಮುನ್ಸೂಚನೆ ಎಂಬುದು ಹೈಕಮಾಂಡ್ ವರಿಷ್ಠರ ಚಿಂತೆ.

ಅಂದ ಹಾಗೆ, ಕರ್ನಾಟಕದಲ್ಲಿ ನೆಲೆಯಾಗಿರುವ ಸರಕಾರವೇ ತಮಗಿರುವ ಮೂಲಶಕ್ತಿ ಎಂಬುದು ಹೈಕಮಾಂಡ್ ವರಿಷ್ಠರಿಗೆ ಗೊತ್ತು. ಈ ಕಾರಣಕ್ಕಾಗಿಯೇ ದೇಶದ ವಿವಿಧ ರಾಜ್ಯಗಳಲ್ಲಿ ಎದುರಾಗುವ ವಿಧಾನಸಭೆ, ಲೋಕಸಭೆ ಚುನಾವಣೆಗಳನ್ನು ಎದುರಿಸುವ ಶಕ್ತಿ ಅದಕ್ಕೆ ಉಳಿದುಕೊಂಡಿದೆ. ಹಾಗೊಂದು ವೇಳೆ ಇಂಥ ಸರಕಾರ ಉರುಳಿ ಬಿದ್ದರೆ ಮುಂದಿನ ದಿನಗಳು ಕಾಂಗ್ರೆಸ್ ಪಾಲಿಗೆ ಗಂಡಾಂತರದ ದಿನಗಳಾಗಲಿವೆ ಎಂಬುದು ದಿಲ್ಲಿಯ ಕಾಂಗ್ರೆಸ್ ನಾಯಕರ ಚಿಂತೆ. ಹೀಗೆ ಕಾಂಗ್ರೆಸ್ ನಾಯಕರು ಚಿಂತೆಯಲ್ಲಿ ಬಿದ್ದಿದ್ದಾರಲ್ಲ? ಈ ಚಿಂತೆಯ ಮೆಸೇಜು ಬಿಜೆಪಿ ವರಿಷ್ಠರಿಗೆ ತಲುಪುತ್ತಿದೆಯಲ್ಲದೆ ಅವರ ಹರ್ಷಕ್ಕೂ ಕಾರಣವಾಗಿದೆ.

ಡಿಕೆಶಿಗೆ ಫುಲ್ಲು ವಿಶ್ವಾಸವಿದೆ: ಈ ಮಧ್ಯೆ ಕಾಂಗ್ರೆಸ್ ಪಾಳಯದಲ್ಲಿ ತಮ್ಮ ವಿರುದ್ಧ ನಡೆಯುತ್ತಿರುವ ಚಟುವಟಿಕೆಗಳೇನೇ ಇರಲಿ, ಡಿಸಿಎಂ ಡಿಕೆಶಿ ಮಾತ್ರ ಫುಲ್ಲು ವಿಶ್ವಾಸದಲ್ಲಿದ್ದಾರೆ. ಅರ್ಥಾತ್, ನವೆಂಬರ್ ಹೊತ್ತಿಗೆ ತಾವು ಕರ್ನಾಟಕದ ಮುಖ್ಯಮಂತ್ರಿಯಾಗುವುದು ಗ್ಯಾರಂಟಿ ಎಂಬುದು ಡಿಕೆಶಿ ವಿಶ್ವಾಸ. ಇವತ್ತಿನ ಸ್ಥಿತಿಯಲ್ಲಿ ಸಚಿವರಾದ ಡಾ.ಜಿ.ಪರಮೇಶ್ವರ್, ಎಚ್.ಸಿ.ಮಹದೇವಪ್ಪ, ಕೆ.ಎನ್. ರಾಜಣ್ಣ ತಮ್ಮ ವಿರುದ್ಧ ಎಷ್ಟೇ ಭುಸುಗುಡಲಿ, ಆದರೆ ಅಂತಿಮವಾಗಿ ಅವರು ಕಾಂಗ್ರೆಸ್ ತೊರೆಯುವ ಲೆವೆಲ್ಲಿಗೆ ಹೋಗುವುದಿಲ್ಲ. ಆದರೆ ಇದ್ದುದರಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತ್ರ ವೈಯಕ್ತಿಕ ನೆಲೆಯಲ್ಲಿ ತಮ್ಮ ವಿರುದ್ಧ ನಿಂತಿದ್ದು, ಪಕ್ಷದ ಮೂವತ್ತು ಶಾಸಕರು ಅವರ ಜತೆಗಿದ್ದಾರೆ. ನಾಳೆ ತಾವು ಸಿಎಂ ಆಗುವುದೇ ಆದರೆ ಈ ಶಾಸಕರ ಜತೆ ಜಾರಕಿಹೊಳಿ ಹೊರಗೆ ಹೋಗಬಹುದು. ಆದರೆ ಅವರು ಹೊರಹೋಗುವ ಕಾಲಕ್ಕೆ ಜೆಡಿಎಸ್‌ನ ಹದಿಮೂರು ಶಾಸಕರು ತಾವು ಸಿಎಂ ಆಗಲು ಬೆಂಬಲ ನೀಡುತ್ತಾರೆ. ಹಾಗಂತ ತಾವೇನೂ ಜೆಡಿಎಸ್ ಅನ್ನು ಒಡೆಯುವುದಿಲ್ಲ. ಬದಲಿಗೆ ಜೆಡಿಎಸ್‌ನ ಈ ಶಾಸಕರು ಪ್ರತ್ಯೇಕ ಗುಂಪಾಗಿ ಉಳಿದುಕೊಳ್ಳುತ್ತಾರೆ. ಇವರಲ್ಲದೆ ಬಿಜೆಪಿಯ ಹಲ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಗೆ ಬರುತ್ತಾರೆ. ಹೀಗಾಗಿ ತಾವು ಸಿಎಂ ಆಗಲು ಯಾವ ಅಡ್ಡಿಯೂ ಇಲ್ಲ ಮತ್ತು ಹೈಕಮಾಂಡ್ ಹೇಳಿದರೆ ಅಧಿಕಾರ ಬಿಟ್ಟುಕೊಡಲು ಸಿದ್ದರಾಮಯ್ಯ ಅವರೂ ಹಿಂದೆ ಮುಂದೆ ನೋಡುವುದಿಲ್ಲ ಎಂಬುದು ಡಿಕೆಶಿ ವಿಶ್ವಾಸ.

ಈ ಮಧ್ಯೆ ರೇಸ್‌ಕೋರ್ಸ್ ರಸ್ತೆಯಲ್ಲಿ ಪಕ್ಷದ ಬೃಹತ್ ಕಚೇರಿ ಕಟ್ಟಲು ಸಜ್ಜಾಗಿರುವ ಡಿಕೆಶಿ, ಈ ಕಾರ್ಯ ಮುಗಿಸುವ ದೃಷ್ಟಿಯಿಂದ ತಾವೇ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಬೇಕು ಅಂತ ವರಿಷ್ಠರೆದುರು ಇಂಡೆಂಟ್ ಇಟ್ಟಿದ್ದಾರಂತೆ.

ಬಿಜೆಪಿ ಪಾಳಯದ ಲೆಕ್ಕಾಚಾರಗಳೇನು?: ಈ ಮಧ್ಯೆ ರಾಜ್ಯ ಬಿಜೆಪಿಯ ಅಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಮುಂದುವರಿಯುವುದು ಬಹುತೇಕ ನಿಶ್ಚಿತವಾಗಿದೆಯಾದರೂ, ಅವರನ್ನು ವಿರೋಧಿಸುತ್ತಿರುವ ಯತ್ನಾಳ್ ಗ್ಯಾಂಗಿನ ನಂಬಿಕೆ ಮಾತ್ರ ಉಳಿದುಕೊಂಡೇ ಇದೆ. ಅಂದರೆ? ರಾಜ್ಯ ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ಬದಲು ಸದ್ಯದಲ್ಲೇ ಕರ್ನಾಟಕಕ್ಕೆ ಬರಲಿರುವ ಶಿವರಾಜ್ ಸಿಂಗ್ ಚೌಹಾಣ್ ಹೊಸ ಅಧ್ಯಕ್ಷರ ನೇಮಕಾತಿಯನ್ನು ಘೋಷಿಸಿ ಹೋಗಲಿದ್ದಾರೆ ಎಂಬುದು ಯತ್ನಾಳ್ ಬಣದ ನಂಬಿಕೆ. ಈ ಬಣದ ಪ್ರಕಾರ, ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಿಜೆಪಿ ವರಿಷ್ಠರು ಯತ್ನಾಳ್‌ಗೆ ಶೋಕಾಸ್ ನೋಟಿಸ್ ಜಾರಿ ಮಾಡಿರಬಹುದು. ಆದರೆ ನೋಟಿಸ್ ಜಾರಿ ಮಾಡಿ ಇಷ್ಟು ದಿನಗಳಾದರೂ ಕ್ರಮ ಕೈಗೊಂಡಿಲ್ಲ ಎಂದರೆ ಯತ್ನಾಳ್ ಜತೆ ದೊಡ್ಡ ಕೈಗಳಿವೆ ಅಂತಲೇ ಅರ್ಥ.

ಹೀಗಾಗಿ ಈಗ ಕರ್ನಾಟಕಕ್ಕೆ ಬರಲಿರುವ ಶಿವರಾಜ್ ಸಿಂಗ್ ಚೌಹಾಣ್ ಅವರು ವಿಜಯೇಂದ್ರ ಪದಚ್ಯುತಿಯ ಮೆಸೇಜು ತಂದೇ ತರುತ್ತಾರೆ ಎಂಬುದು ಯತ್ನಾಳ್ ಗ್ಯಾಂಗಿನ ನಂಬಿಕೆ. ಆದರೆ ಇಂಥ ನಂಬಿಕೆಯ ಮಧ್ಯೆಯೇ ವಿಜಯೇಂದ್ರ ಬಣ ಹ್ಯಾಪಿ-ಹ್ಯಾಪಿಯಾಗಿದೆ. ಅದರ ಪ್ರಕಾರ, 13 ಜಿಲ್ಲೆಗಳ ಬಿಜೆಪಿ ಪಕ್ಷಾಧ್ಯಕ್ಷರ ಚುನಾವಣೆ ಈ ವಾರ ಮುಗಿಯಲಿದ್ದು ಇದಾದ ನಂತರ ಶಿವರಾಜ್ ಸಿಂಗ್ ಚೌಹಾಣ್ ಕರ್ನಾಟಕಕ್ಕೆ ಬರಲಿದ್ದಾರೆ. ಹೀಗೆ ಬಂದವರು ರಾಜ್ಯದ ಸಂಸದರು, ಶಾಸಕರ ಜತೆ ಚರ್ಚಿಸಿ ಅಭಿಪ್ರಾಯ ಪಡೆಯಲಿದ್ದಾರಲ್ಲದೆ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ಬೇಡ ಎಂಬ ತೀರ್ಮಾನಕ್ಕೆ ಬಂದು ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಹುದ್ದೆಗೆ ನೇಮಿಸಿ ಹೋಗಲಿದ್ದಾರೆ.

ಒಲ್ಲೆ ಅಂದ್ರಾ ಜಾರಕಿಹೊಳಿ?: ಇನ್ನು, ತಮ್ಮ ವಿರುದ್ಧ ತಿರುಗಿಬಿದ್ದಿರುವ ಬಸನಗೌಡ ಪಾಟೀಲ್ ಯತ್ನಾಳ್ ಗ್ಯಾಂಗನ್ನು ಇಬ್ಭಾಗ ಮಾಡಲು ವಿಜಯೇಂದ್ರ ಪ್ರಯತ್ನಿಸುತ್ತಿದ್ದಾರೆಯೇ? ಹಾಗೆಂಬ ಮಾತು ಯತ್ನಾಳ್ ಗ್ಯಾಂಗಿನಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ಬಿಜೆಪಿ ಮೂಲಗಳ ಪ್ರಕಾರ, ತಮ್ಮ ವಿರುದ್ಧ ತಿರುಗಿಬಿದ್ದಿರುವ ಯತ್ನಾಳ್ ಅವರನ್ನು ಏಕಾಂಗಿಯನ್ನಾಗಿಸಲು ವಿಜಯೇಂದ್ರ ಹೊರಟಿದ್ದಾರೆ ಮತ್ತು ಇದೇ ಕಾರಣಕ್ಕಾಗಿ ಈ ಬಣದಲ್ಲಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರನ್ನು ಸಂಪರ್ಕಿಸಿ ಮನ ಒಲಿಸಲು ಯತ್ನಿಸಿದ್ದಾರೆ. ''ಎಷ್ಟೇ ಆದರೂ ಯತ್ನಾಳ್ ಅವರ ವಿಷಯದಲ್ಲಿ ಅಮಿತ್ ಶಾ ಮತ್ತು ನಡ್ಡಾ ಕೋಪಗೊಂಡಿದ್ದಾರೆ. ಇದಕ್ಕೆ ಅವರ ಬೀಡುಬೀಸು ಹೇಳಿಕೆಗಳೇ ಕಾರಣ. ಈ ಹಿಂದೆ ರಾಜ್ಯ ಬಿಜೆಪಿಯ ಉಸ್ತುವಾರಿಯಾಗಿದ್ದ ಅರುಣ್ ಸಿಂಗ್ ಅವರನ್ನು ಯತ್ನಾಳ್ ಟೀಕಿಸಿರುವುದು ಅವರಿಗೆ ಇಷ್ಟವಾಗಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಯತ್ನಾಳ್ ಅವರಿಗೆ ಭವಿಷ್ಯವಿಲ್ಲ. ಹೀಗಿರುವಾಗ ನೀವಾದರೂ ಅವರ ಜತೆ ಏಕೆ ಇರುತ್ತೀರಿ? ಇದರ ಬದಲು ನಮ್ಮ ಜತೆ ಬಂದುಬಿಡಿ'' ಅಂತ ಜಾರಕಿಹೊಳಿ ಅವರಿಗೆ ವಿಜಯೇಂದ್ರ ಹೇಳಿದ್ದಾರಂತೆ.

ಹೀಗೆ ಹೇಳುವುದಲ್ಲದೆ ತಮ್ಮ ತಂದೆ ಯಡಿಯೂರಪ್ಪ ಅವರ ಬಳಿ ಮಾತನಾಡಿಸಿದ್ದಾರೆ. ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರು, ''ರಮೇಶ್ ನೀವು ನಮ್ಮ ಜತೆಗಿರಿ. ನಾಳೆ ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ನಿಮಗೆ ಟಾಪ್ ಪೋಸ್ಟು ಸಿಗುವಂತೆ ನೋಡಿಕೊಳ್ಳುತ್ತೇವೆ'' ಎಂದಿದ್ದಾರೆ. ಆದರೆ ಅವರ ಮಾತಿಗೆ ಬಗ್ಗದ ರಮೇಶ್ ಜಾರಕಿಹೊಳಿ, ''ನನಗ್ಯಾವ ಪೋಸ್ಟೂ ಬೇಡ. ನಾನು ಬಸನಗೌಡ ಪಾಟೀಲ್ ಯತ್ನಾಳರ ಜತೆಗೇ ಇರುತ್ತೇನೆ'' ಎಂದರಂತೆ. ಯಾವಾಗ ಈ ಬೆಳವಣಿಗೆ ನಡೆಯಿತೋ, ಯತ್ನಾಳ್ ಗ್ಯಾಂಗಿನಲ್ಲಿ ಅದರದ್ದೇ ಚರ್ಚೆ ನಡೆಯುತ್ತಿದೆ.

ದೆಹಲಿ ಗದ್ದುಗೆ ಎಂಬ ಗುಪ್ತಗಾಮಿನಿ!

ವಿಶ್ಲೇಷಣೆ

ರವೀ ಸಜಂಗದ್ದೆ

vveditoped@gmail.com

ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬಿದ್ದ ಹತ್ತು ದಿನಗಳ ತರುವಾಯ, ಬಿಜೆಪಿಯ ವರಿಷ್ಠರು ಅಂತೂ-ಇಂತೂ, ಅಳೆದು-ಸುರಿದು ಅಲ್ಲಿನ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಸಂಪುಟ ಸಚಿವರ ಹೆಸರುಗಳನ್ನು ಅಖೈರುಗೊಳಿಸಿ, ಕೊನೆಗೂ ಗಜಪ್ರಸವವನ್ನು ಮಾಡಿಸಿದ್ದಾರೆ. ಸಿಎಂ ಗಾದಿಯ ಮೇಲೆ ಕಣ್ಣಿಟ್ಟಿದ್ದ ಹಲವಾರು ಘಟಾನುಘಟಿ ಮುಖಂಡರನ್ನು, ಶಾಸಕರನ್ನು ಬದಿಗೆ ಸರಿಸಿ, ಪ್ರಥಮ ಬಾರಿಗೆ ಗೆದ್ದ ರೇಖಾ ಗುಪ್ತ ಅವರನ್ನು ದೆಹಲಿಯ ನೂತನ ಮುಖ್ಯಮಂತ್ರಿಯಾಗಿ ನಿಯೋಜಿಸಲಾಗಿದೆ.

ಬಿಜೆಪಿಯವರು ಮರುದಿನ ರಾಮಲೀಲಾ ಮೈದಾನದಲ್ಲಿ ಭರ್ಜರಿ ಪದಗ್ರಹಣ ಸಮಾರಂಭ ನೆರವೇರಿಸಿ, ತಮ್ಮ ಶಕ್ತಿಯನ್ನು ಸೊಗಸಾಗಿ ಪ್ರದರ್ಶಿಸಿದರು. ಒಂದು ಕಾಲಕ್ಕೆ ಇದೇ ಮೈದಾನದಲ್ಲಿ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಅರವಿಂದ ಕೇಜ್ರಿವಾಲರು ದೆಹಲಿ ಗದ್ದುಗೆ ಏರಿದ್ದನ್ನು ಇಲ್ಲಿ ಸ್ಮರಿಸಬಹುದು. ಒಟ್ಟಿನಲ್ಲಿ, ದೆಹಲಿಯ ಗದ್ದುಗೆಯೇರಲು ಹಲವು ತಿಂಗಳಿಂದ ನಡೆಯುತ್ತಿದ್ದ ಕಸರತ್ತಿಗೆ, ಚುನಾವಣಾಪೂರ್ವ ಕೆಸರೆರಚಾಟಕ್ಕೆ ತಾರ್ಕಿಕ ಅಂತ್ಯ ಸಿಕ್ಕಿದೆ. ಸದ್ಯಕ್ಕೆ ದೆಹಲಿ ಪರಿಸರದ ಗಾಳಿಯ ಗುಣಮಟ್ಟ, ವಾತಾವರಣ ಕಲುಷಿತಗೊಂಡಿದ್ದರೂ, ಮುಂದಿನ ಕೆಲ ವರ್ಷಗಳ ಕಾಲ ಬಿಜೆಪಿಯ 'ಡಬಲ್ ಎಂಜಿನ್' ಸರಕಾರದ್ದೇ ಇಲ್ಲಿ 'ಹವಾ'..!

'ಧನಸಮೃದ್ಧ' ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ದೆಹಲಿಗೆ ಅಗ್ರಸ್ಥಾನವಿದೆ. ಅಂದರೆ, ಅಲ್ಲಿನ ಸರಕಾರದ ವರಮಾನ ಅಧಿಕವಿದ್ದು, ನಗರೋನ್ನತಿಯ ಯೋಜನೆಗಳಿಗೆ ಮಾತ್ರ ಅದನ್ನು ಖರ್ಚುಮಾಡುವ ಕಾರಣ, ಇತರ ವಿಭಾಗದ ಖರ್ಚುಗಳು ಕಡಿಮೆ. ಕೃಷಿ, ಗ್ರಾಮೀಣಾಭಿವೃದ್ಧಿ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಹೀಗೆ ಯಾವುದೇ ಹೆಚ್ಚುವರಿ ಯೋಜನೆಗೆ ಹಣವನ್ನು ವ್ಯಯಿಸುವ ಅಗತ್ಯ ಅಲ್ಲಿಲ್ಲ, ಯಾಕೆಂದರೆ ದೆಹಲಿ ಪರಿಧಿಯಲ್ಲಿ ಹಳ್ಳಿ ಮತ್ತು ಕೃಷಿ 'ಇಲ್ಲವೇ ಇಲ್ಲ' ಎನ್ನುವಷ್ಟು ಕಡಿಮೆ. ಸಾಮಾನ್ಯವಾಗಿ, ನಗರ ಪ್ರದೇಶದ ವಿವಿಧ ಮೂಲಗಳಿಂದ ಬರುವ ಆದಾಯ ಅತ್ಯಧಿಕವಾಗಿದ್ದು, ಹಳ್ಳಿಗಳಿಗೆ ಹೋಲಿಸಿದರೆ ನಗರ ಪ್ರದೇಶದ ವಿವಿಧ ಕಾಮಗಾರಿಗಳಿಗೆ ಸರಕಾರವು ಸುರಿಯಬೇಕಾಗುವ ಹಣದ ಪ್ರಮಾಣ ಒಂದಷ್ಟು ಕಡಿಮೆಯಿದೆ. ಇಂಥ ರಾಜ್ಯದ ಅಧಿಕಾರ ಎಂದೆಂದಿಗೂ ಹೆಚ್ಚು ಆಕರ್ಷಕ!

ಸಂಪನ್ಮೂಲದ ಗಾತ್ರದ ಆಧಾರದಲ್ಲಿ ದೆಹಲಿಯ ಆರ್ಥಿಕತೆಯು ದೇಶದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿದೆ. ಕಳೆದ ದಶಕದಿಂದ, ವರ್ಷದಿಂದ ವರ್ಷಕ್ಕೆ ಅಲ್ಲಿನ ಸರಕಾರದ ಆದಾಯವು ಸರಾಸರಿ ಶೇ.9ಕ್ಕಿಂತಲೂ ಹೆಚ್ಚುತ್ತಾ ಉತ್ತಮ ಏರಿಕೆ ಕಂಡಿದೆ. ಹಾಗಿದ್ದೂ ಕಳೆದ ವರ್ಷದ ಬಜೆಟ್ ಪ್ರಕಾರ, ಅಲ್ಲಿನ ಆಯವ್ಯಯವನ್ನು ಪರಿಶೀಲಿಸಿದಾಗ, ವ್ಯಯವು ಅಂದಾಜು 78,808 ಕೋಟಿ ಹಾಗೂ ವರಮಾನವು ಅಂದಾಜು 64,142 ಕೋಟಿ ರುಪಾಯಿಯಷ್ಟಿದೆ. ಅಂದರೆ, ಶೇ.18.6ರಷ್ಟು ವಿತ್ತೀಯ ಕೊರತೆಯ ಬಜೆಟ್ ಅನ್ನು ಮಂಡಿಸಲಾಗಿದೆ. ಕರ್ನಾಟಕದಲ್ಲಿ ಇದೇ ವಿತ್ತೀಯ ಕೊರತೆಯ ಪ್ರಮಾಣವು ಸುಮಾರು ಶೇ.24ರಷ್ಟು. ನಗರ ಪ್ರದೇಶವಾದುದರಿಂದ ಹೆಚ್ಚಿನ ವರಮಾನ ಬರುತ್ತಿರುವ ದೆಹಲಿಯ ಆರ್ಥಿಕ ವ್ಯವಸ್ಥೆಯನ್ನು ಹಿಂದಿನ ಸರಕಾರ ಸರಿಯಾಗಿ ನಿರ್ವಹಿಸಲು ವಿಫಲವಾದದ್ದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಅಲ್ಲದೆ ವ್ಯಾಪಕ ಅವ್ಯವಹಾರ ಮತ್ತು ಭ್ರಷ್ಟಾಚಾರದ ಆರೋಪಗಳೂ ಈ ಹಿಂದಿನ ಸರಕಾರದ ಮೇಲಿದ್ದವು. ಜೈಲಿನಲ್ಲಿದ್ದುಕೊಂಡು ಕೆಲಕಾಲ ಆಡಳಿತ ನಡೆಸಿದ ಅಪಖ್ಯಾತಿ ಕೇಜ್ರಿವಾಲರಿಗಿತ್ತು.

ಇವೆಲ್ಲವನ್ನೂ ಗಮನಿಸುತ್ತಿದ್ದ ದೆಹಲಿಯ ಜನರು ಈ ಬಾರಿ ಬಿಜೆಪಿಗೆ ಮಣೆ ಹಾಕಿದ್ದಾರೆ. ವಿಶೇಷವೆಂದರೆ, ಬಿಜೆಪಿ ಮತ್ತು ಆಮ್ ಆದ್ಮಿ ಗಳಿಸಿದ ಒಟ್ಟು ಮತಗಳ ನಡುವಿನ ಅಂತರ ಕೇವಲ 1,07,001ರಷ್ಟಿದ್ದರೆ, ಸುಮಾರು 11 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರವು ಕೇವಲ 344ರಿಂದ 3600 ಮತಗಳಷ್ಟರವರೆಗಿತ್ತು. ಅಲ್ಲೆಲ್ಲಾ ಕಾಂಗ್ರೆಸ್ ಪಕ್ಷವು ಒಂದಷ್ಟು ಮತಗಳನ್ನು ಗಳಿಸಿ ಆಮ್ ಆದ್ಮಿಯ ಸೋಲಿನಲ್ಲಿ ನೇರ ಭೂಮಿಕೆ ನಿಭಾಯಿಸಿದೆ. ಬಿಜೆಪಿಗೆ ಈ ಎಲ್ಲಾ ಅಂಶಗಳು ವರದಾನವಾಗಿ ಬರೋಬ್ಬರಿ 26 ವರ್ಷಗಳ ನಂತರ ದೆಹಲಿಯ ಗದ್ದುಗೆಯನ್ನು ಮರಳಿ ಪಡೆದಿದೆ.

ಬಿಜೆಪಿಯು ಗೆದ್ದು ಸಂಭ್ರಮಿಸುತ್ತಿರುವುದೇನೋ ಹೌದು, ಆದರೆ ನೂತನ ಸರಕಾರದ ಮುಂದಿನ ಹಾದಿಯು ಮುಳ್ಳಿನದು, ನಡಿಗೆಯು ಹಗ್ಗದ ಮೇಲಿನದು ಎಂಬುದನ್ನು ಮರೆಯಲಾಗದು. ಒಂದಷ್ಟು ದುರಾಡಳಿತದಿಂದ ರೋಸಿಹೋಗಿರುವ ವ್ಯವಸ್ಥೆಯನ್ನು ಹಳಿಗೆ ತರಲು ಮತ್ತು ಆರ್ಥಿಕ ಏರುಪೇರನ್ನು ಹತೋಟಿಗೆ ತಂದು ಒಂದಷ್ಟು ಶಿಸ್ತು ಬೆಳೆಸಿಕೊಳ್ಳಲು ಹೆಚ್ಚಿನ ಪ್ರಯತ್ನ ಬೇಕೇ ಬೇಕು. ಇವೆಲ್ಲದರ ಜತೆಗೆ, ಚುನಾವಣೆಯ ವೇಳೆ ಗ್ಯಾರಂಟಿ ಹೆಸರಿನಲ್ಲಿ ಪ್ರಣಾಳಿಕೆಯಲ್ಲಿ ಘೋಷಿಸಿದ ಆಶ್ವಾಸನೆಗಳನ್ನೂ ಒಂದೊಂದಾಗಿ ನೆರವೇರಿಸಬೇಕಿದೆ. ಗ್ಯಾರಂಟಿ ಹೆಸರಿನಲ್ಲಿ

ಉಚಿತವಾಗಿ ದುಡ್ಡು ಹಂಚುವ/ಯೋಜನೆ ಜಾರಿಗೊಳಿಸುವ ವಿಷಯದಲ್ಲಿ ಎಲ್ಲ ಪಕ್ಷಗಳೂ ಒಂದೇ! ಇಂಥ ಯೋಜನೆಗಳ ಅನುಷ್ಠಾನಕ್ಕೆ ಒಂದಷ್ಟು ದೊಡ್ಡ ಮೊತ್ತವನ್ನು ಮೀಸಲಿಟ್ಟು ಸರಕಾರವನ್ನು ನಡೆಸಬೇಕು.

ಪ್ರಸ್ತುತ ದೆಹಲಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಬಿಜೆಪಿ ಸರಕಾರದೆದುರು ಇರುವ ಸವಾಲುಗಳು ಬೆಟ್ಟದಷ್ಟು, ಜನರು ಇಟ್ಟುಕೊಂಡಿರುವ ಸವಾಲುಗಳು ಆಗಸದಷ್ಟು. ಎಲ್ಲದರಲ್ಲೂ ಸಮತೋಲನ ಕಾಪಾಡಿಕೊಂಡು ಜನಸೇವೆಗೆ ಟೊಂಕ ಕಟ್ಟಬೇಕಾದ ಸಂದರ್ಭವಿದು. ಸದ್ಯದ ಸವಾಲುಗಳನ್ನು ಅವಲೋಕಿಸಿದರೆ ಮೊದಲು ಕಾಣುವುದು ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಜಾರಿಗೊಳಿಸುವಿಕೆ. ಈ ಪೈಕಿ ಮುಂಚೂಣಿಯಲ್ಲಿರುವುದು ಅರ್ಹ ಮಹಿಳಾ ಫಲಾನುಭವಿಗಳಿಗೆ ಮಾಸಿಕ 2,500 ರುಪಾಯಿ ನೀಡುವ ಯೋಜನೆ. ಇದು ಅಂತಾರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8ರಂದು ಉದ್ಘಾಟನೆಯಾಗುವ ನಿರೀಕ್ಷೆಯಿದೆ. ಮಿಕ್ಕಂತೆ, ಮಾತೃತ್ವ ಸುರಕ್ಷಾ ಯೋಜನೆಯಡಿ ಬಾಣಂತಿಯರಿಗೆ 21,000 ರು. ನೀಡುವ ಯೋಜನೆಗೆ ಹಣ ಹೊಂದಿಸಬೇಕು. ಮಹಿಳೆಯರಿಗೆ ಹೋಳಿ ಮತ್ತು ದೀಪಾವಳಿಗೆ ತಲಾ ಒಂದರಂತೆ ಉಚಿತ ಗ್ಯಾಸ್ ಸಿಲಿಂಡರ್‌ನ ಜತೆಗೆ, 500 ರುಪಾಯಿಗೆ ಸಿಲಿಂಡರ್ ಒದಗಿಸಬೇಕು. ಬಡ ಕುಟುಂಬಗಳಿಗೆ ಕೇಂದ್ರದ ಅನುದಾನವಾದ 5 ಲಕ್ಷದ ಜತೆಗೆ ರಾಜ್ಯದ ಅನುದಾನದಡಿ 5 ಲಕ್ಷ ಸೇರಿಸಿ ವೈದ್ಯಕೀಯ ನೆರವು ಒದಗಿಸಬೇಕು. ಹೇಳುತ್ತ ಹೋದರೆ ಇಂಥವು ಸಾಕಷ್ಟಿವೆ. ಇಂಥ ಗ್ಯಾರಂಟಿ ಯೋಜನೆಗಳು ಕರ್ನಾಟಕ, ಹರಿಯಾಣ, ಪಂಜಾಬ್ ರಾಜ್ಯಗಳ ಆರ್ಥಿಕ ಸ್ವಾಸ್ಥ್ಯ ಕೆಡಿಸಿದ್ದು ಗೊತ್ತಿರುವ ಸಂಗತಿಯೇ. ದೆಹಲಿಯ ನೂತನ ಸರಕಾರ ಇವನ್ನೆಲ್ಲ ಹೇಗೆ ನಿಭಾಯಿಸಲಿದೆ ಎಂಬುದು ಕುತೂಹಲ ಹುಟ್ಟಿಸಿದೆ.

ಮಾಲಿನ್ಯದ ವಿಚಾರದಲ್ಲಿ ದೆಹಲಿ ಹೆಚ್ಚು ಸದ್ದು ಮಾಡುತ್ತಿರುವುದು ಹೊಸದೇನಲ್ಲ, ಜೀವಕ್ಕೆ ಸಂಚಕಾರವೊಡ್ಡಿರುವ ಕಲುಷಿತ ಗಾಳಿಯ ಸಮಸ್ಯೆಯನ್ನು ಬಗೆಹರಿಸಿ, ಗಾಳಿಯ ಗುಣಮಟ್ಟ ಹೆಚ್ಚುವಂತೆ ಮಾಡಬೇಕಾದ ಹೊಣೆ ಸರಕಾರದ ಮೇಲಿದೆ. ಇದು ಅಧಿಕಾರದಲ್ಲಿ ಇಲ್ಲದಿದ್ದಾಗ ಈ ವಿಚಾರವಾಗಿ ಬೊಬ್ಬೆ ಹಾಕಿದಷ್ಟು ಸುಲಭವಲ್ಲ! ದೆಹಲಿಯ ಅನೇಕ ಪ್ರದೇಶಗಳಲ್ಲಿ ನೀರಿನ ತೀವ್ರಕೊರತೆಯಿದೆ, ಹೀಗಾಗಿ ನಿಯತವಾಗಿ ಶುದ್ಧನೀರನ್ನು ಪೂರೈಸಬೇಕಿದೆ. ಯಮುನಾನದಿಯ ನೀರನ್ನು ಶುದ್ಧೀಕರಿಸುವ ಸವಾಲೂ ಬೆಟ್ಟದಂತೆ ನಿಂತಿದೆ. ಯಮುನೆಯ ದಡದಲ್ಲಿರುವ ನೂರಾರು ಉತ್ಪಾದನಾ ಘಟಕಗಳ ಕಲುಷಿತ ನೀರು ನದಿಗೆ ಸೇರದಂತೆ ತಡೆಯಬೇಕಿದೆ, ಆ ಭಾಗದ ದೊಡ್ಡ ಮಾಫಿಯಾವನ್ನು ನಿವಾರಿಸಬೇಕಾದ ಒತ್ತಡವೂ ಇದೆ. ಇನ್ನು ದೆಹಲಿಯಾದ್ಯಂತ ನಿರಂತರ ವಿದ್ಯುತ್ ಪೂರೈಸುವ ಭರವಸೆಯನ್ನು ಈಡೇರಿಸಲು ವ್ಯವಸ್ಥೆಯ ದುರಸ್ತಿ, ವಿಸ್ತರಣೆ ಹಾಗೂ ಅಭಿವೃದ್ಧಿಗೆ ಟೊಂಕ ಕಟ್ಟಬೇಕಿದೆ. ಹೆಚ್ಚಾಗಿರುವ ಅಪರಾಧ, ದರೋಡೆ/ಕಳ್ಳತನ, ಅತ್ಯಾಚಾರದಂಥ ಅಪಸವ್ಯಗಳಿಗೆ ಸಮರ್ಥವಾಗಿ ಮದ್ದು ಅರೆಯಬೇಕಿದೆ. ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಿ, ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಕಾನೂನು-ಸುವ್ಯವಸ್ಥೆಯನ್ನು ಕಾಪಾಡಬೇಕಿದೆ.

ದೆಹಲಿಯ ಮತದಾರರು ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡೇ ಬಿಜೆಪಿಯನ್ನು ಪ್ರಚಂಡ ಬಹುಮತದೊಂದಿಗೆ ಚುನಾಯಿಸಿದ್ದಾರೆ. ಮೊದಲ ಬಾರಿಗೆ ಗೆದ್ದು ವಿಧಾನಸಭೆ ಪ್ರವೇಶಿಸಿರುವ ರೇಖಾ ಗುಪ್ತ ನೇತೃತ್ವದ ಸಂಪುಟವು ಹೊಸಬರು ಮತ್ತು ಅನುಭವಿಗಳ ಸಮ್ಮಿಲನವಾಗಿದೆ. ಅನುಭವಿಗಳೆನಿಸಿಕೊಂಡವರು, ನಿರಂತರ ಸಂಘರ್ಷ ಮಾಡಿ ಅಲ್ಲಿಗೆ ಬಂದು ತಲುಪಿದವರಾಗಿದ್ದಾರೆ. ಎದುರಿಗೆ ಸವಾಲುಗಳು ಇರುವಾಗಲೇ ನಮ್ಮೊಳಗಿನ ಸಾಮರ್ಥ್ಯ ಅನಾವರಣಗೊಂಡು, ಹೆಚ್ಚು ಕ್ರಿಯಾಶೀಲರಾಗಿ ಮತ್ತಷ್ಟು ಸಾಧಿಸಲು ಸಾಧ್ಯವಾಗುತ್ತದೆ. ಅಂಥ ಉತ್ತಮ ಮತ್ತು ಶ್ರೇಷ್ಠ ಅಡಿಪಾಯವನ್ನು ದೆಹಲಿ ಸರಕಾರವು ಹಾಕಿ ಮಾದರಿಯಾಗಲಿ. 'ಜನಸೇವೆಯೇ ಜನಾರ್ದನನ ಸೇವೆ' ಎಂಬ ಮಾತನ್ನು ಬಾಯಿಚಪಲಕ್ಕೆ ಆಡುವ ಬದಲಾಗಿ, ಜನಸ್ನೇಹಿ ಕೆಲಸಗಳನ್ನು ನಿರ್ವಹಿಸಿ ತೋರಿಸಲಿ. ಸುಶಾಸನ ಎಂಬ 'ಗುಪ್ತ'ಗಾಮಿನಿಯು ದೆಹಲಿಯನ್ನೂ ಯಮುನೆಯನ್ನೂ ಸ್ವಚ್ಛಗೊಳಿಸಲಿ. ಡಬಲ್ ಎಂಜಿನ್ ಸರಕಾರವು ನಿಜಾರ್ಥದಲ್ಲಿ ದೆಹಲಿಯನ್ನು ಉತ್ತುಂಗಕ್ಕೇರಿಸಲು ಶ್ರಮಿಸಲಿ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದೊಡ್ಡ ವಿಪರ್ಯಾಸ

ಮೋಹನ್ ವಿಶ್ವ ಅವರ 'ವೀಕೆಂಡ್ ವಿತ್ ಮೋಹನ್' ಅಂಕಣ (ವಿಶ್ವವಾಣಿ ಫೆ.22) ವಸ್ತುನಿಷ್ಠವಾಗಿ ಮೂಡಿಬಂದಿದೆ. ನಮ್ಮ ದೇಶದ ಹಿಂದಿ ಮತ್ತು ಇತರೆ ಭಾಷಿಕ ಚಲನಚಿತ್ರೋದ್ಯಮಗಳು ಹೇಗೆ ಕೆಲ ಭೂಗತ ಜಗತ್ತಿನ ಪಾತಕಿಗಳ ಕಪಿಮುಷ್ಟಿಯಲ್ಲಿ ಸಿಲುಕಿ, ಹಿಂದೂ ಧರ್ಮದ, ದೇವರ, ಪರಂಪರೆಯ, ಪದ್ಧತಿಯ ಅವಹೇಳನ ಮಾಡುವಂಥ ಚಲನಚಿತ್ರಗಳನ್ನು ನಿರ್ಮಾಣ ಮಾಡುತ್ತಿದ್ದರು/ಮಾಡುತ್ತಿದ್ದಾರೆ ಅಂತ ತಿಳಿದು ಹೇಸಿಗೆ ಅನಿಸಿತು.



ಅಂತೆಯೇ, ನಮ್ಮ ನೆಲದಲ್ಲೇ ಹುಟ್ಟಿ, ಬೆಳೆದು, ಬದುಕು ಕಟ್ಟಿಕೊಂಡು, ಸಮೃದ್ಧ ಜೀವನ ನಡೆಸುವ ಕೆಲ ಚಿತ್ರೋದ್ಯಮಿಗಳು, ಕಥೆ-ಚಿತ್ರಕಥೆ-ಸಂಭಾಷಣೆ ಬರೆಯುವವರು, ನಟಿಸುವವರು, ಸ್ವಘೋಷಿತ ಮೇಧಾವಿಗಳು (?!) ಕೂಡ ಈ ನೆಲದ ಧರ್ಮವನ್ನು ಪಾಲಿಸದೇ, ನಾವು ಹಿಂದೂಗಳು ನಂಬಿಕೊಂಡು ಬಂದಿರುವ ದೇವರುಗಳನ್ನು ಅವಹೇಳನ ಮಾಡಿದ್ದಾರೆ. ಇಂಥ ಅಪದ್ಧ ಚಿತ್ರಪ್ರಸ್ತುತಿಗಳಿಗೆ ಪ್ರಚಾರ ನೀಡುವ, ಕೊನೆಗೆ ಹಣ ತೆತ್ತು ನೋಡುವ ದೌರ್ಭಾಗ್ಯವೂ ನಮ್ಮದೇ!

ನಮ್ಮ ದೇಶವು 78 ವರ್ಷಗಳ ಹಿಂದೆಯೇ ಬ್ರಿಟಿಷರ ದಾಸ್ಯದ ಸಂಕೋಲೆಯಿಂದ ಬಿಡಿಸಿಕೊಂಡು 'ಸ್ವತಂತ್ರ ಭಾರತ' ಎನಿಸಿಕೊಂಡಿದ್ದರೂ, ಬಹುಸಂಖ್ಯಾತ ಹಿಂದೂಗಳೇ ಇಲ್ಲಿ ಅನಾಥರು, ಪರಾವಲಂಬಿಗಳು, ತಾತ್ಸಾರ-ಅಪಹಾಸ್ಯಕ್ಕೆ ಒಳಗಾದವರು ಎಂಬುದು ದೊಡ್ಡ ವಿಪರ್ಯಾಸ. ಇತ್ತೀಚಿನ ಕೆಲವು ಚಲನಚಿತ್ರಗಳಲ್ಲಾದರೂ ಹಿಂದೂ ರಾಜರ, ದೇಶಪ್ರೇಮಿಗಳ, ದೇಶಕ್ಕಾಗಿ ಪ್ರಾಣ ತೆತ್ತವರ, ಧರ್ಮದ ಪರವಾಗಿರುವವರ ಕಥಾನಕಗಳು ಮೂಡಿಬರುತ್ತಿರುವುದು ಒಂದು ಸಣ್ಣ ಸಮಾಧಾನಕರ ಸಂಗತಿ. ಬಹಳ ಸೂಕ್ಷ್ಮ ವಿಚಾರವನ್ನು ಸ್ಪಷ್ಟವಾಗಿ ವಿವರಿಸಿದ ಅಂಕಣಕಾರಿಗೆ ಧನ್ಯವಾದಗಳು, ಹಾಗೆಯೇ ಪತ್ರಿಕೆಗೆ ಕೂಡ.

– **ಲಕ್ಷ್ಮೀಕಾಂತ ಪಾಟೀಲ**, ಮೈಸೂರು

ಚಂದದ ಪ್ರಸ್ತುತಿ

ಶಿಶಿರಕಾಲ ಅಂಕಣದಲ್ಲಿ (ವಿಶ್ವವಾಣಿ ಫೆ.21) ಶಿಶಿರ್ ಹೆಗಡೆಯವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ನಿಜ. 'ಚಂದ' ಎಂಬುದು ವೈಯಕ್ತಿಕ ಗ್ರಹಿಕೆ, ಅನುಭೂತಿ. ಒಬ್ಬರಿಗೆ ಚಂದ ಅನಿಸಿದ್ದು ಇನ್ನೊಬ್ಬರಿಗೆ ಅಷ್ಟೊಂದು ಚಂದ ಅನಿಸಿರಲಿಕ್ಕಿಲ್ಲ. ಕಾಲಕ್ಕೆ ತಕ್ಕಂತೆ ಹಾಗೂ ಮನಸ್ಸು ಪಕ್ವವಾದಂತೆ, ಈ 'ಚಂದ'ದ ಕುರಿತಾದ ಗ್ರಹಿಕೆಯೂ ಬದಲಾಗುವುದೆಂದು ನನ್ನ ನಂಬಿಕೆ. ಅಂದರೆ ವಯಸ್ಸಾಗುತ್ತಾ ಹೋದಂತೆ, ಮೊದಲು ಮುಖ ನೋಡಿ 'ಚಂದ' ಅನ್ನುತ್ತಿದ್ದ ಮನಸ್ಸು, ನಂತರ ಅಂಥವರ ವ್ಯಕ್ತಿತ್ವ ಮತ್ತು ಪ್ರತಿಭೆಯು ಅರಿವಾಗುತ್ತಾ ಹೋದಂತೆ ತಾನೂ ಪಕ್ವಗೊಂಡು ತನ್ನ ಗ್ರಹಿಕೆಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿದೆ. ಆಗ ಆ 'ಚಂದ'ಕ್ಕಿರುವ ಮೆರುಗು ಹೆಚ್ಚುತ್ತದೆ.

ನನ್ನ ಅಭಿಪ್ರಾಯದಲ್ಲಿ 'ಚಂದ' ಎಂಬುದು ನೋಟಕ್ಕಷ್ಟೇ ಅಲ್ಲ, ಮಿಕ್ಕ ಇಂದ್ರಿಯಗಳಿಗೂ ಅದರ ಅನುಭೂತಿಯಾಗುವುದುಂಟು. ಕಾಣುವ ದೃಶ್ಯ, ಯಾರದೋ ಚೆಲುವು ಕಣ್ಣಿಗೆ 'ಚಂದ' ಎನಿಸಿದರೆ, ಸವಿಮಾತು, ಇಂಪಾದ ಗಾನ ಕಿವಿಗೆ 'ಚಂದ'. ಇನ್ನು, ಅಡುಗೆಯ ಪರಿಮಳ, ಹೂವಿನ ಘಮ ಇತ್ಯಾದಿಗಳು ಮೂಗಿಗೆ 'ಚಂದ'. ಚರ್ಮಕ್ಕೆ ಹಿತವಾದ ಸ್ಪರ್ಶ, ನಾಲಿಗೆಗೆ ಒಳ್ಳೆಯ ರುಚಿ 'ಚಂದ'. ಆದರೆ ಕೆಲವು 'ಚಂದ'ಗಳು- ಅಂದರೆ, ಸಹೃದಯಿಗಳ ಸವಿನುಡಿಗಳು, ಮಗುವಿನ ನಗು, ಪ್ರಕೃತಿಯ ಸೊಬಗು ಇವು ಎಂದಿಗೂ ಬದಲಾಗುವುದಿಲ್ಲ, ಅಲ್ಲವೇ? 'ಎಲ್ಲೆಲ್ಲೂ ಸೌಂದರ್ಯವೇ, ಕೇಳುವ ಕಿವಿಯಿರಲು, ನೋಡುವ ಕಣ್ಣಿರಲು ಎಲ್ಲೆಲ್ಲೂ ಸೌಂದರ್ಯವೇ..' ಎಂಬ ಹಾಡಿರುವುದು ಈ ಗ್ರಹಿಕೆಯಲ್ಲೇ ಇರಬೇಕು!

– **ನಿಂಗಮ್ಮ ಭಾವಿಕಟ್ಟಿ**, ಹುನಗುಂದ

ಬಾಯುಪಚಾರದ ಮಾತೇ?

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ವರದಿಯೊಂದು ಬಂದಿತ್ತು. ಅದನ್ನು ಓದಿದ ಬಳಿಕ, ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳ ಬಗ್ಗೆಯೇ ನನಗೆ ಸಂಶಯ ಶುರುವಾಯಿತು. ಗ್ರಾಹಕ ಕೇಂದ್ರಿತವಾದ ಈ ಸಂಸ್ಥೆಗಳು ಗ್ರಾಹಕರ ಹಣ ಮತ್ತು ನಂಬಿಕೆಯನ್ನು ಶತಾಯಗತಾಯ ಉಳಿಸಿಕೊಳ್ಳುವ ಯತ್ನ ಮಾಡಬೇಕು. ಇದು ಬ್ಯಾಂಕುಗಳ ಕರ್ತವ್ಯವೂ ಹೌದು, ಜವಾಬ್ದಾರಿಯೂ ಹೌದು. ಪತ್ರಿಕಾ ವರದಿಯಲ್ಲಿ ನಾನು ಓದಿದ್ದಿಷ್ಟು: ಮಂಗಳೂರಿನಲ್ಲಿ ಬ್ಯಾಂಕ್ ಶಾಖೆಯೊಂದರಲ್ಲಿ ಲಾಕರ್ ಅನ್ನು ಬಾಡಿಗೆಗೆ ಪಡೆದಿದ್ದ ಗ್ರಾಹಕರೊಬ್ಬರು ಅದರಲ್ಲಿ 8 ಲಕ್ಷ ರುಪಾಯಿ ನಗದನ್ನು ಇರಿಸಿದ್ದರಂತೆ. ಅವಶ್ಯಕತೆ ಬಿದ್ದಾಗ ಲಾಕರ್ ತೆರೆದು ನೋಡಿದರೆ, ನೋಟುಗಳ ಕಂತೆಯನ್ನು ಗೆದ್ದಲು ತಿಂದಿದ್ದು ಅದು ಹುಡಿಹುಡಿಯಾಗಿ ಉದುರಿತಂತೆ! ಆದರೆ ಬ್ಯಾಂಕಿನವರು, 'ಲಾಕರ್‌ನಲ್ಲಿ ಹೀಗೆಲ್ಲಾ ಹಣ ಇಡಬಾರದು; ರಿಸರ್ವ್ ಬ್ಯಾಂಕ್‌ನ ನಿರ್ದೇಶನವನ್ನು ಪಾಲಿಸದೆ ಇರುವುದರಿಂದ ನಷ್ಟಕ್ಕೆ ನಾವು ಹೊಣೆಯಲ್ಲ' ಎಂದು ಹೇಳಿ ಕೈತೊಳೆದುಕೊಂಡುಬಿಟ್ಟರಂತೆ! ಇಲ್ಲಿ ಹಣಕ್ಕಿಂತ ಅಮೂಲ್ಯವಾದ ಕಾಗದ-ಪತ್ರಗಳಿದ್ದಿದ್ದರೆ ಆಗ ಬ್ಯಾಂಕು ಏನು ಮಾಡುತ್ತಿತ್ತು? ಬೆಲೆಬಾಳುವ ದಾಖಲೆಪತ್ರಗಳು ನಾಶವಾಗಿವೆ ಎಂದೇ ಗ್ರಾಹಕ ಹೇಳಿದರೆ ಬ್ಯಾಂಕಿನ ಉತ್ತರವೇನು?

ನಾನೂ ಬ್ಯಾಂಕಿನ ಲಾಕರ್ ಸೇವೆ ಪಡೆದಿದ್ದೇನೆ; 'ಅದರಲ್ಲಿ ಹಣ ಇಡಬಾರದು' ಅಂತ ಯಾವ ಎಚ್ಚರಿಕೆಯ ಬರಹಗಳೂ ಅಲ್ಲಿ ಕಣ್ಣಿಗೆ ಕಾಣುವಂತೆ ಇರುವುದಿಲ್ಲ, ಬ್ಯಾಂಕಿನವರೂ ಸ್ಪಷ್ಟವಾಗಿ ಹೇಳುವುದಿಲ್ಲ. ಬಹುಶಃ ಅವರು ನಮ್ಮ ಮುಂದಿರಿಸಿ ಸಹಿ ಪಡೆಯುವ ಹತ್ತಾರು ಪುಟಗಳ ಡಾಕ್ಯುಮೆಂಟ್‌ನಲ್ಲಿ ಪುಟ್ಟದಾಗಿ ಅಂಥದೊಂದು ಸಾಲು ಇದ್ದರೂ ಇರಬಹುದೇನೋ!

ಬ್ಯಾಂಕಿನಲ್ಲಿ ಸಣ್ಣ ಪುಟ್ಟ ವ್ಯವಹಾರಗಳಿಗೂ 'ಚಕ್' ಅಂತ ಖಾತೆಯಲ್ಲಿನ ಹಣವನ್ನು ಡೆಬಿಟ್ ಮಾಡಿಬಿಡುತ್ತಾರೆ. ಆದರೂ ಸಾರ್ವಜನಿಕ ವಲಯದ ಬ್ಯಾಂಕುಗಳೆಂದರೆ ಜನರಿಗೆ ಅಪಾರ ನಂಬಿಕೆ, ವಿಶ್ವಾಸ. ಹಾಗಾಗಿಯೇ ಬ್ಯಾಂಕುಗಳು ಜನ-ಧನದಿಂದ ತುಳುಕುತ್ತಿವೆ. ಸಿಬ್ಬಂದಿಗೂ ಕೈತುಂಬಾ ಪಗಾರ, ವಗೈರೆ ಲಭಿಸುತ್ತಿದೆ. ಬ್ಯಾಂಕಿನ ಗ್ರಾಹಕನಿಗೆ ಆದ 8 ಲಕ್ಷ ರುಪಾಯಿಗಳ ನಷ್ಟವು, ಆತನ ಬದುಕಿನ ಗತಿಯನ್ನೇ ಬದಲಿಸಬಹುದಾದ ದೊಡ್ಡ ನಷ್ಟ. ಆದರೆ ಸದರಿ ಬ್ಯಾಂಕು ಇದಕ್ಕೇನೂ ಪರಿಹಾರ ತೋರದೆ ಇಡೀ ಗ್ರಾಹಕವರ್ಗಕ್ಕೆ ಅಗೌರವ ತೋರಿದೆ. 'ಗ್ರಾಹಕರೇ ದೇವರು' ಎಂಬ ಮಹಾತ್ಮರ ನುಡಿಗೆ ಬೆಲೆಯೇ ಇಲ್ಲವೇ?

ಈ ವಿಷಯದಲ್ಲಿ ಕಾನೂನು ತಜ್ಞರು, ಆರ್ಥಿಕ ತಜ್ಞರು ಏನಾದರೂ ಮಾರ್ಗ ತೋರಿ, ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಲಿ. ಇಂಥ ಗಂಭೀರ ಸಮಸ್ಯೆಗಳನ್ನು ಮೊದಲೇ ಗ್ರಹಿಸಿ, ಸೂಕ್ತ ಸಲಹೆ-ಸೂಚನೆ ನೀಡುವ ಜವಾಬ್ದಾರಿ ಬ್ಯಾಂಕುಗಳದೇ ಅಂತ ನನ್ನ ಅನಿಸಿಕೆ.

– **ರಾಯಲಪಾಡು ರಾಘವೇಂದ್ರ**, ಬೂರಗಮಾಕಲಹಳ್ಳಿ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಶೀಲಾ ಒಂಟಿಕೊಪ್ಪಲ್, ಮೈಸೂರು**
ಭಟ್ರೇ, ಮೈಸೂರು ಹುಡುಗಿಯ ರಿಗೆ ಆಕಾಶವಾಣಿಯ ಯಾವ ಹಾಡು ಕೇಳಿದರೆ ಮನೆ ಬಿಟ್ಟು ಹೊರಗೆ ಹೋಗುವ ಮನಸ್ಸಾಗೊಲ್ಲ?
- **'ಮನೆಯೇ ಗುಡಿಯಮ್ಮ ಪತಿಯೇ ದೇವರಮ್ಮ...!'**

- **ಅನಂತ ಪದ್ಮನಾಭ, (ಇಮೇಲ್ ಮೂಲಕ)**
ಭಟ್ರೇ, ರೈಲು ತಡವಾದರೆ ನಿಧಾನವಾಗಿ ಓಡುತ್ತಿದೆ ಅಂತ ರೈಲ್ವೆ ಇಲಾಖೆಯವರು ಹೇಳ್ತಾರಲ್ಲ?
- **ಈ ಮಾತನ್ನು ಏರ್‌ಲೈನ್‌ಗಳು ಹೇಳುವಂತಿಲ್ಲ!**

- **ವೆಂಕಣ್ಣಾಚಾರ್ ಹಿತ್ತಲಮನಿ, ಮೈಸೂರು**
ಭಟ್ರೇ, ನನ್ನ ಮಗಳ ಬದುಕಿಗೆ 'ಯೋಗಕ್ಷೇಮಂ ವಹಾಮ್ಯಹಮ್' ಎಂದು ಭರವಸೆ ಕೊಡುವ ಗಂಡು ಎಲ್ಲಿ ಸಿಗಬಹುದು?
- **ಜೀವನಬೀಮಾ ನಗರದಲ್ಲಿ ಹುಡುಕಿ ಸಿಗಬಹುದು!**

- **ಶಾಲು, ವಿರಾಜಪೇಟೆ**
ಭಟ್ರೇ, ಗುಪ್ತ ಎಂಬ ಹೆಸರು ಇಟ್ಟುಕೊಂಡವರೂ ಗೌಪ್ಯತಾ ಪ್ರಮಾಣವಚನ ತೆಗೆದುಕೊಳ್ಳುವ ಅವಶ್ಯಕತೆ ಇದೆಯಾ?
- **ಪ್ರಮಾಣ ಮತ್ತು ವಚನ ಎಂದು ಹೆಸರಿಟ್ಟುಕೊಂಡವರು ಏನು ಮಾಡಬೇಕು ಅಂತೀಯಾ?!**

- **ಮನಗೂಳಿ ಭೀಮು, ಸೀತಾಪತಿ ಅಗ್ರಹಾರ**
ಭಟ್ರೇ, ದೆಹಲಿಯ ಹಾಲಿ ಮುಖ್ಯಮಂತ್ರಿ ರೇಖಾ ಗುಪ್ತ ಜತೆ ಗುಟ್ಟಾಗಿ ಮಾತುಕತೆ ನಡೆಸಿದರೆ ಏನಂತ ಶೀರ್ಷಿಕೆ ಕೊಡ್ತೀರಿ?
- **ಗುಪ್ತ ಸಮಾಲೋಚನೆ!**

- **ತಿಟ್ಟೇ ಕೃಷ್ಣಮೂರ್ತಿ, ಬನ್ನೂರು**
ಭಟ್ರೇ, ಪರೀಕ್ಷೆಗಳಲ್ಲಿ ಫಲಿತಾಂಶ ಹೆಚ್ಚಳಕ್ಕೆ ನೀವು ಕೊಡುವ ಕ್ರಾಂತಿಕಾರಕ ಸಲಹೆ?
- **'ಕಾಪಿ' ಮಾಡುವುದನ್ನು ಪ್ರೋತ್ಸಾಹಿಸುವುದು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಮೆಟ್ರೋ ರೈಲಿನ ಪ್ರಯಾಣ ದರವನ್ನು ಏರಿಸಿದ್ದು ಸರಿಯಾ?
- **ಬಿಯರ್ ರೇಟನ್ನು ಏರಿಸಿದಾಗ ಈ ಪ್ರಶ್ನೆ ಕೇಳಲಿಲ್ಲವಲ್ಲ?!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಓಪನಿಂಗ್ ಬೌಲರ್ ಏಕೆ ಓಪನಿಂಗ್ ಬ್ಯಾಟಿಂಗ್ ಮಾಡೊಲ್ಲ?
- **ಎಲ್ಲವನ್ನೂ ಒಬ್ಬನೇ ಮಾಡಿದರೆ ಉಳಿದ ಆಟಗಾರರಿಗೇನು ಕೆಲಸ!?**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕುಮಾರಸ್ವಾಮಿ ಕೇಂದ್ರದಲ್ಲಿ ಬಿಜಿ ಇದ್ದಾರೆ ಅಂತ ಹೇಗೆ ಗೊತ್ತಾಗುತ್ತೆ?
- **ರಾಜ್ಯ ಸರಕಾರದ ವಿರುದ್ಧ ಮಾತಾಡ್ತಿಲ್ಲ ಅಂದ್ರೆ, ಅದೇ ಅರ್ಥ!**

ಕ್ರಿಕೆಟ್ ದುಡ್ಡು; ದುಬೈನಲ್ಲಿ ಜಾತ್ರೆ!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

1980 ಮತ್ತು 90ರ ದಶಕದಲ್ಲಿ ಭಾರತೀಯರಿಗೆ, ಅದರಲ್ಲೂ ಕ್ರಿಕೆಟ್ ಪ್ರಿಯರಿಗೆ ಶಾರ್ಜಾ ಪರಿಚಿತ ಹೆಸರು. ಅದಕ್ಕೂ ಮೊದಲು ಕೊಲ್ಲಿ ರಾಷ್ಟ್ರಗಳ ಪೈಕಿ ಒಂದಾದ ಯುಎಇಯಲ್ಲಿ ಅಂಥ ಒಂದು ನಗರವಿದೆ ಎಂದು ಬಹುತೇಕ ಜನರಿಗೆ ಗೊತ್ತೇ ಇರಲಿಲ್ಲ.

ಆ ದಿನಗಳಲ್ಲಿ ಭಾರತದಿಂದ ತಪ್ಪಿಸಿಕೊಂಡು, ತಲೆಮರೆಸಿಕೊಂಡಿದ್ದ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಶಾರ್ಜಾದ ಕ್ರಿಕೆಟ್ ಪಂದ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದ. ಹಲವಾರು ಧಾರಾವಾಹಿ, ಚಲನಚಿತ್ರಗಳಲ್ಲಿ ನಟಿಸಿದರೂ ಜನರಿಗೆ ಪರಿಚಿತರಾಗದ ಅಂಜು ಮಹೇಂದ್ರರಿಂದ ಹಿಡಿದು ಮಂದಾಕಿನಿ, ಪೂನಮ್ ಧಿಲ್ಲೋನ್‌ವರೆಗೆ, ಬಾಲಿವುಡ್‌ನ ರಾಜೇಶ್ ಖನ್ನಾ, ಅನಿಲ್ ಕಪೂರ್‌ರಿಂದ ಹಿಡಿದು ರಾಜ್‌ಕಪೂರ್‌ವರೆಗಿನ ನಟ-ನಟಿಯರು ಶಾರ್ಜಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಇರಲಿ, ಕ್ರಿಕೆಟ್‌ಗೆ ಸಂಬಂಧಪಟ್ಟಂತೆ ಶಾರ್ಜಾ ಹೆಸರು ಮಾಡಲು ಕಾರಣವೆಂದರೆ ಆ ದಿನಗಳಲ್ಲಿ ನಡೆದ ಎರಡು ಪ್ರಮುಖ ಘಟನೆಗಳು. ಒಂದು ಮೈದಾನದಲ್ಲಿ ನಡೆದ ಪಂದ್ಯಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಮೈದಾನದ ಹೊರಗೆ, ಡ್ರೆಸ್ಸಿಂಗ್ ರೂಮ್‌ನಲ್ಲಿ ನಡೆದ ಘಟನೆ.

1986ರಲ್ಲಿ ನಡೆದ ಆಸ್ಟ್ರೋ-ಏಷ್ಯಾ ಕಪ್‌ನ ಅಂತಿಮ ಪಂದ್ಯವು ಭಾರತೀಯರ ಮನದಲ್ಲಿ ಸದಾ ಗಾಯವಾಗಿ ಉಳಿಯುವ ಪಂದ್ಯವಾಗಿತ್ತು. ಅದಕ್ಕೂ 3 ವರ್ಷದ ಮೊದಲಷ್ಟೇ ವಿಶ್ವಕಪ್ ಗೆದ್ದು ಬೀಗುತ್ತಿದ್ದ ಭಾರತ ತಂಡ, ಶಾರ್ಜಾದಲ್ಲಿ ನಡೆದ ಮೊದಲ ಆಸ್ಟ್ರೋ-ಏಷ್ಯಾ ಕಪ್‌ನ ಅಂತಿಮ ಪಂದ್ಯದ ಕೊನೆಯ ಎಸೆತದಲ್ಲಿ ಆಘಾತಕಾರಿ ಸೋಲನ್ನು ಅನುಭವಿಸಿತ್ತು. ನಾಲ್ಕು ರಾಷ್ಟ್ರಗಳು ಆಡಿದ ಈ ಪಂದ್ಯಾವಳಿಯಲ್ಲಿ ಭಾರತ ಶ್ರೀಲಂಕಾವನ್ನು, ಪಾಕಿಸ್ತಾನ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಅಂತಿಮ ಹಣಾಹಣಿಗೆ ತಲುಪಿದ್ದವು. ಅಂತಿಮ ಪಂದ್ಯದಲ್ಲಿ ಪಾಕಿಸ್ತಾನದ ಪರವಾಗಿ ಶತಕ ಸಿಡಿಸಿದ ಜಾವೇದ್ ಮಿಯಂದಾದ್, ಕೊನೆಯ ಎಸೆತದಲ್ಲಿ ಸಿಕ್ಸರ್ ಹೊಡೆದು ಹೀರೋ ಆಗಿದ್ದರೆ, ಭಾರತದ ಪರವಾಗಿ, ಮೊದಲ ಹುದ್ದರಿಯೂ ಸೇರಿದಂತೆ 3 ವಿಕೆಟ್ ಪಡೆದ ಚೇತನ್ ಶರ್ಮಾ ಖಳನಾಯಕನ ಸ್ಥಾನದಲ್ಲಿದ್ದರು. ಆ ಪಂದ್ಯದ ಕೊನೆಯ ಓವರ್‌ನಲ್ಲಿ ಪಾಕಿಸ್ತಾನಕ್ಕೆ ಗೆಲ್ಲಲು 11 ರನ್ ಬೇಕಾಗಿತ್ತು, ಕೊನೆಯ 3 ವಿಕೆಟ್ ಉಳಿದುಕೊಂಡಿತ್ತು. ಮೊದಲ 5 ಎಸೆತದಲ್ಲಿ 2 ವಿಕೆಟ್ ಕಳೆದುಕೊಂಡು, 7 ರನ್ ಗಳಿಸಿದ ಪಾಕಿಸ್ತಾನಕ್ಕೆ ಕಪ್ ಗೆಲ್ಲಲು ಕೊನೆಯ ಎಸೆತದಲ್ಲಿ 4 ರನ್ ಬೇಕಾಗಿತ್ತು, ಕೊನೆಯ ಹುದ್ದರಿ ಉಳಿದಿತ್ತು. ಕೊನೆಯ ಎಸೆತದಲ್ಲಿ ಜಾವೇದ್ ಮಿಯಾಂದಾದ್ ಸಿಕ್ಸರ್ ಹೊಡೆದು ಪಾಕಿಸ್ತಾನವನ್ನು ಗೆಲ್ಲಿಸಿದ್ದು, ಚೇತನ್ ಶರ್ಮ ಗಳಗಳನೆ ಅತ್ತಿದ್ದು ಇಂದಿಗೂ ಮನದಲ್ಲಿ ಸ್ಥಾಯಿಯಾಗಿದೆ.

ಇನ್ನೊಂದು ಘಟನೆ ಇನ್ನೂ ಕುತೂಹಲಕಾರಿಯಾದದ್ದು. ಅದು ಬೆಳಕಿಗೆ ಬಂದದ್ದು ಕೆಲವು ದಿನಗಳ ನಂತರವೇ. ಅದು 1987ರಲ್ಲಿ ನಡೆದ ಘಟನೆ. ಅಂದು ಚಿತ್ರನಟ ಮೆಹಮೂದ್ ಮತ್ತು ಇತರ ಸಹಾಯಕರೊಂದಿಗೆ ದಾವೂದ್ ಇಬ್ರಾಹಿಂ ಭಾರತೀಯ ಕ್ರಿಕೆಟ್ ತಂಡದ ಡ್ರೆಸ್ಸಿಂಗ್ ರೂಮಿಗೆ ಬಂದಿದ್ದ. ದಾವೂದ್ ಇಬ್ರಾಹಿಂನನ್ನು 'ಖ್ಯಾತ ಉದ್ಯಮಿ' ಎಂದು ಭಾರತ ತಂಡದವರಿಗೆ ಮೆಹಮೂದ್ ಪರಿಚಯಿಸಿದ್ದರು. ಆಗ ದಾವೂದ್ ಭಾರತ ತಂಡದ ಆಟಗಾರರಿಗೆ ಒಂದು ಆಫರ್ ನೀಡಿದ್ದ. ಮಾರನೇ ದಿನ ನಡೆಯಬೇಕಾಗಿದ್ದ ಅಂತಿಮ ಪಂದ್ಯದಲ್ಲಿ ಭಾರತ ಗೆದ್ದರೆ, ಪ್ರತಿ ಆಟಗಾರನಿಗೂ ಒಂದು ಟೊಯೋಟಾ ಕಾರ್ ಉಡುಗೊರೆ ನೀಡುವುದಾಗಿ ಹೇಳಿದ್ದ ದಾವೂದ್. ಅದನ್ನು ಕೇಳಿದ ಭಾರತೀಯ ತಂಡದ ಸದಸ್ಯರೆಲ್ಲ ಆಶ್ಚರ್ಯಕ್ಕೊಳಗಾಗಿದ್ದರು. ಏಕೆಂದರೆ, ಅದುವರೆಗೆ ಆ ರೀತಿಯ ಕೊಡುಗೆಯ ಮಾತನ್ನು ಯಾರೂ ಆಡಿರಲಿಲ್ಲ. ಅಷ್ಟರಲ್ಲಿ, ತಂಡದ ನಾಯಕರಾಗಿದ್ದ ಕಪಿಲ್ ದೇವ್, ಪತ್ರಿಕಾಗೋಷ್ಠಿ ಮುಗಿಸಿ ಡ್ರೆಸ್ಸಿಂಗ್ ರೂಮಿಗೆ ಬಂದರು. ಕೂಡಲೇ ಅಲ್ಲಿಯ ವಾತಾವರಣ ಬದಲಾಯಿತು. ಕಪಿಲ್ ದೇವ್ ಬಾಗಿಲಿನಲ್ಲಿಯೇ ನಿಂತು, ಮೆಹಮೂದ್‌ರನ್ನು ಕುರಿತು ಡ್ರೆಸ್ಸಿಂಗ್ ರೂಮ್‌ನಿಂದ ಹೊರಗೆ ಬರುವಂತೆ ಕೇಳಿಕೊಂಡರು. ನಂತರ ದಾವುದ್ ಇಬ್ರಾಹಿಂನನ್ನು ಕಂಡು 'ನೀವು ಯಾರು? ಇಲ್ಲಿಂದ ಹೊರಗೆ ಹೋಗಿ, ಹೊರಗಿನವರಿಗೆ ಡ್ರೆಸ್ಸಿಂಗ್ ರೂಮಿನ ಒಳಗೆ ಬರಲು ಅವಕಾಶವಿಲ್ಲ' ಎಂದು ಸಿಟ್ಟಿನಲ್ಲಿಯೇ ಹೇಳಿದರು. ದಾವೂದ್ ಒಂದೂ ಮಾತಾಡದೇ ಡ್ರೆಸ್ಸಿಂಗ್ ರೂಮಿನಿಂದ ಹೊರಗೆ ನಡೆದಿದ್ದ. ಆಗ ಭಾರತ ತಂಡದಲ್ಲಿದ್ದ ದಿಲೀಪ್ ವೆಂಗಸರ್ಕರ್‌ರನ್ನು ಹೊರತುಪಡಿಸಿ ಉಳಿದವರಿಗೆ ದಾವೂದ್ ಇಬ್ರಾಹಿಂನ ಗುರುತೂ ಸಿಕ್ಕಿರಲಿಲ್ಲ. ಸ್ವತಃ ಕಪಿಲ್ ದೇವ್‌ಗೂ ಗೊತ್ತಿರಲಿಲ್ಲ! ಇದನ್ನು ಕೆಲವು ದಿನಗಳ ನಂತರ ವೆಂಗಸರ್ಕರ್ ಅವರೇ ಒಂದು ಸಂದರ್ಶನದಲ್ಲಿ ಹೇಳಿದ್ದರು.

ಎರಡನೆಯ ಘಟನೆ ಸುಮ್ಮನೆ ನೆನಪಾಯಿತು ಎಂದು ಹೇಳಿದೆ ಬಿಟ್ಟರೆ ಅದಕ್ಕೂ, ದುಬೈನಲ್ಲಿನ ಕ್ರಿಕೆಟ್ ಆಟದ ಬೆಳವಣಿಗೆಗೂ ಯಾವುದೇ ಸಂಬಂಧವಿಲ್ಲ. ಆದರೆ, ಆಸ್ಟ್ರೋ-ಏಷ್ಯಾ ಕಪ್ ನಂತರ ಶಾರ್ಜಾದ ಜತೆಗೆ ಯುಎಇಯ ಇತರ ರಾಜ್ಯಗಳಾದ ದುಬೈ, ಅಬುಧಾಬಿಯಲ್ಲಿಯೂ ಕ್ರಿಕೆಟ್ ಹುಚ್ಚು ಹೆಚ್ಚಿತು. ಹಾಗಾದರೆ ಅದಕ್ಕೂ ಮೊದಲು ಯುಎಇಯಲ್ಲಿ ಕ್ರಿಕೆಟ್ ಆಟ ಇರಲಿಲ್ಲವೇ?

ಇತಿಹಾಸ ತೆಗೆದು ನೋಡಿದರೆ, ಯುಎಇ ಮತ್ತು ಕ್ರಿಕೆಟ್‌ನ ಸಂಬಂಧ ಒಂದೂಕಾಲು ಶತಮಾನಕ್ಕೂ ಹಿಂದಿನದು. 1892ರಲ್ಲಿಯೇ ಬ್ರಿಟಿಷ್ ಸೇನೆ ಈ ಪ್ರದೇಶದಲ್ಲಿ ಕ್ರಿಕೆಟ್ ಆಟವನ್ನು ಪರಿಚಯಿಸಿತು. ಈ ಪ್ರದೇಶಕ್ಕೆ ಆಗಿನ್ನೂ ಯುಎಇ ಎಂಬ ಹೆಸರು ಬಂದಿರಲಿಲ್ಲ. 'ಟ್ರೂಷಿಯಲ್ ಸ್ಟೇಟ್ಸ್' (Trucial Stats) ಎಂಬ ಹೆಸರಿನಿಂದ ಈ ಪ್ರದೇಶವನ್ನು ಕರೆಯಲಾಗುತ್ತಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷ್ ರಾಯಲ್ ಏರ್‌ಫೋರ್ಸ್ ಹಾಗೂ ಇತರ ಕಾಮನ್ವೆಲ್ತ್ ಪಡೆಗಳಾದ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ನ ಪ್ರಜೆಗಳು ದುಬೈ, ಶಾರ್ಜಾ, ಅಜ್ಮಾನ್, ಅಬುಧಾಬಿಯಂಥ ನಗರಗಳಲ್ಲಿ ನೆಲೆಸಿದ್ದರಿಂದ, ಆಗಲೇ ಅಲ್ಲಿ ಕ್ರಿಕೆಟ್ ಹರಡಿಕೊಂಡಿತ್ತು. ಆ ಕಾಲದಲ್ಲಿ ಶಾರ್ಜಾದ ಸುತ್ತಮುತ್ತ ಕೆಲವು ಪಿಚ್‌ಗಳನ್ನು ಬ್ರಿಟಿಷರು ನಿರ್ಮಿಸಿದ್ದರು. ಯುದ್ಧ ಮುಗಿದ ನಂತರ ಬ್ರಿಟಿಷ್ ಸೇನಾಪಡೆ ಹಿಂತಿರುಗಿದರೂ ಅಲ್ಲಿ ಉಳಿದುಕೊಂಡಿದ್ದ ಇತರ ಬ್ರಿಟಿಷ್ ಮತ್ತು ವಿದೇಶಿ ಪ್ರಜೆಗಳು ಆಟವನ್ನು ಮುಂದುವರಿಸಿದ್ದರು. ಆದರೂ ಅಲ್ಲಿ ಸ್ಥಳೀಯ ಆಟಗಳು ನಡೆಯುತ್ತಿದ್ದವೇ ವಿನಾ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟ್ ನಡೆಯುತ್ತಿರಲಿಲ್ಲ. ಸತ್ಯ ಏನು ಎಂದರೆ, ಯುಎಇಯ ಮೊದಲ ಕ್ರಿಕೆಟ್ ಮಂಡಳಿ ಸ್ಥಾಪಿತವಾದದ್ದು ಶಾರ್ಜಾದಲ್ಲಿಯೂ ಅಲ್ಲ, ದುಬೈನಲ್ಲಿಯೂ ಅಲ್ಲ. ದಾಖಲೆಗಳ ಪ್ರಕಾರ, 1971ರಲ್ಲಿ ಅಲ್-ಐನ್ ನಗರದಲ್ಲಿ ಯುಎಇಯ ಮೊದಲ ಕ್ರಿಕೆಟ್ ಮಂಡಳಿ ಸ್ಥಾಪನೆಗೊಂಡಿತ್ತು. ಆದರೆ, ನಂತರದ ದಿನಗಳಲ್ಲಿ ಆಟದ ಜನಪ್ರಿಯತೆ ಕುಸಿಯಿತು. ಕೆಲವು ವರ್ಷದ ನಂತರ, ದಕ್ಷಿಣ ಏಷ್ಯಾ ದೇಶಗಳಾದ ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶದ ಜನರು ಈ ದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ನೆಲೆಸಲು ಪ್ರಾರಂಭಿಸಿದಾಗ, ಇದಕ್ಕೆ ಪುನಃ ಜೀವ ಬಂತು. ಜತೆಗೆ, ಭಾರತ ಮತ್ತು ಪಾಕಿಸ್ತಾನದಲ್ಲಿ ಶಿಕ್ಷಣ ಪಡೆದ ಸ್ಥಳೀಯ ಅರಬ್ಬರು ಕ್ರಿಕೆಟ್ ಕ್ಲಬ್‌ಗಳನ್ನು ಸ್ಥಾಪಿಸಿ, ಮೈದಾನ ನಿರ್ಮಿಸಿ, ಶಾರ್ಜಾ ಸ್ಟೇಡಿಯಂ ಕಟ್ಟಿ, ಪಂದ್ಯಾವಳಿಗಳನ್ನು ಏರ್ಪಡಿಸಲು ಆರಂಭಿಸಿದರು. ಅದಕ್ಕೆ ಪೂರಕವಾಗಿ, ಈಗಾಗಲೇ ಹೇಳಿದಂತೆ, ಶಾರ್ಜಾದಲ್ಲಿ ನಡೆದ ಪಂದ್ಯಾವಳಿಯು ಯುಎಇ ಕ್ರಿಕೆಟ್‌ಗೆ ಹೊಸ ತಿರುವು ನೀಡಿತು. ಅಲ್ಲಿಂದ ಹಿಡಿದು, ಈಗ ನಡೆಯುತ್ತಿರುವ ಐಸಿಸಿ ಏಕದಿನ ಚಾಂಪಿಯನ್ಸ್ ಟ್ರೋಫಿವರೆಗೆ ಆ ದೇಶದಲ್ಲಿನ ಕ್ರಿಕೆಟ್ ಪ್ರಯಾಣ ಎಲ್ಲರಿಗೂ ತಿಳಿದೇ ಇದೆ. ನಿಮಗೆ ತಿಳಿದಿರಲಿ, ಈಗಿನ ಅಫ್ಘಾನಿಸ್ತಾನದ ರಾಷ್ಟ್ರೀಯ ತಂಡದ ಹೋಂ-ಗ್ರೌಂಡ್ ಇರುವುದು ಅಬುಧಾಬಿಯಲ್ಲಿ. ಅವರು ತಮ್ಮ ದಿನನಿತ್ಯದ ಅಭ್ಯಾಸ ನಡೆಸುವುದು ಅಬುಧಾಬಿ ಕ್ರೀಡಾಂಗಣದ ಪಕ್ಕದಲ್ಲಿರುವ ಮೈದಾನದಲ್ಲಿ. ಭಾರತದ ಐಪಿಎಲ್ ಪಂದ್ಯಾಟದಲ್ಲಿ ಭಾಗವಹಿಸುವ ರಾಜಸ್ಥಾನ್ ರಾಯಲ್ ತಂಡದ ಹೋಂ-ಗ್ರೌಂಡ್ ಕೂಡ ದುಬೈನಲ್ಲಿದೆ. ಆದರೆ ಒಂದು ಕುತೂಹಲಕಾರಿ ಅಂಶವೆಂದರೆ, ದಕ್ಷಿಣ ಏಷ್ಯಾದ ಜನರು ಅಧಿಕವಾಗಿರುವ ಇತರ ಕೊಲ್ಲಿ ರಾಷ್ಟ್ರಗಳಲ್ಲಿ ಕ್ರಿಕೆಟ್ ಆಡಲು ಬೇಕಾದ ಉತ್ತಮ ಗುಣಮಟ್ಟದ ಸೌಲಭ್ಯ ಇನ್ನೂ ನಿರ್ಮಾಣಗೊಂಡಿಲ್ಲ.

ಈಗ ದುಬೈನಲ್ಲಿ ಕ್ರಿಕೆಟ್ ಹುಚ್ಚು ಹೇಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಲಂಡನ್‌ನಲ್ಲಿರುವ ಸ್ನೇಹಿತ ಗಣಪತಿ ಭಟ್ ಅವರು ಫೋನ್ ಮಾಡಿ, ನಾವು ಬಹ್ರೈನ್‌ಗೆ ಕ್ರಿಕೆಟ್ ತಂಡವನ್ನು ಕರೆದುಕೊಂಡು ಬರುತ್ತೇವೆ, ಒಂದು ಪಂದ್ಯ ಆಯೋಜಿಸಲು ಸಾಧ್ಯವಾಗಬಹುದೇ? ಎಂದು ಕೇಳಿದರು. ಆದರೆ ಬಹ್ರೈನ್‌ನಲ್ಲಿ ಕ್ರಿಕೆಟ್ ಬೋರ್ಡ್, ರಾಷ್ಟ್ರೀಯ ತಂಡ ಇದ್ದರೂ ಒಂದೇ ಒಂದು ಹಸಿರು ಹುಲ್ಲುಗಾವಲಿನ ಕ್ರಿಕೆಟ್ ಮೈದಾನ ಇಲ್ಲ. ಹಾಗಾಗಿ, ದುಬೈನಲ್ಲಿ ಆಯೋಜಿಸಿದರೆ ಆದೀತೇ? ಎಂದು ಕೇಳಿದೆ. ಅದಕ್ಕೆ ಅವರು ಒಪ್ಪಿದಾಗ, ನಾನು ಸೆಪ್ಟೆಂಬರ್ ತಿಂಗಳಿನಲ್ಲಿ ಆ ಯೋಜನೆಗೆ ಕಾರ್ಯೋನ್ಮುಖನಾದೆ. ನಿಜ ಹೇಳುತ್ತೇನೆ, ಅಲ್ಲಿಯವರೆಗೂ ಯುಎಇಯಲ್ಲಿ ಕ್ರಿಕೆಟ್ ಆಡುತ್ತಾರೆ, ಮೈದಾನವಿದೆ ಎಂದು ತಿಳಿದಿತ್ತೇ ವಿನಾ ಅದರ ಅಗಲ, ಸುತ್ತಳತೆ, ವ್ಯಾಪ್ತಿ ತಿಳಿದಿರಲಿಲ್ಲ. ನಿಮಗೆ ಆಶ್ಚರ್ಯವಾಗಬಹುದು, ಸೆಪ್ಟೆಂಬರ್ ತಿಂಗಳಿನಲ್ಲಿಯೇ ಮುಂದಿನ 6 ತಿಂಗಳಿಗೆ ಯಾವುದೇ ಮೈದಾನ ಲಭ್ಯವಿರಲಿಲ್ಲ. ಒಂದು ವಿಷಯ ತಿಳಿದಿರಲಿ, ದುಬೈನಲ್ಲಿ ಕ್ರಿಕೆಟ್ ಪಂದ್ಯಾಟಗಳು ಹೆಚ್ಚಾಗಿ ನಡೆಯುವುದು ಸೆಪ್ಟೆಂಬರ್‌ನಿಂದ ಮಾರ್ಚ್ ತಿಂಗಳವರೆಗೆ ಮಾತ್ರ. ಅದರ ನಂತರ ತಾಪಮಾನ ಹೆಚ್ಚಾಗುವುದರಿಂದ, ಹೊರಗಡೆ ಕ್ರಿಕೆಟ್ ಆಡುವುದು ಕಷ್ಟಸಾಧ್ಯ. ಆ ಸಮಯದಲ್ಲಿ ಬಹುತೇಕ ಮೈದಾನದ ಪಿಚ್‌ಗಳು ಪುನರ್‌ನಿರ್ಮಾಣಗೊಳ್ಳುತ್ತವೆ. ಆದರೆ ನನಗೆ ಆಶ್ಚರ್ಯವಾದದ್ದು, ದುಬೈನಲ್ಲಿಯೇ ಐವತ್ತಕ್ಕೂ ಹೆಚ್ಚು ಮೈದಾನಗಳಿವೆ. ನಾನು ಹೇಳುತ್ತಿರುವುದು ಎಲ್ಲ ವ್ಯವಸ್ಥೆಯನ್ನು ಹೊಂದಿದ ಕ್ರಿಕೆಟ್ ಮೈದಾನವೇ ಹೊರತು ಕಾಕುಪೋಕು, ಖಾಸಾಭದ್ರ, ಲೆಕ್ಕಕ್ಕುಂಟು-ಆಟಕ್ಕಿಲ್ಲ ಎಂಬಂಥ ಮೈದಾನವಲ್ಲ. ಹಸಿರು ಹುಲ್ಲುಗಾವಲಿನಿಂದ ಹಿಡಿದು ಹೊನಲು ಬೆಳಕಿನವರೆಗೆ, ಕ್ಯಾಮೆರಾದಿಂದ ಹಿಡಿದು ಎಲ್‌ಇಡಿ, ಸ್ಕೋರ್ ಬೋರ್ಡಿನವರೆಗೆ, ಪೆವಿಲಿಯನ್ನಿಂದ ಹಿಡಿದು ಡ್ರೆಸ್ಸಿಂಗ್ ರೂಮಿನವರೆಗೆ ಎಲ್ಲವೂ ಇರುವಂಥ ಮೈದಾನಗಳು. ಇಂಥ ಮೈದಾನಗಳಲ್ಲಿ ಪಿಚ್ಚಿನ ಎರಡೂ ಕಡೆ ಇರುವ ಸ್ಟಂಪ್ಸ್, ಎರಡು ಹೊಸ ಚೆಂಡುಗಳು, ಇಬ್ಬರು ಅಂಪೈರ್‌ಗಳು, ಕುಡಿಯುವ ನೀರು ಇತ್ಯಾದಿಗಳನ್ನು ಪೂರೈಸಲಾಗುತ್ತದೆ. ಪ್ರತಿ 3 ಗಂಟೆಯ ಅವಧಿಯಂತೆ ಮೈದಾನವನ್ನು ಬಾಡಿಗೆಗೆ ನೀಡುತ್ತಾರೆ. ಒಂದು ಅವಧಿಗೆ ಸುಮಾರು 50ರಿಂದ 80 ಸಾವಿರ ರುಪಾಯಿ ಬಾಡಿಗೆ ಇರುತ್ತದೆ. ವೈ-ಫೈ, ವೀಕ್ಷಕ ವಿವರಣೆಕಾರರು ಅಥವಾ ಇನ್ನೂ ಹೆಚ್ಚಿನ ವ್ಯವಸ್ಥೆ ಬೇಕಾದಲ್ಲಿ, ಇನ್ನೂ ಹೆಚ್ಚು ಹಣ ನೀಡಬೇಕಾಗುತ್ತದೆ. ಈ 3 ಗಂಟೆಯ ಅವಧಿಯನ್ನು ದಿನದ 24 ಗಂಟೆಯೂ ಬಾಡಿಗೆಗೆ ನೀಡುತ್ತಾರೆ. ನೀವು ಬೇಕಾದರೆ ಮಧ್ಯರಾತ್ರಿ 12 ಗಂಟೆ ಅಥವಾ ಬೆಳಗಿನ ಜಾವ 3 ಗಂಟೆಯ ಅವಧಿಯನ್ನೂ ಬಾಡಿಗೆಗೆ ಪಡೆಯಬಹುದು. ದುಬೈ ಮಾತ್ರವಲ್ಲ, ಶಾರ್ಜಾ, ಅಜ್ಮಾನ್, ಅಬುಧಾಬಿಯಲ್ಲಿಯೂ ಈ ರೀತಿಯ ವ್ಯವಸ್ಥೆ ಇದೆ. ಅವನ್ನೆಲ್ಲ ಸೇರಿಸಿದರೆ ಒಟ್ಟೂ ಮೈದಾನಗಳ ಸಂಖ್ಯೆ ನೂರು ದಾಟುತ್ತದೆ. ಅಷ್ಟಾದರೂ, ನಾನು ಸೆಪ್ಟೆಂಬರ್‌ನಲ್ಲಿ ವಿಚಾರಿಸಿದಾಗ, ಫೆಬ್ರವರಿ ತಿಂಗಳಿನವರೆಗೆ ಕೆಲವು ದಿನ ಅಲ್ಲಿ-ಇಲ್ಲಿ, ಒಂದೋ-ಎರಡೋ ಅವಧಿಯಲ್ಲಿ ಮಾತ್ರ ಮೈದಾನ ಲಭ್ಯವಿತ್ತೇ ವಿನಾ, ನಮಗೆ ಬೇಕಾದ ವಾರಾಂತ್ಯಕ್ಕಾಗಲೀ ಅಥವಾ ನಮಗೆ ಬೇಕಾದ ಸಮಯಕ್ಕಾಗಲೀ ಮೈದಾನ ಲಭ್ಯವಿರಲಿಲ್ಲ, ಅಂದರೆ, ಒಂದು ಕ್ರಿಕೆಟ್ ಆಟದಿಂದ ಆರರಿಂದ ಏಳು ತಿಂಗಳ ಅವಧಿಯಲ್ಲಿ ಈ ದೇಶ ಗಳಿಸುವ ಹಣದ ಬಗ್ಗೆ ಯೋಚಿಸಿ. ನೆನಪಿರಲಿ, ಇಲ್ಲಿ ಇದು 4 ದಶಕದಿಂದ ಈಚೆಗೆ ಜನಪ್ರಿಯವಾದ ಆಟ. ಇದು ಇಂಗ್ಲೆಂಡ್, ಭಾರತ, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ತಂಡಗಳಂತೆ ಬಹುಕಾಲದಿಂದ ಕ್ರಿಕೆಟ್ ಆಡಿದ ದೇಶವಲ್ಲ, ಭಾರತದಲ್ಲಿರುವಷ್ಟು ಕ್ರಿಕೆಟ್ ಆಟಗಾರರು ಅಥವಾ ಮೈದಾನಗಳು ಕೂಡ ಈ ದೇಶದಲ್ಲಿಲ್ಲ. ಆದರೆ ನಮ್ಮ ಬೆಂಗಳೂರಿಗಿಂತಲೂ ಚಿಕ್ಕದಾಗಿರುವ ಪ್ರದೇಶದಲ್ಲಿ, ದಕ್ಷಿಣ ಏಷ್ಯಾದ ಜನರೇ ಹೆಚ್ಚು ತುಂಬಿಕೊಂಡಿರುವುದನ್ನು ಮನಗಂಡು, ಅವರ ಕ್ರಿಕೆಟ್ ಹುಚ್ಚನ್ನು ಪರಿಗಣಿಸಿ, ನೂರಾರು ಕ್ರಿಕೆಟ್ ಮೈದಾನವನ್ನು ಸಿದ್ಧಪಡಿಸಿ, ಅದರಿಂದಲೂ ವ್ಯಾಪಾರ ಮಾಡಬಹುದು ಎಂಬ ವಿಚಾರ ದುಬೈಗೆ ಬಂತಲ್ಲ! ಅದಕ್ಕೇ ಹೇಳುವುದು, ದುಬೈ ಬೇರೆ ಊರಿನಂತಲ್ಲ! ಯುಎಇ ಇತರ ದೇಶಗಳಂತಲ್ಲ!

ಯಾವುದೇ ಒಂದು ಕ್ಷೇತ್ರದಲ್ಲಿ ಹಣವಿದೆ ಎಂದು ಅನ್ನಿಸಿದರೆ, ಒಂದು ಕ್ಷಣವೂ ವಿಳಂಬ ಮಾಡದೆ, ಅದನ್ನು ತನ್ನದಾಗಿಸಿಕೊಳ್ಳಲು ಮಾಡುವ ಪ್ರಯತ್ನವಿದೆಯಲ್ಲ, ಅದು ಎಲ್ಲರಿಂದ ಸಾಧ್ಯವಿಲ್ಲ. ಅದಕ್ಕಾಗಿಯೇ ಆ ದೇಶ, ಅದರಲ್ಲೂ ದುಬೈ ಇಷ್ಟವಾಗುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ಕ್ರಿಕೆಟ್ ಆಟವನ್ನು ನಿಯಂತ್ರಿಸುವ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ICC) ತನ್ನ ಪ್ರಧಾನ ಕಚೇರಿಯನ್ನು 2005ರಿಂದ ದುಬೈನಲ್ಲಿ ಸ್ಥಾಪಿಸಿಕೊಂಡು, ವಿಪರೀತ ತಾಪಮಾನದಲ್ಲೂ ತಣ್ಣಗೆ ಕುಳಿತಿದೆ. ಪ್ರತಿಷ್ಠಿತ ತಂಡಗಳೂ ದುಬೈ ಕಡೆಗೆ ಮುಖ ಮಾಡುತ್ತಿವೆ.

ಒಟ್ಟಿನಲ್ಲಿ, ಯಾವುದೋ ದೇಶದ ಕ್ರಿಕೆಟ್ ದುಡ್ಡು, ದುಬೈನಲ್ಲಿ ಜಾತ್ರೆ...!

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ಫೆಬ್ರವರಿಯಲ್ಲಿ ರಣಬಿಸಿಲು, ಏಪ್ರಿಲ್‌ನಲ್ಲೇ ಮಳೆ: ಬದಲಾದ ಹವಾಮಾನ ಚಿತ್ರಣ ನೀಡಿದ ಇಲಾಖೆ**
- ಈ ಮಾಹಿತಿಯನ್ನು ಓದಿದವರು, 'ಮಾವಿನ ಹಣ್ಣಿನಿಂದ ಮಾವಿನ ಮರ ಹುಟ್ಟೋ ಕಾಲವು ಎಂದೋ ಹೋಯಿತು..' ಎಂಬ ಚಿತ್ರಗೀತೆಯನ್ನು ಗುನುಗಿ, ''ಚಳಿಗಾಲದಲ್ಲಿ ಮಾತ್ರವೇ ಸಿಗಬೇಕಿದ್ದ ಸೊಗಡಿನ ಅವರೇಕಾಯಿ ಯಾವಾಗ ವರ್ಷಪೂರ್ತಿ ಸಿಗಲು ಶುರುವಾಯಿತೋ, ಆಗಲೇ ಋತುಮಾನದಲ್ಲಿ ಎರ್ರಾಬಿರ್ರಿ ವ್ಯತ್ಯಾಸವಾಗಿಹೋಯ್ತು ಕಣ್ರೀ'' ಎಂದ್ರಂತೆ!

- **ರಾಜ್ಯ ಬಜೆಟ್ ಮಂಡನೆಯಾದ ಬಳಿಕ, ಮಾರ್ಚ್ ತಿಂಗಳಲ್ಲಿ ಚಹಾ, ಕಾಫಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆ ಹೆಚ್ಚಾಗುವ ಸಾಧ್ಯತೆ: ಸುದ್ದಿ**
- ''ಒಳ್ಳೇದೇ ಆಯ್ತು! ಹತ್ತು ನಿಮಿಷಕ್ಕೆ ಒಂದ್ಸಲ 'ಟೀ-ಟೈಮ್', 'ಕಾಫಿ-ಬ್ರೇಕ್' ಎಂದು ಸೀಟುಬಿಟ್ಟು ಎದ್ದು ಹೋಗುತ್ತಿದ್ದ ನೌಕರರು, ಚಹಾ-ಕಾಫಿ-ಹಾಲಿನ ರೇಟು ಹೆಚ್ಚಾದ ನಂತರವಾದ್ರೂ ಸೀಟಿಗೆ ಅಂಟಿಕೊಂಡು ಕೆಲಸ ಮಾಡ್ತಾರಾ ಅಂತ ನೋಡಬೇಕು'' ಎಂದು ಉದ್ಯೋಗದಾತರೊಬ್ಬರು ಗಾಳಿ ಹಾಕಿಕೊಂಡರಂತೆ!

- **ಬಿಜೆಪಿಯಲ್ಲಿ ಹಾರಾಟವಿದ್ದರೂ ವರಿಷ್ಠರ ಮೌನದಾಟ: ಸುದ್ದಿ**
- 'ಮೌನೇನ ಕಲಹಂ ನಾಸ್ತಿ' ಎಂಬ ಮಾತಿನಲ್ಲಿ ಅವರು ಪಟ್ಟಾಗಿ ನಂಬಿಕೆಯಿಟ್ಟುಕೊಂಡು ಹೀಗೆ 'ಗಪ್‌ಚುಪ್' ಆಗಿರಬಹುದೇ ಎಂಬುದು ಪತ್ತೇದಾರ ಪುರುಷೋತ್ತಮನ ಗುಮಾನಿಯಂತೆ!

- **ಎಲಾನ್ ಮಸ್ಕ್ ಅವರ 'ಟೆಸ್ಲಾ' ಕಾರು ತಯಾರಕ ಕಂಪನಿಯು ಆಮದು ಸುಂಕದ ಹೊರೆ ತಪ್ಪಿಸಿಕೊಳ್ಳಲೆಂದು ಭಾರತದಲ್ಲಿ ಕಾರ್ಖಾನೆ ಆರಂಭಿಸಿದರೆ, ಅದರಿಂದ ಅಮೆರಿಕಕ್ಕೆ ನಷ್ಟವಾಗುತ್ತದೆ, ಅನ್ಯಾಯವಾಗುತ್ತದೆ: ಅಮೆರಿಕ ಅಧ್ಯಕ್ಷ ಟ್ರಂಪ್ ಕಳವಳ**
- ಇದನ್ನ 'ಕಳವಳ' ಅನ್ನೋದಕ್ಕಿಂತ 'ಟ್ರಂಪಾಯಣ'ದ 'ಕಿರಿಕಿರಿ ಕಾಂಡ'ದ ಮೊದಲ ಅಧ್ಯಾಯದ ಮೊದಲ ಸಾಲು ಅನ್ನೋದು ಸೂಕ್ತ!

- **ಸಿದ್ದರಾಮಯ್ಯನವರ ಭವಿಷ್ಯ ಮತ್ತು ಅದೃಷ್ಟ ಎರಡೂ ಗಟ್ಟಿಯಾಗಿವೆ. ಅವರಂಥ ಅದೃಷ್ಟದ ರಾಜಕಾರಣಿ ಇನ್ನೊಬ್ಬರಿಲ್ಲ: ಶಾಸಕ ಜಿ.ಟಿ.ದೇವೇಗೌಡ**
- 'ವಸಂತಕಾಲ ಬಂದಾಗ ಮಾವು ಚಿಗುರಲೇಬೇಕು, ಕೋಗಿಲೆ ಹಾಡಲೇಬೇಕು...' ಅನ್ನೋ 'ಅಣಾವ್ರ' ಹಾಡು ಅದ್ಯಾಕೋ ನೆನಪಾಗ್ತಿದೆ ಕಣ್ರೀ!

- **ರಾಜ್ಯದಲ್ಲಿನ ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವುದು ದೊಡ್ಡ ಅನ್ಯಾಯ: ಸಂಸದ ಬಸವರಾಜ ಬೊಮ್ಮಾಯಿ**
- ಈ ಮಾತಿಗೆ ಬೆಂಗಳೂರಿನ ವಿ.ವಿ.ಪುರಂನ ಶೆಟ್ಟರೊಬ್ಬರು, ''ಆದರೆ, ವ್ಯಾಪಾರವೇ ಆಗದಿದ್ರೆ ಅಂಗಡಿಗಳನ್ನ ಎಷ್ಟು ಹೊತ್ತು ಅಂತ ತೆರೆದುಕೊಂಡಿರೋದಕ್ಕೆ ಆಗುತ್ತೇ ರೀ?'' ಎಂದು ಪ್ರತಿಕ್ರಿಯಿಸಿದ್ದು ಇನ್ನೂ ಸುದ್ದಿಯಾಗಿಲ್ಲ!

- **ಸಚಿವ ರಾಜಣ್ಣ ಅವರು ಬಾಯಿ ಚಪಲಕ್ಕೆ ಮಾತಾಡಬಾರದು, ಬಾಲಿಶ ಹೇಳಿಕೆಯನ್ನು ನೀಡಬಾರದು: ಶಾಸಕ ಬಾಲಕೃಷ್ಣ ಬುದ್ಧಿಮಾತು**
- ''ಛೇ! ಈ ಬುದ್ಧಿಮಾತು ಮುಂಚೇನೇ ಸಿಕ್ಕಿದ್ದಿದ್ರೆ, 'ವಿಶ್ವವಾಣಿ' ಪತ್ರಿಕೆಯ ಮುಖಪುಟದ 'ದಾರಿದೀಪೋಕ್ತಿ'ಯಲ್ಲಿ ಬಳಸಿಕೊಳ್ಳಬಹುದಿತ್ತು'' ಎಂದು ಪುಟನಿರ್ವಾಹಕರು ಪೇಚಾಡಿಕೊಂಡ್ರಂತೆ!!

ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತುವ ಹೊಣೆ ಯಾರದ್ದು?

ಕಳಕಳಿ
ಸುರೇಂದ್ರ ಪೈ, ಭಟ್ಕಳ
vveditoped@gmail.com

ಇಂದಿನ ಕೃತಕ ಬುದ್ಧಿಮತ್ತೆಯ ಯುಗದಲ್ಲಿ, ಜೀವನ ಮೌಲ್ಯಗಳ ಬಗ್ಗೆ ಒಂದಿಷ್ಟು ಚಿಂತನೆ ಮಾಡಬೇಕಾಗಿದೆ. ಮೌಲ್ಯಯುತ ಜೀವನ ನಡೆಸುವಂತಾಗಲು ಮೌಲ್ಯಯುತ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕಾದ್ದು ತೀರಾ ಅಗತ್ಯವಾಗಿದೆ. ಸಂಸದೆ ಸುಧಾ ಮೂರ್ತಿಯವರು ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಾ, ''ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡಲು ಅವರಿಗೆ ಮೌಲ್ಯಗಳನ್ನು ಕಲಿಸಬೇಕಿದೆ; ಅದಕ್ಕಾಗಿ ಶಾಲೆಗಳಲ್ಲಿ ಕಥೆ ಹೇಳುವಿಕೆಯನ್ನು ಉತ್ತೇಜಿಸಲು ವಿಶಾಲ ಕೊಠಡಿಗಳನ್ನು ರೂಪಿಸಬೇಕಿದೆ, ನೀತಿಕಥೆಗಳನ್ನು ಹೇಳಲು ಸುಂದರ ವಾತಾವರಣವನ್ನು ನಿರ್ಮಿಸಬೇಕಿದೆ'' ಎಂದಿದ್ದು ಗಮನ ಸೆಳೆಯಿತು.

ಅಧಿಕಾರ, ಸ್ಥಾನಮಾನ ಸಿಕ್ಕ ತಕ್ಷಣ ಬಹಳಷ್ಟು ರಾಜಕಾರಣಿಗಳು ಸಹಜವಾಗಿ ಭವಿಷ್ಯದ ಚುನಾವಣೆ ಮತ್ತು ತಮ್ಮ ಕ್ಷೇತ್ರದಲ್ಲಿನ ಮತಗಳಿಕೆಯನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ಪೂರಕವಾಗುವಂಥ ಒಂದಷ್ಟು ಕಾಮಗಾರಿಗಳಿಗೆ ಶಿಲಾನ್ಯಾಸ ಮಾಡಿ, ನಾಮಫಲಕದ ಮೇಲೆ ತಮ್ಮ ಹೆಸರನ್ನು ಕೆತ್ತಿಸಿ, ಇದು ತಮ್ಮ ಸಾಧನೆ ಎಂದು ಬೀಗುವುದು ಕಂಡುಬರುತ್ತದೆ. ಅಂಥವರ ನಡುವೆ, ನಮ್ಮ ನೆಲ-ಜಲ-ಸಂಸ್ಕೃತಿ-ಪರಂಪರೆಯ ಮಹತ್ವವನ್ನರಿತು, ಮಕ್ಕಳಲ್ಲಿ ಸೂಕ್ತ ಕಲಿಕಾ ವಯಸ್ಸಿನಲ್ಲೇ ನೀತಿಕಥೆಗಳೆಂಬ ಮೌಲ್ಯಗಳ ಬೀಜವನ್ನು ಬಿತ್ತುವ ಮೂಲಕ ಅವರನ್ನು ಉತ್ತಮ ನಾಗರಿಕರನ್ನಾಗಿ ಮಾಡಬೇಕೆಂಬ ನಿಸ್ವಾರ್ಥ ಆಶಯವನ್ನು ಪ್ರಕಟಿಸಿದ ಸುಧಾ ಮೂರ್ತಿಯವರಂಥವರು ರಾಜ್ಯಸಭಾ ಸದಸ್ಯೆಯಾಗಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎನ್ನಬೇಕು.

ಆದರೂ ಕೆಲವರು, ಸುಧಾ ಮೂರ್ತಿಯವರ 'ಎ.ಸಿ.ಹಾಲ್' ಪರಿಕಲ್ಪನೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ''ಕಥೆ ಹೇಳಲು/ಕೇಳಲು ಎ.ಸಿ.ಹಾಲ್ ಏಕೆ ಬೇಕು? ಒಂದು ಮರದಡಿಯಲ್ಲಿ ಕೂತು ಕಥೆ ಕೇಳಿದರೆ ಮಕ್ಕಳಿಗೆ ಅರ್ಥವಾಗುವುದಿಲ್ಲವೇ?'' ಎಂಬಿತ್ಯಾದಿ ವಿತಂಡ ವಾದವನ್ನು ಮಾಡುವವರ ಸಂಖ್ಯೆ ಕಡಿಮೆಯೇನಿಲ್ಲ. ಸುಧಾ ಅವರು ತಮ್ಮ ಎನ್‌ಜಿಒ ಮೂಲಕ ಅಳವಡಿಸಿಕೊಂಡು ಯಶಸ್ವಿಯಾದ ನಿದರ್ಶನವನ್ನು ಅಂದು ವಿವರಿಸಿದರೇ ಹೊರತು, ಕಡ್ಡಾಯವಾಗಿ ಎ.ಸಿ.ಹಾಲ್ ಆಗಬೇಕೆಂದು ಹೇಳಲಿಲ್ಲ; ಬದಲಿಗೆ, ಭೌಗೋಳಿಕ ಪ್ರದೇಶಕ್ಕನುಗುಣವಾಗಿ ಫ್ಯಾನ್ ಸಹ ಆಗಬಹುದು ಎಂದಿದ್ದಾರೆ. ಆದರೆ, ನೀತಿಕಥೆಗಳಲ್ಲಿ, ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲು ಪ್ರತ್ಯೇಕವಾದೊಂದು ವಿಶಾಲ ಕೊಠಡಿ ಇರಬೇಕೆಂಬುದು ಒಪ್ಪಿಕೊಳ್ಳತಕ್ಕ ಸಂಗತಿ. ಏಕಾಗ್ರತೆಗೆ ಪೂರಕವಾಗುವ ವಾತಾವರಣವನ್ನು ನಿರ್ಮಿಸಿದಾಗ ಮಕ್ಕಳು ಯಾವುದೇ ವಿಷಯವನ್ನು ಪರಿಣಾಮಕಾರಿಯಾಗಿ ಕಲಿಯಬಲ್ಲರು. ಆದರೆ, ಇಂದಿನ ಬಹುತೇಕ ಸರಕಾರಿ ಶಾಲೆಗಳಲ್ಲಿರುವ ಜೀರ್ಣಾವಸ್ಥೆಯಲ್ಲಿನ ಕೊಠಡಿಗಳನ್ನು ಗಮನಿಸಿದಾಗ, ಸುಧಾ ಅವರು ಉಲ್ಲೇಖಿಸಿದಂಥ ನೂತನ ಪರಿಕಲ್ಪನೆಗೆ ಸರಕಾರವು ಜೀವ ನೀಡುವುದು ಸೂಕ್ತವಾಗಬಲ್ಲದು ಎನಿಸುತ್ತದೆ.

'ಧರಣಿಮಂಡಲ ಮಧ್ಯದೊಳಗೆ' ಎಂದು ಶುರುವಾಗುವ 'ಗೋವಿನ ಹಾಡು' ಪದ್ಯವನ್ನು ಪ್ರಾಥಮಿಕ ಶಾಲಾ ಹಂತದಲ್ಲಿ ಕೇಳುತ್ತಾ ಪ್ರಾಮಾಣಿಕತೆಯ ಮೌಲ್ಯವನ್ನು ಮೈಗೂಡಿಸಿಕೊಂಡವರು ನಮ್ಮಲ್ಲಿ ಸಾಕಷ್ಟಿದ್ದಾರೆ. ಕಾರಣ, ಬಾಲ್ಯದಲ್ಲಿ ಕೇಳಿದ ನೀತಿಕಥೆಗಳು, ಸದಾಶಯದ ಪರಿಕಲ್ಪನೆಗಳು ಹಸಿಮಣ್ಣಿನಂಥ ಮಕ್ಕಳ ಮನಸ್ಸಿನಲ್ಲಿ ಸ್ಪಷ್ಟವಾಗಿ ಅಚ್ಚೊತ್ತಿ, ಸಕಾರಾತ್ಮಕ ಪರಿವರ್ತನೆಗೆ ಕಾರಣವಾಗುತ್ತವೆ. 90ರ ದಶಕದ ಪೂರ್ವದಲ್ಲಿ ತಂತ್ರಜ್ಞಾನವು ನಮ್ಮನ್ನು ಅಷ್ಟಾಗಿ ಬಾಧಿಸಿರಲಿಲ್ಲ; ಆಗ ಜನರು ಮಾನವೀಯ ಸಂಬಂಧಗಳಿಗೆ, ಮೌಲ್ಯಯುತ ಜೀವನಕ್ಕೆ ಬೆಲೆ ಕೊಡುತ್ತಿದ್ದರು. ಮಕ್ಕಳಿಗೆ ಚಿಕ್ಕಂದಿನಿಂದಲೇ ಜೀವನಮೌಲ್ಯವನ್ನು ಕಲಿಸುವ ಕೆಲಸವನ್ನು ಅವಿಭಕ್ತ ಕುಟುಂಬಗಳು ಮಾಡುತ್ತಿದ್ದವು. ದಸರೆ/ಬೇಸಗೆ ರಜೆಗೆಂದು ನಗರದಿಂದ ಹಳ್ಳಿಗೆ ಮಕ್ಕಳು ಹೋದಾಗಲೂ, ಅನೇಕ ನೀತಿಕಥೆಗಳು ಅಜ್ಜಿಯಿಂದ ಹೊಮ್ಮುತ್ತಿದ್ದವು. ಮನೆಯಲ್ಲಿ ಧಾರ್ಮಿಕ ಪ್ರವಚನ ನಡೆಯುತ್ತಿತ್ತು. ರಾಮಾಯಣ, ಮಹಾಭಾರತ, ಪಂಚತಂತ್ರ ಕಥೆಗಳು, ಚಂಪಕ-ಚಂದಮಾಮ, ಬಾಲಮಿತ್ರ-ಬಾಲಮಂಗಳದಂಥ ಕಥಾಪುಸ್ತಕಗಳ ಸಾಂಗತ್ಯ ಮಕ್ಕಳಿಗೆ ಸಿಗುತ್ತಿತ್ತು. ಪರಿಣಾಮವಾಗಿ ಅವರು ನೀತಿವಂತರಾಗುವಂಥ ಅವಕಾಶವಿತ್ತು. ಅಂದಿನ ಸಮಾಜವೂ ಅದಕ್ಕೆ ಪೂರಕ ವಾತಾವರಣವನ್ನು ಕಲ್ಪಿಸಿತ್ತು; ಆಗ ಕೋರ್ಟು-ಕಚೇರಿಗೆ ಅಲೆಯುವುದಕ್ಕಿಂತಲೂ ಊರಿನ ಹಿರಿಯರ ಸಮ್ಮುಖದಲ್ಲೇ ಸಮಸ್ಯೆ/ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲಾಗುತ್ತಿತ್ತು. ಅರ್ಥಾತ್, ಜನರು ಮೌಲ್ಯಗಳಲ್ಲಿ ನಂಬಿಕೆಯಿಟ್ಟಿದ್ದರು.

ಇಂದು ಅವಿಭಕ್ತ ಕುಟುಂಬಗಳು ಬಹುತೇಕ ಮಾಯವಾಗಿರುವುದರಿಂದ ಪುಟ್ಟ ಮಕ್ಕಳಿಗೆ ಅಜ್ಜ-ಅಜ್ಜಿಯ ಸಾಂಗತ್ಯ ಸಿಗುತ್ತಿಲ್ಲ, ಹೀಗಾಗಿ ಅವರಿಗೆ ನೀತಿಕಥೆಗಳನ್ನು ಹೇಳುವ ಪರಿಪಾಠ ಇಲ್ಲವಾಗುತ್ತಿದೆ. ಶಾಲೆಗಳು ಕೂಡ ಪೋಷಕರ ಆಸೆಗೆ ತಕ್ಕಂತೆ, ಸ್ಪರ್ಧಾತ್ಮಕ ಜಗತ್ತಿಗೆ ಮಕ್ಕಳನ್ನು ತಯಾರು ಮಾಡುವ ಹುಕಿಯಲ್ಲಿ, ಕೇವಲ ಅಂಕಗಳಿಕೆಯ ಗುರಿಯಿಟ್ಟುಕೊಂಡು ಬೋಧಿಸುತ್ತಿವೆಯೇ ಹೊರತು, ನೀತಿಶಿಕ್ಷಣ, ಉತ್ತಮ ಸಂಸ್ಕಾರಗಳನ್ನು ಅವು ನೀಡುವುದು ದುಸ್ತರವಾಗಿದೆ. 'ಕೃತಕ ಬುದ್ಧಿಮತ್ತೆ'ಯೊಂದಿಗೆ ಪಳಗುವಂತೆ ನಾವು ಮಕ್ಕಳಿಗೆ ಪ್ರೋತ್ಸಾಹಿಸುತ್ತಿದ್ದೇವೆಯೇ ವಿನಾ, ಮನೆಯಲ್ಲಿ-ಸಮಾಜದಲ್ಲಿ ಹಿರಿಯರೊಂದಿಗೆ ಹೇಗೆ ವ್ಯವಹರಿಸಬೇಕೆಂದು ಹೇಳಿಕೊಡುತ್ತಿಲ್ಲ.

ಇಲ್ಲಿ ತಪ್ಪಾಗುತ್ತಿರುವುದು ನಮ್ಮಂಥ ಹಿರಿಯರಿಂದಲೇ ವಿನಾ ಮಗುವಿನಿಂದಲ್ಲ. ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವತ್ತ ಅಥವಾ ಅದಕ್ಕೆ ಪೂರಕ ವಾತಾವರಣ ಕಲ್ಪಿಸುವತ್ತ ನಾವು ಉತ್ಸಾಹ ತೋರುತ್ತಿಲ್ಲ. ನಮ್ಮ ಮಗುವು ನೆರೆಮನೆಯ ಮಗುವಿಗಿಂತ ಹೆಚ್ಚು ಅಂಕ ಗಳಿಸಬೇಕೆಂಬ ಪೈಪೋಟಿಗೆ ಸಿಲುಕಿ ಮಗುವಿನ ಮೇಲೆ ಒತ್ತಡ ಹೇರುತ್ತಿದ್ದೇವೆಯೇ ಹೊರತು, ಎಳೆ ವಯಸ್ಸಿನಲ್ಲೇ ಅದರ ಮನದಲ್ಲಿ ಗಟ್ಟಿಯಾಗಿ ಬೇರೂರಬೇಕಾದ ಮೌಲ್ಯಗಳ ಬೀಜವನ್ನು ಬಿತ್ತುತ್ತಿಲ್ಲ. ಇಂದು ಶಿಕ್ಷಕರೊಂದಿಗೆ ಮಕ್ಕಳ ಪೋಷಕರು ಭೇಟಿ/ಸಂವಹನ ನಡೆಸಿದರೆ, ''ಮಕ್ಕಳು ನಮ್ಮ ಮಾತನ್ನು ಕೇಳುವುದಿಲ್ಲ, ಓದುವುದಿಲ್ಲ, ಬೇರಾವುದೇ ಕೆಲಸ ಮಾಡಲು ಆಸಕ್ತಿ ಹೊಂದಿಲ್ಲ, ಯಾವಾಗಲೂ ಮೊಬೈಲ್ ಹಿಡಿದಿರುತ್ತಾರೆ, ಸರಿಯಾಗಿ ಊಟ ಮಾಡುವುದಿಲ್ಲ'' ಎಂಬಿತ್ಯಾದಿ ಸಮಸ್ಯೆಗಳನ್ನು ಹೇಳುವುದು ಸಾಮಾನ್ಯವಾಗಿದೆ. ಇದಕ್ಕೆಲ್ಲಾ ಕಾರಣ, ಮನೆಯಲ್ಲಿ ಮಕ್ಕಳ ಪಾಲನೆ-ಪೋಷಣೆ 'ನಿಜಾರ್ಥದಲ್ಲಿ' ಆಗದಿರುವುದು. ಅಂದರೆ, ತಮ್ಮ ಮಕ್ಕಳೊಂದಿಗೆ ಒಂದರ್ಧ ಗಂಟೆ ಸಮಯ ಕಳೆಯಲೂ

ಸಾಧ್ಯವಾಗದಷ್ಟರ ಮಟ್ಟಿಗೆ ಪೋಷಕರು ತಂತಮ್ಮ ವ್ಯವಹಾರದಲ್ಲಿ ವ್ಯಸ್ತರಾಗಿರುವುದು! ಅದೇ, ಚಿಕ್ಕ ವಯಸ್ಸಿನಲ್ಲೇ ನೀತಿಕಥೆ, ಮೌಲ್ಯಾಧಾರಿತ ಶಿಕ್ಷಣವನ್ನು ಮಕ್ಕಳಿಗೆ ನಾವು ನೀಡಿದ್ದರೆ, ನೀತಿಗೆ ಹೊರತಾದ ವರ್ತನೆ/ಧೋರಣೆ ತಮ್ಮಿಂದ ವ್ಯಕ್ತವಾದಾಗಲೆಲ್ಲಾ 'ನಾವು ನಡೆದುಕೊಳ್ಳುತ್ತಿರುವುದು ತಪ್ಪು' ಎಂಬ ಭಾವ ಮಕ್ಕಳಲ್ಲಿ ಒಡಮೂಡುತ್ತಿತ್ತು.

ಬಾಲ್ಯದಲ್ಲಿ ದೊಡ್ಡವರು ಹೇಳುವ ನೀತಿಕಥೆಗಳು ಮಕ್ಕಳಲ್ಲಿ ತಮ್ಮದೇ ಆದ ಕಲ್ಪನಾ ಲೋಕವನ್ನು ಸೃಷ್ಟಿಸಿಬಿಡುತ್ತವೆ. ಮಗುವಿನ 'ಶ್ರುತಿಪಟಲ'ದ ಮೂಲಕ ಹಾದು 'ಸ್ಮೃತಿಪಟಲ'ದಲ್ಲಿ ಬೇರೂರುವಂಥ ಶಕ್ತಿ ನೀತಿಕಥೆಗಳಿಗಿದೆ. ಆದರೆ, ರಾತ್ರಿ ಮಲಗುವಾಗ ಅಮ್ಮ-ಅಜ್ಜಿ ಕಥೆ ಹೇಳುತ್ತಾ ಮಕ್ಕಳನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಳ್ಳುತ್ತಿದ್ದ ಪರಿಪಾಠವೇ ಈಗ ಬಹುತೇಕ ಕಮ್ಮಿಯಾಗಿದೆಯಲ್ಲಾ, ಇದಕ್ಕೇನನ್ನುವುದು?!

ನಮ್ಮ ನಡುವೆಯಿರುವ ನೀತಿಕಥೆಗಳು, ಮಕ್ಕಳ ಹಾಡುಗಳು ಅಗಣಿತ; ಆದರೆ ಅವನ್ನೆಲ್ಲಾ ಮಕ್ಕಳ ಕಿವಿಗೆ ಉಣಿಸುವವರಾರು ಎಂಬುದೇ ಯಕ್ಷಪ್ರಶ್ನೆ. ವಾಸ್ತವವಾಗಿ ಮಗುವು ಬಾಲ್ಯದಲ್ಲಿ ತನ್ನ ಸುತ್ತಲ ಪರಿಸರ, ಪೋಷಕರ ನಡವಳಿಕೆಯಿಂದಲೇ ಸಾಕಷ್ಟು ಕಲಿಯುತ್ತದೆ; ದುರದೃಷ್ಟವಶಾತ್ ಅಂಥ ಪರಿಸರವನ್ನು ಮಗುವಿಗೆ ಎಳವೆಯಲ್ಲೇ ಕಟ್ಟಿಕೊಡುವಲ್ಲಿ ನಾವು ಸೋತಿದ್ದೇವೆ. ಪ್ರೀತಿ, ವಾತ್ಸಲ್ಯ, ದಯೆ, ಪರೋಪಕಾರ, ಕರುಣೆಯಂಥ ಮಾನವೀಯ ಮೌಲ್ಯಗಳು ಹೇಗೆ ಬದುಕನ್ನು ಶ್ರೀಮಂತಗೊಳಿಸುತ್ತವೆ ಎಂಬುದನ್ನು ಮಕ್ಕಳಿಗೆ ತಿಳಿಸಿಕೊಡಬೇಕಾದ ಪೋಷಕರೇ ಆ ಮೌಲ್ಯಗಳಿಂದ ದೂರ ಸರಿದುಬಿಟ್ಟರೆ, ಮಕ್ಕಳನ್ನು ಅರಿವಿನ ಕೊರತೆ ಮತ್ತು ಅನಾಥಪ್ರಜ್ಞೆ ಕಾಡುವುದು ಸಹಜವಲ್ಲವೇ?

ಇನ್ನು, ಶಾಲೆಯಲ್ಲಿ ಮೌಲ್ಯಶಿಕ್ಷಣ ನೀಡೋಣವೆಂದರೆ, ಹಲವು ಶಾಲೆಗಳಲ್ಲಿ ನಿಗದಿತ 'ವಿಷಯ ಶಿಕ್ಷಕರೇ' ಇಲ್ಲದಿರುವಾಗ, ನೀತಿಕಥೆ ಹೇಳುವವರನ್ನು ಎಲ್ಲಿಂದ ತರೋದು? ಇಂದಿನ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ ಪಾಠಗಳ ಬಗ್ಗೆಯೇ ವಾದ-ವಿವಾದಗಳು ನಡೆಯುತ್ತಿರುವಾಗ, ಮೌಲ್ಯಶಿಕ್ಷಣದ ಪಠ್ಯಕ್ರಮದಲ್ಲಿ ಎಂಥ ಪಾಠಗಳನ್ನು ಅಳವಡಿಸಬೇಕು ಎಂಬುದೇ ಸವಾಲಾಗಿದೆ. ಮೌಲ್ಯಶಿಕ್ಷಣವನ್ನು ಬೋಧಿಸಲು ನಿಯೋಜಿತರಾದವರಿಗೆ ವಿಶೇಷ ತರಬೇತಿ ನೀಡುವ ಹೊಣೆ ಯಾರದ್ದು ಎಂಬುದಿನ್ನೂ ಸ್ಪಷ್ಟವಾಗಿಲ್ಲ. ಇವೆಲ್ಲಾ ತೊಡಕುಗಳನ್ನು ಮೀರಿ ಶಾಲೆಯಲ್ಲಿ ಮೌಲ್ಯಶಿಕ್ಷಣ ನೀಡಲು ಮುಂದಾದರೂ, ಪೋಷಕರು ಆ ನಿಲುವನ್ನು ಹೇಗೆ ಸ್ವೀಕರಿಸುತ್ತಾರೆಂಬುದು ಒಂದು ಪ್ರಶ್ನಾರ್ಥಕ ಚಿಹ್ನೆಯಾಗಿ ಬಿಡುತ್ತದೆ. ಏಕೆಂದರೆ, ಇಂಥ ಮೌಲ್ಯಕ್ಕಿಂತ, ಮಕ್ಕಳು ವಿಷಯವಾರು ಗಳಿಸಬೇಕಾದ ಅಂಕಗಳಿಗೆ ಅನಿವಾರ್ಯವಾಗಿ ಪ್ರಾಧಾನ್ಯ ನೀಡಬೇಕಿರುವಂಥ ಕಾಲಘಟ್ಟವಿರುವಾಗ, ನೀತಿಶಿಕ್ಷಣದಿಂದಾಗಿ ಮಕ್ಕಳು ಉತ್ತಮ ನಾಗರಿಕರಾಗಲಿ ಎಂದು ಹಂಬಲಿಸುವ ಪೋಷಕರು ವಿರಳವೆನ್ನಬೇಕು.

ಸವಾಲುಗಳೇನೇ ಇರಲಿ, ಮೌಲ್ಯವಿಲ್ಲದ ಜೀವನವು ಉಪ್ಪಿಲ್ಲದ ಊಟದಂತೆ ಸಪ್ಪೆ; ಅದು ಜೀವನವನ್ನು ಸುಂದರವಾಗಿ ರೂಪಿಸದು. ಆದ್ದರಿಂದ, ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಮನೆಯಲ್ಲಿ ನೀತಿಕಥೆಗಳನ್ನು ಹೇಳುವುದರೊಂದಿಗೆ, ಶಾಲೆಯಲ್ಲಿ ಸಂಸ್ಕಾರಯುತ/ಮೌಲ್ಯಾಧರಿತ ಶಿಕ್ಷಣಕ್ಕೆ ಒತ್ತು ನೀಡಬೇಕು ಮತ್ತು ಅಂಥ ವಿಶೇಷ ತರಗತಿಗಳನ್ನು ಕಡ್ಡಾಯಗೊಳಿಸಬೇಕು, ಇನ್ನಿತರ ಕ್ರಿಯಾಶೀಲ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಬೇಕು. ಮಾತೃಭಾಷೆಯಲ್ಲಿರುವ, ಚಿತ್ತಾಕರ್ಷಕ ಚಿತ್ರಗಳೊಂದಿಗಿನ ನೀತಿಕಥೆಯ ಪುಸ್ತಕಗಳು ಮಕ್ಕಳ ಕೈಗೆಟುಕುವಂತಾಗಬೇಕು. ಆಗ ಮಾತ್ರವೇ ಅವು ಮಕ್ಕಳ ಮನಸ್ಸಿನಲ್ಲಿ ದೀರ್ಘಕಾಲ ಉಳಿಯಲು ಸಾಧ್ಯವಾಗುತ್ತದೆ.

ಎಳವೆಯಲ್ಲಿ ಮಕ್ಕಳ ಮನಸ್ಸು ಹಸಿಮಣ್ಣಿನ ಗೋಡೆಯಂತಿರುತ್ತದೆ. ಆ ಘಟ್ಟದಲ್ಲಿ ನೀತಿಕಥೆಗಳ ಮೂಲಕ ಉತ್ತಮ ಜೀವನ ಮೌಲ್ಯಗಳನ್ನು ಅದರಲ್ಲಿ ನಾಟಿಸಿದರೆ, ಭವಿಷ್ಯದಲ್ಲಿ ಮಕ್ಕಳು ಉತ್ತಮ ನಾಗರಿಕರಾಗುತ್ತಾರೆ. ಆದರೆ ಇಂಥ ಮೌಲ್ಯವನ್ನು ಬಿತ್ತುವ ಹೊಣೆ ಹೊರಲು ನಾವು ಸಿದ್ಧರಿರಬೇಕಷ್ಟೇ...

(ಲೇಖಕರು ಹವ್ಯಾಸಿ ಬರಹಗಾರರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಅಪ್ಪಾ.. ಐ ಲವ್ ಯು ಪಾ..

ತಮಿಳುನಾಡಿನ ಜನರು ತಮ್ಮ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್‌ರನ್ನು ಉದ್ದೇಶಿಸಿ, 'ನಿನ್ನಂಥ ಅಪ್ಪಾ ಇಲ್ಲಾ... ಒಂದೊಂದು ಮಾತೂ ಬೆಲ್ಲಾ..'' ಎಂಬ ಸಿನಿಮಾ ಹಾಡನ್ನು ತಮಿಳಿಗೆ ಭಾಷಾಂತರಿಸಿಕೊಂಡು ಹಾಡುತ್ತಿದ್ದಾರಂತೆ. ಈ ಗಾಯನವನ್ನು ಕೇಳಿಸಿಕೊಂಡು ನಖಶಿಖಾಂತವಾಗಿ ರೋಮಾಂಚನಗೊಂಡ ಸ್ಟಾಲಿನ್ ಡಿಅವರು ಇತ್ತೀಚೆಗೆ ಆಯೋಜಿಸಲಾಗಿದ್ದ 'ಉಂಗಳಿಲ್ ಒರುವನ್' (ನಿಮ್ಮಲ್ಲಿ ಒಬ್ಬ) ಎಂಬ ಕಾರ್ಯಕ್ರಮದ ಸಂದರ್ಭದಲ್ಲಿ ಈ ಕುರಿತು ಮಾತನಾಡುತ್ತಾ, ''ಜನರು ನನ್ನನ್ನು 'ಅಪ್ಪಾ' ಅಂತ ಹೀಗೆ ಬಾಯ್ತುಂಬಿ ಕರೆಯೋದನ್ನ ಕೇಳಿಸಿಕೊಂಡ್ರೆ ಹುಚ್ಚಾಪಟ್ಟೆ ಸಂತೋಷ ಆಗುತ್ತೆ ಕಣ್ರೀ'' ಎನ್ನುತ್ತಾ ಆನಂದಬಾಷ್ಪ ಸುರಿಸಿ, ಅದರಲ್ಲಿ ಮಿಕ್ಕಿದ್ದನ್ನು ಶಲ್ಯದ ಅಂಚಿನಲ್ಲಿ ಲಘುವಾಗಿ ಒರೆಸಿಕೊಂಡರಂತೆ. ಇದಕ್ಕೂ ಮುನ್ನ ಜನವರಿಯಲ್ಲಿ, ತಮ್ಮ ಸರಕಾರದ ಯೋಜನೆಗಳ ಪ್ರಯೋಜನವನ್ನು ಪಡೆದ ವಿದ್ಯಾರ್ಥಿಗಳು ತಮ್ಮನ್ನು 'ಅಪ್ಪಾ' ಎಂದು ಕರೆದಿದ್ದಕ್ಕೆ ತಮಗೆ ಯರ್ರಾಬಿರ್ರಿ ಸಂತೋಷವಾಗಿದ್ದನ್ನೂ ಸ್ಟಾಲಿನ್ ಮಹಾಶಯರು ವಿಧಾನಸಭೆಯಲ್ಲಿ ಹೇಳಿಕೊಂಡಿದ್ದರೂ, ಈ 'ಅಡ್ಡಹೆಸರು' ಆಗ ಹೆಚ್ಚು ಗಮನ ಸೆಳೆದಿರಲಿಲ್ಲ. ಆದರೀಗ 'ಅಪ್ಪಾ' ಎಂಬ ಆ ಉದ್ಗಾರವು ಸಾಮಾಜಿಕ ಮಾಧ್ಯಮಗಳಲ್ಲಿ ಬಿರುಗಾಳಿಯಂತೆ ವ್ಯಾಪಿಸಿಕೊಂಡುಬಿಟ್ಟು, ಅಲ್ಲಿನ ಬಳಕೆದಾರ ನೆಟ್ಟಿಗರು ಏನಾದರೊಂದು ನೆಪ ಮಾಡಿಕೊಂಡು ಆ ಪದವನ್ನು ಬಳಸುತ್ತಿದ್ದಾರಂತೆ. ಅವರ ಪೈಕಿ ಒಬ್ಬರಂತೂ, ''ಅಪ್ಪಾ, ಆಸ್ತಿಯಲ್ಲಿ ನನಗೂ ಪಾಲು ಸಿಗಬಹುದೇ? ದಯವಿಟ್ಟು ಖಾತ್ರಿಪಡಿಸುತ್ತೀರಾ?'' ಎಂದು 'ಇಂಡೆಂಟ್' ಹಾಕಿದ್ದರೆ ಮತ್ತೊಬ್ಬರು, ''ಅಪ್ಪಾ, ನನ್ನ ಮಕ್ಕಳಿಗಿನ್ನೂ ಮದುವೆಯಾಗಿಲ್ಲ, ಸರಿಯಾದ ಜೋಡಿಯನ್ನು ಹುಡುಕಿಕೊಡ್ತೀರಾ ಪ್ಲೀಸ್'' ಎಂದು 'ಅಪ್ಲಿಕೇಷನ್' ಹಾಕಿದ್ದಾರಂತೆ!

ಇಂಥ ಸಂದರ್ಭದಲ್ಲಿ ತಾವ್ಯಾಕೆ ಸುಮ್ಮನಿರಬೇಕು ಎಂದುಕೊಂಡು ಪಂಚೆಯನ್ನು ಕೊಡವಿಕೊಂಡು ಮೇಲಕ್ಕೆದ್ದ ವಿರೋಧ ಪಕ್ಷದ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು, ''ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆಗೆ ಧಕ್ಕೆಯಾಗಿದ್ದರೂ, ಅವರ ಅಳಲಿಗೆ ಕಿವಿಯಾಗುವ ಬದಲು 'ಅಪ್ಪಾ' ಅವರು ಕಿವುಡರಾಗಿಬಿಟ್ಟಿದ್ದಾರೆ'' ಎಂದು ಕೂರಂಬು ಬಿಟ್ಟಿದ್ದಾರಂತೆ...

ಒಟ್ನಲ್ಲಿ, 'ತೋಳ ಗುಂಡಿಗೆ ಬಿದ್ರೆ, ಆಳಿಗೊಂದು ಕಲ್ಲು' ಅನ್ನೋ ಮಾತು ನಿಜ ಕಣ್ರೀ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 41

ಸಮಾಚಾರ ಸಣ್ಣದಲ್ಲ

ಎಎಪಿ ಸೇರಿದ ನಟಿ ಸೋನಿಯಾ ಮಾನ್

ಚಂಡೀಗಢ: ತೆಲುಗು, ಮಲಯಾಳಂ, ಮರಾಠಿ, ಹಿಂದಿ ಸೇರಿದಂತೆ ಬಹುಭಾಷಾ ಚಿತ್ರಗಳಲ್ಲಿ ನಟಿಸಿರುವ ಪಂಜಾಬ್‌ನ ಸೋನಿಯಾ ಮಾನ್ ಭಾನುವಾರ ಆಮ್ ಆದ್ಮಿ ಪಕ್ಷ(ಎಎಪಿ) ಸೇರಿದರು. 1980ರ ದಶಕದಲ್ಲಿ ಖಲಿಸ್ತಾನಿ ಉಗ್ರರ ಗುಂಡಿಗೆ ಬಲಿಯಾದ 'ಕೀರ್ತಿ ಕಿಸಾನ್ ಯೂನಿಯನ್' ನಾಯಕ ಬಲದೇವ್ ಸಿಂಗ್‌ರ ಪುತ್ರಿಯಾದ ಮಾನ್‌ರನ್ನು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಪಕ್ಷಕ್ಕೆ ಬರಮಾಡಿಕೊಂಡರು. ಮಲಯಾಳಂ ಚಿತ್ರ 'ಹೈಡ್ ಅಂಡ್ ಸೀಕ್' ಮೂಲಕ ನಟನೆ ಆರಂಭಿಸಿದ ಮಾನ್, 2014ರಲ್ಲಿ ಕಹಾ ಹೈ ಮೇರಾ ಪ್ಯಾರ್ ಎಂಬ ಹಿಂದಿಚಿತ್ರದಲ್ಲೂ ನಟಿಸಿದ್ದಾರೆ. ಗಾಯಕ ಸಿಧು ಮೂಸೆವಾಲಾ ಜತೆಗೂ ಆಲ್ಬಗ್ಗಳಿಗೆ ಹಾಡಿದ್ದಾರೆ. ಪಂಜಾಬ್ ವಿಧಾನಸಭೆಗೆ 2027ರಲ್ಲಿ ಚುನಾವಣೆ ನಡೆಯಲಿದ್ದು, ಕೇಜ್ರಿವಾಲ್ ಗಮನ ಅತ್ತ ಹರಿದಿದೆ.

ತ.ನಾ ರೈಲು ನಿಲ್ದಾಣ ಹಿಂದಿ ಫಲಕಕ್ಕೆ ಮಸಿ

ಚೆನ್ನೈ: ಕೇಂದ್ರ ಸರಕಾರ ತಮಿಳುನಾಡಿನಲ್ಲಿ ಹಿಂದಿ ಭಾಷೆಯನ್ನು ಹೇರಲೆತ್ನಿಸುತ್ತಿದೆ ಎಂದು ಆಡಳಿತಾರೂಢ ಪಕ್ಷವಾದ ಡಿಎಂಕೆ ಆರೋಪಿಸುತ್ತಿರುವ ಮಧ್ಯೆಯೇ ತಮಿಳು ಹೋರಾಟಗಾರರು ಭಾನುವಾರ ಪೊಲ್ಲಾಚಿ ರೈಲು ನಿಲ್ದಾಣದ ಫಲಕದಲ್ಲಿದ್ದ 'ಪೊಲ್ಲಾಚಿ ಜಂಕ್ಷನ್' ಎಂಬ ಹಿಂದಿ ಅಕ್ಷರಗಳಿಗೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದ ವಿಡಿಯೊ ವೈರಲ್ ಆಗಿದೆ. ಸುದ್ದಿ ತಿಳಿದ ಬಳಿಕ ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಮರಳಿ ಹಿಂದಿ ಅಕ್ಷರದಲ್ಲಿ ಫಲಕ ಬರೆಸಿ ಸರಿಪಡಿಸಿದ್ದಾರೆ. ಮಸಿ ಬಳಿದ ಸಂಬಂಧ ಪೊಲ್ಲಾಚಿಯ ರೈಲ್ವೆ ರಕ್ಷಣಾ ಪಡೆ ಅಧಿಕಾರಿಗಳು ರೈಲ್ವೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದು, ತಪಿತಸ್ಥರನ್ನು ಗುರುತಿಸಿದ್ದಾರೆ. ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ದಕ್ಷಿಣ ರೈಲ್ವೆ ಪಾಲ್ಘಾಟ್ ವಿಭಾಗದ ಅಧಿಕಾರಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕೇಂದ್ರ ಸರಕಾರ ತಮಿಳುನಾಡಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ)-2020 ಮೂಲಕ ಹಿಂದಿ ಹೇರುತ್ತಿದೆ ಎಂದು ಡಿಎಂಕೆ ಆರೋಪಿಸಿದೆ.

ದೆಹಲಿ: ಪ್ರತಿಪಕ್ಷ ನಾಯಕಿ ಅತಿಶಿ

ದೆಹಲಿ: ಆಮ್ ಆದ್ಮಿ ಪಕ್ಷದ(ಎಎಪಿ) ದೆಹಲಿ ಶಾಸಕರ ಸಭೆ ಭಾನುವಾರ ನಡೆದಿದ್ದು, ಮಾಜಿ ಮುಖ್ಯಮಂತ್ರಿ ಅತಿಶಿ ಅವರನ್ನೇ ದೆಹಲಿ ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕಿಯಾಗಿ ಆಯ್ಕೆ ಮಾಡಲಾಗಿದೆ. ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಸೇರಿದಂತೆ ಪಕ್ಷದ 22 ಶಾಸಕರು ಸಭೆಯಲ್ಲಿದ್ದರು. 'ನಂಬಿಕೆ ಇಟ್ಟು ಚುನಾಯಿಸಿದ್ದಕ್ಕಾಗಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಮತ್ತು ಶಾಸಕಾಂಗ ಪಕ್ಷದ ಸದಸ್ಯರಿಗೆ ಧನ್ಯವಾದ. ಪ್ರಬಲ ಪ್ರತಿಪಕ್ಷವಾಗಿ ಕೆಲಸ ಮಾಡುವೆ, ಸದನದಲ್ಲಿ ಜನರ ಧ್ವನಿಯಾಗುವೆ. ಬಿಜೆಪಿ ಚುನಾವಣೆ ಸಂದರ್ಭ ನೀಡಿದ ಎಲ್ಲ ಭರವಸೆಗಳನ್ನು ಈಡೇರಿಸುವಂತೆ ಒತ್ತಾಯಿಸುತ್ತದೆ' ಎಂದು ಆತಿಷಿ ಹೇಳಿದ್ದಾರೆ. ದೆಹಲಿ ವಿಧಾನಸಭೆಯ ಮೊದಲ ಅಧಿವೇಶನ ಸೋಮವಾರ ಆರಂಭವಾಗಿ 3 ದಿನ ನಡೆಯಲಿದೆ. ಫೆ.25ರಂದು ಹಿಂದಿನ ಎಎಪಿ ಸರಕಾರದ ಅವಧಿಯಲ್ಲಿನ ಸಿಎಜಿ ವರದಿಯನ್ನು ಸದನದಲ್ಲಿ ಮಂಡಿಸಲಾಗುವುದೆಂದು ಆಡಳಿತಾರೂಢ ಪಕ್ಷ ಬಿಜೆಪಿ ಹೇಳಿದೆ.

ಲಂಕಾ: ಭಾರತದ 32 ಮೀನುಗಾರರ ಸೆರೆ

ಕೊಲಂಬೊ: ದ್ವೀಪ ರಾಷ್ಟ್ರ ಶ್ರೀಲಂಕಾದ ನೌಕಾಪಡೆ, ತಮ್ಮ ಜಲಪ್ರದೇಶಕ್ಕೆ ನುಗ್ಗಿದ ಆರೋಪದಡಿ 32 ಭಾರತೀಯ ಮೀನುಗಾರರನ್ನು ಬಂಧಿಸಿ, 5 ಮೀನುಗಾರಿಕಾ ದೋಣಿಗಳನ್ನು ಭಾನು ವಾರ ವಶಪಡಿಸಿಕೊಂಡಿದೆ. ಮನ್ನಾರ್‌ನ ಉತ್ತರದ ಸಮುದ್ರ ಪ್ರದೇಶದಲ್ಲಿ ವಿಶೇಷ ಕಾರ್ಯಾಚರಣೆ ಸಂದರ್ಭ ಭಾರತದ 32 ಮೀನುಗಾ ರರನ್ನು ಬಂಧಿಸಲಾಗಿದೆ. ನಮ್ಮ ಜಲಪ್ರದೇಶ ದಲ್ಲಿ ಭಾರತೀಯರ ಮೀನುಗಾರಿಕೆಯಿಂದ ಲಂಕಾ ಮೀನುಗಾರರ ಜೀವನೋಪಾಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಲಂಕಾ ನೌಕಾಪಡೆ ಹೇಳಿದೆ. ಬಂಧಿತ 32 ಮೀನುಗಾರರನ್ನು ತಲೈಮನ್ನಾರ್ ಪಿಯರ್‌ಗೆ ಕರದೊಯ್ಯಲಾಗಿದೆ. ಕಾನೂನು ಕ್ರಮಕ್ಕಾಗಿ ಮನ್ನಾರ್‌ನ ಮೀನುಗಾರಿಕಾ ನಿರೀಕ್ಷಕರಿಗೆ ಹಸ್ತಾಂತರಿ ಸಲಾಗಿದೆ ಎಂದು ನೌಕಾಪಡೆ ತಿಳಿಸಿದೆ. ಈ ವರ್ಷದಲ್ಲಿ ಈವರೆಗೆ 131 ಭಾರತೀಯ ಮೀನುಗಾರರನ್ನು ಲಂಕಾ ನೌಕಾಪಡೆ ಬಂಧಿಸಿ ಒಟ್ಟು 18 ಮೀನುಗಾರಿಕಾ ದೋಣಿಗಳನ್ನು ವಶಪಡಿಸಿಕೊಂಡಿದೆ. 2024ರಲ್ಲಿ 529 ಭಾರತೀಯ ಮೀನುಗಾರರನ್ನು ಅಕ್ರಮ ಮೀನುಗಾರಿಕೆ ನಡೆಸಿದ ಆರೋಪದ ಮೇಲೆ ಲಂಕಾ ಬಂಧಿಸಿತ್ತು.

ವಿರಾಮ
ಪ್ರತಿ ಭಾನುವಾರ

{ಶಿವರಾಜ್ ಸಿಂಗ್ ಚೌಹಾಣ್} ಕೇಂದ್ರ ಕೃಷಿ ಸಚಿವ

ದೇಶದಲ್ಲಿ ನೈಸರ್ಗಿಕ ಕೃಷಿಗೆ ಉತ್ತೇಜನ ನೀಡಲು ರಾಷ್ಟ್ರಮಟ್ಟದ ಸಮಿತಿ ಶೀಘ್ರ ರಚಿಸಲಾಗುವುದು. ರೈತರನ್ನು ನೈಸರ್ಗಿಕ ಕೃಷಿಯತ್ತ ಮರಳುವಂತೆ ಮಾಡಲು ಸಮಿತಿ ಶ್ರಮಿಸಲಿದೆ. ಹೊಸ ಪೀಳಿಗೆಯ ಯುವಜನರಿಗೂ ನೈಸರ್ಗಿಕ ಕೃಷಿಯಲ್ಲಿ ತರಬೇತಿ ನೀಡಲಾಗುವುದು. ನೈಸರ್ಗಿಕ ಕೃಷಿಯು ವೆಚ್ಚ ತಗ್ಗಿಸುವ ಜತೆಗೆ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ.

ಕರ್ನಾಟಕ, ಕೇರಳ, ತ.ನಾಡು ಹುಲಿ ಕುಣಿತಕ್ಕೆ ಮೋದಿ ಮೆಚ್ಚುಗೆ | ಮಕ್ಕಳಲ್ಲಿ ಬೊಜ್ಜು ಸಮಸ್ಯೆ ಹೆಚ್ಚುತ್ತಿರುವುದಕ್ಕೆ ಪ್ರಧಾನಿ ಕಳವಳ

ಚಾ.ನಗರ ಸೋಲಿಗರಿಂದ ಹುಲಿ ಸಂರಕ್ಷಣೆ: ಮೋದಿ

ದೆಹಲಿ: ದೇಶದ ಹಲವೆಡೆ ಪ್ರಾಣಿ ಮತ್ತು ಮಾನವ ಸಂಘರ್ಷ ಒಂದಿಲ್ಲೊಂದು ಸಂದರ್ಭ ನಡೆಯುತ್ತಲೇ ಇರುತ್ತದೆ. ಆದರೆ ದೇಶದಲ್ಲೇ ಅತಿ ಹೆಚ್ಚು ಹುಲಿಗಳು ಇರುವ ಪ್ರದೇಶವಾದ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿನ 'ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ ಟೈಗರ್ ರಿಸರ್ವ್ ಫಾರೆಸ್ಟ್'ನಲ್ಲಿ(ಬಿಆರ್‌ಟಿ ಅರಣ್ಯ) ರಾಷ್ಟ್ರೀಯ ವನ್ಯಮೃಗವಾದ ಹುಲಿಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಆ ಭಾಗದ ಸೋಲಿಗರು ಬಹಳವಾಗಿ ಶ್ರಮಿಸುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಮನತುಂಬಿ ಪ್ರಶಂಸೆ ಮಾಡಿದ್ದಾರೆ.

ತಿಂಗಳ ಕೊನೆ ಭಾನುವಾರದ ಕಾರ್ಯಕ್ರಮವಾದ 'ಮನ್ ಕಿ ಬಾತ್'ನ 119ನೇ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಚಾಮರಾಜನಗರದ ಬಿಆರ್‌ಟಿ ಅರಣ್ಯ ದೇಶದಲ್ಲೇ ಅತಿಹೆಚ್ಚು ಹುಲಿಗಳಿರುವ ಪ್ರದೇಶವಾಗಿದೆ. ಅಲ್ಲಿ ಹುಲಿಗಳನ್ನು ಉಳಿಸುವುದರಲ್ಲಿ ಸ್ಥಳೀಯ ಸೋಲಿಗರ ಪಾತ್ರ ದೊಡ್ಡದಿದೆ. ಬೇರೆಡೆ ವನ್ಯಮೃಗ ಮತ್ತು ಮಾನವ ಸಂಘರ್ಷ ನಡೆದಿದ್ದರೆ, ಬಿಆರ್‌ಟಿ ಅರಣ್ಯದಲ್ಲಿ ಮಾತ್ರ ಸೋಲಿಗರು ಹುಲಿಗಳ ಸಂತತಿ ಹೆಚ್ಚುವಂತೆ ನಡೆದುಕೊಳ್ಳುತ್ತಿದ್ದಾರೆ. ಅವರ ಬದುಕು ವ್ಯಾಘ್ರರಾಜನ ಬದುಕಿನ ಜತೆಗೆ ಹೊಂದಿ ಕೊಂಡುಬಿಟ್ಟಿದೆ. ಹಾಗಾಗಿಯೇ ಈ ಅರಣ್ಯ ಪ್ರದೇಶದಲ್ಲಿ ವ್ಯಾಘ್ರರಾಜನ ಸಂತತಿ ಹೆಚ್ಚುತ್ತಿದೆ ಎಂದು ಸೋಲಿಗ ಸಮುದಾಯದವರ ಕೊಡುಗೆಯನ್ನು ಕೊಂಡಾಡಿದರು.

ಇದೇ ವೇಳೆ, ಕರ್ನಾಟಕದ ಹೆಮ್ಮೆಯ ಹುಲಿವೇಷ, ಹುಲಿ ಕುಣಿತವನ್ನೂ ಪ್ರಧಾನಿ ಮೋದಿ ಮೆಚ್ಚಿಕೊಂಡ ಮಾತನಾಡಿದರು. ಹುಲಿ ವೇಷ ಮತ್ತು ಕುಣಿತದ ದೃಶ್ಯ ನೋಡುಗರ ಕಣ್ಮನ ಸೆಳೆಯುತ್ತವೆ. ಈ ಜಾನಪದ ಕಲಾ ಪ್ರಪಂಚ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ ವ್ಯಾಪಕವಾಗಿದೆ ಎಂದು ದಕ್ಷಿಣ ಭಾರತದಲ್ಲಿನ ಈ ವಿಶೇಷ ಆಚರಣೆಯನ್ನು ಮನ್ ಕಿ ಬಾತ್‌ನಲ್ಲಿ ಬಹಳವಾಗಿ ಪ್ರಶಂಸಿಸಿದರು.

ವನಿತೆಯರಿಗೆ ಮಾರ್ಚ್ 8 ಗೌರವ

ಅಂತಾರಾಷ್ಟ್ರೀಯ ಮಹಿಳಾ ದಿನವಾದ ಮಾ.8ರಂದು ಮಹಿಳೆಯರನ್ನು ಗೌರವಿಸುವ ಸಲುವಾಗಿ ಈ ಬಾರಿ ಪ್ರಧಾನಿ ಮೋದಿ ಅವರ ಸಾಮಾಜಿಕ ಜಾಲತಾಣ ಖಾತೆಗಳಾದ ಎಕ್ಸ್, ಇನ್‌ಸ್ಟಾಗ್ರಾಮ್, ಫೇಸ್ ಬುಕ್ ಮೊದಲಾದವನ್ನು ದೇಶದ ಕೆಲವು ಸ್ಫೂರ್ತಿದಾಯಕ ಮಹಿಳಾ ಮಣಿಯರಿಗೆ ಹಸ್ತಾಂತರಿಸುವೆ. ಇದು ನನ್ನ ಕಡೆಯಿಂದ ಮಹಿಳಾ ದಿನದ ಉಡುಗೊರೆ ಎಂದು ಪ್ರಧಾನಿ ಮೋದಿ ಘೋಷಿಸಿದರು.

ಬುಡಕಟ್ಟು ಭಾಷೆಗಳ ಸಂರಕ್ಷಣೆಗೆ ಎಐ: ಕೃತಕ ಬುದ್ಧಿಮತ್ತೆ (ಎಐ) ಸಹಾಯದಿಂದ ಬುಡಕಟ್ಟು ಭಾಷೆಗಳನ್ನು ಸಂರಕ್ಷಿಸಲು ಪ್ರಯತ್ನಿಸುತ್ತಿರುವ ತೆಲಂಗಾಣದ ಆದಿಲಾಬಾದ್‌ನ ಸರಕಾರಿ ಶಾಲಾ ಶಿಕ್ಷಕ ತೋಡಸಂ ಕೈಲಾಶ್ ಅವರನ್ನು ಕುರಿತು ಮಾತನಾಡಿದ ಪ್ರಧಾನಿ ಮೋದಿ, ಡಿಜಿಟಲ್ ಹಾಡು ಮತ್ತು ಸಂಗೀತದಲ್ಲಿ ಅವರ ಆಸಕ್ತಿಯು ದೇಶದಲ್ಲಿನ ಬುಡಕಟ್ಟು ಭಾಷೆ-ಸಂಸ್ಕೃತಿಯ ಸಂರಕ್ಷಣೆಗೆ ನೆರವಾಗುತ್ತಿದೆ ಎಂದರು.



ಬಾಹ್ಯಾಕಾಶದಲ್ಲಿ ಇಸ್ರೊ ಶತಕ

ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಕ್ರಿಕೆಟ್ ವಾತಾವರಣವಿದೆ. ಆದರೆ ಭಾರತದ ಪ್ರತಿಷ್ಠಿತ ಸಂಸ್ಥೆ 'ಇಸ್ರೊ' ಬಾಹ್ಯಾಕಾಶದಲ್ಲಿ ಶತಕ ಗಳಿಸಿದೆ ಎಂದು ಶ್ಲಾಘಿಸಿದರು. ಇಸ್ರೊ ಸಾಧನೆ ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಶ್ರೇಷ್ಠತೆ ಅನ್ವೇಷಣೆಯಲ್ಲಿ ಒಂದು 'ಸ್ಮರಣೀಯ ಹೆಜ್ಜೆ' ಎಂದು ಕೊಂಡಾಡಿದ ಮೋದಿ, ದೇಶದ ಜನರು ವರ್ಷದಲ್ಲಿ ಕನಿಷ್ಠ ಒಂದು ದಿನವಾದರೂ ವಿಜ್ಞಾನಿಗಳಾಗಬೇಕು, ವಿಜ್ಞಾನಕ್ಕೆ ಸಂಬಂಧಿಸಿದ ಕೇಂದ್ರಗಳಿಗೆ ಭೇಟಿ ನೀಡಬೇಕು ಎಂದು ಉತ್ತೇಜನದ ಮಾತನಾಡಿದರು. ಇಸ್ರೊ ಯಶಸ್ಸಿನ ವ್ಯಾಪ್ತಿ ಬಹಳ ದೊಡ್ಡದಾಗಿದೆ, ಕಳೆದ 10 ವರ್ಷಗಳಲ್ಲಿ 460 ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಇದರಲ್ಲಿ ಬೇರೆ ದೇಶಗಳ ಅನೇಕ ಉಪಗ್ರಹಗಳು ಸೇರಿವೆ. ಇತ್ತೀಚಿನ ವರ್ಷಗಳಲ್ಲಿ, ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಮಹಿಳಾ ಶಕ್ತಿಯ ಭಾಗವಹಿಸುವಿಕೆ ನಿರಂತರ ಹೆಚ್ಚುತ್ತಿದೆ ಎಂದು ಹೆಮ್ಮೆಯಿಂದ ಮೋದಿ ಮಾತನಾಡಿದರು.

ಪರೀಕ್ಷಾ ಪೆ ಚರ್ಚಾಗೆ ಸಾಂಸ್ಥಿಕ ರೂಪ

ಪ್ರತಿವರ್ಷ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮದಲ್ಲಿ ಪರೀಕ್ಷೆ ಸಿದ್ಧರಾಗುವ ವಿದ್ಯಾರ್ಥಿ ಯೋಧರ ಜತೆ ಪರೀಕ್ಷೆಗೆ ಸಂಬಂಧಿಸಿ ವಿವಿಧ ವಿಷಯಗಳನ್ನು ಚರ್ಚಿಸುತ್ತೇನೆ. ಈ ಉಪಕ್ರಮ ಈ ಬಾರಿಯಿಂದ ಸಾಂಸ್ಥೀಕರಣಗೊಂಡಿದೆ. ಈ ಕಾರ್ಯಕ್ರಮಕ್ಕೆ ಅನೇಕ ಹೊಸ ತಜ್ಞರು ಸಹ ಸೇರುತ್ತಿದ್ದಾರೆ. ಹಲವು ವಿಷಯ ತಜ್ಞರನ್ನು ಒಳಗೊಂಡ 8 ವಿಭಿನ್ನ ಸಂಚಿಕೆಗಳನ್ನು ಸೇರಿಸಿರುವುದು ಖುಷಿಯಾಗಿದೆ. ಇದರಿಂದ ನನಗೆ ಸಂತೋಷವಾಗಿದೆ ಎಂದ ಪ್ರಧಾನಿ ಮೋದಿ, ಒಟ್ಟಾರೆ ಪರೀಕ್ಷಾ ತಯಾರಿಯಿಂದ ಆರಂಭಿಸಿ ಆರೋಗ್ಯ ರಕ್ಷಣೆ, ಮಾನಸಿಕ ಯೋಗಕ್ಷೇಮ ಮತ್ತು ಪೋಷಣೆ ವಿಷಯಗಳವರೆಗೂ ವ್ಯಾಪಕ ಶ್ರೇಣಿ ಸಂಗತಿಗಳನ್ನು ಇದರಲ್ಲಿ ಒಳಪಡಿಸಲಾಗುತ್ತಿದೆ ಎಂದು ವಿವರಿಸಿದರು.

ದೊಡ್ಡದಾಗುತ್ತಿದೆ ಬೊಜ್ಜು ಸಮಸ್ಯೆ!

ದಿನದಿಂದ ದಿನಕ್ಕೆ ದೇಶದ ಜನರಲ್ಲಿ ಬೊಜ್ಜಿನ ಪ್ರಮಾಣ ಹೆಚ್ಚುತ್ತಿದೆ. ಪ್ರತಿ 8 ಜನರಲ್ಲಿ ಒಬ್ಬರಿಗೆ ಬೊಜ್ಜಿನ ಸಮಸ್ಯೆ ಇದೆ. ಕೆಲ ವರ್ಷಗಳಿಂದ ಬೊಜ್ಜು ಸಮಸ್ಯೆ ದ್ವಿಗುಣಗೊಂಡಿದೆ. ಮಕ್ಕಳಲ್ಲಿಯಂತೂ ಬೊಜ್ಜಿನ ಸಮಸ್ಯೆ 4 ಪಟ್ಟು ಹೆಚ್ಚಾಗಿದೆ ಎಂದು ಕಳವಳ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ನೀವು ಸಣ್ಣ ಸಣ್ಣ ಪ್ರಯತ್ನಗಳಿಂದಲೇ ಬೊಜ್ಜು ಸಮಸ್ಯೆ ನಿವಾರಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು. ಆಹಾರದಲ್ಲಿ ಕಡಿಮೆ ಎಣ್ಣೆ ಬಳಕೆ, ಸ್ಥೂಲಕಾಯ ನಿಭಾಯಿಸಲು ನಿಯಮಿತ ವ್ಯಾಯಾಮ, ಕುಟುಂಬದ ಕಡೆಗೆ ನಿಮ್ಮ ಜವಾಬ್ದಾರಿ ಎಲ್ಲವನ್ನೂ ನೆನಪಿಡಬೇಕು ಎಂದ ಮೋದಿ, ಜನರು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವಂತೆ ಡಬಲ್ ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಮತ್ತು ಬಾಕ್ಸಿಂಗ್ ಚಾಂಪಿಯನ್ ನಿಖತ್ ಜರೀನ್ ಅವರ ಸಂದೇಶಗಳನ್ನು ಇದೇ ವೇಳೆ ಉಲ್ಲೇಖಿಸಿದರು. ಭಾರತ ಆರೋಗ್ಯವಂತ ರಾಷ್ಟ್ರವಾಗಲು ಜನರು ಬೊಜ್ಜಿನ ಸಮಸ್ಯೆಯಿಂದ ಮುಕ್ತಿ ಹೊಂದಬೇಕಿದೆ ಎಂದು ಉತ್ತೇಜನದ ಮಾತನಾಡಿದರು. ಮಾ.4 ವಿಶ್ವ ದಢೂತಿ ದೇಹ(ಬೊಜ್ಜು) ದಿನವಾಗಿದೆ. ಭಾರತದಲ್ಲಿನ 5 ವರ್ಷದ ಮಕ್ಕಳಿಂದ ಆರಂಭಿಸಿ 19 ವರ್ಷದವರೆಗಿನ ವಯೋಮಿತಿಯವರಲ್ಲಿ ಬೊಜ್ಜು ಹೆಚ್ಚುತ್ತಿದೆ. ಈ ವಯೋಮಾನದರಲ್ಲಿ 2024ರ ಮಾ.4ರ ಲೆಕ್ಕದಲ್ಲಿ 1.25 ಕೋಟಿ ಮಕ್ಕಳು, ಬಾಲಕ-ಬಾಲಕಿಯರು ದಢೂತಿ ದೇಹ ಹೊಂದಿರುವ ಅಂಕಿ ಅಂಶ ದಾಖಲಾಗಿದೆ.

ಕೈಲಾಶ್ ಅವರು ಎಐ ತಂತ್ರಾಂಶವನ್ನು ಬಳಸಿಕೊಂಡು 'ಕೊಲಾಮಿ ಭಾಷೆ'ಯಲ್ಲಿ ಹಾಡು ರಚಿಸಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಕೊಲಾಮಿ ಹೊರತುಪಡಿಸಿ ಇತರೆ ಭಾಷೆಗಳಲ್ಲಿಯೂ ಹಾಡುಗಳನ್ನು ರಚಿಸಲು ಅವರು ಎಐ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಅವರ ಹಾಡುಗಳನ್ನು ಸಾಮಾಜಿಕ ಜಾಲತಾಣದಲ್ಲಿ ನಮ್ಮ ಬುಡಕಟ್ಟು ಸಹೋದರ ಸಹೋದರಿಯರು ಬಹಳಷ್ಟು ಇಷ್ಟಪಡುತ್ತಿದ್ದಾರೆ ಎಂದು ಮೋದಿ ಗಮನ ಸೆಳೆದರು.

ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ವಾಗ್ದಾಳಿ

ಟ್ರಂಪ್ ಗೆಲುವಿನಿಂದ ಉದಾರವಾದಿಗಳಲ್ಲಿ ಚಿಂತೆ

ಟ್ರಂಪ್, ಮೋದಿ, ಮೆಲೋನಿ ಕಂಡರೆ ಎಡಪಂಥೀಯವರಿಗೆ ಹೊಟ್ಟೆ ಉರಿ

ವಾಷಿಂಗ್ಟನ್ ಡಿ.ಸಿ: ವಿಶ್ವದ ರಾಜಕೀಯದಲ್ಲಿನ ಎಡಪಂಥೀಯರು, ಚಿಂತಕರದ್ದು ಇಬ್ಬಗೆ ನೀತಿ, ಕುಠಿಲತೆ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಕಟುವಾಗಿ ಟೀಕಿಸಿದ್ದಾರೆ.

ವಾಷಿಂಗ್ಟನ್ ಡಿಸಿಯಲ್ಲಿ 'ಕನ್ಸರ್ವೇಟಿವ್ ಪೊಲಿಟಿಕಲ್ ಆಕ್ಷನ್ ಕಾನ್ಫರೆನ್ಸ್'(ಸಿಪಿಎಸಿ) ಉದ್ದೇಶಿಸಿ ಶನಿವಾರ ವರ್ಚುವಲ್ ಭಾಷಣ ಮಾಡಿದ ಮೆಲೋನಿ, 1990ರ ದಶಕದ ನಾಯಕ ಬಿಲ್ ಕ್ಲಿಂಟನ್ ಮತ್ತು ಟೋನಿ ಬ್ಲೇರ್ ತಮ್ಮ ಪರವಾದ 'ಎಡಪಂಥೀಯ ರಾಜಕೀಯ ಜಾಲ' ರೂಪಿಸಿಕೊಂಡು ತಮ್ಮನ್ನು 'ಉದಾರವಾದಿಗಳು' ಎಂದು ಕರೆದುಕೊಂಡರು. ಡೊನಾಲ್ಡ್ ಟ್ರಂಪ್, ಮೆಲೋನಿ, ಮಿಲ್ಲೆ, ನರೇಂದ್ರ ಮೋದಿ ಅವರುಗಳನ್ನು 'ಬಲಪಂಥೀಯರು' ಎಂದು ಗುರುತಿಸುವ ಈ ಎಡಪಂಥೀಯರು, ನಾವುಗಳು ಮಾತನಾಡಲು ಆರಂಭಿಸಿದರೆ ಸಾಕು 'ಅಯ್ಯೋ ಪ್ರಜಾಪ್ರಭುತ್ವಕ್ಕೆ ಬೆದರಿಕೆ' ಎಂದು ಹುಯಿಲೆಬ್ಬಿಸುತ್ತಾರೆ. ಇದು ಅವರಲ್ಲಿನ ದ್ವಂದ್ವ ನೀತಿಗೆ ಸ್ಪಷ್ಟ ಉದಾಹರಣೆ ಎಂದು ವಾಗ್ದಾಳಿ ನಡೆಸಿದರು.

ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಪ್ರಜಾಪ್ರಭುತ್ವಕ್ಕೆ ಅಪಾಯವಿದೆ ಎಂಬ ನಿರೂಪಣೆಯೇ ಶುದ್ಧ ಸುಳ್ಳು. ಚುನಾವಣೆಯಲ್ಲಿ 2ನೇ ಬಾರಿ ಟ್ರಂಪ್ ಗೆದ್ದ ಮೇಲಂತೂ ಎಡಪಂಥೀಯರಿಗೆ ಹೊಟ್ಟೆ ಉರಿ ಶುರುವಾಗಿದೆ. ಮತ್ತೊಂದೆಡೆ ಭಾರತದಲ್ಲಿ ಮೋದಿ ಸತತ 3ನೇ ಬಾರಿ ಅಧಿಕಾರಕ್ಕೆ ಬಂದಿರುವುದನ್ನೂ ಸಹಿಸಲಾಗುತ್ತಿಲ್ಲ. ಇಟಲಿಯಲ್ಲಿ ನಮ್ಮ ಸರಕಾರ ಇರುವುದು ಎಡಪಂಥೀಯರ ಚಿಂತೆ ಹೆಚ್ಚಿಸಿದೆ ಎಂದು ಕುಟುಕಿದರು.

ಈ ಎಡಪಂಥೀಯರು ಎನಿಸಿಕೊಂಡವರು ನಮ್ಮ(ಬಲಪಂಥೀಯರ) ಮೇಲೆ ಎಷ್ಟೇ ಮಣ್ಣೆರೆಚಿದರೂ ಬಲಪಂಥದ ಪ್ರಖರತೆ ಇನ್ನು ಕಡಿಮೆಯಾಗದು. ಈಗಾಗಲೇ ಎಡಪಂಥೀಯರ ಸುಳ್ಳುಗಳನ್ನು ಜಗತ್ತು ನಂಬುವುದನ್ನೇ ಬಿಟ್ಟುಬಿಟ್ಟಿದೆ ಎಂದು ಮಾತಿನಲ್ಲೇ ಉದಾರವಾದಿಗಳಿಗೆ ತಿವಿದರು.

ಜಾರ್ಖಂಡ್‌ನ ನಾಲ್ವರು ಕಾರ್ಮಿಕರು ಸೇರಿ 8 ಮಂದಿ | ಪ್ರಧಾನಿ ಮೋದಿ, ಜಾರ್ಖಂಡ್ ಸಿಎಂ ನೆರವಿನ ಭರವಸೆ

ಸುರಂಗದಲ್ಲಿ ಸಿಲುಕಿದ 8 ಕಾರ್ಮಿಕರ ರಕ್ಷಣಾಕಾರ್ಯ

ಶ್ರೀಶೈಲಂನಿಂದ ದೇವರಕೊಂಡಕ್ಕೆ ನೀರು ಸಾಗಿಸಲು ನಿರ್ಮಿಸಲಾಗುತ್ತಿರುವ ಈ ಸುರಂಗದೊಳಗಿನ ಸೋರಿಕೆ ಸರಿಪಡಿಸಲು 50 ಜನರಿದ್ದ ಕಾರ್ಮಿಕರ ಗುಂಪು ತೆರಳಿತ್ತು. ಆದರೆ ಕಾರ್ಯಾಚರಣೆ ವೇಳೆ ಸುರಂಗದ ಮೇಲ್ಭಾಗದ 10 ಮೀ. ವ್ಯಾಪ್ತಿಯ ಛಾವಣಿ ಏಕಾಏಕಿ ಕುಸಿದಿದ್ದು, 200 ಮೀ.ಗೂ ಹೆಚ್ಚು ಪ್ರದೇಶದಲ್ಲಿ ಮಣ್ಣು ಬಿದ್ದಿದೆ.

ಹೈದರಾಬಾದ್: ತೆಲಂಗಾಣದ ನಾಗರ್ ಕರ್ನೂಲ್ ಜಿಲ್ಲೆಯ ಶ್ರೀಶೈಲಂ ಅಣೆಕಟ್ಟಿನ ಎಡದಂಡೆ ಕಾಲುವೆ (ಎಸ್ ಎಲ್‌ಬಿಸಿ) ಭಾಗವಾಗಿ ನಿರ್ಮಾಣವಾಗುತ್ತಿದ್ದ ಸುರಂಗದ ಒಂದು ಭಾಗ ಶನಿವಾರ ಕುಸಿದಿದ್ದು, ಒಳಗಡೆ ಕೆಲಸ ಮಾಡುತ್ತಿದ್ದ ಜಾರ್ಖಂಡ್ ರಾಜ್ಯದ ನಾಲ್ವರು ಸೇರಿದಂತೆ ಒಟ್ಟು 8 ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದು, ಅವರನ್ನು ರಕ್ಷಿಸಲು ಸತತ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಶ್ರೀಶೈಲಂನಿಂದ ದೇವರಕೊಂಡಕ್ಕೆ ನೀರು ಸಾಗಿಸಲು ಈ ಸುರಂಗ ನಿರ್ಮಿಸಲಾಗುತ್ತಿದೆ. ಶನಿವಾರ ನೀರು ಸೋರುವುದು ಕಂಡಿದ್ದರಿಂದ ದುರಸ್ತಿಗೆಂದು 50 ಕಾರ್ಮಿಕರ ಗುಂಪು ಸುರಂಗದೊಳಗೆ 12 ಕಿಮೀವರೆಗೂ ತೆರಳಿತ್ತು. ದುರಸ್ತಿ ಕಾರ್ಯ ನಡೆಸುತ್ತಿದ್ದಾಗಲೇ ಸುರಂಗದ ಮೇಲ್ಭಾಗ ಏಕಾಏಕಿ ಕುಸಿಯಲಾರಂಭಿಸಿತು. ಸುರಂಗದ ಹೊರತುದಿಯಿಂದ 14 ಕಿ.ಮೀ. ದೂರದಲ್ಲಿ ಅವಘಡವಾಗಿದೆ. ತಕ್ಷಣವೇ 42 ಕಾರ್ಮಿಕರು ಹೊರಗೋಡಿ ಬರುವಲ್ಲಿ ಯಶಸ್ವಿಯಾದರು. ಈ 42 ಕಾರ್ಮಿಕರಲ್ಲಿ 13 ಮಂದಿಗೆ ಗಾಯವಾಗಿದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಉಳಿದ 8 ಕಾರ್ಮಿಕರು ಕುಸಿದ ಮಣ್ಣಿನ ಆಚೆಬದಿಯಲ್ಲೇ ಸಿಲುಕಿಕೊಂಡಿದ್ದು, ಅವರನ್ನು ಹೊರತರುವುದಕ್ಕೆ ಕಾರ್ಯಾಚರಣೆ ಆರಂಭಿಸಲಾಗಿದೆ. ಸುರಂಗದೊಳಗೆ ಸಿಲುಕಿದವರ ಸಂಪರ್ಕಕ್ಕಾಗಿ ಪ್ರಯತ್ನ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ ಸ್ಥಳಕ್ಕೆ ತೆಲಂಗಾಣ ನೀರಾವರಿ ಸಚಿವ ಎನ್.ಉತ್ತಮ್ ಕುಮಾರ್ ರೆಡ್ಡಿ ಮತ್ತು ಪ್ರವಾಸೋದ್ಯಮ ಸಚಿವ ಜೂಪಲ್ಲಿ ಕೃಷ್ಣರಾವ್ ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಿದ್ದಾರೆ. ಶ್ರೀಶೈಲಂ ಜಿಲ್ಲಾಧಿಕಾರಿ, ಎಸ್ಪಿ, ಅಗ್ನಿಶಾಮಕ ಇಲಾಖೆಯ ಹಿರಿಯ ಅಧಿಕಾರಿ ಗಳು, ಹೈಡ್ರಾ ಮತ್ತು ನೀರಾವರಿ ಇಲಾಖೆ ಅಧಿಕಾರಿಗಳು ಸುರಂಗದ ಸ್ಥಳಕ್ಕೆ ತಲುಪಿದ್ದು, ರಕ್ಷಣಾ ಕಾರ್ಯಾಚರಣೆಗೆ ಅಗತ್ಯ ನೆರವು ಒದಗಿಸುತ್ತಿದ್ದಾರೆ.

ಕೊಳವೆ ಮಾರ್ಗಕ್ಕೆ ಯತ್ನ

ಸುರಂಗದ ಪ್ರವೇಶ ದ್ವಾರದಿಂದ 14 ಕಿಮೀ. ದೂರದಲ್ಲಿ 8 ಕಾರ್ಮಿಕರು ಸಿಲುಕಿರುವ ಸ್ಥಳವನ್ನು ರಕ್ಷಣಾ ಕಾರ್ಯಾಚರಣೆಯ ತಂಡ ಭಾನುವಾರ ಸಂಜೆ ತಲುಪಿದ್ದು, ಕಾರ್ಮಿಕರ ಜತೆ ಸಂಪರ್ಕ ಸಾಧಿಸಲು ಯತ್ನಿಸುತ್ತಿದೆ. ಅದರ ಭಾಗವಾಗಿ ಕುಸಿದಿರುವ ಮಣ್ಣಿನ ಮಧ್ಯೆಯೇ ಕೊಳವೆ ಮಾರ್ಗ ಕೊರೆಯುವ ಪ್ರಯತ್ನ ಮಾಡುತ್ತಿದೆ. ಅದು ಕಾರ್ಯಸಾಧ್ಯವಾದರೆ, ಒಳಗೆ ಸಿಲುಕಿರುವ ಕಾರ್ಮಿಕರಿಗೆ ಮೊದಲಿಗೆ ನೀರು-ಆಹಾರ ಕೊಡಲು, ಸಂಪರ್ಕ ಸಾಧಿಸಲು ಸಾಧ್ಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಕ್ಷಣಾ ಕಾರ್ಯಕ್ಕೆ ಎಲ್ಲಾ ನೆರವು: ಪ್ರಧಾನಿ

ಪ್ರಧಾನಿ ನರೇಂದ್ರ ಮೋದಿ ಅವರು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರಿಗೆ ಶನಿವಾರ ಸಂಜೆ ಕರೆ ಮಾಡಿ, ಮಾಹಿತಿ ಪಡೆದುಕೊಂಡರು. ರಕ್ಷಣಾ ಕಾರ್ಯಾಚರಣೆಗಾಗಿ ತಕ್ಷಣವೇ 'ಎನ್‌ಡಿಆರ್‌ಎಫ್' ತಂಡಗಳನ್ನು ರವಾನಿಸಲಾಗಿದೆ. ಕೇಂದ್ರದಿಂದ ಸಾಧ್ಯವಿರುವ ಎಲ್ಲಾ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು. ಇನ್ನೊಂದೆಡೆ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ರೇವಂತ್ ರೆಡ್ಡಿ ಅವರಿಗೆ ಕರೆಮಾಡಿ, ಸುರಂಗದಲ್ಲಿ ಸಿಲುಕಿರುವ ಜಾರ್ಖಂಡ್ ಕಾರ್ಮಿಕರ ರಕ್ಷಣೆ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದುಕೊಂಡರು ಎಂದು ಮೂಲಗಳು ತಿಳಿಸಿವೆ.

ಅಮಲಲ್ಲಿ ಇರಿದು ಕೊಂದ ಸಹಪಾಠಿ

ಕೇರಳದಲ್ಲಿ ಮಿಜೊರಾಂ ಬಿಟೆಕ್ ವಿದ್ಯಾರ್ಥಿ ಹತ್ಯೆ

ತಿರುವನಂತಪುರಂ: ಜಿಲ್ಲೆಯ ನಗರೂರು ಭಾಗದಲ್ಲಿನ 'ರಾಜಧಾನಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಟೆಕ್ನಾಲಜಿ'(ಆರ್‌ಐಇಟಿ) ಕಾಲೇಜಿನಲ್ಲಿ ಬಿಟೆಕ್ ವ್ಯಾಸಂಗ ಮಾಡುತ್ತಿದ್ದ ಮಿಜೋರಾಂನ ವಿದ್ಯಾರ್ಥಿ ವ್ಯಾಲೆಂಟೇನ್‌ನನ್ನು(22) ಮದ್ಯದ ಅಮಲಿನಲ್ಲಿದ್ದ ಸಹಪಾಠಿ ಲೋಮಾ ಎಂಬಾತ ಕಾಲೇಜು ಸಮೀಪದ ನೆಡುಂಪರಂಬು ಜಂಕ್ಷನ್ನಲ್ಲಿ ಶನಿವಾರ ರಾತ್ರಿ 11 ಗಂಟೆಯಲ್ಲಿ ಇರಿದು ಕೊಂದಿದ್ದಾನೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು, ಗಾಯಾಳು ವಿದ್ಯಾರ್ಥಿಯನ್ನು ಕೆಟಿಸಿಟಿ ಆಸ್ಪತ್ರೆಗೆ ದಾಖಲಿಸಿದರೂ ಆತ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಮುಂಜಾನೆ ಅಸುನೀಗಿದ.

ಮದ್ಯದ ಅಮಲಿನಲ್ಲಿದ್ದ ವಿದ್ಯಾರ್ಥಿಗಳು ಸ್ನೇಹಿತನ ರೂಂನಲ್ಲಿ ಜಗಳವಾಡಿದ್ದಾರೆ. ರಾತ್ರಿ 11ರ ವೇಳೆ ನೆಡುಂಪರಂಬು ಜಂಕ್ಷನ್‌ಗೆ ವ್ಯಾಲೆಂಟೇನ್‌ನನ್ನು ಲೋಮಾ ಕರೆಸಿ ಎದೆಗೆ ಚಾಕುವಿನಿಂದ ಇರಿದಿದ್ದಾನೆ. ಘಟನಾ ಸ್ಥಳದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ನಗರೂರು ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಮಹಾಯುತಿಯಲ್ಲಿ ಮತ್ತೆ ಭಿನ್ನಮತ!

ಶಿಂದೆ ಕೋಟೆಯಲ್ಲಿ ಬಿಜೆಪಿ ಸಚಿವ ಜನತಾ ದರ್ಬಾರ್



ಥಾಣೆ: ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನೆ-ಎನ್‌ಸಿಪಿ ಒಳಗೊಂಡ ಆಡಳಿತಾರೂಢ ಮೈತ್ರಿಕೂಟ 'ಮಹಾಯುತಿ'ಯಲ್ಲಿ ಭಿನ್ನಮತದ ಕಿಡಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಉಪ ಮುಖ್ಯಮಂತ್ರಿ, ಶಿವಸೇನೆ ನಾಯಕ ಏಕನಾಥ ಶಿಂದೆ ಅವರ ರಾಜಕೀಯ ಭದ್ರಕೋಟೆಯಾದ ಥಾಣೆಯಲ್ಲಿ ಮಹಾರಾಷ್ಟ್ರ ಅರಣ್ಯ ಸಚಿವ ಮತ್ತು ಬಿಜೆಪಿ ನಾಯಕ ಗಣೇಶ್ ನಾಯಕ್ ಸೋಮವಾರ 'ಜನತಾ ದರ್ಬಾರ್' ನಡೆಸಲು ಸಜ್ಜಾಗಿದ್ದು, ಇದು ಶಿಂದೆ ಬಣದಲ್ಲಿ ತಳಮಳ ಹುಟ್ಟುಹಾಕಿದೆ. ಥಾಣೆ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಜನತಾ ದರ್ಬಾರ್‌ಗೆ ಬೃಹತ್ ಹೋರ್ಡಿಂಗ್‌ಗಳನ್ನು ಅಳವಡಿಸಲಾಗಿದೆ. ಇದು ಈ ಭಾಗದಲ್ಲಿನ ಶಿವಸೇನೆ ಪ್ರಾಬಲ್ಯಕ್ಕೆ ಸವಾಲು. ಬಿಜೆಪಿ-ಶಿವಸೇನೆ ನಡುವೆ ಹೊಂದಾಣಿಕೆ ಇಲ್ಲ ಎಂಬುದಕ್ಕೆ ಇದು ತಾಜಾ ಉದಾಹರಣೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. 'ನನ್ನನ್ನು ಲಘುವಾಗಿ ಪರಿಗಣಿಸಬೇಡಿ, ನನ್ನಿಂದಾಗಿಯೇ ಮಹಾ ವಿಕಾಸ್ ಅಘಾಡಿ(ಎಂವಿಎ) ಸರಕಾರ ಪತನವಾಗಿ, ಮಹಾಯುತಿ ಸರಕಾರ ರಚನೆ ಆಗಿತ್ತು ಎಂಬುದನ್ನು ಮರೆಯಬೇಡಿ ಎಂದು ಡಿಸಿಎಂ ಏಕನಾಥ್ ಶಿಂದೆ ಬಿಜೆಪಿ ನಾಯಕರನ್ನು ಕುರಿತು ಮಾತನಾಡಿದ್ದರು.

ಟ್ರಂಪ್ 2.0 ಸಚಿವ ಸಂಪುಟ -ಆಡಳಿತಗಾರರ ತಂಡ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಪರಮಾಪ್ತ, ಭಾರತ ಮೂಲದ ಅಮೆರಿಕ ಪ್ರಜೆ ಕಾಶ್ ಪಟೇಲ್ ಟ್ರಂಪ್ 2.0 ಸರಕಾರದಲ್ಲಿ ಎಫ್‌ಬಿಐ ಮುಖ್ಯಸ್ಥರಾಗುವುದಕ್ಕೆ ಅಮೆರಿಕ ಸಂಸತ್ತು ಅನುಮೋದನೆ ನೀಡಿರುವುದು ರಿಪಬ್ಲಿಕನ್ ಪಕ್ಷದ ಮೇಲೆ ಟ್ರಂಪ್‌ಗೆ ಇರುವ ಬಲವಾದ ಹಿಡಿತಕ್ಕೆ ಸಾಕ್ಷಿಯಾಗಿದೆ. ಟ್ರಂಪ್ 2.0 ಸರಕಾರದಲ್ಲಿ ಮಹತ್ವದ ವಿವಿಧ ಹುದ್ದೆಗಳನ್ನು ಅಲಂಕರಿಸಿದವರ ಕಿರು ಪರಿಚಯ ಇಲ್ಲಿದೆ.

1 **ಕಾಶ್ ಪಟೇಲ್:** ಎಫ್‌ಬಿಐ ನಿರ್ದೇಶಕ (ನೇಮಕಕ್ಕೆ 51 ಸಂಸದರ ಸಮ್ಮತ). ಟ್ರಂಪ್ ಮೊದಲ ಆಡಳಿತ ಅವಧಿಯಲ್ಲಿ ಉನ್ನತ ಸ್ಥರದ ಹಲವು ಜವಾಬ್ದಾರಿಗಳನ್ನು ನಿಭಾಯಿಸಿದ್ದ ಕಾಶ್. ಈ ಬಾರಿ ಅಧ್ಯಕ್ಷ ಟ್ರಂಪ್‌ರ ರಾಜಕೀಯ ಕಡು ವಿರೋಧಿಗಳ ಬೆನ್ನು ಹತ್ತುವ ಜವಾಬ್ದಾರಿ.

2 **ಮಾರ್ಕೊ ರುಬಿಯೊ:** ವಿದೇಶಾಂಗ ಸಚಿವ(ನೇಮಕಕ್ಕೆ 88 ಸಂಸದರ ಸಮ್ಮತ). ಫ್ಲೋರಿಡಾ ರಾಜ್ಯದ ಮಾಜಿ ಸೆನೆಟರ್. 2016ರಲ್ಲಿ ಟ್ರಂಪ್ ಅಮೆರಿಕ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಲು ಬಯಸಿದಾಗ ರಿಪಬ್ಲಿಕನ್ ಪಕ್ಷದಲ್ಲಿ ಪ್ರತಿಸ್ಪರ್ಧಿಯಾಗಿದ್ದ ರುಬಿಯೊ ಪರಾಜಯ ಹೊಂದಿದರು.

3 **ಪಾಮ್ ಬೊಂಡಿ:** ಅಟಾರ್ನಿ ಜನರಲ್ (ನೇಮಕಕ್ಕೆ 54 ಸಂಸದರ ಸಮ್ಮತ). 2020ರಲ್ಲಿ ಟ್ರಂಪ್ ವಿರುದ್ಧ ಸಂಸತ್ತು ವಾಗ್ದಂಡನೆಗೆ ಮುಂದಾದಾಗ ಟ್ರಂಪ್ ಪರ ಕಾನೂನು ತಜ್ಞರ ತಂಡದ ಭಾಗವಾಗಿದ್ದಾಕೆ. ಟ್ರಂಪ್ ವಿರುದ್ಧದ ಅಪರಾಧದ ಮೊಕದ್ದಮೆಗಳಲ್ಲಿ ನೆರವಾದಾಕೆ.

4 **ತುಳಸಿ ಗಬ್ಬಾರ್ಡ್:** ರಾಷ್ಟ್ರೀಯ ಗುಪ್ತದಳ ಮುಖ್ಯಸ್ಥೆ(ನೇಮಕಕ್ಕೆ 52 ಸಂಸದರ ಸಮ್ಮತ). ಹವಾಯಿ ಕ್ಷೇತ್ರದಿಂದ ಡೆಮಾಕ್ರೆಟಿಕ್ ಪಕ್ಷದ ಸಂಸದೆಯಾಗಿದ್ದರು. 2022ರಲ್ಲಿ ಡೆಮಾಕ್ರೆಟಿಕ್ ಪಕ್ಷ ತೊರೆದು ಟ್ರಂಪ್‌ರ ಪರಮಾಪ್ತರ ತಂಡದ ಭಾಗವಾದರು.

5 **ಪೀಟ್ ಹೆಗ್ಸೆಥ್:** ರಕ್ಷಣಾ ಸಚಿವ(51 ಸಂಸದರ ಸಮ್ಮತ). 'ಫಾಕ್ಸ್ ನ್ಯೂಸ್' ಟಿವಿಯ ಮಾಜಿ ಚರ್ಚಾಪಟು. ಲೈಂಗಿಕ ದೌರ್ಜನ್ಯದ ಆರೋಪಗಳು ಎದುರಾಗಿದ್ದ ಸಂದರ್ಭದಲ್ಲೂ ಟ್ರಂಪ್‌ಗೆ ಬೆಂಬಲವಾಗಿ ನಿಂತಿದ್ದರು.

6 **ರಾಬರ್ಟ್ ಎಫ್.ಕೆನಡಿ ಜ್ಯೂನಿಯರ್:** ಆರೋಗ್ಯ ಮತ್ತು ಮಾನವ ಸೇವಾ ಸಚಿವ (ನೇಮಕಕ್ಕೆ 52 ಸಂಸದರ ಸಮ್ಮತ). ಡೆಮಾಕ್ರೆಟಿಕ್ ಪಕ್ಷದಲ್ಲಿ ಮಹಾನಾಯಕರೆನಿಸಿಕೊಂಡಿದ್ದ ರಾಬರ್ಟ್ ಕೆನಡಿ ಅವರ ಪುತ್ರ. ಲಸಿಕೆಯಿಂದಾಗಿ ಆಟಿಸಂ ಸಮಸ್ಯೆ ಕಾಣಿಸಿಕೊಳ್ಳುತ್ತದೆ ಎಂಬ ಆರೋಪಕ್ಕೆ ದನಿಗೂಡಿಸಿದ್ದರು.

7 **ಕ್ರಿಸ್ಟಿ ನೊಯೆಮ್:** ಆಂತರಿಕ ಭದ್ರತಾ ಸಚಿವೆ(ನೇಮಕಕ್ಕೆ 59 ಸಂಸದರ ಸಮ್ಮತ). 'ಅಕ್ರಮ ವಲಸಿಗರ ಸಾಮೂಹಿಕ ಗಡಿಪಾರು'-ಟ್ರಂಪ್‌ರ ಈ ಪ್ರಮುಖ ನಿರ್ಧಾರವನ್ನು ಬೆಂಬಲಿಸಿದವರು. ಅಕ್ರಮ ವಲಸೆ ತಡೆಗೆ ಮೆಕ್ಸಿಕೊ ಗಡಿಗೆ ಸೌತ್ ಡಕೋಟಾ ತುಕಡಿಗಳನ್ನು ರವಾನಿಸಿದರು.

8 **ಸ್ಕಾಟ್ ಬೆಸೆಂಟ್,** ಖಜಾನೆ ಸಚಿವರು (ನೇಮಕಕ್ಕೆ 68 ಸಂಸದರ ಮತ)

9 **ಡೌಗ್ ಬರ್ಗಮ್,** ಒಳಾಡಳಿತ ಸಚಿವ (ನೇಮಕಕ್ಕೆ 79 ಸಂಸದರ ಮತ)

10 **ಡೌಗ್ ಕಾಲಿನ್ಸ್,** ಸೇನಾನಿಗಳ ವ್ಯವಹಾರ ಖಾತೆ ಸಚಿವ (ನೇಮಕಕ್ಕೆ 77 ಸಂಸದರ ಮತ)

11 **ಸೀನ್ ಡಫ್ಫಿ:** ಸಾರಿಗೆ ಸಚಿವರು (ನೇಮಕಕ್ಕೆ 77 ಸಂಸದರ ಮತ)

12 **ಕೆಲ್ಲಿ ಲೂಯಿಫ್ಲರ್,** ಸಣ್ಣ ವಹಿವಾಟುಗಳ ಆಡಳಿತ ನಿರ್ವಹಣೆ ಸಚಿವೆ (ನೇಮಕ್ಕೆ 52 ಸಂಸದರ ಮತ)

13 **ಹೋವಾರ್ಡ್ ಲ್ಯುಟ್ನಿಕ್,** ವಾಣಿಜ್ಯ ಸಚಿವ (ನೇಮಕಕ್ಕೆ 51 ಸಂಸದರ ಮತ)

14 **ಜಾನ್ ರ್‍ಯಾಟ್‌ಕ್ಲಿಫ್,** ಕೇಂದ್ರ ಗುಪ್ತಚರ ದಳದ ನಿರ್ದೇಶಕರು (74 ಸಂಸದರ ಮತ)

15 **ಬ್ರೂಕ್ ಎಲ್ ರೋಲಿನ್ಸ್,** ಕೃಷಿ ಸಚಿವರು (72 ಸಂಸದರ ಮತ)

16 **ಸ್ಕಾಟ್ ಟರ್ನರ್,** ವಸತಿ ಮತ್ತು ನಗರ ಅಭಿವೃದ್ಧಿ ಸಚಿವರು (55 ಸಂಸದರ ಮತ)

17 **ರಸ್ಸೆಲ್ ವ್ಹಾಟ್,** ಬಜೆಟ್ ಮತ್ತು ಆಡಳಿತ ಕಚೇರಿ ನಿರ್ದೇಶಕರು (53 ಸಂಸದರ ಮತ)

18 **ಕ್ರಿಸ್ ರೈಟ್,** ಇಂಧನ ಸಚಿವರು (59 ಸಂಸದರ ಮತ)

19 **ಲೀ ಝೆಲ್ಡಿನ್,** ಪರಿಸರ ಸಂರಕ್ಷಣಾ ಸಂಸ್ಥೆ ಆಡಳಿತಗಾರರು (56 ಸಂಸದರ ಮತ)

ನೇಮಕವಾಗಿದ್ದು, ಸಂಸತ್ ಸಮ್ಮತಿ ಬಾಕಿ

20 **ಲೋರಿ ಛಾವೆಜ್-ಡಿ ರೆಮೆರ್,** ಕಾರ್ಮಿಕ ಸಚಿವರು

21 **ಜಾಮ್‌ಲೆಸನ್ ಗ್ರೀರ್,** ಅಮೆರಿಕ ವ್ಯಾಪಾರ ಪ್ರತಿನಿಧಿ

22 **ಎಲೀಸ್ ಸ್ಟಿಫಾನಿಕ್,** ವಿಶ್ವಸಂಸ್ಥೆಗೆ ಅಮೆರಿಕದ ರಾಯಭಾರಿ

23 **ಲಿಂಡಾ ಮೆಕ್‌ಮೋಹನ್,** ಶಿಕ್ಷಣ ಸಚಿವೆ

ಶಿಕ್ಷಣ ಇಲಾಖೆಗೆ ಹೊಸ ರೂಪ ಕೊಡುವ ಇರಾದೆ ಹೊಂದಿರುವ ಶತಕೋಟ್ಯಾಧೀಶೆ. ಟ್ರಂಪ್‌ರ ಕಟ್ಟಾ ಬೆಂಬಲಿಗರು. 'ಡಬ್ಲ್ಯುಡಬ್ಲ್ಯುಇ' ಮಾಜಿ ಸಿಇಒ

ಸಮಾಚಾರ ಸಣ್ಣದಲ್ಲ

ಜೂನ್ 26ಕ್ಕೆ ರಾಷ್ಟ್ರವ್ಯಾಪಿ ಮುಷ್ಕರ

ದೆಹಲಿ: ವಿದ್ಯುತ್ ವಲಯದ ಖಾಸಗೀಕರಣ ವಿರೋಧಿಸಿ ಜೂನ್ 26ರಂದು ರಾಷ್ಟ್ರವ್ಯಾಪಿ ಮುಷ್ಕರ ನಡೆಸಲು ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟವು (ಎಐಪಿಇಎಫ್) ಭಾನುವಾರ ಕರೆ ನೀಡಿದೆ. ರಾಷ್ಟ್ರವ್ಯಾಪಿ ಮುಷ್ಕರದ ಯಶಸ್ಸಿಗಾಗಿ ಏಪ್ರಿಲ್, ಮೇ ತಿಂಗಳಲ್ಲಿ ದೇಶದ ಎಲ್ಲ ಪ್ರಾಂತ್ಯಗಳಲ್ಲೂ ಬೃಹತ್ ಸಮಾವೇಶ ನಡೆಸಲು ವಿದ್ಯುತ್ ಇಲಾಖೆಯ ನೌಕರರು ಮತ್ತು ಎಂಜಿನಿಯರ್‌ಗಳ ರಾಷ್ಟ್ರೀಯ ಸಮನ್ವಯ ಸಮಿತಿ ನಿರ್ಧರಿಸಿದೆ. ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಖಾಸಗೀಕರಣ ಪ್ರಕ್ರಿಯೆಯನ್ನು ವಿರೋಧಿಸಿ ನಾಲ್ಕು ಬೃಹತ್ ರ‍್ಯಾಲಿಗಳನ್ನು ನಡೆಸಲಾಗುತ್ತದೆ.

ಪನ್ನೀರ್ ಸೆಲ್ವಂಗೆ ಪಕ್ಷದಲ್ಲಿ ಸ್ಥಾನವಿಲ್ಲ

ಚೆನ್ನೈ: ಉಚ್ಚಾಟಿತ ನಾಯಕ ಪನ್ನೀರ್ ಸೆಲ್ವಂ ಅವರನ್ನು ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಎಐಎಡಿಎಂಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಭಾನುವಾರ ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ 77ನೇ ಜನ್ಮದಿನದ ಪೂರ್ವಭಾವಿಯಾಗಿ ಪಕ್ಷದ ಕಾರ್ಯಕರ್ತರಿಗೆ ಪತ್ರ ಬರೆದಿರುವ ಪಳನಿಸ್ವಾಮಿ ಅವರು, ತೋಳ ಮತ್ತು ಕುರಿಗಳು ಸಹಬಾಳ್ವೆಯಿಂದಿರಲು ಸಾಧ್ಯವೇ?, ಕಳೆ ಮತ್ತು ಬೆಳೆ ಎರಡು ಫಸಲಿನ ಭಾಗವಾಗಲು ಸಾಧ್ಯವೆ? ಒಬ್ಬ ನಿಷ್ಠಾವಂತ ಮತ್ತು ಒಬ್ಬ ದೇಶದ್ರೋಹಿ ಒಟ್ಟಾಗಿ ನಿಲ್ಲಲು ಸಾಧ್ಯವೇ? ಇಲ್ಲ ಎಂಬ ನಿಮ್ಮ ಮಾತು ನನಗೆ ಕೇಳಿದೆ ಎಂದು ಹೇಳಿದ್ದಾರೆ. ಆ ಮೂಲಕ ಪನ್ನೀರ್ ಸೆಲ್ವಂ ಅವರಿಗೆ ಎಐಎಡಿಎಂಕೆಯಲ್ಲಿ ಸ್ಥಾನವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಎಐಎಡಿಎಂಕೆ ಮರಳಲು ಸಿದ್ಧರಿರುವುದಾಗಿ ಹೇಳಿದ್ದ ಪನ್ನೀರ್ ಸೆಲ್ವಂ, ಪಕ್ಷದ ಪ್ರಧಾನ ಕಾರ್ಯದರ್ಶಿ ಯಾರಾಗಬೇಕೆಂಬುವುದನ್ನು ಪಕ್ಷದ ಕಾರ್ಯಕರ್ತರೇ ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದ್ದರು. ಯಾವುದೇ ಷರತ್ತುಗಳಿಲ್ಲದೇ ನಾನು, ಟಿಟಿವಿ ದಿನಕರನ್ ಮತ್ತು ಶಶಿಕಲಾ ಅವರು ಎಐಎಡಿಎಂಕೆಗೆ ಮರಳಲು ಸಿದ್ಧರಿದ್ದೇವೆ. ಮಾತುಕತೆ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಿದ್ದೇವೆ ಎಂದು ಶನಿವಾರ ಪನ್ನೀರ್ ಸೆಲ್ವಂ ಅವರು ಇಂಗಿತ ವ್ಯಕ್ತಪಡಿಸಿದ್ದರು.

ಅಭಿವೃದ್ಧಿ ಯೋಜನೆ: ಅಮೆರಿಕದಿಂದ ನೆರವು

ದೆಹಲಿ: ಅಮೆರಿಕದಿಂದ 2024ನೇ ಹಣಕಾಸು ವರ್ಷದಲ್ಲಿ 75 ಕೋಟಿ ಡಾಲರ್ (6500 ಕೋಟಿ ರು.) ಆರ್ಥಿಕ ನೆರವು ಭಾರತಕ್ಕೆ ಬಂದಿದೆ. ಆದಷ್ಟೂ ಹಣ 7 ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ್ದಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಭಾನುವಾರ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಇದರ ಹೊರತಾಗಿ, ಅದರಲ್ಲೂ ಮತದಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಯಾವುದೇ ಹಣ ಅಮೆರಿಕದಿಂದ ಭಾರತಕ್ಕೆ 2024ನೇ ಹಣಕಾಸು ವರ್ಷದಲ್ಲಿ ಬಂದಿಲ್ಲ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ. ಯುಎಸ್ ಏಡಿ ಹೆಸರಿನಲ್ಲಿ 2023-24ರಲ್ಲಿಯು 9.70 ಕೋಟಿ ಡಾಲರ್(825 ಕೋಟಿ ರು.) ನೆರವು ಬಂದಿದೆ. ಅದೂ ಕೂಡಾ ಏಳು ವಿ.ವಿಧ ಯೋಜನೆಗಳಿಗೆ ಸಂಬಂಧಿಸಿದ್ದಾಗಿದೆ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ. ಚುನಾವಣೆ ಮತ್ತು ಮತದಾನ ಹೆಚ್ಚಳ ವಿಚಾರಗಳು ಪ್ರಸ್ತಾಪವಾಗಿಲ್ಲ.

ಕೆರೆಯಲ್ಲಿ ಮುಳುಗಿ ಬಾಲಕರಿಬ್ಬರು ಸಾವು

ಹಾವೇರಿ: ಬಹಿಲು ಬಹಿರ್ದೆಸೆ ಮುಗಿಸಿ ಕೈಕಾಲು ತೊಳೆಯಲು ಕೆರೆಗೆ ಹೋಗಿದ್ದ ಇಬ್ಬರು ಬಾಲಕರು ಕೆರೆಯಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಹಾನಗಲ್ ತಾಲೂಕಿನ ಕೊಪ್ಪರಸಿಕೊಪ್ಪ ಗ್ರಾಮದಲ್ಲಿ ನಡೆದಿದೆ. ಜಗದೀಶ್ ನಾಗೋಜಿ ಎಂಬವರ ಪುತ್ರ ನಿಖಿಲ್ ನಾಗೋಜಿ (11) ಮತ್ತು ಪ್ರಕಾಶ್ ಚೋಳಪ್ಪನವರ್ ಎಂಬವರ ಪುತ್ರ ಧನುಷ್ ಚೋಳಪ್ಪನವರ್ (13) ಮೃತ ಬಾಲಕರು ಎಂದು ಗುರುತಿಸಲಾಗಿದೆ. ಬಾಲಕರು ಗ್ರಾಮದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಬಳಿಕ ಬಹಿಲು ಬಹಿರ್ದೆಸೆ ಮುಗಿಸಿ ಕೈಕಾಲು ತೊಳೆಯಲು ದೊಡ್ಡಕೆರೆಗೆ ಹೋಗಿದ್ದರು. ಈ ಸಂದರ್ಭದಲ್ಲಿ ಬಾಲಕರು ಕಾಲುಜಾರಿ ಕೆರೆಗೆ ಬಿದ್ದಿದ್ದು, ಈಜು ಬಾರದ ಕಾರಣ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಬಾಲಕರು ಕೆರೆಯಲ್ಲಿ ಮುಳುಗಿರುವ ಬಗ್ಗೆ ವಿಷಯ ತಿಳಿದ ಸ್ಥಳೀಯರು ಅವರನ್ನು ಕೆರೆಯಿಂದ ಮೇಲೆತ್ತಿದ್ದಾರೆ. ಆನಂತರ ಬಾಲಕರನ್ನು ಹಾನಗಲ್ ತಾಲೂಕು ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದು, ಅವರನ್ನು ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದ್ದಾರೆ. ಇನ್ನು, ಬಾಲಕರ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಹಾನಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆ ಸಂಬಂಧ ಹಾನಗಲ್ ಪೊಲೀಸ್ ಠಾಣೆಯಲ್ಲಿ ನಿಖಿಲ್ ತಂದೆ ಜಗದೀಶ್ ನಾಗೋಜಿ ಪ್ರಕರಣ ದಾಖಲಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಎಂ. ಕೆ. ಸ್ಟಾಲಿನ್ } ತಮಿಳುನಾಡು ಸಿ.ಎಂ

ಕೇಂದ್ರ ಸರಕಾರವು ರಾಜ್ಯಕ್ಕೆ 10,000 ಕೋಟಿ ರು. ಹಣವನ್ನು ನೀಡಲು ಮುಂದಾದರೂ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಒಪ್ಪುವುದಿಲ್ಲ. ಎನ್‌ಇಪಿಗೆ ವಿರೋಧವು ಕೇವಲ ಹಿಂದಿ ಹೇರಿಕೆ ಪ್ರಯತ್ನದಿಂದ ಮಾತ್ರವಲ್ಲ, ವಿದ್ಯಾರ್ಥಿಗಳ ಭವಿಷ್ಯ ಮತ್ತು ಸಾಮಾಜಿಕ ನ್ಯಾಯ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮಗಳನ್ನು ಬೀರುವ ಹಲವಾರು ಇತರ ಅಂಶಗಳಿಂದಲೂ ಈ ನೀತಿಗೆ ನಮ್ಮ ಸರಕಾರದ ವಿರೋಧವಿದೆ.

600ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ನ್ಯಾಯ | ನೇರ ದೂರುಗಳಿಗೆ ತ್ವರಿತ ನ್ಯಾಯ

ಕೋಚಿಂಗ್ ಸೆಂಟರ್‌ಗಳ ನ್ಯೂನತೆ ಸಹಾಯವಾಣಿಯಿಂದ ನ್ಯಾಯ

ದೆಹಲಿ: ಕೋಚಿಂಗ್ ಸೆಂಟರ್ ತೆರೆದು ಅಭ್ಯರ್ಥಿಗಳಿಗೆ ಸರಿಯಾಗಿ ಸ್ಪಂದಿಸದಿರುವ ಶಿಕ್ಷಣ ಸಂಸ್ಥೆಗಳಿಗೆ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಬಿಸಿ ಮುಟ್ಟಿಸಿದೆ. ವಂಚನೆಗೆ ಒಳಗಾಗಿ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಮೊರೆ ಹೋದ 600ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿದೆ. ಇತ್ತೀಚಿನ ದಿನಗಳಲ್ಲಿ ನಾಗರಿಕ ಸೇವೆ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ಉನ್ನತ ಶಿಕ್ಷಣದ ತರಬೇತಿ ಕೇಂದ್ರ (ಕೋಚಿಂಗ್ ಸೆಂಟರ್) ತೆರೆದು ಶುಲ್ಕ ಪಾವತಿಸಿಕೊಂಡು ಬಳಿಕ ಸೀಟ್ ಇಲ್ಲವೆಂದು ವಂಚಿಸುವುದು ಮತ್ತು ಸೂಕ್ತ, ಸಮರ್ಪಕ ಅಭ್ಯಾಸ ಪರಿಕರ, ತರಗತಿ ನೀಡದೇ ವಿದ್ಯಾರ್ಥಿಗಳನ್ನು ವಂಚಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಲೇ ಇದ್ದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರ ಮಾರ್ಗದರ್ಶನ, ಸೂಚನೆಯಂತೆ ಸಚಿವಾಲಯವು, ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯ ಮೂಲಕ ಅನ್ಯಾಯಕ್ಕೊಳಗಾದ ಅಭ್ಯರ್ಥಿಗಳು ನೇರವಾಗಿ ದೂರು ಸಲ್ಲಿಸಲು ಅವಕಾಶ ಒದಗಿಸಿದ್ದೂ ಅಲ್ಲದೇ ಅಂತಹ ದೂರುಗಳಿಗೆ ತಕ್ಷಣವೇ ಪರಿಹಾರ ಸಹ ಕಲ್ಪಿಸಿಕೊಟ್ಟಿದೆ.

600ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನ್ಯಾಯ: ನಾಗರಿಕ ಸೇವೆಗಳು, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಸಂಬಂಧಿಸಿ ದೇಶದ ವಿವಿಧೆಡೆಯಿಂದ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಗೆ ದೂರು ಸಲ್ಲಿಸಿದ 600ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಶಿಕ್ಷಣ ಸೇವೆಯಲ್ಲಿ ನ್ಯೂನತೆ ಎಸಗಿದ ಕೋಚಿಂಗ್ ಸೆಂಟರ್‌ಗಳಿಂದಲೇ ಒಟ್ಟು 1.56 ಕೋಟಿ ರು. ಅನ್ನು ಪರಿಹಾರ ರೂಪದಲ್ಲಿ ಮರುಪಾವತಿ ಮಾಡಿಸಲಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಮಾಹಿತಿ ಹಂಚಿಕೊಂಡಿದೆ.

ನಾಗರಿಕ ಸೇವೆಗಳು, ಎಂಜಿನಿಯರಿಂಗ್ ಮತ್ತಿತರ ಕೋರ್ಸ್‌ಗಳ ತರಬೇತಿ ಕೇಂದ್ರಗಳಲ್ಲಿ ದಾಖಲಾಗಿದ್ದ ವಿದ್ಯಾರ್ಥಿಗಳಿಗೆ, ಕೋಚಿಂಗ್ ಸೆಂಟರ್‌ಗಳು ನಿಯಮಾನುಸಾರ ಮರುಪಾವತಿಯನ್ನು ನಿರಾಕರಿಸಿದ್ದವು. ಹೀಗಾಗಿ ಅಭ್ಯರ್ಥಿಗಳು ಅಂತಿಮವಾಗಿ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯ ಮೊರೆ ಹೋಗಿದ್ದರು. ಗ್ರಾಹಕ ಇಲಾಖೆ ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ ಅಗತ್ಯ ಸೇವೆ ಪೂರೈಸದ, ತರಗತಿ ವಿಳಂಬ ಮತ್ತು ರದ್ದಾದ ಕೋರ್ಸ್‌ಗಳಿಗೆ ಸಂಬಂಧಿಸಿದ ದೂರುಗಳಿಗೆ ತ್ವರಿತ ನ್ಯಾಯ ಕಲ್ಪಿಸಿದೆ.

ಕೋಚಿಂಗ್ ಸೆಂಟರ್‌ಗಳಿಗೆ ನಿರ್ದೇಶನ: ತರಬೇತಿ ಕೇಂದ್ರಗಳು ಕೇವಲ ವ್ಯಾವಹಾರಿಕ ದೃಷ್ಟಿಯಿಂದ ನೋಡದೇ ವಿದ್ಯಾರ್ಥಿ ಕೇಂದ್ರಿತ ವಿಧಾನವನ್ನು ಅಳವಡಿಸಿಕೊಳ್ಳಬೇಕು ಮತ್ತು ವಿದ್ಯಾರ್ಥಿಗಳಿಂದ ಮರುಪಾವತಿ ಹಕ್ಕುಗಳನ್ನು ನಿರಾಕರಿಸುವಂತಹ ವಂಚನೆಗೆ ಅಂತ್ಯ ಹಾಡಬೇಕು ಎಂದು ಗ್ರಾಹಕ ವ್ಯವಹಾರಗಳ ಇಲಾಖೆ ನಿರ್ದೇಶಿಸಿದೆ.

ಮರುಪಾವತಿ ನಿರಾಕರಿಸಿದರೆ ಸಹಿಸಲ್ಲ

ಎಲ್ಲ ತರಬೇತಿ ಕೇಂದ್ರಗಳು ವಿದ್ಯಾರ್ಥಿ ಕೇಂದ್ರಿತ ವಿಧಾನ ಅಳವಡಿಸಿಕೊಳ್ಳುವ ಜತೆಗೆ ವಿದ್ಯಾರ್ಥಿಗಳ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಲು ಸ್ಪಷ್ಟ, ಪಾರದರ್ಶಕ ಮರುಪಾವತಿ ನೀತಿಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕು. ಕಾನೂನುಬದ್ಧ ಮರುಪಾವತಿ ಹಕ್ಕುಗಳನ್ನು ನಿರಾಕರಿಸುವ ಇಂಥ ವಂಚನೆಯನ್ನು ಇನ್ನು ಮುಂದೆ ಸಹಿಸಲಾಗುವುದಿಲ್ಲ ಎಂದು ಎಚ್ಚರಿಸಿದ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ, ಶಿಕ್ಷಣ ಸಂಸ್ಥೆಗಳು ಗ್ರಾಹಕರ ಹಕ್ಕುಗಳನ್ನು ಎತ್ತಿ ಹಿಡಿಯಬೇಕು ಎಂದೂ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ವಿವಿಧ ರಾಜ್ಯಗಳಿಂದ ಬಂದ ದೂರುಗಳೇನು?

- ನಿರಂತರ ಅಧ್ಯಯನಕ್ಕಾಗಿ ಹಾಸ್ಟೆಲ್ ಸೌಲಭ್ಯ ಪಡೆದಿದ್ದರೂ ಸರಿಯಾದ ಸೇವೆ ನೀಡುವಲ್ಲಿ ಬಹು ನ್ಯೂನತೆಗಳಿವೆ ಎಂದು ತಮಿಳುನಾಡು ಭಾಗದ ವಿದ್ಯಾರ್ಥಿಗಳು ಮೊರೆ ಹೋಗಿದ್ದರು.
- ಕೆಲವೇ ಸೀಟುಗಳು ಉಳಿದಿವೆ ಎಂದು ಮನೋವಿಜ್ಞಾನ ಕಾರ್ಯಾಗಾರಕ್ಕೆ ಅಭ್ಯರ್ಥಿಗಳನ್ನು ಸೆಳೆದ ಸಂಸ್ಥೆಯೊಂದು ಪಾವತಿ ಮಾಡಿದ ನಂತರ ಸೀಟು ನಿರಾಕರಿಸಿದೆ ಮತ್ತು ಶುಲ್ಕ ಮರುಪಾವತಿಗೂ ನಿರಾಕರಿಸಿದೆ ಎಂದಿದ್ದಾರೆ ಗುಜರಾತ್ ಅಭ್ಯರ್ಥಿಗಳು.
- ಕೋರ್ಸ್ ಖರೀದಿಸಿದ್ದು, ಪಾವತಿಯ ಪುರಾವೆಯನ್ನು ಒದಗಿಸಿದರೂ ಸಂಸ್ಥೆ ಖರೀದಿಯನ್ನು ನಿರಾಕರಿಸಿತ್ತು. ಎನ್‌ಸಿಎಚ್ ಮಧ್ಯಸ್ಥಿಕೆಯಿಂದ ಮರುಪಾವತಿ ಸುಲಭವಾಯಿತು ಎಂದು ಜಾರ್ಖಂಡ್ ಮೂಲದ ಅಭ್ಯರ್ತಿಗಳು ಹೇಳಿದ್ದಾರೆ.

ವಿಶ್ವಸಂಸ್ಥೆಯ ಶಾಂತಿಪಾಲನಾ ಮುಖ್ಯಸ್ಥ ಜೀನ್ ಪಿಯರೆ

ಭಾರತ ದೇಶವು ವಿಶ್ವಸಂಸ್ಥೆಯ ಶಾಂತಿಪಾಲನೆ ಮೂಲಾಧಾರ

ವಿಶ್ವಸಂಸ್ಥೆ: ಭಾರತವು ವಿಶ್ವಸಂಸ್ಥೆಯ ಶಾಂತಿಪಾಲನೆಯ ಮೂಲಾಧಾರವಾಗಿದೆ. ಶಾಶ್ವತ ಶಾಂತಿ ಸ್ಥಾಪನೆಯ ಕಾರ್ಯಾಚರಣೆಗಳಲ್ಲಿ ಭಾರತೀಯ ಮಹಿಳಾ ಶಾಂತಿ ಪಾಲಕರ ಕೊಡುಗೆ ಮಹತ್ವದ್ದಾಗಿದೆ ಎಂದು ವಿಶ್ವಸಂಸ್ಥೆಯ ಶಾಂತಿಪಾಲನಾ ಮುಖ್ಯಸ್ಥ ಜೀನ್-ಪಿಯರೆ ಲ್ಯಾಕ್ರೊಯಿಕ್ಸ್ ಹೇಳಿದ್ದಾರೆ.

ಇದೇ 24 ಮತ್ತು 25ರಂದು ಭಾರತದಲ್ಲಿ ನಡೆಯಲಿರುವ ಶಾಂತಿಪಾಲನೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚಿಸಲು ಜಾಗತಿಕ ದಕ್ಷಿಣದ ಒಳಗೊಳ್ಳುವಿಕೆ ಕುರಿತ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ದೆಹಲಿಗೆ ಭೇಟಿ ನೀಡುತ್ತಿರುವ ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಈ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ವಿಶ್ವದ ಕೆಲವು ಕಠಿಣ ಸವಾಲಿನ ಸಂಘರ್ಷ ವಲಯಗಳಲ್ಲಿ ನಮ್ಮ ಸಮವಸ್ತ್ರಧಾರಿ ಸಿಬ್ಬಂದಿ ಮತ್ತು ಸ್ಥಳೀಯ ಸಮುದಾಯಗಳ ನಡುವೆ ವಿಶ್ವಾಸವನ್ನು ರೂಪಿಸುವಲ್ಲಿ ಭಾರತೀಯ ಮಹಿಳಾ ಶಾಂತಿಪಾಲಕರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ವಿಶ್ವಸಂಸ್ಥೆಯ ಶಾಂತಿಪಾಲನೆ ಕಾರ್ಯಾಚರಣೆಗಳಲ್ಲಿ ಅವರ ಉಪಸ್ಥಿತಿ ಅನಿವಾರ್ಯವೆಂಬುದು ಈಗಾಗಲೇ ಹಲವು ಬಾರಿ ಸಾಬೀತಾಗಿದೆ. ಶಾಂತಿಪಾಲನೆಗೆ ನಿಜವಾದ ವ್ಯಾಖ್ಯಾನವನ್ನು ಇವರು ನೀಡಿದ್ದಾರೆ ಎಂದು ಬಣ್ಣಿಸಿದ್ದಾರೆ.

ಭಾರತದಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ಸುಮಾರು 50 ದೇಶಗಳ ಮಹಿಳಾ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಶಾಂತಿಪಾಲನೆಯಲ್ಲಿ ಎದುರಾಗುತ್ತಿರುವ ಸವಾಲುಗಳು ಮತ್ತು ಶಾಂತಿ ಹಾಗೂ ಸುರಕ್ಷತೆ ಖಾತ್ರಿಪಡಿಸುವಲ್ಲಿ ಮಹಿಳೆಯರು ವಹಿಸುವ ನಿರ್ಣಾಯಕ ಪಾತ್ರದ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಲಾಗುವುದು.

-ಜೀನ್ ಪಿಯರೆ ಲ್ಯಾಕ್ರೊಯಿಕ್ಸ್ ವಿಶ್ವಸಂಸ್ಥೆಯ ಶಾಂತಿಪಾಲನಾ ಮುಖ್ಯಸ್ಥ

ಆರಂಭಿಕ ರೋಗ ಪತ್ತೆ: ತಜ್ಞರ ಸಲಹೆ

ಬೆಂಗಳೂರು: ಭಾರತದಲ್ಲಿ ದಂಪತಿಗಳಲ್ಲಿ ಬಂಜೆತನದ ಆತಂಕಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ ಎಂದು ಸಮಗ್ರ ಬಂಜೆತನ ಸಮ್ಮೇಳನ (ಸಿಐಸಿ) 2025 ರಲ್ಲಿ ತಜ್ಞ ವೈದ್ಯರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಆರಂಭಿಕ ಹಂತದಲ್ಲಿಯೇ ರೋಗ ನಿರ್ಣಯ ಮಾಡುವುದು, ಸಮಗ್ರ ಗರ್ಭಧಾರಣೆ ಆರೈಕೆ ಚಿಕಿತ್ಸೆ ಪಡೆದುಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಸಿಐಸಿ 2025ರ ಸಂಘಟನಾ ಅಧ್ಯಕ್ಷ ಡಾ. ಪ್ರವೀಣ್ ಜೋಶಿ ಮಾತನಾಡಿ, ಇತ್ತೀಚಿನ ಅಧ್ಯಯನಗಳ ಪ್ರಕಾರ ಶೇ.50ರಷ್ಟು ಬಂಜೆತನ ಪ್ರಕರಣಗಳು ಪುರುಷರಿಗೆ ಸಂಬಂಧಿಸಿವೆ. ಕಳೆದ ಒಂದು ದಶಕದಲ್ಲಿ ವಿಶೇಷವಾಗಿ ಕಿರಿಯ ಪುರುಷರಲ್ಲಿ ಸ್ಥಿರವಾದ ಹೆಚ್ಚಳ ಕಾಣುತ್ತಿದ್ದೇವೆ. ಇದಕ್ಕೆ ಪ್ರಮುಖ ಕಾರಣ ವೀರ್ಯಾಣು ಪ್ರಮಾಣದಲ್ಲಿ ಕಡಿಮೆ ಇರುವುದು, ಕಳಪೆ ಮಟ್ಟದ ಚಟುವಟಿಕೆ, ಹಾರ್ಮೋನುಗಳ ಅಸಮತೋಲನ, ಅನುವಂಶಿಕ ಪರಿಸ್ಥಿತಿಗಳು ಮತ್ತು ಧೂಮಪಾನ, ಅತಿಯಾದ ಮದ್ಯಪಾನ, ಬೊಜ್ಜು ಎಂದು ಹೇಳಿದರು.

ಏ.8,9ರಂದು ಎಐಸಿಸಿ ಅಧಿವೇಶನ

ದೆಹಲಿ: ಬಿಜೆಪಿಯ ಜನವಿರೋಧಿ ನೀತಿಗಳು ಒಡ್ಡಿರುವ ಸವಾಲುಗಳು ಮತ್ತು ಪಕ್ಷದ ಭವಿಷ್ಯದ ಹಾದಿಯ ಕುರಿತು ಚರ್ಚಿಸಲು ಏಪ್ರಿಲ್ 8 ಮತ್ತು 9ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಎಐಸಿಸಿ ಅಧಿವೇಶನ ನಡೆಸುವುದಾಗಿ ಕಾಂಗ್ರೆಸ್ ಭಾನುವಾರ ಪ್ರಕಟಿಸಿದೆ. ಏ.8ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ನಡೆಯಲಿದೆ. ಮರುದಿನ (ಏ.9) ಎಐಸಿಸಿ ಪ್ರತಿನಿಧಿಗಳ ಸಭೆ ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಭೆಯ ನೇತೃತ್ವ ವಹಿಸಲಿದ್ದು, ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನ ಮುಖ್ಯಮಂತ್ರಿಗಳು ಪಾಲ್ಗೊಳ್ಳಲಿದ್ದಾರೆ.

ಎಐಸಿಸಿ ಅಧಿವೇಶನವನ್ನು ಗುಜರಾತ್‌ನಲ್ಲಿ ನಡೆಸುವ ನಿರ್ಧಾರವನ್ನು ಡಿಸೆಂಬರ್ 26ರಂದು ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಗಳಿಸಿದ್ದ ಬಲವನ್ನು ಮಹಾರಾಷ್ಟ್ರ, ಹರಿಯಾಣ ಮತ್ತು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಳೆದುಕೊಂಡಿರುವ ನಿರ್ಣಾಯಕ ಘಟ್ಟದಲ್ಲಿ ಪಕ್ಷವು ಈ ಅಧಿವೇಶನ ಆಯೋಜಿಸಿದೆ.

ಮುಂಬರುವ ಅಧಿವೇಶನವು ನಿರ್ಣಾಯಕ ಚರ್ಚೆಗಳಿಗೆ ವೇದಿಕೆಯೊದಗಿಸಲಿದೆ. ಮಾತ್ರವಲ್ಲ, ಜನ ಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವ ಮತ್ತು ದೇಶಕ್ಕೆ ಪರ್ಯಾಯ ದೃಷ್ಟಿಕೋನವನ್ನು ಪ್ರಸ್ತುತಪಡಿಸುವ ಕಾಂಗ್ರೆಸ್ ಪಕ್ಷದ ಬದ್ಧತೆಯನ್ನು ಪುನರುಚ್ಚರಿಸುತ್ತದೆ.

-ಕೆ.ಸಿ.ವೇಣುಗೋಪಾಲ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಹ್ಯಾಟ್ರಿಕ್ ಹೀರೋ ಶಿವರಾಜ ಕುಮಾರ್ ತಮ್ಮ ಕುಟುಂಬದೊಂದಿಗೆ ಮಂತ್ರಾಲಯಕ್ಕೆ ಭೇಟಿ ನೀಡಿ ರಾಘವೇಂದ್ರ ಸ್ವಾಮಿಗಳ ಬೃಂದಾವನದ ದರ್ಶನ ಪಡೆದರು. ಈ ವೇಳೆ ಸುಬುಧೇಂದ್ರ ಶ್ರೀಗಳು ಶಿವರಾಜಕುಮಾರ್ ಅವರಿಗೆ ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಬಾಣಂತಿಯರ ಸಾವು ತಡೆಗೆ ನಿಯಮ ಜಾರಿ

ಬೆಂಗಳೂರು: ರಾಜ್ಯದಲ್ಲಿ ಬಾಣಂತಿಯರ ಸಾವು ತಡೆಗೆ ರಾಜ್ಯ ಸರಕಾರವು ಮಹತ್ವದ ಕ್ರಮ ಕೈಗೊಂಡಿದ್ದು, ಇನ್ನು ಮುಂದೆ ಆಸ್ಪತ್ರೆಗಳಲ್ಲಿ ಸರಕಾರದ ನಿಯಮಗಳನ್ನು ಪಾಲಿಸುವಂತೆ ಮಹತ್ವದ ಆದೇಶ ಹೊರಡಿಸಲಾಗಿದೆ.

ತಾಯಿ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಸರಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಹಜ ಮತ್ತು ಸಿಜೇರಿಯನ್ ಶಸ್ತ್ರ ಚಿಕಿತ್ಸೆಗಳು ಜರಗುತ್ತಿವೆ. ತಾಯಿ ಆರೋಗ್ಯ ಕಾರ್ಯಕ್ರಮದ ಮಾರ್ಗಸೂಚಿಯಂತೆ ಸಹಜ ಹೆರಿಗೆಯಾದ ಬಾಣಂತಿಯನ್ನು ಕನಿಷ್ಠ 3 ದಿವಸಗಳು ಹಾಗೂ ಸಿಜೇರಿಯನ್ ಶಸ್ತ್ರ ಚಿಕಿತ್ಸೆ ಬಳಿಕ 7 ದಿವಸಗಳವರೆಗೂ ಸರಕಾರಿ ಆಸ್ಪತ್ರೆಯಲ್ಲಿ ಕಡ್ಡಾಯವಾಗಿ ಒಳರೋಗಿಯಾಗಿ ಚಿಕಿತ್ಸೆಯನ್ನು ನೀಡುವುದು.

ಒಂದು ವೇಳೆ, ಜಿಲ್ಲಾ ಆಸ್ಪತ್ರೆಯಲ್ಲಿ ಹಾಸಿಗೆಗಳ ಕೊರತೆ ಇದ್ದಲ್ಲಿ ಹಾಗೂ ಬಾಣಂತಿ ಮತ್ತು ನವಜಾತ ಶಿಶುವಿನ ಆರೋಗ್ಯವು ತೃಪ್ತಿಕರವಾಗಿದಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಮನ್ವಯದೊಂದಿಗೆ ಹತ್ತಿರದ ತಾಲೂಕು ಅಥವಾ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶಸ್ತ್ರ ಚಿಕಿತ್ಸೆಗೊಂಡ 5 ದಿವಸಗಳ ಬಳಿಕ ಮಾರ್ಗಸೂಚಿ ಯಂತೆ ನಗು-ಮಗು ವಾಹನದಲ್ಲಿ ವರ್ಗಾಯಿಸಿ ಒಳರೋಗಿಯಾಗಿ ದಾಖಲಿಸಿ ಚೇತರಿಸಿಕೊಳ್ಳಲು ಅನುವು ಮಾಡಿಕೊಡುವುದು. ಬಾಣಂತಿಗೆ ತಗುಲುವ ಖರ್ಚು ವೆಚ್ಚಗಳನ್ನು ಜೆ.ಎಸ್.ಎಸ್.ಕೆ ಕಾರ್ಯಕ್ರಮದಲ್ಲಿ ಭರಿಸುವುದು. ಈ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದಾರೆ.

ಗುಲಾಮಗಿರಿ ಮನಸ್ಥಿತಿ ನಾಯಕರಿಂದ ಧಾರ್ಮಿಕ ನಂಬಿಕೆಗಳ ಮೇಲೆ ದಾಳಿ

ಛತ್ತರಪುರ: ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳ ಟೀಕಿಸಿ ಹೇಳಿಕೆ ನೀಡಿರುವ ಕೆಲ ನಾಯಕರ ನಡೆಯನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಖಂಡಿಸಿದ್ದಾರೆ.

ಛತ್ತರಪುರದಲ್ಲಿ ಶ್ರೀ ಬಾಗೇಶ್ವರ ವೈದ್ಯಕೀಯ ವಿಜ್ಞಾನಗಳ ಮತ್ತು ಸಂಶೋಧನಾ ಸಂಸ್ಥೆಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ವಿದೇಶಿ ಶಕ್ತಿಗಳ ಬೆಂಬಲ ಹೊಂದಿರುವ ಗುಲಾಮಗಿರಿ ಮನಸ್ಥಿತಿಯ ನಾಯಕರು ದೇಶದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕೆಲ ನಾಯಕರ ಗುಂಪು ನಮ್ಮ ಧರ್ಮವನ್ನು ಅಣಕಿಸುವುದು ಹಾಗೂ ಅಪಹಾಸ್ಯ ಮಾಡುವುದನ್ನು ನೋಡುತ್ತಿದ್ದೇವೆ. ದೇಶದ ಜನರಲ್ಲಿನ ಒಗ್ಗಟ್ಟು ಮುರಿಯುವುದೇ ಅವರ ಉದ್ದೇಶವಾಗಿದೆ. ಇಂತಹ ಜನರನ್ನು ಬೆಂಬಲಿಸುವ ಮೂಲಕ ದೇಶ ಹಾಗೂ ನಮ್ಮ ಧರ್ಮವನ್ನು ದುರ್ಬಲಗೊಳಿಸಲು ವಿದೇಶಿ ಶಕ್ತಿಗಳು ಯತ್ನಿಸುತ್ತಿರುವುದನ್ನು ಸಹ ನೋಡಿದ್ದೇವೆ ಎಂದರು.

ಮಹಾ ಕುಂಭ ಮೇಳದ ವೇಳೆ, ಸಫಾಯಿ ಕರ್ಮಚಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ ಮಾಡುತ್ತಿರುವ ಕಾರ್ಯ ಶ್ಲಾಘಿಸಿದ ಮೋದಿ, ಈ ಬೃಹತ್ ಧಾರ್ಮಿಕ ಕಾರ್ಯಕ್ರಮ ಯಶಸ್ವಿಯಾಗಲು ಇವರ ಶ್ರಮ ದೊಡ್ಡದು ಎಂದರು.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇತ್ತೀಚೆಗೆ ಮಹಾ ಕುಂಭಮೇಳವನ್ನು ಮೃತ್ಯು ಕುಂಭ ಎಂದು ಕರೆದಿದ್ದರು. ಇದು ವಿವಾದಕ್ಕೆ ಈಡಾಗಿರುವ ಸಂದರ್ಭದಲ್ಲಿಯೇ ಮೋದಿ ಅವರಿಂದ ಈ ಮಾತು ಹೊರಬಿದ್ದಿದೆ.

ಮಧ್ಯಪ್ರದೇಶದ ಛತ್ತರಪುರದಲ್ಲಿ ಬಾಗೇಶ್ವರ ವೈದ್ಯಕೀಯ ವಿಜ್ಞಾನಗಳ ಮತ್ತು ಸಂಶೋಧನಾ ಸಂಸ್ಥೆಗೆ ಶಿಲಾನ್ಯಾಸ ನೆರವೇರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಬಾಲಾಜಿ ದೇವಸ್ಥಾನದಲ್ಲಿ ಭಾನುವಾರ ಪೂಜೆ ಸಲ್ಲಿಸಿದರು.

ಮೋದಿ ಹೇಳಿದ್ದು...

- ಗುಲಾಮಗಿರಿ ಮನಸ್ಥಿತಿ ಹೊಂದಿರುವವರಿಂದ ನಮ್ಮ ನಂಬಿಕೆ, ದೇವಸ್ಥಾನ, ಸಂತರು, ಸಂಸ್ಕೃತಿ ಮೇಲೆ ದಾಳಿ
- ಈ ಜನರು ನಮ್ಮ ಹಬ್ಬಗಳು ಹಾಗೂ ಪರಂಪರೆಗಳ ನಿಂದನೆ ಮಾಡುತ್ತಿದ್ದಾರೆ
- ದೇಶದ ಏಕತೆಗೆ ಧಕ್ಕೆ ತರುವುದು ಹಾಗೂ ಸಮಾಜವನ್ನು ಒಡೆಯುವುದೇ ಇವರ ಕಾರ್ಯಸೂಚಿ
- ಮೂಲಭೂತವಾಗಿ ಪ್ರಗತಿಪರ ಆಗಿರುವ ನಮ್ಮ ಧರ್ಮ ಹಾಗೂ ಸಂಸ್ಕೃತಿಗೆ ಕೆಸರೆರಚುವ ಕಾರ್ಯವನ್ನೂ ಮಾಡುತ್ತಿದ್ದಾರೆ.

ದೇಶದ ಎಲ್ಲ ಜಿಲ್ಲೆಗಳಲ್ಲಿ ಕ್ಯಾನ್ಸರ್ ಡೇಕೇರ್ ಕೇಂದ್ರ

ಬಜೆಟ್‌ನಲ್ಲಿ ಘೋಷಿಸಿದಂತೆ ಮುಂದಿನ 3 ವರ್ಷಗಳಲ್ಲಿ ದೇಶದ ಎಲ್ಲ ಜಿಲ್ಲೆಗಳಲ್ಲಿ ಕ್ಯಾನ್ಸರ್ ಡೇಕೇರ್ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ಮುಂದಿನ ದಿನಗಳಲ್ಲಿ ಕಡಿಮೆ ಬೆಲೆಗೆ ಕ್ಯಾನ್ಸರ್ ಔಷಧ ದೊರೆಯಲಿದೆ ಎಂದೂ ಅವರು ಭರವಸೆ ನೀಡಿದರು. ಈ ವರ್ಷದ ಬಜೆಟ್‌ನಲ್ಲಿ ಕ್ಯಾನ್ಸರ್ ವಿರುದ್ಧ ಹೋರಾಡಲು ವಿವಿಧ ಯೋಜನೆಗಳನ್ನು ಘೋಷಿಸಲಾಗಿದೆ. ಜತೆಗೆ ಕ್ಯಾನ್ಸರ್ ಔಷಧಗಳನ್ನು ಅಗ್ಗವಾಗಿಸಲು ಪಣ ತೊಟ್ಟಿದ್ದೇವೆ. ಮುಂದಿನ 3 ವರ್ಷಗಳಲ್ಲಿ ದೇಶದ ಪ್ರತಿ ಜಿಲ್ಲೆಯಲ್ಲಿಯೂ ಕ್ಯಾನ್ಸರ್ ಡೇಕೇರ್ ಕೇಂದ್ರ ಆರಂಭವಾಗಲಿದೆ ಎಂದು ಮೋದಿ ತಿಳಿಸಿದರು.

ಗಡಿಪಾರು: ಟ್ರಂಪ್ ಸಮರ್ಥನೆ

ವಾಷಿಂಗ್ಟನ್: ಅಕ್ರಮ ವಲಸಿಗರನ್ನು ಸಾಮೂಹಿಕವಾಗಿ ಗಡಿಪಾರು ಮಾಡುವ ಪ್ರಕ್ರಿಯೆ ಬಗ್ಗೆ ಸಮರ್ಥಿಸಿಕೊಂಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಮ್ಮ ಆಡಳಿತವು ವಂಚನೆ ಮಾಡುವವರು, ಮೋಸಗಾರರು, ಜಾಗತಿಕವಾದಿಗಳು, ಮತ್ತು ಅಧಿಕಾರಶಾಹಿಗಳನ್ನು ಮನೆಗೆ ಕಳುಹಿಸಿ ಕೊಳಚೆ ಪ್ರದೇಶವನ್ನು ಬರಿದಾಗಿಸಿದೆ ಎಂದಿದ್ದಾರೆ.

ಪೊಲಿಟಿಕಲ್ ಆ್ಯಕ್ಷನ್ ಕಾನ್ಫರೆನ್ಸ್‌ನಲ್ಲಿ ಮಾತನಾಡಿ, ವಂಚನೆ ಮಾಡುವವರು, ಸುಳ್ಳು ಹೇಳುವವರು, ಮೋಸ ಮಾಡುವವರು, ಜಾಗತಿಕವಾದಿಗಳು ಮತ್ತು ಆಳವಾಗಿ ಅಧಿಕಾರಶಾಹಿಗಳಾಗಿದ್ದವರನ್ನು ಪ್ಯಾಕ್ ಮಾಡಿ ಕಳುಹಿಸಲಾಗಿದೆ. ಅನ್ಯಲೋಕದ ಅಪರಾಧಿಗಳನ್ನು ಮನೆಗೆ ಕಳುಹಿಸಿ, ಕೊಳಚೆ ಪ್ರದೇಶವನ್ನು ಬರಿದಾಗಿಸಿ, ಜನರಿಂದ ಸರಕಾರವನ್ನು ಮರುಸ್ಥಾಪಿಸಲಾಗುತ್ತಿದೆ ಎಂದಿದ್ದಾರೆ. ಈಗಾಗಲೇ ಅಮೆರಿಕದಲ್ಲಿ ಅಕ್ರಮವಾಗಿ ನೆಲೆಸಿದ್ದ 332 ಭಾರತೀಯರನ್ನು ಮೂರು ಬ್ಯಾಚ್‌ಗಳಲ್ಲಿ ಭಾರತಕ್ಕೆ ಗಡಿಪಾರು ಮಾಡಲಾಗಿದೆ.

ಹೆಚ್ಚಿದ ಬಿಸಿಲ ಝಳ; ಮನೆಗೆ ನುಗ್ಗುತ್ತಿರುವ ಹಾವುಗಳು

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ಬಿಸಿಲಿಗೆ ಜನರು ಹೈರಾಣಾಗುತ್ತಿದ್ದಾರೆ. ನಗರದಲ್ಲಿ ಜನರು ಬಿಸಿಲಿನ ಹೊಡೆತಕ್ಕೆ ಕಂಗಾಲಾಗಿದ್ದರೆ, ಇತ್ತ ವಿಷಕಾರಿ ಹಾವುಗಳು ತಣ್ಣಗಿನ ಜಾಗವನ್ನು ಹುಡುಕಿಕೊಂಡು ಮನೆಯೊಳಗೆ ಬರುತ್ತಿವೆ.

ಬಹುತೇಕ ಹೊರವಲಯದಲ್ಲಿರುವ ಬಡಾವಣೆಗಳಲ್ಲಿಯೇ ಇಂತಹ ಸಮಸ್ಯೆ ಕಾಡುತ್ತಿದೆ. ಅಡುಗೆ ಮನೆ, ಹಾಲ್, ಬಾತ್ ರೂಮ್, ವಾಟರ್ ಟ್ಯಾಂಕ್ ಸೇರಿದಂತೆ ಎಲ್ಲಾ ಕಡೆ ಹಾವುಗಳು ಕಾಣಿಸಿಕೊಳ್ಳುತ್ತಿವೆ. ಇದರಿಂದ ಮನೆಯೊಳಗೆ ಇರಲು ನಿವಾಸಿಗಳು ಭಯ ಬೀಳುವಂತಾಗಿದೆ. ಪ್ರತಿದಿನ ಹೊರವಲಯದಲ್ಲಿರುವ ಬಡಾವಣೆಗಳ ಜನತೆ ಬಿಬಿಎಂಪಿ ಹಾಗೂ ಹಾವು ಹಿಡಿಯುವವರಿಗೆ ದೂರವಾಣಿ ಕರೆ ಮಾಡತೊಡಗಿದ್ದಾರೆ.

ಮನೆಯ ಸಂದಿ ಗೊಂದಿಗಳಲ್ಲಿ ಹಾವುಗಳು ಕಾಣಿಸಿಕೊಳ್ಳುತ್ತಿವೆ. ಸದ್ಯ ಹೆಲ್ಮೆಟ್, ಕಾಂಪೌಂಡ್, ಶೂಸ್, ವಾಟಾರ್ ಟ್ಯಾಂಕರ್, ದ್ವಿಚಕ್ರಗಳು, ಕಾರಿನ ಸಂದಿಗೊಂದಿಗಳಲ್ಲಿ ಹಾವುಗಳು ಕಾಣಿಸಿಕೊಳ್ಳುತ್ತಿದ್ದು, ಮನೆಯಿಂದ ಹೊರಗೆ ಹೋಗುವ ಜನರು ಒಮ್ಮೆ ಹುಷಾರಾಗಿ ಎಲ್ಲವನ್ನು ಪರಿಶೀಲಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಬಿಸಿಲ ಬೇಗೆ ಮನುಷ್ಯರನ್ನು ತತ್ತರಿಸುವಂತೆ ಮಾಡುತ್ತಿದ್ದರೇ, ಇತ್ತ ವಿಷಕಾರಿ ಹಾವುಗಳು ತಣ್ಣಗಿನ ಜಾಗಕ್ಕಾಗಿ ಮನೆಗಳಿಗೆ ನುಗ್ಗುತ್ತಿವೆ ಎನ್ನುವ ಆರೋಪ ಕೇಳಿಬಂದಿದೆ.

ಮಕ್ಕಳ ಮೇಲೆ ನಿಗಾ ಇಡಿ

ಉರಗ ತಜ್ಞ ಮೋಹನ್ ಮಾತನಾಡಿ, ಜನವರಿ, ಫೆಬ್ರವರಿ ಹಾವುಗಳು ಮಿಲನವಾಗುವ ಸಮಯ. ಹೀಗಾಗಿ, ತಂಪಾಗಿರುವ ಜಾಗವನ್ನು ಅರಿಸಿಕೊಂಡು ಹಾವುಗಳು ಮನೆಯೊಳಗೆ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಪೋಷಕರು ನಿಮ್ಮ ಮಕ್ಕಳ ಮೇಲೆ ನಿಗಾ ಇಡಬೇಕು. ಮನೆಗಳಲ್ಲಿ ಹಾವುಗಳು ಕಾಣಿಸಿಕೊಂಡಾಗ ಸಾಮಾಜಿಕ ಜಾಲತಾಣ ನೋಡಿ ಹಾವುಗಳು ಹಿಡಿಯಲು ಹೋಗಬೇಡಿ. ಇದರಿಂದ ಹಾವುಗಳು ಸಾಯಬಹುದು ಇಲ್ಲವೇ, ವಿಷಕಾರಿ ಸರ್ಪಗಳು ಕಚ್ಚಿ ಸಾವು-ನೋವು ಸಂಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ದಯವಿಟ್ಟು ಎಚ್ಚರದಿಂದ ಇರಬೇಕು ಎಂದು ಹೇಳಿದ್ದಾರೆ.

ಭಾರತ ಪಾಕಿಸ್ತಾನ ನಡುವಿನ ಏಕದಿನ ಪಂದ್ಯದ ಹಿನ್ನೆಲೆ ನಿರ್ಜನವಾಗಿ ಕಂಡುಬಂದ ನಗರದ ಬ್ರಿಗೇಡ್ ರಸ್ತೆ, ಎಂಜಿ ರಸ್ತೆ ಮತ್ತು ಚರ್ಚ್ ರಸ್ತೆಗಳು.
ಫೋಟೋ: ಸುಧಾಕರ್ ದೇವರಾಜ್

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಆರೋಪ

ಆಪ್ ಆಡಳಿತದಲ್ಲಿ ಬೊಕ್ಕಸ ಖಾಲಿ

ದೆಹಲಿ: ಈ ಹಿಂದೆ ಆಡಳಿತ ನಡೆಸಿರುವ ಎಎಪಿ ಪಕ್ಷ ಸರಕಾರದ ಬೊಕ್ಕಸವನ್ನು ಖಾಲಿ ಮಾಡಿದೆ ಎಂದು ಆರೋಪಿಸಿರುವ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ವಿಸ್ತೃತವಾಗಿ ಯೋಜಿಸಿ ಮಹಿಳೆಯರಿಗೆ ಪ್ರತಿ ತಿಂಗಳು ₹2,500 ಹಣ ನೀಡುವ ಯೋಜನೆ ಜಾರಿಗೊಳಿಸುವುದಾಗಿ ಭರವಸೆ ನೀಡಿದರು.

ದೆಹಲಿ ವಿಧಾನಸಭೆ ಅಧಿವೇಶನದ ಹಿನ್ನೆಲೆ ಪಕ್ಷದ ಕಚೇರಿಯಲ್ಲಿ ಬಿಜೆಪಿ ಶಾಸಕರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ಮಹಿಳಾ ಸಮೃದ್ಧಿ ಯೋಜನೆಯಡಿ ಮಹಿಳೆಯರಿಗೆ ಪ್ರತಿ ತಿಂಗಳು ₹2,500 ನೀಡುವ ಯೋಜನೆಯ ಕುರಿತು ಅಧಿಕಾರಿಗಳೊಂದಿಗೆ ವಿವಿಧ ಹಂತದಲ್ಲಿ ಸಭೆ ನಡೆಸಲಾಗಿದೆ. ಹಿಂದಿನ ಸರಕಾರ ಬಿಟ್ಟುಹೋದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಿದಾಗ, ರಾಜ್ಯದ ಬೊಕ್ಕಸ ಖಾಲಿಯಾಗಿರುವುದು ಗೊತ್ತಾಗಿದೆ. ಹೀಗಿದ್ದರೂ, ಖಂಡಿತವಾಗಿಯೂ ಯೋಜನೆಯನ್ನು ಜಾರಿಗೊಳಿಸಿ ಅರ್ಹ ಮಹಿಳೆಯರಿಗೆ ಹಣ ಸಿಗುವಂತೆ ಮಾಡಲಾಗುತ್ತದೆ ಎಂದರು.

ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚದೇವ್ ಮಾತನಾಡಿ, ದೆಹಲಿಯ ಅಭಿವೃದ್ಧಿ ಮತ್ತು ಜನರ ಸಮಸ್ಯೆಗಳನ್ನು ನಿವಾರಿಸುವುದೇ ಬಿಜೆಪಿ ಸರಕಾರದ ಕಾರ್ಯಸೂಚಿಯಾಗಿದೆ ಎಂದರು.

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಸುದ್ದಿಗೋಷ್ಠಿ ನಡೆಸಿದರು. ಪಕ್ಷದ ಅಧ್ಯಕ್ಷ ವೀರೇಂದ್ರ ಸಚದೇವ್ ಇದ್ದರು.

ಪತ್ರಕರ್ತ ನಾಡಿಗ್‌ಗೆ ಸನ್ಮಾನ

ಮೈಸೂರು: ಸಮಾನ ಮನಸ್ಕ ಮಾಧ್ಯಮ ಮಿತ್ರರ ವೇದಿಕೆ, 'ವಿಕಾಸ' ವತಿಯಿಂದ 92 ವರ್ಷದ ಹಿರಿಯ ಪತ್ರಕರ್ತ ಸಂತೇಬೆನ್ನೂರು ಸತ್ಯನಾರಾಯಣ ನಾಡಿಗ್ ಅವರನ್ನು ಸನ್ಮಾನಿಸಲಾಯಿತು. ವಿಕಾಸ ಅಧ್ಯಕ್ಷ ಶ್ರೀನಾಥ್ ಜೋಶಿ, ಪ್ರಧಾನ ಕಾರ್ಯದರ್ಶಿ ಹನುಮೇಶ್ ಯಾವಗಲ್, ಇಂಡಿಯನ್ ಎಕ್ಸ್‌ಪ್ರೆಸ್ ಪ್ರಸರಣ ವಿಭಾಗದ ನಿವೃತ್ತ ವ್ಯವಸ್ಥಾಪಕ ಸುಧೀಂದ್ರ ರಾವ್, ಹಿರಿಯ ಪತ್ರಕರ್ತರಾದ ಆಶಾ ಕೃಷ್ಣಸ್ವಾಮಿ, ಮಾಲತಿ ಭಟ್, ವಾದಿರಾಜ ದೇಸಾಯಿ, ಗಣೇಶ ಹೆಗಡೆ ಇಟಗಿ, ಶ್ರೀವತ್ಸ ನಾಡಿಗ್ ಹಾಗೂ ಆನಂದ ಜೋರಾಪುರ ಉಪಸ್ಥಿತರಿದ್ದರು. ವಿಕಾಸ ಸಂಸ್ಥೆ ಮತ್ತು ರಾಜ್ಯ ಫೋಟೋ ಮತ್ತು ವಿಡಿಯೋಗ್ರಾಫರ್ಸ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿರುವ 'ನಮ್ಮ ಹಿರಿಯರು-ನಮ್ಮ ಹೆಮ್ಮೆ' ಮಾಲಿಕೆಯ ಪ್ರಥಮ ಕಾರ್ಯಕ್ರಮ ಇದಾಗಿದೆ.

ಆರಾಮ
ವಿಶ್ವವಾಣಿ ಬೆಂಗಳೂರು ಸೋಮವಾರ 24-02-2025

ನೀಲಕಂಠನ ಆರಾಧನೆ

ಶಿವರಾತ್ರಿಯಂದು ಜಾಗರಣೆ ಮಾಡುವ ಪದ್ಧತಿ ಇದೆ. ಉಪವಾಸ ಮಾಡುವ ಪದ್ಧತಿಯೂ ಇದೆ. ಸ್ಮಶಾನ ವಾಸಿ ಮತ್ತು ವಿಷವನ್ನು ಕುಡಿದ ನೀಲಕಂಠನನ್ನು ಶಿವರಾತ್ರಿಯ ದಿನ ಪೂಜಿಸುವುದೇಕೆ? ಆ ಕುರಿತಾದ ಒಂದು ಜಿಜ್ಞಾಸೆ ಇಲ್ಲಿದೆ.

26 ರಂದು ಮಹಾ ಶಿವರಾತ್ರಿ

● ಕೌಸ್ತುಭಾ ಭಾರತೀಪುರಂ

ಪ್ರಪಂಚದಲ್ಲಿ ಮೂರು ಗುಣಗಳಿವೆ – ಸತ್ವಗುಣ, ರಜೋ ಗುಣ, ತಮೋ ಗುಣ. ಸತ್ವ ಎಂದರೆ ಜಾಗೃತವಾಗಿರುವುದು. ದೇಹ ಜಾಗೃತವಾಗಿರಬೇಕು, ದೇಹ ನಿದ್ರಾವಸ್ಥೆಯಲ್ಲಿದ್ದರೂ, ಮನಸ್ಸು ನಿದ್ರಿಸಬಾರದು. ವಿವೇಕ ಎಚ್ಚರವಿರಬೇಕು. ನಮ್ಮ ಧರ್ಮಪರನಡತೆ, ಮಾನವ ಸೂಕ್ಷ್ಮ ಗುಣಗಳು ನಿದ್ರಿಸಬಾರದು. ಇದು ಸಾತ್ವಿಕ ಗುಣದ ಲಕ್ಷಣ.

ರಾಜಸಿಕ ಅಂದರೆ ಈ ಜಗತ್ತು ಮುಂದಕ್ಕೆ ಸಾಗುವುದು. ಈ ರಾಜಸಿಕ ಗುಣಕ್ಕೆ ಚಲನವನ ನೀಡುವುದು ಸತ್ವಗುಣವೇ ಆದರೂ ಅದರಲ್ಲಿ ಒಂದಷ್ಟು ದುಷ್ಟತನವೂ ಮತ್ತು ಸನ್ನಡತೆಯೂ ಮಿಶ್ರಗೊಂಡಿರಬೇಕು. ಇಲ್ಲವಾದರೆ ಬದುಕು ಮುಂದಕ್ಕೆ ಸಾಗುವುದು ಕಷ್ಟಸಾಧ್ಯ. ಸಾತ್ವಿಕ ಗುಣ ಎಚ್ಚರವಿರುವ ಸ್ಥಿತಿಯಾದರೆ ತಾಮಸಿಕ ಗುಣ ಎಚ್ಚರವಿಲ್ಲದಿರುವ ಸ್ಥಿತಿ ಎಂದೇ ಹೇಳಬಹುದು. ಇಬ್ಬರೂ ಸ್ಥಗಿತವಾಗಿಯೇ ಇರುತ್ತಾರೆ. ಆದರೆ ಸಾತ್ವಿಕ ಗುಣವಿದ್ದವನು ಧ್ಯಾನಸ್ಥ ಸ್ಥಿತಿಯಲ್ಲಿ ತಟಸ್ಥನಾಗಿದ್ದರೆ ತಾಮಸನದ್ದು ನಿದ್ರಾಸ್ಥಿತಿ. ಇಬ್ಬರ ನಡುವೆ ವ್ಯತ್ಯಾಸವೇನೆಂದರೆ, ಸಾತ್ವಿಕ ಗುಣದವರು ಕಣ್ಣುಮುಚ್ಚಿ ಒಂದೇ ಸ್ಥಳದಲ್ಲಿ ಕುಳಿತಿದ್ದರೂ ಅವನ ಮನಸ್ಸು ಜಾಗೃತವಾಗಿರುತ್ತದೆ. ತಾಮಸಿಕ ಮನಃಸ್ಥಿತಿಯವರು ಒಂದು ಕಡೆ ಕುಳಿತಿದ್ದರೂ ಅವನ ಮನಸ್ಸು ಚಂಚಲವಾಗಿರುತ್ತದೆ.

ಸೃಷ್ಟಿ ಸ್ಥಿತಿ ಲಯದ ಭಾಗ

ಸಾತ್ವಿಕ ಗುಣದಿಂದಲೇ ಆವಿರ್ಭವಿಸಿದವ ಶಿವ. ಅನೇಕಾನೇಕ ಪುರಾಣಗಳು ಈ ಬಗ್ಗೆ ವಿಶೇಷವಾಗಿ ಅವಲೋಕಿಸುತ್ತದೆ. ಆ ಪ್ರಕಾರ

ಮೂಲಪುರುಷ ನಾರಾಯಣ. ನಾರಾಯಣನ ನಾಭಿಯಿಂದ ಬಂದಿದ್ದು ಬ್ರಹ್ಮ ಎಂಬುದು ಪುರಾಣೋಕ್ತ. ಸೃಷ್ಟಿಯ ಕಾರ್ಯಕ್ಕಾಗಿ ಬ್ರಹ್ಮ ನಿಯೋಜನೆಗೊಳ್ಳುತ್ತಾನೆ. ವಿಷ್ಣು ಒಮ್ಮೆ ಮಲಗಿರುವಾಗ ,ಬ್ರಹ್ಮ ಸೃಷ್ಟಿಕ್ರಿಯೆಯಲ್ಲಿ ತೊಡಗಿರುವಾಗ ವಿಷ್ಣುವಿಗೊಂದು ಯೋಚನೆ ಬರುತ್ತದೆ, ಈಗ ಸೃಷ್ಟಿಕ್ರಿಯೆಯಂತೂ ಆಗುತ್ತಿದೆ. ಕೇವಲ ಸೃಷ್ಟಿಯೇ ಘಟಿಸುತ್ತಾ ಹೋದರೆ ಅದು ರೇಖೆಯಂತೆ ಮುಂದೆ ಸಾಗುತ್ತಾ ಹೋಗುತ್ತದೆ. ಅದೊಂದು ವೃತ್ತದಂತೆ ಆಗುವುದು ಯಾವಾಗ? ನಮ್ಮ ಧರ್ಮ ನಿಯಮವಿರುವುದು ವೃತ್ತದ ಮೇಲೆ. ರೇಖೆಯ ಮೇಲೆ ಅಲ್ಲ. ಪ್ರಾರಂಭವಾದದ್ದು ಅಂತಿಮವನ್ನು ಕಾಣಲೇಬೇಕಲ್ಲವೇ!

ಆ ಒಂದು ಅಂಶವನ್ನು ತಲುಪಬೇಕಾದರೆ ನಿಲ್ಲಿಸಲು ಒಂದು ಶಕ್ತಿ ಬೇಕು. ಅದು ಯಾವ ತರಹದ ಶಕ್ತಿಯಾಗಬೇಕೆಂದರೆ ಅವನ ಸಂಸಾರದಲ್ಲಿದ್ದು ಬಿರಾಗಿಯಾಗಿರಬೇಕು. ಅವನು ನಿದ್ದೆಯಲ್ಲಿದ್ದರೂ ಜಾಗೃತನಾಗಿರಬೇಕು. ಈ ವಿರೋಧಾಭಾಸ ಪರಿಸ್ಥಿತಿಯಲ್ಲಿದ್ದರೆ ಮಾತ್ರ ಲಯಕಾರನಾಗುವುದಕ್ಕೆ ಸಮರ್ಥ ಎನ್ನುವ ಕಾರಣಕ್ಕೆ ಹುಟ್ಟಿದ್ದು ಶಿವ ಅಂತ ಪುರಾಣಗಳು ಹೇಳುತ್ತದೆ.

ಶಿವ ಎಂದರೆ ಏನು? ಮಂಗಳಕರ ಎಂದು. ಆದರೆ ಸಂಹಾರ ಮಾಡುವಂತಹುದು ಮಂಗಳವಾಗುತ್ತದೆಯೇ? ಎಂಬ ಸಂಶಯ ಬರಬಹುದು. ನಮ್ಮ ಧರ್ಮವು ನಮ್ಮಿಂದ ಸಮನ್ವಯತೆಯನ್ನೇ ಬಯಸುವುದು. ಮಂಗಳಕ್ಕೂ ಅಮಂಗಳಕ್ಕೂ ತಾರತಮ್ಯವನ್ನು ತೊಡೆದು ಹಾಕಿ ಸಮತ್ವವನ್ನು ಸಾರುವವನು ಶಿವ. ವಿಷ್ಣುವೂ ಅದೇ ಕೆಲಸ ಮಾಡುತ್ತಾನಲ್ಲ ಎಂದು ಅನ್ನಿಸಬಹುದು. ಆದರೆ ಪರಬ್ರಹ್ಮ ಏಕನಾದರೂ ರೂಪ ಭಿನ್ನ. ಬೇರೆ ರೂಪದಲ್ಲಿ ನೀವು ನೋಡಲು ತಯಾರಿದ್ದೀರಿ ಅಂದರೆ ಗುಣಗಳಲ್ಲೂ ಬೇಧವಿದ್ದೇ ಇರುತ್ತದಲ್ಲಾ! ಹಾಗೆ ನೋಡಿದರೆ ಬ್ರಹ್ಮ ಸಾತ್ವಿಕ, ವಿಷ್ಣು ರಾಜಸಿಕ, ಶಿವ ತಾಮಸಿಕ ಗುಣದ ಒಡೆಯರೇ ಆಗಿರುತ್ತಾರೆ.

ವಿಷ ಸೇವಿಸಿದ ಶಿವ

ಸಮುದ್ರ ಮಂಥನ ಮಾಡುವ ಸಂದರ್ಭದಲ್ಲಿ ಇಡೀ ವಿಶ್ವವೇ ನಾಶವಾಗುವಷ್ಟು ವಿಷಪೂರಿತವಾದ ವಸ್ತು ಬಂತು. ಎಲ್ಲವನ್ನೂ ಈಶ್ವರ ಸಾರಸಗಟಾಗಿ ಕುಡಿದುಬಿಟ್ಟನು. ಅಂದರೆ ಅವನು ತುಂಬಾ ಜಾಣ. ಶಿವ ಅದನ್ನು ಪ್ರಪಂಚದಲ್ಲಿಯೇ ಬಿಟ್ಟು ಅದರ ಸಾರವನ್ನಷ್ಟೇ ಎಳೆದುಕೊಂಡಿದ್ದಾನೆ. ಇಡೀ ಜಗತ್ತನ್ನು ನಿಯಂತ್ರಿಸಲು, ಕೆಟ್ಟದ್ದನ್ನು ಒಳ್ಳೆಯದನ್ನಾಗಿ ಮಾರ್ಪಡಿಸಲು ಬಲ್ಲವನೇ ಶಿವ.

ಕೈಲಾಸ ವಾಸಿ ದಿಗಂಬರ

ಶಿವ ದಿಗಂಬರ.. ಹಾಗಂತ ತಾಪಮಾನ ಹೆಚ್ಚಿರುವ ಕಡೆ ಅವನು ಇರುವುದಿಲ್ಲ. ಅವನ ವಾಸ ಕೈಲಾಸದ ಮಂಜುಗಡ್ಡೆಯಲ್ಲಿ. ಅವನು ಅದರ ಮೇಲೆ ಕುಳಿತೇ ದಿಗಂಬರನಾಗಿ, ಧ್ಯಾನಸ್ಥನಾಗಿರುತ್ತಾನೆ (ಪುರಾಣದ ಪ್ರಕಾರ ಗಜಾಸುರನನ್ನು ಕೊಂದು ಗಜಚರ್ಮಾಂಬರನಾಗಿರುತ್ತಾನೆ). ಜಗಕ್ಕೆಲ್ಲಾ ಅನ್ನ ಕೊಡುವ ಅನ್ನಪೂರ್ಣೆ/ಪಾರ್ವತಿ ಇವನ ಮಡದಿ! ಇವನು ಮಾತ್ರ ಕಪಾಲ ಹಿಡಿದು ಭಿಕ್ಷೆ ಬೇಡುತ್ತಾನೆ. ಅವನ ಹಣೆಯಲ್ಲಿ ಮೂರನೇ ಕಣ್ಣು ಯಾವಾಗಲೂ ಬೆಂಕಿಯಂತೆ ಉರಿಯುತ್ತಿರುತ್ತದೆ. ಅವನ ನೆತ್ತಿಯಲ್ಲಿ ತಂಪಾಗಿರುವ ಗಂಗೆಯೂ ಇರುತ್ತಾಳೆ.

ಶಿವನ ಹೆಂಡತಿಯ ವಾಹನ ಸಿಂಹ, ಶಿವನದ್ದೋ ನಂದಿ. ಪಾರ್ವತಿಯ ನೃತ್ಯ ತಾಳಕ್ಕೆ ತಕ್ಕ ಲಾಸ್ಯ, ಶೃಂಗಾರಕ್ಕೆ ಸಂಬಂಧಪಟ್ಟಿದ್ದು. ಶಿವನದ್ದು ತಾಂಡವ, ವೈರಾಗ್ಯಕ್ಕೆ ಸಂಬಂಧಪಟ್ಟಿದ್ದು.

ಇಷ್ಟೆಲ್ಲಾ ವೈಪರೀತ್ಯಗಳಿದ್ದರೂ ಅವನ ಲೋಕದಲ್ಲಿ ಸಕಲವೂ ಶಾಂತವಾಗಿರುತ್ತದೆ ಮತ್ತು ಸ್ಥಿರವಾಗಿರುತ್ತದೆ. ಇದನ್ನೇ ಮನುಷ್ಯನು ತನ್ನ ಬದುಕಿಗೆ ಬಯಸುವುದು. ಸಾಧುವೊಬ್ಬ ಚಿನ್ನದ ಕುರ್ಚಿಯ ಮೇಲೆ ಆಸೀನರಾಗಿದ್ದರೂ, ಮರಳಿನಲ್ಲಿ ಕುಳಿತಿದ್ದರೂ, ಯಾರಿಗೆ ವ್ಯತ್ಯಾಸ ತಿಳಿಯುವುದಿಲ್ಲವೋ ಅವನು ಮಹಾದೇವನಾಗುತ್ತಾನೆ. ಇಂತಹ ಗುಣವುಳ್ಳವನು ಎಲ್ಲೇ ಇದ್ದರೂ ಪೂಜನೀಯವೇ. ಆತನೇ ಶಿವ.

ರುಂಡಮಾಲಾಧಾರಿ

ಶಿವ ಚಿತಾಭಸ್ಮ ಲೇಪಿತ. ಶಿವ ರುಂಡಮಾಲಾಧಾರಿ. ಶಿವನ ಮೈಮೇಲೆ ಮಂಗಳಕರ ಸೂಚಕವಾದ ಯಾವ ವಸ್ತುವೂ ಇಲ್ಲ. ಶಿವ ಭಿಕ್ಷುಕ, ಜಟಾಧಾರಿ. ಹೀಗಿರುವ ಶಿವನನ್ನು ಸಮಾಜದ ಕೆಲವು ವರ್ಗ ಇವನು ಅಮಂಗಳ ದೇವತೆ ಎಂದು ಕರೆಯುತ್ತಾರಲ್ಲ, ಅಸಲಿಗೆ ಅವರೂ ಶಿವರಾತ್ರಿಯಂದು ಪೂಜೆಯಂದು ಅವರೂ ಪೂಜಿಸುತ್ತಾರೆ. ನಾವು ಇಡೀ ವರ್ಷ ಮಾಡಿದ ಪಾಪವನ್ನು ಹೊರಿಸಲು ಹೆಗಲು ಬೇಕಲ್ಲ!

ಶಿವ ನಾಶಕಾರಕ. ಕೆಟ್ಟದ್ದನ್ನೆಲ್ಲಾ ನಾಶಮಾಡುತ್ತಾನೆ. ಹಾಗಾಗಿ ಪಾಪವನ್ನು ನಾಶ ಮಾಡುವವನು ಅವನೇ. ಶಿವ ರುಂಡಮಾಲಾಧಾರಿಯಾದ ಯಾಕೆ? ಅಂದರೆ ದೈವಿಕ ವಿಚಾರದಲ್ಲಿ ತೊಂದರೆ ಕೊಡಲು ಬಂದವರನ್ನೆಲ್ಲಾ ಸಂಹರಿಸಿ ಆ ರುಂಡಗಳನ್ನೆಲ್ಲಾ ತಾನೇ ಹಾಕಿಕೊಳ್ಳುತ್ತಿದ್ದ. ಭಕ್ತರಿಗಾಗಿ, ಭಕ್ತರ ಸಂರಕ್ಷಣೆಗಾಗಿ, ಅವರನ್ನು ಕಾಪಾಡುವ ಸಲುವಾಗಿ ತಾನು ಏನು ಮಾಡಲು ಸಿದ್ಧರಿರುವವನೇ ಈ ಈಶ್ವರ.

ರಾತ್ರಿ ಪೂಜೆ ಏಕೆ?

ಈಶ್ವರನನ್ನು ಶಿವರಾತ್ರಿಯ ರಾತ್ರಿಯಂದು ಯಾಕೆ ಪೂಜಿಸಬೇಕು? ಉಪವಾಸದಲ್ಲಿ ಯಾಕೆ ಇರಬೇಕು? ಯಾಕೆ ಜಾಗರಣವಿರಬೇಕು? ಶಿವರಾತ್ರಿಯ ಆಚರಣೆಯಲ್ಲಿ ಉಪವಾಸ, ಪೂಜೆ, ಜಾಗರಣೆ ಈ ಮೂರು ವಿಧಿತವಾಗಿರುತ್ತದೆ. ಸಮುದ್ರಮಥನದಲ್ಲಿ ಬಂದ ವಿಷವನ್ನು ಶಿವ ತಾನೊಬ್ಬನೇ ಕುಡಿದದ್ದು ತ್ರಯೋದಶಿಯ ಸಂಜೆಯಂದು. ಅದನ್ನು ಪ್ರದೋಷ ಎನ್ನುತ್ತೇವೆ. ಹಾಗಾಗಿ ಪ್ರದೋಷಗಳಲ್ಲಿ ರುದ್ರನಿಗೆ ಅಭಿಷೇಕಯುಕ್ತ ಪೂಜೆಯನ್ನು ಮಾಡಲಾಗುತ್ತದೆ. ಆ ತ್ರಯೋದಶಿ ಕಳೆದ ನಂತರದ ಚತುರ್ದಶಿಯ ರಾತ್ರಿ ಈಶ್ವರನಿಗೆ ಅತ್ಯಂತ ಸಂಕಟಪ್ರದವಾಗಿತ್ತು ಎನ್ನುವುದು ನಮ್ಮಂತಹ ಜನಸಾಮಾನ್ಯರ ನಂಬಿಕೆ. ಅಷ್ಟೂ ವಿಷದ ಅಂಶವನ್ನು ನಮ್ಮನ್ನು ಕಾಯುತ್ತಿರುವ ಇಂತಹ ಶಿವನಿಗೊಂದು ಕೃತಜ್ಞತೆ ಸಲ್ಲಿಸುವುದಕ್ಕೋಸ್ಕರ ಈ ವಿಶೇಷ ಶಿವರಾತ್ರಿ ಪೂಜೆಯನ್ನು ಮಾಡಬೇಕಾಗಿದೆ.

ಜಾಗರಣೆ

ವಿಷ ಉತ್ಪತ್ತಿಯಾದ ದಿನವಿದೆಯಲ್ಲಾ ಆ ದಿನ ವಿಶೇಷವೇ. ಯಾಕೆಂದರೆ ವಿಷೋತ್ಪನ್ನವಾಗುವಂತಹದ್ದು ಆ ಕಾಲದಲ್ಲಿಯೇ ಎನ್ನುವುದೊಂದು ನಂಬಿಕೆ. ಹಾಗಾಗಿ ಇಂದಿನ ದಿನ ಯಾವ ಆಹಾರವನ್ನು ಸೇವಿಸಿದರೂ ಆ ಆಹಾರ ವಿಷವೇ ಆಗಿರುತ್ತದೆ ಎನ್ನವುದು ವಿಧಿತ. ಅಂತಹ ಸಂದರ್ಭದಲ್ಲಿ ನಾವು ಜಾಗೃತವಾಗಿರಬೇಕು. ವಿಷ ನಮ್ಮೊಳಗೆ ಒಕ್ಕಬಾರದು ಅನ್ನುವ ಕಾರಣಕ್ಕಾಗಿ ಜಾಗರಣೆ ಮಾಡಬೇಕು. ಜಾಗೃತವಾಗಿರಬೇಕೆಂದರೆ ಆಹಾರವನ್ನು ಸೇವಿಸದೇ ಇಡೀ 24 ಗಂಟೆಗಳಲ್ಲಿ ಸತ್ಕರ್ಮಗಳನ್ನೇ ಮಾಡಬೇಕು.ಹಾಗಾದರೆ ಅಂದು ಉಂಡವರಿಗೆಲ್ಲಾ ವಿಷ ಹೊಕ್ಕಿರಬಹುದಾ? ಎಂದು ಪ್ರಶ್ನಿಸಿದರೆ ಅದು ನಂಬಿಕೆಯ ವಿಚಾರವೇ ಸರಿ.

ವಿಚಾರಗಳು, ಭಾವನೆಗಳು, ಮಾಡುವ ಕಾರ್ಯಗಳು ವಿಷಯುಕ್ತವಾಗಿರಬಹುದು. ಯಾವುದೋ ಒಂದು ದಾರಿಯಲ್ಲಿ ಮನುಷ್ಯನ ದೇಹ–ಮನಸ್ಸಿನೊಳಗೆ ವಿಷ ಪ್ರವೇಶವಾಗಬಹುದೆಂಬ ಎಚ್ಚರಿಕೆಗೆ ನಾವು ಜಾಗೃತವಾಗಿರಬೇಕೆನ್ನುವುದು ಪ್ರತೀತಿ. ಈ ದಿನ ಮಾಡುವ ಸತ್ಕಾರ್ಯಗಳೆಂದರೆ, ಶಿವನಿಗೆ ಅಭಿಷೇಕ, ಅವನಿಗಿಷ್ಟವಾದ ಬಿಲ್ವದ ಅರ್ಚನೆ (ಬಿಲ್ವಪತ್ರೆ ಜ್ವರ ನಿವಾರಕ, ನಿರ್ವಿಷೀಕರಣ/ಡಿಟಾಕ್ಸಿಕ್) ಮಾಡುವುದರಿಂದ ಒಂದು ಕೃತಾರ್ಥ ಭಾವನೆಯನ್ನು ಹೊಂದುತ್ತೇವೆ. ನಮ್ಮಲ್ಲಿರುವ ಪಾಪಗಳನ್ನೆಲ್ಲಾ ನುಂಗಿಕೊಳ್ಳುತ್ತಿದ್ದೀಯಾ, ಇದು ಮಹದುಪಕಾರ, ನೀನು ಪ್ರಸನ್ನನಾಗು ಶಿವ ಅಂತ ಹೇಳಿ ಅವನನ್ನು ಅರ್ಚಿಸುವ ಕ್ರಿಯೆ.

ಶಿವರಾತ್ರಿಯ ರಾತ್ರಿ ಚತುರ್ದಶಿಯು ಪಕ್ಷದ ಕೊನೆಯ ದಿನ. ರಿಕ್ತ ತಿಥಿ. ಚತುರ್ದಶಿ ದಿನ ದುಷ್ಟಪ್ರಭಾವವು ತೀವ್ರಗೊಳ್ಳುವ ದಿನ. ಪಕ್ಷಛಿದ್ರ ದಿವಸವಾಗಿರುತ್ತದೆ. ಹಾಗಾಗಿ ಉತ್ಪತ್ತಿಯಾಗುವ ಆರಂಭದಲ್ಲೇ ಅದನ್ನು ನಾಶಮಾಡಿದರೆ ಪೂರ್ಣವಾಗಿ ಸ್ವಚ್ಛವಾಗಿಬಿಡುತ್ತದೆ ಎನ್ನುವ ನಂಬಿಕೆಯನ್ನಿಟ್ಟುಕೊಂಡು ನಾವು ಈ ಶಿವರಾತ್ರಿಯನ್ನು ಆಚರಿಸಬೇಕು.

ಸಾತ್ವಿಕ ವಿಚಾರಗಳ ಮಂಥನದಿಂದ, ಜಾಗರಣೆ ಮಾಡಿ ಆಚರಿಸಬೇಕು. ಇಲ್ಲಿಂದಾಚೆಗೆ ಇಡೀ ವರ್ಷ ಮನಸ್ಸು ಹಗುರವಾಗಿರುತ್ತದೆ, ಶಾಂತವಾಗಿರುತ್ತದೆ ಎಂಬ ನಂಬಿಕೆಯಿಂದ ಪೂಜೆ ಮಾಡಬೇಕು. 26ರಂದು ಶಿವರಾತ್ರಿ ಆರರಿಸುವಾಗ ಇವೆಲ್ಲವನ್ನೂ ಮನನ ಮಾಡಿಕೊಂಡು ಆಚರಿಸೋಣ.

ಚಿತ್ತವಿಹಾರ

ಅಶಾಶ್ವತತೆಯ ಅರಿವಿರಲಿ

ಬದುಕಿನಲ್ಲಿ ಎಲ್ಲವೂ ಬದಲಾವಣೆಗೆ ಒಳಗಾಗುತ್ತದೆ. ಮೇಲೆರಿದವನು ಕೆಳಗಿಳಿಯಲೇ ಬೇಕು. ಎಲ್ಲವೂ ಅಶಾಶ್ವತ ಎಂಬ ಅರಿವಿನ ನಡುವೆಯೂ ನಾವು ನೂರೆಂಟು ಕಲ್ಪನೆಗಳನ್ನು ಕಟ್ಟಿಕೊಳ್ಳುತ್ತೇವೆ. ಎಲ್ಲವನ್ನೂ ಆಶಿಸುತ್ತೇವೆ. ನಮ್ಮದಾಗಿಸಿಕೊಳ್ಳುವ ನಿರಂತರ ಪ್ರಯತ್ನವನ್ನು ಜಾರಿಯಲ್ಲಿರಿಸಿಕೊಳ್ಳುತ್ತೇವೆ. ಒಂದೊಮ್ಮೆ ನಾನು ಬಯಸಿದ್ದು ದಕ್ಕಿದರೆ ಸಾಕು ನನಗಿನ್ನೇನು ಬೇಡ ಎಂದು ನಿರ್ಧಾರ ಬರುತ್ತೇವೆ. ದಕ್ಕದೆ ಹೋದರೆ ನೋವು ನಿರಾಸೆ, ಹತಾಶೆ ಭಾವದಲ್ಲಿ ಸಂಕಟ ಪಡುತ್ತೇವೆ. ಸಿಕ್ಕರೆ ಮನಸ್ಸಿನಲ್ಲಿ ಸಂತೋಷ ಒಂದಷ್ಟು ಪಡುತ್ತೇವಾದರೂ, ಅದು ಕ್ಷಣಕಾಲ ಮಾತ್ರ. ಎಲ್ಲವೂ ಅಶಾಶ್ವತ ಎಂಬ ಆಂತರಿಕ ಪ್ರಜ್ಞೆ ನಮ್ಮಲ್ಲಿ ಜಾಗ್ರತವಾಗದೇ ಹೋದರೆ ಬದುಕು ಕೊನೆಗೊಮ್ಮೆ ಭ್ರಮನಿರಸನಗೊಳ್ಳುತ್ತದೆ.

ಶಾಕ್ಯ ರಾಜಕುಮಾರ ಸಿದ್ಧಾರ್ಥನಿಗೆ ಕೊರತೆ ಇರಲಿಲ್ಲ. ಅನುರೂಪಳಾದ ಸತಿ, ಮುದ್ದಾದ ಮಗು, ರಾಜವೈಭವ, ಯೌವನ ಎಲ್ಲವೂ ಇತ್ತು. ಸದಾ ಕಾಲ ಅರಮನೆಯಲ್ಲಿಯೇ ಇರುವಂತೆ ಎಲ್ಲ ವ್ಯವಸ್ಥೆಯನ್ನು ಮಾಡಲಾಗಿತ್ತು. ಹೊರಗಿನ ಆಗು ಹೋಗುಗಳ ಒಂದಿನಿತು ನೆರಳು ಬೀಳದ ಹಾಗೆ ಕಟ್ಟೆಚ್ಚರ ವಹಿಸಲಾಗಿತ್ತು. ಅಕಸ್ಮಿಕವಾಗಿ ಸಿದ್ದಾರ್ಥ ಒಂದೊಮ್ಮೆ ಹೊರಗಿನ ಪ್ರಪಂಚಕ್ಕೆ ಬಂದಾಗ ರೋಗಿಷ್ಠ ವ್ಯಕ್ತಿ, ವೃದ್ಧಾಪ್ಯ, ಸಾವಿನ ದರ್ಶನವಾಗಿತ್ತು. ಮನಸ್ಸು ಗೊಂದಲಕ್ಕೊಳಗಾಗಿತ್ತು. ಕ್ಷಣ ಮಾತ್ರದಲ್ಲಿಯೇ ಎಲ್ಲವೂ ಅಶಾಶ್ವತ ಎಂಬ ಅರಿವಿನ ಬೆಳಕು ಬೆಳಗಿತ್ತು. ಸಿದ್ಧಾರ್ಥ ಹೆಂಡತಿ, ಮಗ, ಅರಮನೆಯನ್ನು ತೊರೆದು ಬುದ್ಧನಾಗಿ ಪರಿವರ್ತನೆಯಾಗಿದ್ದ.

ಬಯಕೆ ಮತ್ತು ಅಶಾಶ್ವತತೆಗೆ ಅಂಟಿಕೊಳ್ಳುವ ನಮ್ಮ ನಡತೆಗಳು ನಮಗೆ ನೋವನ್ನುಂಟು ಮಾಡುತ್ತವೆ. ಸಲ್ಲದ ಸಂಗತಿಗಳ ಸುಳಿಯೊಳಗೆ ಬಂಧಿಸಿ ಗುಲಾಮರನ್ನಾಗಿಸುತ್ತವೆ. ಭ್ರಮೆಯನ್ನುಂಟು ಮಾಡುವ ತೆರೆಗಳ ಅಬ್ಬರದ ಕೋಲಾಹಲದಿಂದ ಒಂದಷ್ಟು ದೂರ ಸರಿಯಬೇಕು. ಸಮಾಧಾನದಿಂದ ಸಂಗತಿಗಳನ್ನು ಸಮಾಲೋಕನ ಮಾಡುವ ಗುಣ ನಮ್ಮದಾಗಬೇಕು. ಆಗ ನಮ್ಮಲ್ಲಿ ಅಶಾಶ್ವತತೆಯ ಕುರಿತಾದ ಅರಿವಿನ ಬೆಳಕು ನಮ್ಮಲ್ಲಿ ಹೊತ್ತಿಕೊಳ್ಳಬಲ್ಲದು. ಅಶಾಶ್ವತೆಯ ಏರಿಳಿತದೊಡನೆ ಮನಸ್ಸನ್ನು ಸಮೀಕರಿಸಬೇಕು. ಇದು ಚಡಪಡಿಕೆ ಮತ್ತು ಆತಂಕಗಳ ತಮಂಧವನ್ನು ಕರಗಿಸಬಲ್ಲದು. ಅಶಾಶ್ವತೆಯನ್ನು ಅಪ್ಪಿಕೊಳ್ಳುವದರಿಂದ ಸಂಕಟಗಳ ಬಂಧನವನ್ನು ಬಿಡಿಸಿಕೊಳ್ಳಬಹುದು. ಸತ್ಯದರ್ಶನವಾಗುವದರಿಂದ ಮಾತ್ರವೇ ನಮ್ಮ ಸುತ್ತಣ ಪ್ರಪಂಚದಲ್ಲಿ ನಿತ್ಯವೂ ಘಟಿಸುವ ಘಟನೆಗಳ ಜೊತೆ ಸೌಹಾರ್ದತೆಯನ್ನು ಸಾಧಿಸಬಹುದು. ನಮ್ಮ ನಿರೀಕ್ಷೆಗೆ ಅನುಗುಣವಾಗಿ ಜರಗುವ ಇಲ್ಲವೇ ಅಪೇಕ್ಷಣಿಯವಲ್ಲದ ಸಣ್ಣ ಸಂಗತಿಗಳು ಕೂಡ ನಮಗೆ ಸಂತೋಷದ ಅನುಭೂತಿಯನ್ನು ನೀಡಬಲ್ಲವು.

● ಮಹಾದೇವ ಬಸರಕೋಡ

ಹನಿಮಳೆ

ಅಮ್ಮನ ಸೆರಗು

ಏನೂ ಇಲ್ಲದಿದ್ದಾಗ ಅಮ್ಮನ
ಸೆರಗೊಂದಿತ್ತು
ಹಸಿದಾಗ ಪುರಿಯ ತಿನ್ನಲು
ಬಟ್ಟಲಾಗುತ್ತಿತ್ತು
ನೊಂದಾಗ ಕಣ್ಣೊರೆಸುವ ವಸ್ತ್ರವಾಗುತ್ತಿತ್ತು
ಭಯವಾದಾಗ ಕಣ್ ಮುಚ್ಚುವ
ಪರದೆಯಾಗುತ್ತಿತ್ತು
ಬೀಳದಂತೆ ನಡೆಯಲು
ಆಧಾರವಾಗುತ್ತಿತ್ತು
ಸರಿದಾರಿಯಲಿ ನಡೆಯಲು
ಸಹಾಯವಾಗುತ್ತಿತ್ತು

ಸೆರಗಿನ ಮೂಲಕ ನೋಡಿದರೆ
ಪ್ರಪಂಚವೇ ಬಣ್ಣಮಯ!
ಇಂದು ಅಮ್ಮ ಯಾವ ಸೆರಗಿನ
ಸೀರೆಯನುಟ್ಟಿದ್ದಾಳೆ
ನೋಡುವ ಸಹನೆಯಿದೆಯೆ? ಇಂದೊಮ್ಮೆ
ನೋಡಿಬಿಡಿ
ಏಕೆಂದರೆ, ಏನೂ ಇಲ್ಲದಿದ್ದಾಗ ಅಂದು
ನಮಗೆಲ್ಲಾ
ಅಮ್ಮನ ಸೆರಗೊಂದಿತ್ತು.

● ಸಿದ್ದೇಶ್ ಹಾರನಹಳ್ಳಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್
vishwavanimagazine@gmail.com

ಸ್ಫೂರ್ತಿ ತುಂಬುವ ಬದುಕು!

● ಎಲ್.ಪಿ.ಕುಲಕರ್ಣಿ

ಹೆತ್ತವರನ್ನು ಕಳೆದುಕೊಂಡ ಆ ಬಾಲಕ ತನ್ನ ಹಳ್ಳಿಯನ್ನು ತೊರೆದು ಮುಂಬೈಗೆ ತೆರಳುತ್ತಾನೆ. ಜೀವನೋಪಾಯಕ್ಕೆ ಶಿವಾಜಿ ಪಾರ್ಕ್ ಬಳಿ ವಡಾ ಪಾವ್ ಮಾರಾಟ ಮಾಡಲು ಪ್ರಾರಂಭಿಸುತ್ತಾನೆ. ಬಾಲಿವುಡ್‌ನ ನೆಲೆಯಾದ ಮುಂಬೈ ಮಹಾನಗರಿಯಲ್ಲಿ ಆಗಾಗ ತೆರೆಕಾಣುತ್ತಲಿದ್ದ ಸಿನಿಮಾಗಳ ಬಗ್ಗೆ ಕುತೂಹಲ ಮೂಡಿಸಿಕೊಳ್ಳುತ್ತಾನೆ. ಒಂದು ದಿನ ಪುರಸಭೆಯವರು ಈ ಬಾಲಕನ ವಡಾ ಪಾವ್ ಅಂಗಡಿಯನ್ನೂ ತೆರವುಗೊಳಿಸುತ್ತಾರೆ. ಮುಂದೇನು ಮಾಡಬೇಕೆಂಬುದು ಆತನಿಗೆ ತೋಚುವುದಿಲ್ಲ.

ಅದೇ ಸಮಯದಲ್ಲಿ, ಎಡಿಟಿಂಗ್ ಸ್ಟುಡಿಯೋದಲ್ಲಿ ಪ್ಯೂನ್ ಕೆಲಸಕ್ಕಾಗಿ ಪತ್ರಿಕೆಯಲ್ಲಿ ಜಾಹೀರಾತನ್ನು ಕೊಡಲಾಗಿರುತ್ತದೆ. ಅದನ್ನು ಗಮನಿಸಿದ ಈ ಬಾಲಕ ಅಲ್ಲಿ ಕೆಲಸ ಗಿಟ್ಟಿಸಿಕೊಳ್ಳುತ್ತಾನೆ. ಕ್ಯಾಮೆರಾ ಅಟೆಂಡೆಂಟ್‌ಗಳ ಕೊರತೆಯಿಂದಾಗಿ, ಸಿಬ್ಬಂದಿ ಕ್ರಮೇಣ ಇವನನ್ನು ಕ್ಯಾಮೆರಾ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

ಈಗ ಕ್ಯಾಮೆರಾ ಅಟೆಂಡೆಂಟ್ ಆಗಿ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತಾನೆ. ನಂತರ ಮುಖ್ಯ ಕ್ಯಾಮೆರಾ ಅಟೆಂಡೆಂಟ್, ಸಹಾಯಕ ಕ್ಯಾಮೆರಾಮನ್ ಮತ್ತು ಅಂತಿಮವಾಗಿ ಪೂರ್ಣ ಪ್ರಮಾಣದ ಕ್ಯಾಮೆರಾಮನ್ ಆಗುತ್ತಾನೆ. ಆಂಥೋನಿ ಡಿ'ಸೋಜಾ ಅವರ ಪ್ರಚಾರದ ವೀಡಿಯೊವನ್ನು ಚಿತ್ರೀಕರಿಸುವ ಅವಕಾಶವನ್ನು ಪಡೆದಾಗ ಅವನಿಗೆ ದೊಡ್ಡ ಬ್ರೇಕ್ ಸಿಕ್ಕಿಬಿಡುತ್ತದೆ, ಇದು ರಾಜಸ್ಥಾನದಲ್ಲಿ ಅವನ ಮೊದಲ ಸಂಗೀತ ವೀಡಿಯೊ ಚಿತ್ರೀಕರಣಕ್ಕೆ ಕಾರಣವಾಯಿತು.





2007 ರಲ್ಲಿ, ಅವನು ಖನ್ನಾ ಮತ್ತು ಅಯ್ಯರ್ ಅವರ ಛಾಯಾಗ್ರಾಹಕನಾಗಿ ಕೆಲಸ ಮಾಡುತ್ತಾನೆ. ನಂತರ ಬ್ಲೂ (2009), ಇಂಗ್ಲಿಷ್ ವಿಂಗ್ಲಿಷ್ (2012), ಡಿಯರ್ ಜಿಂದಗಿ, ಹಿಂದಿ ಮೀಡಿಯಂ, ಮತ್ತು 102 ನಾಟ್ ಔಟ್ ನಂತಹ ಪ್ರಮುಖ ಬಾಲಿವುಡ್ ಚಿತ್ರಗಳಿಗೆ ಆತನ ಕೊಡುಗೆ ಅಪಾರ.

ನಿರ್ದೇಶನಕ್ಕೆ ಪದಾರ್ಪಣೆ: ಮುಂದೆ 2013 ರಲ್ಲಿ ಮರಾಠಿ ಚಿತ್ರ ತಪಾಲ್ ಮೂಲಕ ನಿರ್ದೇಶನಕ್ಕೆ ಪಾದಾರ್ಪಣೆ ಮಾಡುತ್ತಾನೆ, ನಂತರ ಲಾಲ್ಬೌಗ್ಚಿ ರಾಣಿ (2016) ಚಿತ್ರ. 2019 ರಲ್ಲಿ, ಲಿವ್-ಇನ್ ಸಂಬಂಧದ ಮೇಲೆ ಹೆಣೆದ ಲುಕಾ ಚುಪ್ಪಿ ಎಂಬ ತನ್ನ ಮೊಟ್ಟ ಮೊದಲ ಹಿಂದಿ ಚಲನ ಚಿತ್ರವನ್ನು ನಿರ್ದೇಶಿಸುತ್ತಾನೆ. ಈ ಚಿತ್ರ ಸುಪರ್ ಹಿಟ್ ಚಿತ್ರವಾಗಿ ಹೊರಹೊಮ್ಮುತ್ತದೆ. 2021 ರಲ್ಲಿ, ರಾಷ್ಟ್ರೀಯ ಪ್ರಶಸ್ತಿ ವಿಜೇತ ಮರಾಠಿ ಚಿತ್ರ ಮಾಲಾ ಆಯ್ ವ್ಯಾಯ್ಚಾಯ್ ನ ಹಿಂದಿ ರಿಮೇಕ್ ಮಿಮಿ ಚಿತ್ರವನ್ನು ನಿರ್ದೇಶಿಸುತ್ತಾನೆ. ಇದರ ನಂತರ 2023 ರಲ್ಲಿ ಜರಾ ಹಟ್ಕೆ ಜರಾ ಬಚ್ಕೆ ಚಿತ್ರವನ್ನು ಬಿಡುಗಡೆ ಮಾಡಲಾಗುತ್ತದೆ. 2024 ರಲ್ಲಿ, ಅವನು ತೇರಿ ಬಾತೊ ಮೇ ಐಸಾ ಉಲ್ಝಾ ಜಿಯಾ ಚಿತ್ರದೊಂದಿಗೆ ಚಲನಚಿತ್ರ ನಿರ್ಮಾಣಕ್ಕೂ ಕಾಲಿಡುತ್ತಾನೆ.

ಸದ್ಯ, ಮರಾಠಾ ಸಾಮ್ರಾಜ್ಯದ ಅಪ್ರತಿಮ ವೀರ ಸಂಭಾಜಿ ಕುರಿತಾದ ಚಲನಚಿತ್ರ 'ಛಾವ' ವನ್ನು ನಿರ್ದೇಶಿಸಿ ಹೆಸರುಮಾಡಿದ್ದಾರೆ. ಛಾವ ಚಲನಚಿತ್ರ ಬಿಡುಗಡೆಯಾಗಿ ಒಂದೇ ವಾರದಲ್ಲಿ ರು. 220 ಕೋಟಿಗಳನ್ನು ಗಳಿಸಿದೆ. ಈಗಲೂ ಗಳಿಕೆಯಲ್ಲಿ ಮುಂದಿದೆ.

ಆರಂಭದಲ್ಲಿ ಹೇಳಿದ ಆ ಬಾಲಕನೇ ಛಾವಾ ಚಿತ್ರದ ನಿರ್ದೇಶಕ ಲಕ್ಷ್ಮಣ್ ಉಟೇಕರ್. ಹಿಂದಿ ಮತ್ತು ಮರಾಠಿ ಚಿತ್ರರಂಗದಲ್ಲಿಯಶಸ್ವಿಯಾಗಿರುವ ಇವರ ಬದುಕು ಸ್ಫೂರ್ತಿದಾಯಕ. ಕಠಿಣ ಪರಿಶ್ರಮ ಮತ್ತು ದೃಢಸಂಕಲ್ಪದಿಂದ ಯಾವುದೇ ಕನಸನ್ನು ನನಸಾಗಿಸಿಕೊಳ್ಳಬಹುದು ಎಂಬುದಕ್ಕೆ ಲಕ್ಷ್ಮಣ್ ಉಟೇಕರ್ ಅವರ ಸಾಧನೆಯು ಮಾದರಿ ಎನಿಸಿದೆ.

ಕನ್ನಡಿಯಂತೇ ಸಾಕ್ಷಿಯಾಗಿರು



ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಹೊಗೆಯಲ್ಲಿ ಮುಚ್ಚಿದ ಕೆಂಡದಂತೆ, ಕೊಳೆಯಿಂದ ತುಂಬಿದ ಕನ್ನಡಿಯಂತೆ, ಗರ್ಭದಿಂದ ಆವೃತವಾದ ಭ್ರೂಣದಂತೆ ನಮ್ಮ ಬುದ್ಧಿ ಚಾತುರ್ಯವು ಪೂರೈಸಲಾಗದ ಆಸೆಯಿಂದ ಆವೃತವಾಗಿರುತ್ತದೆ. ಇದು ಬುದ್ಧಿವಂತನ ಸತತವಾದ ಶತ್ರುವಾಗಿದೆ (3.383.39) ಎಂದು ಕೃಷ್ಣ ಸ್ಪಷ್ಟಪಡಿಸುತ್ತಾನೆ.

ನಮ್ಮನ್ನು ಸಮ್ಮೋಹಿನಿಗೊಳಿಸುವ ಶಕ್ತಿ ಗುಣಗಳಿಗೆ ಇದೆ ಎಂದು ಈ ಮೊದಲೇ ಅವನು ಸ್ಪಷ್ಟಪಡಿಸಿದ್ದಾನೆ. ರಜೋಗುಣದಿಂದ ಉಂಟಾದ ಆಸೆಯೂ ಇದನ್ನೇ ಮಾಡುತ್ತದೆ. ಇಂದ್ರಿಯಗಳು ಮನಸ್ಸು ಮತ್ತು ಬುದ್ಧಿ ಇವು ಆಸೆಗಳ ಸ್ಥಾನಗಳಾಗಿವೆ ಹಾಗೂ ಇವುಗಳ ಮೂಲಕ ಆಸೆಗಳು ನಮ್ಮ ಆತ್ಮವನ್ನು ವಶೀಕರಣ ಮಾಡಿಕೊಂಡು ವಿವೇಕಕ್ಕೆ ಕತ್ತಲು ಕವಿಯುವಂತೆ ಮಾಡುತ್ತವೆ ಎಂಬುದನ್ನು ವಿವರಿಸಿದ್ದಾನೆ (3.40).

ಕನ್ನಡಿಯು ಸಾಕ್ಷಿಗೆ ಉತ್ತಮ ಉದಾಹರಣೆಯಾಗಿದೆ. ಇದರ ಬುದ್ಧಿವಂತಿಕೆಯು ಎರಡು ಪ್ರಸಂಗಗಳನ್ನು ಪ್ರತಿಬಿಂಬಿಸುವುದು ಮತ್ತು ಜನರು ಯಾವುದೇ ಹಣೆಪಟ್ಟಿ ಇಲ್ಲದೆ ಇದರ ಮುಂದೆ ತರುತ್ತಾರೆ. ಇದಕ್ಕೆ ಹಿಂದಿನ ಗುಣವಾಗಲಿ ಮುಂದಿನ ನಿರೀಕ್ಷೆಯಾಗಲಿ ಇರದೆ ವರ್ತಮಾನದಲ್ಲಿಯೇ ಇರುತ್ತದೆ. ಈ ಬುದ್ಧಿವಂತಿಕೆಯು ಧೂಳಿನಿಂದ ಆವೃತವಾದಾಗ ಇದರ ಗುಣಮಟ್ಟ ಕಡಿಮೆಯಾಗುತ್ತದೆ.

ರೂಪಕವಾದ ಈ ಕನ್ನಡಿಯು ನಮ್ಮ ನೈಜ ಸ್ವಭಾವವಾದರೆ ಅದನ್ನು ಆವರಿಸಿದ ಧೂಳು ನಮ್ಮ ಹಿಂದಿನ ಪ್ರಚೋದಿತ ಕರ್ಮ ಮತ್ತು ಆಸೆಗಳಿಂದ ಕೂಡಿದ ಸಂಗ್ರಹವಾಗಿದೆ. ಅದರಂತೆಯೇ ನಮ್ಮ ನೈಜ ಸಾಮರ್ಥ್ಯವೆಂದರೆ ನಮ್ಮ ನಿಜವಾದ ಸ್ವಭಾವವನ್ನು ತಿಳಿಯುವದು. ಅದು ಅಪರಿಮಿತವಾಗಿದೆ ಆದರೆ ನಾವು ನಮ್ಮ ಮಿತವಾದ ಜ್ಞಾನದೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುತ್ತೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಕನ್ನಡಿಯ ಮೇಲಿನ ಧೂಳು ನಮ್ಮ ಹಿಂದಿನ ಸಂಗ್ರಹವಾಗಿದೆ. ಇದು ಜ್ಞಾನ ಸಂತೋಷ ಹಾಗೂ ಅಸಂತೋಷ ಕ್ಷಣಗಳ ನೆನಪು ಹಾಗೂ ನಿರ್ಣಯಗಳನ್ನು ಒಳಗೊಂಡಿರುತ್ತದೆ ಮತ್ತು ನಮ್ಮ ಮೇಲಿನ ದೊಡ್ಡ ಭಾರವಾಗಿದೆ. ಅದರಂತೆ ಆಸೆಗಳು ನಮ್ಮ ಬುದ್ಧಿಮತ್ತೆಯನ್ನು ಆವರಿಸಿ ನಮ್ಮ ಆತ್ಮಕ್ಕೆ ಭ್ರಮೆಯನ್ನು ಉಂಟುಮಾಡುತ್ತವೆ. ನಮ್ಮ ಕಾರ್ಯಕ್ಷೇತ್ರ ಮತ್ತು ಮನೆಯಲ್ಲಿಯ ನಮ್ಮ ಮಹತ್ವದ ಸಂಭಾಷಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ನಾವು ನಮ್ಮ ಹಿಂದಿನ ದೊಡ್ಡ ಭಾರವನ್ನು ಹೊತ್ತಿದ್ದೇವೆ ಎಂದು ತಿಳಿಯುತ್ತದೆ. ಆಗ ವರ್ತ ಮಾನದ ಕ್ಷಣದ ಬೆಲೆ ಕಟ್ಟುವುದು ಕಷ್ಟವಾಗುತ್ತದೆ. ಇದರ ಪರಿಣಾಮವೆಂದರೆ ಕುಂಠಿತ ಉತ್ಪಾದನೆ ಹಾಗೂ ತಪ್ಪು ಗ್ರಹಿಕೆಗಳಾಗಿರುತ್ತವೆ.

ಹಿಂದಿನದರಲ್ಲಿಯೇ ಜೀವಿಸುವುದು ದುಃಖಮಯವಾಗಿರುತ್ತದೆ. ಹಿಂದಿನದು ನಮ್ಮನ್ನು ಗುಲಾಮರನ್ನಾಗಿಸದೆ ಇರುವಂತೆ ನೋಡಿಕೊಳ್ಳುವುದು ಇದಕ್ಕೆ ಪರಿಹಾರವಾಗಿದೆ. ಪ್ರಾರಂಭದಲ್ಲಿ ಅದರಲ್ಲಿಯ ಕೆಲವನ್ನು ನಮಗೆ ಸಹಾಯ ಮಾಡುವ ಉಪಕರಣದಂತೆ ಉಪಯೋಗಿಸಿಕೊಳ್ಳಬಹುದು. ಆದರೆ ಇದು ವರ್ತಮಾನ ಕ್ಷಣದ ಜಾಗೃತಿಯೊಂದಿಗೆ ಶಾಶ್ವತವಾಗಿ ಸೇರಿಕೊಳ್ಳುವ ತನಕ ಮಾತ್ರ.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್
ವಿಶ್ವವಾಣಿ
24.02.2025 ಸೋಮವಾರ
vishwavani.news

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಮಾಘ ಮಾಸ, ಏಕಾದಶಿ ತಿಥಿ, ಕೃಷ್ಣ ಪಕ್ಷ, ಪೂರ್ವಾಷಾಢ ನಕ್ಷತ್ರ, ಸಿದ್ಧಿ ಯೋಗ, ರಾಹುಕಾಲ ಬೆಳಗ್ಗೆ 8.07ರಿಂದ ಮಧ್ಯಾಹ್ನ 9.35ರವರೆಗೆ, ಅಭಿಜಿತ್ ಮುಹೂರ್ತ ಮಧ್ಯಾಹ್ನ 12.09ರಿಂದ 12.57ರವರೆಗೆ

ಮನೆಮದ್ದು

ಒಸಡಿನಲ್ಲಿ ಹುಣ್ಣಾಗಿದ್ದರೆ, ಪೇರಳೆ (ಶೀಬೆ) ಎಲೆಗಳ ಕಷಾಯ ಮಾಡಿ ಸೋಸಿ ಅದಕ್ಕೆ ಉಪ್ಪು ಅಥವಾ ಪಟಕಾರಹಾಕಿ ಪದೇಪದೆ ಬಾಯಿ ಮುಕ್ಕಳಿಸಿದರೆ ಹಲ್ಲುನೋವು, ಸಿಡಿತ, ಒಸಡುಹುಣ್ಣು, ಕೀವು, ರಕ್ತ, ಬಾವುಗಳು ಗುಣವಾಗುತ್ತವೆ.

ಸೌಂದರ್ಯ ಸೂತ್ರ

ದೇಹದ ತೂಕವು ಹೆಚ್ಚಾಗಿರಲಿ ಅಥವಾ ಕಡಿಮೆಯಾಗಿರಲಿ, ಸಕ್ಕರೆ ಮತ್ತು ಪಿಷ್ಟವನ್ನು ಮಿತಿಯಾಗಿ ಸೇವಿಸಬೇಕು. ಆರೋಗ್ಯಕ್ಕೂ ಮತ್ತು ದೇಹದ ತೂಕವನ್ನು ಕಡಿಮೆ ಮಾಡಬಯಸುವವರಿಗೂ ಆಲೂಗಡ್ಡೆ ಸೇವನೆ ಹಿತಕರವಲ್ಲ.

ದಿನ ಭವಿಷ್ಯ

ಮೇಷ
ಪ್ರಚಾರ ಮತ್ತು ಪ್ರಸಿದ್ಧಿಗಾಗಿ ಹಂಬಲಿಸದಿರಿ. ನಿಮ್ಮ ಪಾಲಿನ ಕೆಲಸವನ್ನು ಶ್ರದ್ಧಾಭಕ್ತಿಯಿಂದ ನಿರ್ವಹಿಸಿಕೊಂಡು ಬನ್ನಿ. ಪರಿಶ್ರಮಕ್ಕೆ ಮತ್ತು ಪ್ರಾಮಾಣಿಕತೆಗೆ ಯಾವತ್ತಿಗೂ ಬೆಲೆ ಇದ್ದೇ ಇರುತ್ತದೆ.

ವೃಷಭ
ಕಚೇರಿಯಲ್ಲಿ ಸಹೋದ್ಯೋಗಿಗಳೊಂದಿಗೆ, ಮನೆಯ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯವನ್ನು ಕಾಪಿಟ್ಟುಕೊಳ್ಳಿ. ನಿಮಗೆ ಸಂಬಂಧಿಸದ ವಿಚಾರದಲ್ಲಿ ತಲೆ ಹಾಕದಿರುವುದು ಸೂಕ್ತ.

ಮಿಥುನ
ವಾಹನಗಳಲ್ಲಿ ಸಂಚರಿಸುವಾಗ ಅಥವಾ ರಸ್ತೆ ದಾಟುವಾಗ ಜಾಗ್ರತೆಯಿಂದಿರಿ, ಅನ್ಯಮನಸ್ಕತೆಯಿಂದ ಅಪಾಯ ಒದಗಬಹುದು. ಮನೆಗೆ ಬರುವ ಗುರು-ಹಿರಿಯರನ್ನು ಸತ್ಕರಿಸುವುದರಿಂದ ಶ್ರೇಯಸ್ಸಿದೆ.

ಕಟಕ
ಬದುಕಿನ ಏಕತಾನತೆಯನ್ನು ದೂರ ಮಾಡಿಕೊಳ್ಳಲು ವೃತ್ತಿಯ ಜತೆಜತೆಗೆ ಯಾವುದಾದರೂ ಸೃಜನಶೀಲ ಕಲೆಯನ್ನು ರೂಢಿಸಿಕೊಳ್ಳಿ. ಇಂದು ಉತ್ತರ ದಿಕ್ಕಿನಿಂದ ನಿಮಗೆ ಶುಭಸುದ್ದಿಯೊಂದು ಕೇಳಿಬರಲಿದೆ.

ಸಿಂಹ
ಪಾಲುದಾರಿಕೆ ಉದ್ಯಮ ನಿಮಗೆ ಸದ್ಯಕ್ಕೆ ಆಗಿಬರುವುದಿಲ್ಲ. ಪ್ರೇಮವಿವಾಹವೂ ಸೂಕ್ತವಲ್ಲ. ಬಹುದಿನಗಳಿಂದ ನಿಮಗೆ ಬರುವುದು ಬಾಕಿಯಿದ್ದ ಹಣವು ಇಂದು ನಿಮ್ಮ ಕೈಸೇರುವುದು. ಗಣೇಶನನ್ನು ಆರಾಧಿಸಿ.

ಕನ್ಯಾ
'ಬಾಡಿಗೆ ಮನೆಯಲ್ಲಿದ್ದರೆ ಅವಮಾನ, ಸ್ವಂತ ಮನೆ ಮಾಡಿಕೊಂಡರಷ್ಟೇ ಗೌರವ ಹಾಗೂ ಪ್ರತಿಷ್ಠೆ' ಎಂಬ ಭ್ರಮೆಯಿಂದ ಹೊರಗೆ ಬನ್ನಿ. ಈ ಲೋಕದಲ್ಲಿ ಯಾವುದೂ ನಮ್ಮ ಸ್ವಂತದ್ದಲ್ಲ ಎಂಬ ಕಹಿಸತ್ಯವನ್ನು ಅರಿಯಿರಿ.

ತುಲಾ
ವೃತ್ತಿಯಲ್ಲಾಗಲೀ ಹಣಕಾಸಿನ ವಿಷಯದಲ್ಲಾಗಲೀ ನಿಮ್ಮ ಇತಿಮಿತಿಯೇನು ಎಂಬುದನ್ನು ಇನ್ನಾದರೂ ಅರಿಯಿರಿ. ಮನೆಯಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ನೀವು ಇನ್ನಷ್ಟು ಗಮನ ಕೊಡಬೇಕಾದೀತು. ಗುರುಪೀಠಕ್ಕೆ ತೆರಳಿ ನಮಸ್ಕರಿಸಿ.

ವೃಶ್ಚಿಕ
ವೃತ್ತಿ ಸಂಬಂಧವಾಗಿ ನೀವು ಪ್ರಮೋಷನ್ ಸಮೇತ ಪರವೂರಿಗೆ ಪ್ರಯಾಣ ಬೆಳೆಸಬೇಕಾಗಿ ಬರಬಹುದು ಅಥವಾ ಒಂದೊಮ್ಮೆ ನೀವು ವೃತ್ತಿ ಬದಲಾವಣೆಯ ಕುರಿತು ಆಶಿಸುತ್ತಿದ್ದರೆ ಅದು ಈಡೇರಲಿದೆ.

ಧನು
ನಿಮ್ಮ ಕಾರ್ಯಕ್ಷಮತೆ ಹಾಗೂ ಪ್ರಾಮಾಣಿಕತೆಗಳು ಕಚೇರಿಯ ಮುಖ್ಯಸ್ಥರ ಗಮನಕ್ಕೆ ಬಂದು ಅವರು ನಿಮ್ಮ ಕುರಿತು ಮೆಚ್ಚುಗೆಯ ನುಡಿಗಳನ್ನು ಆಡಲಿದ್ದಾರೆ. ಸಹೋದ್ಯೋಗಿಗಳು ಕೂಡ ಇದಕ್ಕೆ ದನಿಗೂಡಿಸಲಿದ್ದಾರೆ.

ಮಕರ
ಸಣ್ಣಪುಟ್ಟ ಅನಾರೋಗ್ಯವನ್ನು ನಿರ್ಲಕ್ಷಿಸದೆ ವೈದ್ಯರ ಸಲಹೆ/ಚಿಕಿತ್ಸೆ ಪಡೆಯಿರಿ. ಇಲ್ಲವಾದಲ್ಲಿ ಇಂದು ಸಣ್ಣಗೆ ಕಂಡಿದ್ದು ಮುಂದೆ ಬೆಳೆದು ದೊಡ್ಡದಾಗಿ ಚಿಂತೆಗೆ ಕಾರಣವಾಗಬಹುದು. ಗಣೇಶನನ್ನು ಆರಾಧಿಸಿ.

ಕುಂಭ
ಸಾರ್ವಜನಿಕ ಸ್ಥಳದಲ್ಲಿ ಅಥವಾ ಕಚೇರಿಯಲ್ಲಿ ನೀವಾಡುವ ಆತ್ಮವಿಶ್ವಾಸದ ಮಾತುಗಳು ಪರರಿಗೆ ಅಹಂಕಾರದ ಮಾತಿನ ರೀತಿಯಲ್ಲಿ ಕಾಣಿಸಬಹುದು. ಆದ್ದರಿಂದ ಜಾಗ್ರತೆ ವಹಿಸಿ. ಕಾಲೆಳೆಯುವವರು ಎಲ್ಲ ಕಡೆ ಇರುತ್ತಾರೆ, ಎಚ್ಚರಿಕೆ!

ಮೀನ
ಮನೆಯನ್ನು ಖರೀದಿಸುವ ನಿಮ್ಮ ಬಯಕೆಗೆ ಇಂದು ಬಂಧುವೊಬ್ಬರು ಬಲ ತುಂಬಲಿದ್ದಾರೆ. ಅವರ ನೆರವನ್ನು ಆಶೀರ್ವಾದ ಎಂದು ಪರಿಗಣಿಸಿ ಸ್ವೀಕರಿಸಿ. ಇದರಿಂದ ಸೌಹಾರ್ದ ಭಾವವೂ ವೃದ್ಧಿಸುವುದು.

● ಕೆ.ಬಿ.ಸಂತೋಷ್ ಗುರೂಜಿ

ಮಧುರ ಸ್ಮೃತಿ

ಡಾ. ರಾಜ್‌ಕುಮಾರ್ ಅವರು 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಶಹನಾಯಿ ನುಡಿಸುವವನ ಪಾತ್ರದಲ್ಲಿ ಕಳೆಗಟ್ಟಿದ್ದನ್ನು ಮರೆಯಲಾದೀತೇ? ಅಣ್ಣಾವ್ರು ಒಬ್ಬ ಶ್ರೇಷ್ಠ ಕಲಾವಿದ ಮಾತ್ರವಲ್ಲದೆ, ಕಲಾರಸಿಕರು ಕೂಡ ಆಗಿದ್ದರು. 'ಸನಾದಿ ಅಪ್ಪಣ್ಣ' ಚಿತ್ರದ ಚಿತ್ರೀಕರಣಕ್ಕೆ ಪೂರ್ವಾಭ್ಯಾಸ ಎಂಬಂತೆ, ಅಣ್ಣಾವ್ರು ಮದುವೆ ಮನೆಯೊಂದಕ್ಕೆ ಹೋದಾಗ ಅಲ್ಲಿ ನಾದಸ್ವರ ನುಡಿಸುತ್ತಿದ್ದ ಕಲಾವಿದರ ಪ್ರೌಢಿಮೆಗೆ ಮನಸೋತು ಅವರ ಬಳಿಯೇ ಕೂತುಬಿಟ್ಟರು. ಈ ಚಿತ್ರದಲ್ಲಿ ಅಣ್ಣಾವ್ರ ಜತೆಗಿರುವವರು ಪ್ರಖ್ಯಾತ ನಾದಸ್ವರ ಕಲಾವಿದ ಮೈಸೂರು ಎನ್.ರಾಜು. ಈ ಎರಡೂ ಕಲಾಕುಸುಮಗಳು ಈಗ ನಮ್ಮ ನಡುವೆ ಇಲ್ಲ ಎಂಬುದು ನೋವಿನ ಸಂಗತಿಯಾದರೂ ಇವರಿಬ್ಬರ ಪ್ರತಿಭೆಯನ್ನು ಮೆಲುಕು ಹಾಕಲು ಈ ಅಪೂರ್ವ ಚಿತ್ರ ಅನುವುಮಾಡಿಕೊಡುತ್ತದೆ.

ಚಿತ್ರಕೃಪೆ: ಶ್ರೀನಿವಾಸ ರಾಘವೇಂದ್ರ (ಶ್ರೀನಿಸುತ), ಮೈಸೂರು

ಸಹಾಯ ಮಾಡಿದವರನ್ನು ಮರೆಯಬಾರದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಇದು ಬಹಳ ಹಿಂದಿನ ಕಥೆ. ವ್ಯಾಪಾರಿಯೊಬ್ಬ ಕಾಲಕ್ಕೆ ತಕ್ಕಂತೆ ತನ್ನ ಹಳೆಯ ಮನೆಯನ್ನು ಒಂದಷ್ಟು ಅಂದಗಾಣಿಸಲೆಂದು ಅದರ ದುರಸ್ತಿ ಮಾಡಿಸುತ್ತಿದ್ದ. ಆ ಸಂದರ್ಭದಲ್ಲಿ ಒಂದು ಕಂಬವನ್ನು ಅಗೆಸಿ ತೆಗೆಯುತ್ತಿರುವಾಗ, ಅದರ ಕೆಳಗೆ ತಾಮ್ರದ ಬಿಂದಿಗೆಯೊಂದು ಅವನಿಗೆ ಕಾಣಿಸಿತು. 'ಇವತ್ತಿಗೆ ಕೆಲಸ ಸಾಕು' ಎಂದು ಹೇಳಿ ಕೆಲಸಗಾರರನ್ನೆಲ್ಲಾ ಮನೆಗೆ ಕಳುಹಿಸಿದ ವ್ಯಾಪಾರಿ, ಆ ಬಿಂದಿಗೆಯನ್ನು ನಿಧಾನವಾಗಿ ಮೇಲಕ್ಕೆತ್ತಿ ಒಳಗಿರುವುದನ್ನು ನೋಡಿದಾಗ, 'ವಜ್ರಕೀಟ' ಎನ್ನಲಾಗುವ ಹುಳುಗಳು ಅದರಲ್ಲಿ ತುಂಬಿದ್ದು ಕಾಣಿಸಿತು.

''ಅಯ್ಯೋ, ಇದೇನಾಯ್ತು? ಇಂಥ ಬಿಂದಿಗೆಯಲ್ಲಿ ನಿಧಿ ಸಿಗಬಹುದು ಎಂದುಕೊಂಡರೆ, ಇದರಲ್ಲಿ ಹುಳುಗಳಿವೆಯಲ್ಲಾ?'' ಎಂದು ಆ ವ್ಯಾಪಾರಿ ಮೊದಲಿಗೆ ನಿರಾಶನಾದರೂ, ನಂತರ ಅದೇನು ತೋಚಿತೋ ಏನೋ, ಅದರಿಂದ ಎರಡು ಕೀಟಗಳನ್ನು ಹೆಕ್ಕಿ ಒಂದು ಗಾಜಿನ ಭರಣಿಗೆ ಹಾಕಿ, ಎಲ್ಲರಿಗೂ ಕಾಣುವಂತೆ ತನ್ನ ಅಂಗಡಿಯಲ್ಲಿ ಇರಿಸಿದ ಹಾಗೂ ಮನೆಯ ದುರಸ್ತಿ ಕಾರ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಿಬಿಟ್ಟ.

ಅಂಗಡಿಗೆ ಬಂದ ಗಿರಾಕಿಗಳು, ''ಇದೇನು, ಬಾಟಲಿಯಲ್ಲಿ ಹುಳುವನ್ನು ಇಟ್ಟಿದ್ದೀರಲ್ಲಾ?'' ಎಂದು ಕೇಳಿದಾಗ ಆ ವ್ಯಾಪಾರಿಯು, ''ಹೊನ್ನಿನ ಬಣ್ಣದ ವಜ್ರಕೀಟವನ್ನು ಹೀಗೆ ವ್ಯಾಪಾರ ಮಾಡುವ ಜಾಗದಲ್ಲಿಟ್ಟರೆ ಒಳ್ಳೆಯ ಲಾಭವಾಗುತ್ತದೆ ಅಂತ ಯಾರೋ ಹೇಳಿದರು, ಅದಕ್ಕಾಗಿ ಇಟ್ಟಿರುವೆ'' ಎನ್ನುತ್ತಿದ್ದ. ಮಾತ್ರವಲ್ಲ, ಅವರಿವರನ್ನು ವಿಚಾರಿಸಿ ಆ 'ವಜ್ರಕೀಟ'ಗಳಿಗೆ ಏನು ಆಹಾರ ಕೊಡಬೇಕೆಂದು ಅರಿತು, ಅವುಗಳ ನಿಗಾ ನೋಡುತ್ತಿದ್ದ. ಹೀಗೆಯೇ ಕೆಲವು ದಿನಗಳು ಕಳೆದವು. ಒಂದು ದಿನ ಅಜ್ಜಿಯೊಬ್ಬಳು ಬಂದು ಅಗತ್ಯದ ಸಾಮಾನು ಖರೀದಿಸಿ ಹಣವನ್ನು ನೀಡುವಾಗ ಬಾಟಲಿಯನ್ನು ನೋಡಿ, ''ಇದೇನಪ್ಪಾ, ಇಂಥ ಅಪರೂಪದ ಬಂಗಾರದ ನಾಣ್ಯಗಳನ್ನು ಹೀಗೇಕೆ ಹೊರಗೆ ಇಟ್ಟಿರುವೆ?'' ಎಂದು ವ್ಯಾಪಾರಿಯನ್ನು ಕೇಳಿದಳು.

ಈ ಮಾತು ಕೇಳುತ್ತಿದ್ದಂತೆ ಅಜ್ಜಿಯನ್ನು ಒಳಗೆ ಕರೆದೊಯ್ದ ವ್ಯಾಪಾರಿ, ''ಅಜ್ಜಿ, ನನಗೊಂದು ಸಹಾಯ ಮಾಡು. ಅದರಿಂದ ಇಬ್ಬರಿಗೂ ಅನುಕೂಲವಾದರೆ, ನಾನು ಜೀವಮಾನಪರ್ಯಂತ ನಿನ್ನನ್ನು ನಿನ್ನ ಮಗನ ಹಾಗೆ ನೋಡಿಕೊಳ್ಳುವೆ'' ಎಂದು ಭರವಸೆ ನೀಡಿದ. ಅದಕ್ಕೆ ಅಜ್ಜಿ, ''ಆಯ್ತಪ್ಪ, ಅದೇನೆಂದು ಕೇಳು'' ಎಂದಳು. ವ್ಯಾಪಾರಿಯು ಆಕೆಯನ್ನು ತಾಮ್ರದ ಬಿಂದಿಗೆಯಿದ್ದ ಜಾಗಕ್ಕೆ ಕರೆತಂದು, ಅದನ್ನು ಇರಿಸಲಾಗಿದ್ದ ಜಾಗವನ್ನು ಸ್ವಲ್ಪ ಅಗೆದು, ಬಿಂದಿಗೆಯನ್ನು ಹೊರತೆಗೆದು, ''ಇದಕ್ಕೆ ಕಟ್ಟಿರುವ ಬಟ್ಟೆಯನ್ನು ಬಿಚ್ಚಿ ಒಳಗೇನಿದೆ ನೋಡು'' ಎಂದು ಹೇಳಿದ. ಅಜ್ಜಿ ಹಾಗೆಯೇ ಮಾಡಿದಾಗ, ಥಳಥಳ ಹೊಳೆಯುವ ಬಂಗಾರದ ನಾಣ್ಯಗಳು ಅವಳಿಗೆ ಗೋಚರಿಸಿದವು. ''ಅಬ್ಬಾ ಬಂಗಾರದ ನಾಣ್ಯಗಳು'' ಎನ್ನುತ್ತಾ ಅಜ್ಜಿ ಬೆರಗಾದಳು. ಆಗ ವ್ಯಾಪಾರಿಯು, ''ಹೌದೇ ಅಜ್ಜಿ, ಅವು ಬಂಗಾರದ ನಾಣ್ಯಗಳಾ? ಎಲ್ಲಿ ನನ್ನ ಕೈಗೆ ಕೆಲವು ನಾಣ್ಯಗಳನ್ನು ಹಾಕು'' ಎಂದು ಹೇಳಿ ಅಜ್ಜಿಯ ಕೈಯಿಂದ ತನ್ನ ಕೈಗೆ ಹಾಕಿಸಿಕೊಂಡಾಗ ಅವು ಬಂಗಾರದ ನಾಣ್ಯಗಳೇ ಆಗಿದ್ದವು. ಅದನ್ನು ಕಂಡು ಅವನಿಗೆ ಸಂತಸವಾಯಿತು. ಆಗ ನಿಬ್ಬೆರಗಾದ ಅಜ್ಜಿ, ''ಇದೇನಪ್ಪಾ, ನಿನಗಿದು ಗೊತ್ತಿತ್ತಲ್ಲವೇ? ಇದರಲ್ಲಿ ನನ್ನ ಸಹಾಯವೇನು ಬಂತು?'' ಎಂದು ಕೇಳಿದಳು.

ಆಗ ವ್ಯಾಪಾರಿ, ''ಅಜ್ಜಿ, ಭೂಮಿಯೊಳಗೆ ಸಿಗುವ ಸಂಪತ್ತನ್ನು ನಾನೇ ಮುಟ್ಟಿ ತೆಗೆದು ಅದನ್ನು ಬಳಸುವುದಕ್ಕಿಂತ, ಹಿರಿಯರಿಂದ ತೆಗೆಸಿ ಅವರ ಕೈಯಿಂದ ಲಕ್ಷ್ಮಿಯನ್ನು ಪಡೆಯಬೇಕು ಎಂದು ಸಂಕಲ್ಪ ಮಾಡಿದ್ದೆ. ಅದಕ್ಕಾಗಿ ನಿಮ್ಮಂಥ ಹಿರಿಯರಿಗೆ ಕಾದಿದ್ದು, ನಿಮ್ಮ ಕೈಯಿಂದ ನಾಣ್ಯವನ್ನು ಸ್ವೀಕರಿಸಿದೆ'' ಎಂದ. ನಂತರ ವ್ಯಾಪಾರಿಯು ಅಜ್ಜಿಗೆ ಕೈಮುಗಿಯುತ್ತಾ, ''ನಿನಗೆ ಯಾರೂ ದಿಕ್ಕಿಲ್ಲವೆಂಬುದು ಗೊತ್ತಾಯಿತು, ನೀನು ನಮ್ಮ ಜತೆಯೇ ಇದ್ದುಬಿಡು. ಬದುಕಿರುವವರೆಗೂ ನಿನ್ನನ್ನು ನನ್ನ ತಾಯಿಯಂತೆ ನೋಡಿಕೊಳ್ಳುತ್ತೇನೆ'' ಎಂದು ವಿನಂತಿಸಿದ. ಅದಕ್ಕೆ ಒಪ್ಪಿದ ಅಜ್ಜಿ ಕೊನೆಗಾಲದವರೆಗೂ ಆ ವ್ಯಾಪಾರಿಯ ಮನೆಯಲ್ಲಿ ಸುಖವಾಗಿದ್ದಳು. ಹೀಗೆ ತನಗೆ ಒಳಿತುಮಾಡಿದ ಆ ಅಜ್ಜಿಯನ್ನು ವ್ಯಾಪಾರಿ ಎಂದಿಗೂ ಕೈಬಿಡಲಿಲ್ಲ. ಜೀವನದ ಎಲ್ಲಾ ಸಮಯದಲ್ಲಿ ನಮ್ಮ ಜತೆಗಿದ್ದವರನ್ನು ನಾವು ಎಂದಿಗೂ ಮರೆಯಬಾರದು. ಕಷ್ಟದಲ್ಲಿ ನಮಗೆ ಹೆಗಲು ಕೊಟ್ಟವರನ್ನು ಸುಖದ ಸಮಯದಲ್ಲಿ ಜತೆಗಿರಿಸಿಕೊಂಡಾಗ ನಮ್ಮ ಬದುಕಿಗೂ ಒಂದು ಸಾರ್ಥಕತೆ ಲಭಿಸುತ್ತದೆ.

ಇಲ್ಲೊಂಚೂರು ಕೇಳ್ರೀ...

● ಗಾಜಿನ ಲೋಟ ಮತ್ತು ಪಾತ್ರೆಗಳು ನಿರ್ಮಲವಾಗಿ ಹಾಗೂ ಶುಚಿಯಾಗಿದ್ದು ಹೊಳೆಯಬೇಕು ಎಂದಿದ್ದರೆ, ಸಾಬೂನು ಅಥವಾ ಅಂಟುವಾಳದ ಕಾಯಿಯನ್ನು (ಇದಕ್ಕೆ ನೊರೆಕಾಯಿ ಎಂದೂ ಹೇಳುತ್ತಾರೆ) ಸೇರಿಸಿ ತೊಳೆದು, ಕೊನೆಯ ನೀರಿಗೆ ಸ್ವಲ್ಪ ನೀಲಿ ಬಣ್ಣದ ಹುಡಿ ಅಥವಾ ಕೆಲವು ತೊಟ್ಟು ಅಮೋನಿಯಾ ಹಾಕಿ ಕದಡಿ, ಅದರಿಂದ ಲೋಟ ಇತ್ಯಾದಿಗಳನ್ನು ತೊಳೆದು ಒರೆಸಿ, ತೆಳುವಾದ ಕಾಗದದಿಂದ (ಟಿಶ್ಯೂ ಪೇಪರ್) ಒರೆಸಬೇಕು.

ಪದಬಂಧ

1	■	2			■	3	■	4
5			■	■	6			
	■	7	8			■	■	
9	10	■		■	11		12	■
■		■	■	■	■	■		■
■	13		14	■	15	■	16	17
18	■	■	19			20	■	
21		22		■	■	23		
	■		■	24			■	

ಎಡದಿಂದ ಬಲಕ್ಕೆ
2. ಕಮ್ಮಾರನ ಒಲೆ (3)
5. ಹಸುವಿನ ಪುಟ್ಟ ಕಂದನ ನಡುವೆ ಇದೆ ತೆನೆ (3)
6. ನಿರಂತರ ಎಂದರ್ಥ (4)
7. ಮಾನದೊಂದಿಗೆ ಬಂದಿರುವ ಪಾರಿತೋಷಕ (4)
9. ಹೂವಿಗೆ ಹೀಗೆನ್ನುತ್ತಾರೆ (2)
11. ಹಣೆಗಿಟ್ಟುಕೊಳ್ಳುವ ಬೊಟ್ಟು (3)
13. ಹೆದರಿಕೆಯಿಂದ/ಚಳಿಯಿಂದ ಉಂಟಾದ ಕಂಪನ (3)
16. ತಪ್ಪಲ್ಲ, ತಿರುಗಿ ಬಂದಿದೆ ಅಷ್ಟೇ (2)
19. ಜೇನು ಸಂಗ್ರಹಿಸುವ ಭ್ರಮರ (4)
21. ಕೆಲಸಕ್ಕೆ ಒಡ್ಡಿದ ಆಕ್ಷೇಪಣೆ (4)
23. ಕೂಡಲೇ ಆಗಬೇಕಾದುದು (3)
24. ಮಾನಿನಿಗೆ ಉಂಟಾದ ಸಂಶಯ (3)

ಮೇಲಿನಿಂದ ಕೆಳಕ್ಕೆ
1. ಸಾರ್ವಜನಿಕವಾಗಿ ವ್ಯಕ್ತಪಡಿಸು (4)
2. ಕುರಿ ಸಾಕುವವನು (3)
3. ನೀರಿನ ಹಬೆ (2)
4. ಕೆಳಕ್ಕೆ ಬೀಳುವಿಕೆ (3)
6. ಅತಿಯಲ್ಲ, ಸ್ವಲ್ಪ (3)
8. ಗೆದ್ದಲು ಕಟ್ಟಿದ ಮಣ್ಣಿನ ಮನೆ (2)
10. ಮನದ ನಡುವೆಯೇ ಇರುವ ಮನ್ಮಥ (3)
12. ಕತ್ತೆಗೇನು ಗೊತ್ತು ಈ ಸುಗಂಧದ್ರವ್ಯ (3)
14. ಬಾಡಿಹೋಗು ಎನ್ನುವ ಅರ್ಥ (3)
15. ನಾಯಕ ತೋರಿಸಿದ ಸ್ವರ್ಗ (2)
17. ಸಿಹಿಯಾದ ಸ್ವಾದ (4)
18. ಯಮನಿಗೆ ಮತ್ತೊಂದು ಹೆಸರು (3)
20. ನಿಜವಾಗಿಯೂ ಇದು ಇರುಳು (3)
22. ಹಗಲು ಕಳೆದ ನಂತರ ಆಗುವುದು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 2. ಕುಲುಮೆ 5. ಕದರು 6. ಅವಿರತ 7. ಬಹುಮಾನ 9. ಸುಮ 11. ತಿಲಕ 13. ನಡುಕ 16. ರಸ 19. ಮಧುಕರ 21. ತಕರಾರು 23. ಜರೂರು 24. ಗುಮಾನಿ

ಮೇಲಿನಿಂದ ಕೆಳಕ್ಕೆ: 1. ಪ್ರಕಟಿಸು 2. ಕುರುಬ 3. ಆವಿ 4. ಪತನ 6. ಅನತಿ 8. ಹುತ್ತ 10. ಮದನ 12. ಕಸ್ತೂರಿ 14. ಕಮರು 15. ನಾಕ 17. ಸವಿರುಚಿ 18. ಅಂತಕ 20. ರಜನಿ 22. ರಾತ್ರಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

ವ್ಯಂಗ್ಯಚಿತ್ರ ಕೃಪೆ: ಮಂಜುಲ್



ವಿವಿಧ ವಿನೋದಾವಳಿ...

ಆಸೆಯೇ ದುಃಖಕ್ಕೆ ಮೂಲ..!!

ಯಗಟಿ ರಘು ನಾಡಿಗ್

ವಿದೇಶದಲ್ಲಿ 'ಜೇಬುಕಟಾವು' ಹೇಗೆ ಮಾಡುತ್ತಾರೆಂದು ತಿಳಿದುಕೊಳ್ಳುವ ಬಯಕೆಯಾಯ್ತು ನಮ್ಮ ಕಥಾನಾಯಕ ಆಲೂಪ್ರಸಾದ್ ಜಾಧವ್‌ಗೆ. ಸರಿ, ಹೇಗೋ ಮಾಡಿ ಲಂಡನ್‌ಗೆ ಹೋಗುವ ವ್ಯವಸ್ಥೆಯನ್ನು ಮಾಡಿಕೊಂಡ. 'ಹೇಗೂ ಅಲ್ಲೇ ಯಾರದ್ದಾದರೂ ಜೇಬನ್ನು ಕತ್ತರಿಸಿದರಾಯ್ತು' ಎಂಬ ಆತ್ಮವಿಶ್ವಾಸಭರಿತ ಗ್ರಹಿಕೆಯಲ್ಲಿ ಹೆಚ್ಚಿನ ಹಣವನ್ನೂ ಆತ ತೆಗೆದುಕೊಂಡು ಹೋಗಲಿಲ್ಲ. ಆದರೆ ಅಲ್ಲಿಗೆ ಹೋದಮೇಲೆ ಗೊತ್ತಾಯ್ತು ಅಲ್ಲಿನ 'ಭಕ್ತಾದಿಗಳು' ನಮ್ಮವರಿಗಿಂಯ ಭಾರಿ ಹುಷಾರು, ಅಷ್ಟು ಸುಲಭವಾಗಿ ಜೇಬುಕಟಾವಿಗೆ ಒಳಗಾಗುವವರಲ್ಲ ಅಂತ.

ಹೀಗೆ ಜ್ಞಾನೋದಯವಾಗುವ ಹೊತ್ತಿಗೆ ಖರ್ಚಿಗೆಂದು ಇದ್ದ ವಿದೇಶಿ ವಿನಿಮಯದ ಹಣವೂ ಖರ್ಚಾಗುತ್ತಾ ಬಂದು, ಊಟ-ತಿಂಡಿಗೂ ತತ್ವಾರವಾಗುವ ಸ್ಥಿತಿ ಒದಗಿಬರುವ ಎಲ್ಲಾ ಲಕ್ಷಣಗಳೂ ಆಲೂಪ್ರಸಾದ್‌ಗೆ ಕಾಣಿಸಿಕೊಳ್ಳಲಾರಂಭಿಸಿದವು. ವಾಪಸ್ಸಾಗುವ ತನಕ ಜೀವವನ್ನು ಹಿಡಿದುಕೊಂಡಿದ್ದರೆ ಸಾಕು ಎಂಬ ತೀರ್ಮಾನಕ್ಕೆ ಬಂದ ನಮ್ಮ ಈ ಕಥಾನಾಯಕ, ಆದಷ್ಟು ಕಡಿಮೆ ರೇಟಿನ ಹೋಟೆಲುಗಳನ್ನು ಹುಡುಕಿಕೊಂಡು ಹೊರಟ. ಆಶ್ಚರ್ಯವೆಂಬಂತೆ ಅಂಥದ್ದೊಂದು ಹೋಟೆಲು ಅವನಿಗೆ ಕಾಣಿಸಿತು.

ಹೋಟೆಲು ಪ್ರವೇಶಿಸುತ್ತಿದ್ದಂತೆಯೇ ಅವನಿಗೆ 'ಯುರೋಪಿಯನ್', 'ಚೈನೀಸ್' ಹಾಗೂ 'ಇಂಡಿಯನ್' ಎಂಬ 3 ವಿಭಾಗಗಳ ಫಲಕಗಳು ಕಾಣಿಸಿದವು. ಆಲೂಪ್ರಸಾದ್ 'ಇಂಡಿಯನ್' ವಿಭಾಗವನ್ನು ಪ್ರವೇಶಿಸಿದ. ಅಲ್ಲೂ ಅವನಿಗೆ 'ಸಸ್ಯಾಹಾರಿ' ಮತ್ತು 'ಮಾಂಸಾಹಾರಿ' ಎಂಬ ಮತ್ತೆರಡು ಫಲಕಗಳು ಕಾಣಿಸಿದವು. ಆಲೂಪ್ರಸಾದ್ 'ಸಸ್ಯಾಹಾರಿ' ವಿಭಾಗವನ್ನು ಎಡಗಾಲು ಮುಂದಿಟ್ಟು ಪ್ರವೇಶಿಸಿದ. ಮುಂದುವರಿದಂತೆ ಅಲ್ಲಿ ಅವನಿಗೆ 'ನಾರ್ತ್ ಇಂಡಿಯನ್' ಮತ್ತು 'ಸೌತ್ ಇಂಡಿಯನ್' ಎಂಬ ಮತ್ತೆರಡು ಫಲಕಗಳು ಕಾಣಿಸಿದವು. ಆತ 'ಸೌತ್ ಇಂಡಿಯನ್' ವಿಭಾಗವನ್ನು ಪ್ರವೇಶಿಸಿದ. ಅಲ್ಲಿ ಮತ್ತೆ 'ಆಂಧ್ರ ಸ್ಟೈಲ್', 'ತಮಿಳುನಾಡು ಸ್ಟೈಲ್' ಮತ್ತು 'ಉಡುಪಿ ಹೋಟೆಲ್' ಎಂಬ ಮೂರು ವಿಭಿನ್ನ ಫಲಕಗಳು ಕಾಣಿಸಿಕೊಂಡವು.

ಖುಷಿಗೊಂಡ ನಮ್ಮ ಹೀರೋ 'ಉಡುಪಿ ಹೋಟೆಲ್' ವಿಭಾಗಕ್ಕೆ ಹೋದರೆ, ಅಲ್ಲಿ 'ಅಪ್ಪಟ ತುಪ್ಪದ ವಿಭಾಗ' ಮತ್ತು



'ಸೂರ್ಯಕಾಂತಿ ಎಣ್ಣೆ ವಿಭಾಗ' ಎಂಬ ಮತ್ತೆರಡು ಫಲಕಗಳು ಕಾಣಿಸಿಕೊಂಡವು. 'ಸರಿ, ಎಲ್ಲಾ ನನ್ನ ಲೆವೆಲ್‌ಗೇ ಬರೋ ಹಂಗೈತೆ' ಅಂದುಕೊಂಡೇ ಆಲೂಪ್ರಸಾದ್ 'ಸೂರ್ಯ ಕಾಂತಿ ಎಣ್ಣೆ' ವಿಭಾಗವನ್ನು ಪ್ರವೇಶಿಸಿದರೆ, ಅಲ್ಲಿ 'ಕ್ಯಾಷ್' ಮತ್ತು 'ಕ್ರೆಡಿಟ್' ಎಂಬ ಮತ್ತೆರಡು ಫಲಕಗಳು ಕಾಣಿಸಬೇಕೇ?!!

''ವಾವ್, 'ಕ್ರೆಡಿಟ್ ವಿಭಾಗ'ಕ್ಕೆ ಹೋದರೆ ನಯಾಪೈಸೆಯನ್ನೂ ಕೊಡೋಹಾಗಿಲ್ಲ..... ಯಾರಪ್ಪಾ ಈ ಬೋರ್ಡು ಹಾಕಿಸಿರುವ ಪುಣ್ಯಾತ್ಮಾ..?'' ಎಂದು ತನಗೆ ತಾನೇ ಹೇಳಿಕೊಂಡು ಶಿಳ್ಳೆ ಹಾಕುತ್ತಲೇ 'ಕ್ರೆಡಿಟ್ ವಿಭಾಗ'ಕ್ಕೆ ಹೋದ. ಅಲ್ಲಿಗೆ ಹೋಗುತ್ತಲೇ, ದಪ್ಪ ದಪ್ಪನಾಗಿ ಕೆಂಪು ಕೆಂಪು ಅಕ್ಷರಗಳಲ್ಲಿ ಹೀಗೆ ಬರೆದಿದ್ದು ಕಾಣಿಸಿತು:

ಆಹಾಹಾಹ! ಬಂದ್ಬಿಟ್ಟ ದೊರೆ ಮೊಮ್ಮಗ ಪುಗಸಟ್ಟೆ ತಿನ್ನೋಕೆ... ಮುಚ್ಕೊಂಡು ಮರ್ಯಾದೆಯಾಗಿ ಆಚೆಗೆ ಹೋಗೋಲೇ... ನಿನ್ನಜ್ಜೀ...!!

'ಹಲ್‌ಬಿಡಿ' ಶಾಸನ...

ಇವರು ಜಾಣರೋ, ದಡ್ಡರೋ?!

ಬಸ್ ಪಾಸ್ ಮಾಡಿಸಲು ದುಡ್ಡಿರಲಿಲ್ಲವಾದ್ದರಿಂದ ರಾಯರು ಮನೆಯಾಕೆಯಿಂದ 100 ರುಪಾಯಿ ಪಡೆದು ಹೊರಟರು. ದಾರಿಯಲ್ಲಿ ಸಾಗುವಾಗ, ಗಂಟೆಗೊಮ್ಮೆ ಡ್ರಾ ಆಗಿ ಬಹುಮಾನವನ್ನು ತಂದುಕೊಡುವ ಲಾಟರಿ ಟಿಕೆಟ್ ಒಂದನ್ನು 5 ರುಪಾಯಿ ಕೊಟ್ಟು ಖರೀದಿಸಿದರು. ಡ್ರಾ ಆದ ನಂತರ ಫಲಿತಾಂಶವನ್ನು ನೋಡಲಾಗಿ, ರಾಯರಿಗೆ 50 ಸಾವಿರ ರುಪಾಯಿ ಬಹುಮಾನ ಬಂದಿತ್ತು.

ಕುದುರೆ ರೇಸ್ ಆಡಿದರೆ ದುಡ್ಡು ದುಪ್ಪಟ್ಟಾಗುವುದೆಂದು ಯಾರೋ 'ಅಶ್ವಘೋಷ'ರು ಕಿವಿಯೂದಿದ್ದರಿಂದ ರಾಯರು ಕುದುರೆ ಬಾಲಕ್ಕೆ 45 ಸಾವಿರ ರುಪಾಯಿಗಳನ್ನು ಕಟ್ಟಿದರು. ಕುದುರೆಯು ಕಾಲು ಮುರಿದುಕೊಂಡಿತು, ಬಾಲವನ್ನೂ ಮುದುರಿಕೊಂಡಿತು. ಹೀಗಾಗಿ ರಾಯರ 45 ಸಾವಿರ ರುಪಾಯಿ ಹಣಕ್ಕೆ 'ಎಳ್ಳು-ನೀರು'!

4 ಕಾಲಿನ ಕುದುರೆಯ 'ರೇಸು' ತುಂಬಾ ದುಬಾರಿ; ಅದಕ್ಕಿಂತ 3 ಪಟ್ಟು ಜಾಸ್ತಿಯಿರುವ 13 ಕಾಲಿನ ಇಸ್ಪೀಟೇ 'ಲೇಸು' ಎಂಬ ದೃಢನಿರ್ಧಾರವನ್ನು ರಾಯರು ತಳೆದು, ತಮ್ಮ ಕಲ್ಪನೆಯ 'ಭಾಗ್ಯದೇವತೆ'ಗೆ 'ಎಲೆ' ಹಾಸಿ, ಆಕೆಯ ವಿಳಾಸಕ್ಕೆ 13 ಎಲೆಯ ಪತ್ರ ಬರೆಯಲು ಪ್ರಾರಂಭಿಸಿದರು. ಆದರೆ ಪತ್ರದಲ್ಲಿ ತಮ್ಮ 'ಫ್ರಮ್ ಅಡ್ರೆಸ್' ಹಾಕಿಲ್ಲ ಎಂಬ ಜ್ಞಾನೋದಯವಾಗುವ ಹೊತ್ತಿಗೆ, ಅವರ ಜೇಬಲ್ಲಿ ಉಳಿದಿದ್ದು 500 ರುಪಾಯಿಗಳು. ಹೀಗಾಗಿ, ತಮ್ಮ ಪಂಚೆಯನ್ನೂ ತಲೆಯನ್ನೂ ಕೊಡವಿಕೊಂಡು ಮೇಲೆದ್ದ ರಾಯರು 400 ರುಪಾಯಿಗಳ ತಿಂಗಳ ಬಸ್‌ಪಾಸ್ ಮಾಡಿಸಿ, ಉಳಿದ 100 ರುಪಾಯಿಗಳನ್ನು ಮುಂಜಾನೆ ಮನೆಯಾಕೆಯಿಂದ ಪಡೆದ ಬಾಬತ್ತಿಗಾಗಿ ಅವಳಿಗೆ ಹಿಂದಿರುಗಿಸಿದರು.

ಬೆಳಗ್ಗೆ ತೆಗೆದುಕೊಂಡ ಹಣವನ್ನು ಹಿಂದಿರುಗಿಸಿದ್ದಲ್ಲದೇ 400 ರುಪಾಯಿಗಳ ಬಸ್‌ಪಾಸನ್ನೂ ಮಾಡಿಸಿಕೊಂಡು ಬಂದ ರಾಯರ ಜಾಣತನವನ್ನು ಕಂಡು ಮನೆಯಾಕೆ ಹಿರಿಹಿರಿ ಹಿಗ್ಗಿದಳು... ಗಸಗಸೆ ಪಾಯಸ ಮಾಡಿಕೊಂಡು ಕುಡಿದಳು. ನಿಜಸಂಗತಿ ಅರಿತಿದ್ದ ರಾಯರು ರಾತ್ರಿ ಮಲಗುವಾಗ 'ತೀರ್ಥ' ಸೇವಿಸಿ 'ತೀರ್ಥರೂಪ'ರಾದರು. 'ಪೆಕರು ಮುಂಡೇದೇ' ಎಂದು ಗೊಣಗಿಕೊಂಡೇ ಭಾಗ್ಯದೇವತೆ ನಿಟ್ಟುಸಿರುಬಿಟ್ಟಳು..! ಎಂಬಲ್ಲಿಗೆ 'ಜೂಜುಪುರಾಣ'ದ 'ರಾಯರಕಾಂಡ'ವು ಸಮಾಪ್ತಿಯಾಯಿತು..!!

ಎಳಿ, ಎದ್ದೇಳಿ, ಜಾಗೃತರಾಗಿ...

ಕಲಬೆರಕೆಯನ್ನು ಕಿತ್ತೊಗೆಯೋಣ

ಮೆಣಸಿನ ಪುಡಿ ಅಥವಾ ಅಚ್ಚಖಾರದ ಪುಡಿಯನ್ನು ಬಗೆಬಗೆಯ ಅಡುಗೆಗಳಲ್ಲಿ ಹಿತಮಿತವಾಗಿ ಬಳಸಿ ಖಾದ್ಯದ ರುಚಿಯನ್ನು ಹೆಚ್ಚಿಸಲು ಹೆಂಗೆಳೆಯರು ಬಯಸುತ್ತಾರಲ್ಲವೇ? ಆದರೆ ಮರದ ಹೊಟ್ಟಿಗೆ ಕೆಂಪು ಬಣ್ಣ ಹಾಕಿ, ಮೆಣಸಿನ ಪುಡಿಯೊಳಗೆ ಅದನ್ನು ಕಲಬೆರಕೆ ಮಾಡಿ ಮಾರುವ ಬೃಹಸ್ಪತಿಗಳೂ ನಮ್ಮ ನಡುವೆ ಇದ್ದಾರೆ. ಬೆರಕೆಯಾಗಿದೆಯೇ ಇಲ್ಲವೇ ಎಂಬುದನ್ನು ಕಂಡುಹಿಡಿಯಲು, ಒಂದು ಕಪ್ ನೀರಿಗೆ ಸ್ವಲ್ಪ ಮೆಣಸಿನ ಪುಡಿಯನ್ನು ಹಾಕಿ ನೋಡಿ, ಮರದ ಹೊಟ್ಟು ಬೆರಕೆಯಾಗಿದ್ದರೆ ಅದು ತೇಲಿಕೊಂಡು ನೀರಿಗೆ ಬಣ್ಣ ಬರುತ್ತದೆ. ಕಲಬೆರಕೆಯಾಗಿರುವುದಕ್ಕೆ ಅದೇ ಸಾಕ್ಷಿ. ಈ ಜಂಜಾಟವನ್ನು

ತಪ್ಪಿಸಲು, ಮೆಣಸಿನಕಾಯಿಯನ್ನು ಬಿಸಿಲಲ್ಲಿ ಒಣಗಿಸಿ ಮನೆಯಲ್ಲೇ ಪುಡಿ ಮಾಡಿಟ್ಟುಕೊಳ್ಳಿ ಅಥವಾ ಬೆಲೆ ಕೊಂಚ ಜಾಸ್ತಿಯಾದರೂ ಪರವಾಗಿಲ್ಲ ವಿಶ್ವಾಸಾರ್ಹ ಬ್ರ್ಯಾಂಡ್‌ನ ಮೆಣಸಿನ ಪುಡಿಯನ್ನೇ ಖರೀದಿಸಿ.

ದಕ್ಷಿಣ ಭಾರತೀಯರು ಅಡುಗೆಗೆ ಕಡಲೇಕಾಯಿ ಎಣ್ಣೆ, ಸೂರ್ಯಕಾಂತಿ ಎಣ್ಣೆಗಳನ್ನು ಬಳಸುವುದು ವಾಡಿಕೆ. ಅಡುಗೆಗೆ ಸಾಸಿವೆ ಎಣ್ಣೆಯನ್ನು ಬಳಸುವ ಪರಿಪಾಠವೂ ದೇಶದ ಕೆಲವೆಡೆ ಚಾಲ್ತಿಯಲ್ಲಿದೆ. ಆದರೆ ಒಂದಷ್ಟು ಸ್ವಾರ್ಥಿಗಳು ಮತ್ತು ಲಾಭಬಡುಕರು ಸಾಸಿವೆ ಎಣ್ಣೆಗೆ ದತ್ತೂರಿ ಬೀಜದ ಎಣ್ಣೆಯನ್ನು ಬೆರಕೆ ಮಾಡಿ ಮಾರಾಟ ಮಾಡಿ ಟೋಪಿ ಹಾಕುವುದುಂಟು. ಸಾಸಿವೆ ಎಣ್ಣೆಯ ಮುಖವಾಡ ಹೊತ್ತ ಇಂಥ ಕಲಬೆರಕೆ ಎಣ್ಣೆಯನ್ನು ಸೇವಿಸುವುದರಿಂದ ಹೃದಯ ರೋಗ, ದೃಷ್ಟಿಮಾಂದ್ಯತೆ ಮತ್ತು ಬೇರೆ ಬೇರೆಯಂಥ ರೋಗಗಳು ಅಮರಿಕೊಳ್ಳಬಹುದು. ಹೀಗಾಗಿ ಎಚ್ಚರಿಕೆ ವಹಿಸಬೇಕಲ್ಲವೇ, ಅದಕ್ಕೆ ಹೀಗೆ ಮಾಡಿ- ಸ್ವಲ್ಪ ಎಣ್ಣೆಯನ್ನು ಕೊಂಚವೇ ನೈಟ್ರಿಕ್ ಆಮ್ಲದಲ್ಲಿ ಜಾಗ್ರತೆಯಿಂದ ಕಲಕಿ. ಆಮ್ಲದ ಮೇಲಿನ ಪದರದಲ್ಲಿ ಕಡು ಕಂದು ಅಥವಾ ಕೆಂಪು ಬಣ್ಣ ಕಂಡುಬಂದರೆ, ಸಾಸಿವೆ ಎಣ್ಣೆಯಲ್ಲಿ ದತ್ತೂರಿ ಬೀಜದ ಎಣ್ಣೆ ಬೆರೆತಿದೆ ಎಂಬುದು ಖಾತ್ರಿ!

ವಿಶ್ವಯೋಗ

ಬೇಕೇ ಚಿರಯೌವನ? ಹಾಕಿ ಸರ್ವಾಂಗಾಸನ..!

ಡಾ. ಪತಂಜಲಿ ಆಚಾರ್ಯ

ಈ ಆಸನವು ದೇಹದ ಎಲ್ಲಾ ಅಂಗಗಳಲ್ಲೂ ಚುರುಕುತನ- ಚಲನಶೀಲತೆಯನ್ನು ಉಂಟು ಮಾಡುತ್ತದೆ. ದೇಹದಲ್ಲಿ ಆರೋಗ್ಯ ಮತ್ತು ಸಮತೋಲನವನ್ನು ಕಾಪಿಡುತ್ತದೆ. ಈ ಕಾರಣದಿಂದಲೇ ಇದಕ್ಕೆ 'ಸರ್ವಾಂಗಾಸನ' ಎಂದು ಹೆಸರು.

● **ಅಭ್ಯಾಸಕ್ರಮ:** ನೆಲದ ಮೇಲೆ ಹಾಸಿಕೊಂಡಿರುವ ದಪ್ಪನೆಯ ವಸ್ತ್ರ ಅಥವಾ ಜಮಖಾನದ ಮೇಲೆ ಅಂಗಾತವಾಗಿ, ಸರಳರೇಖೆಯಲ್ಲಿ ಮಲಗಿಕೊಳ್ಳಬೇಕು. ಕೆಲ ಕ್ಷಣದ ನಂತರ ಇಡಿಯ ದೇಹವನ್ನು ಕುತ್ತಿಗೆಯವರೆಗೆ ಮೇಲಕ್ಕೆತ್ತಬೇಕು. ಈ ಘಟ್ಟದಲ್ಲಿ ಎರಡೂ ಕೈಗಳಿಂದ ಬೆನ್ನಿಗೆ ಆಧಾರವನ್ನು ಕೊಟ್ಟಿರಬೇಕು. ಕಾಲುಗಳನ್ನು ತೂಗಾಡಿಸದೆ ನೇರವಾಗಿ ಜೋಡಿಸಿ ಇಟ್ಟುಕೊಂಡಿರಬೇಕು. ಶುರುವಿನಲ್ಲಿ ಈ ಭಂಗಿಯಲ್ಲಿ ಸುಮಾರು 30 ಸೆಕೆಂಡುಗಳವರೆಗೆ ಇದ್ದು, ಆಸನವು ಅಭ್ಯಾಸವಾಗುತ್ತಾ ಹೋದಂತೆ 3 ನಿಮಿಷ, 5, 10, 15 ನಿಮಿಷಗಳವರೆಗೆ ಅವಧಿಯನ್ನು ವಿಸ್ತರಿಸಬಹುದು.

● **ಪ್ರಯೋಜನಗಳು:** ಈ ಆಸನದ ಆಚರಣೆಯಿಂದ ಕುತ್ತಿಗೆ, ಎದೆ, ಸೊಂಟ, ಹೊಟ್ಟೆ ಇವುಗಳಿಗೆ ಅಗತ್ಯ ವ್ಯಾಯಾಮವು ದೊರೆಯುವುದರ



ಜತೆಗೆ ಚಿರಯೌವನ ಪ್ರಾಪ್ತಿಯಾಗುವುದು (ಖ್ಯಾತ ರಾಜಕಾರಣಿ ದಿವಂಗತ ಎಸ್.ಬಂಗಾರಪ್ಪನವರು ತಮ್ಮ ಬಿಡುವಿರದ ಕಾರ್ಯಸೂಚಿಗಳ ನಡುವೆಯೂ ಈ ಆಸನವನ್ನು ಆಚರಿಸುತ್ತಿದ್ದುದುಂಟು). ಮಾತ್ರವಲ್ಲದೆ, ಬೆನ್ನೆಲುಬು ದೃಢಗೊಳ್ಳುವುದು, ವೀರ್ಯವೃದ್ಧಿಯಾಗುವುದು ಮತ್ತು ವೀರ್ಯದೋಷಗಳು ನಿವಾರಣೆಯಾಗುವುವು. ಸಿಹಿಮೂತ್ರ ರೋಗವು ತಹಬಂದಿಗೆ ಬರುವುದು. ಮೊಳೆರೋಗ, ಉಬ್ಬಸ, ಶ್ವಾಸನಾಳದ ಊತ, ಅರೆತಲೆನೋವು, ಅಶಕ್ತತೆ, ನರದೌರ್ಬಲ್ಯದಂಥ ಸಮಸ್ಯೆಗಳು ಪರಿಹಾರವಾಗುವುವು. ಮಹಿಳೆಯರ ಮಾಸಿಕ ಋತುಧರ್ಮದ ಮತ್ತು ಗರ್ಭಾಶಯದ ದೋಷಗಳು ನಿವಾರಣೆಯಾಗುವುವು. ನಿರ್ನಾಳ ಗ್ರಂಥಿಗಳ, ಅದರಲ್ಲೂ ಮುಖ್ಯವಾಗಿ ಥೈರಾಯ್ಡ್ ಗ್ರಂಥಿಯ ಶಕ್ತಿಯು ಹೆಚ್ಚುವುದು.

ಸಮಾಚಾರ ಸಣ್ಣದಲ್ಲ

ಹರ್ಮನ್ ಪಡೆಗೆ ಇಂಗ್ಲೆಂಡ್ ಸವಾಲು

ಭುವನೇಶ್ವರ: ಹ್ಯಾಟ್ರಿಕ್ ಗೆಲುವಿನೊಂದಿಗೆ ಆತ್ಮವಿಶ್ವಾಸ ವೃದ್ಧಿಸಿಕೊಂಡಿರುವ ಭಾರತ ಪುರುಷರ ಹಾಕಿ ತಂಡವು ಪ್ರೊ ಲೀಗ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಭಾರತ ಆರು ಪಂದ್ಯಗಳಿಂದ (4 ಗೆಲುವು, 2 ಸೋಲು) 12 ಅಂಕ ಗಳಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇಂಗ್ಲೆಂಡ್ ಅಷ್ಟೇ ಪಂದ್ಯಗಳಿಂದ (3 ಗೆಲುವು, 2 ಡ್ರಾ, 1 ಸೋಲು) 13 ಅಂಕ ಸಂಪಾದಿಸಿದ್ದು, ಮೂರನೇ ಸ್ಥಾನದಲ್ಲಿದೆ. ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ಭಾರತವು ಸ್ಪೇನ್ ಮತ್ತು ಜರ್ಮನಿ ತಂಡಗಳ ವಿರುದ್ಧ ಮಿಶ್ರ ಫಲಿತಾಂಶ ಪಡೆದಿದೆ. ಮೊದಲ ಲೆಗ್‌ನಲ್ಲಿ ಸೋತು, ರಿವರ್ಸ್ ಲೆಗ್‌ನಲ್ಲಿ ಪಾರಮ್ಯ ಸಾಧಿಸಿದೆ. ಐರ್ಲೆಂಡ್ ವಿರುದ್ಧದ ಎರಡೂ ಪಂದ್ಯಗಳನ್ನು ಭಾರತ ಜಯಿಸಿದೆ. ಭಾರತಕ್ಕ ಇಂಗ್ಲೆಂಡ್ ವಿರುದ್ಧದ ಪಂದ್ಯ ಮಾತ್ರ ಬಾಕಿ ಉಳಿದಿದೆ. ಆ ಪಂದ್ಯಗಳಲ್ಲಿ ಉತ್ತಮ ಆಟ ಪ್ರದರ್ಶಿಸುವತ್ತ ಹರ್ಮನ್ ಪಡೆ ಚಿತ್ತ ಹರಿಸಿದೆ.

ಕಿವೀಸ್-ಬಾಂಗ್ಲಾ ಇಂದು ಹಣಾಹಣಿ

ರಾವಲ್ಪಿಂಡಿ: ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಎ-ಗ್ರೂಪ್‌ನ ಪಂದ್ಯದಲ್ಲಿ ಸೋಮವಾರ ಬಲಿಷ್ಠ ನ್ಯೂಜಿಲೆಂಡ್ ತಂಡವು ಬಾಂಗ್ಲಾದೇಶವನ್ನು ಎದುರಿಸಲಿದೆ. ಈಗಾಗಲೇ ಫೆ.14ರಂದು ನಡೆದ ಪಂದ್ಯದಲ್ಲಿ ಕಿವೀಸ್ ಬಳಗವು ಅತಿಥೇಯ ಪಾಕಿಸ್ತಾನ ವನ್ನು 5 ವಿಕೆಟ್‌ಗಳಿಂದ ಬಗ್ಗು ಬಡಿದು ಪ್ರಥಮ ಪಂದ್ಯ ದಲ್ಲೇ ಶುಭಾರಂಭ ಮಾಡಿತ್ತು. ಫೆಬ್ರವರಿ-20ರಂದು ನಡೆದ ಪಂದ್ಯದಲ್ಲಿ ಬಾಂಗ್ಲಾ ತಂಡವನ್ನು ಭಾರತವು 6 ವಿಕೆಟ್‌ಗಳಿಂದ ಬಗ್ಗು ಬಡಿದಿತ್ತು. ಹಾಗಾಗಿ ಟೂರ್ನಿಯ ಮೊದಲ ಪಂದ್ಯದಲ್ಲೇ ಸೋತಿರುವ ಬಾಂಗ್ಲಾ ತಂಡವು ನ್ಯೂಜಿಲೆಂಡ್ ವಿರುದ್ಧ ಗೆಲ್ಲಲು ಸಾಕಷ್ಟು ಅಭ್ಯಾಸವನ್ನು ನಡೆಸಿದೆ.

ಬೂಮ್ರಾಗೆ ಐಸಿಸಿ ಪ್ರಶಸ್ತಿ ಪ್ರದಾನ



ದುಬೈ: ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಭಾನುವಾರ ಐಸಿಸಿ ವರ್ಷದ ಕ್ರಿಕೆಟಿಗ ಹಾಗೂ ಶ್ರೇಷ್ಠ ಟೆಸ್ಟ್ ಕ್ರಿಕೆಟಿಗ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಭಾರತ ಮತ್ತು ಪಾಕ್ ನಡುವಣ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಗೌರವಿಸಲಾಯಿತು. ಜಸ್‌ಪ್ರೀತ್ ಬುಮ್ರಾ ಅವರು 2024ರ ಐಸಿಸಿ ಪ್ರಶಸ್ತಿಗಳು ಮತ್ತು ವರ್ಷದ ತಂಡದ ಕ್ಯಾಪ್‌ಗಳನ್ನು ಸ್ವೀಕರಿಸಿದ್ದಾರೆ ಎಂದು ಐಸಿಸಿ ಎಕ್ಸ್ ಖಾತೆಯಲ್ಲಿ ಸಂದೇಶ ಹಾಕಿದೆ.

ಕೊಹ್ಲಿ ಅಮೋಘ ಶತಕ | ಅಯ್ಯರ್ ಅರ್ಧ ಶತಕ

ಪಾಕ್ ಧೂಳೀಪಟ

ದುಬೈ: ಭಾನುವಾರ ಸಮಸ್ತ ಭಾರತೀಯ ಕ್ರಿಕೆಟ್ ಪ್ರೇಮಿಗಳ ಮನಸ್ಸಲ್ಲಿದ್ದ ಮಹದಾಸೆ ಒಂದೇ ಆಗಿತ್ತು, ಅದೇನೆಂದರೆ ನಮ್ಮ ಟೀಂ ಇಂಡಿಯಾ ತನ್ನ ಬದ್ಧ ಎದುರಾಳಿಯಾಗಿದ್ದ ಪಾಕಿಸ್ತಾನ ತಂಡವನ್ನು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್‌ನಲ್ಲಿ ಹೇಗಾದರೂ ಬಗ್ಗುಬಡಿಯಲೇಬೇಕೆಂಬ ಶುಭ ಹಾರೈಕೆ. ಕೊನೆಗೂ ಕೋಟ್ಯಂತರ ಭಾರತೀಯರ ಆ ಕೋರಿಕೆ ಭಾನುವಾರ ರಾತ್ರಿ ಈಡೇರಿತು.

ಸಂಘಟಿತ ಪ್ರಯತ್ನದ ಮೂಲಕ ಟೀಂ ಇಂಡಿಯಾ, ಪಾಕಿಸ್ತಾನ ತಂಡವನ್ನು 8 ವಿಕೆಟ್‌ಗಳಿಂದ ಬಗ್ಗುಬಡಿದಾಗ ಭಾರತೀಯ ಕ್ರಿಕೆಟ್ ಪ್ರೇಮಿಗಳು ಮನಸಾರೆ ಸಂಭ್ರಮಿಸಿ ತಮ್ಮ ಹೃದಯ ಗೆದ್ದ ತಂಡವನ್ನು ಬಾಯ್ತುಂಬಾ ಶ್ಲಾಘಿಸಿದರು. ಇಲ್ಲಿನ ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಪಾಕಿಸ್ತಾನ 49.4 ಓವರ್‌ಗಳಲ್ಲಿ 241 ರನ್‌ಗೆ ಸರ್ವಪತನ ಕಂಡಿತು, ಅದಕ್ಕೆ ಉತ್ತರವಾಗಿ ಭಾರತ ತಂಡವು 42.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ತನ್ನ ಗುರಿ ತಲುಪಿ ಗೆಲುವಿನ ಕೇಕೆ ಹಾಕಿತು.

ಪಂದ್ಯದ ಆರಂಭದಲ್ಲಿ ಪಾಕಿಸ್ತಾನದ ಇನಿಂಗ್ಸ್ ಆರಂಭವಾದಾಗ ಮೊದಲ ಓವರ್ ಎಸೆದ ಶಮಿ 5 ವೈಡ್ ಬಾಲ್ ಎಸೆದರು. ಕಳೆದ ಪಂದ್ಯದಲ್ಲಿ ನಿಧಾನಗತಿಯ ಬ್ಯಾಟಿಂಗ್ ಮಾಡಿ ಟೀಕೆಗೆ ಗುರಿಯಾಗಿದ್ದ ಮಾಜಿ ನಾಯಕ ಬಾಬರ್ ಅಜಂ ಈ ಪಂದ್ಯದಲ್ಲಿ ಕೊಂಚ ಬಿರುಸಿನ ಬ್ಯಾಟಿಂಗ್ ನಡೆಸಿ 23 ರನ್ ಬಾರಿಸಿದರು, ಅವರ ವಿಕೆಟ್ ಹಾರ್ದಿಕ್ ಪಾಂಡ್ಯ ಪಾಲಾಯಿತು. ಫಖರ್ ಜಮಾನ್ ಬದಲು ಆಡಿದ ಇಮಾಮ್‌ನ್ ಕದಿಯುವ ಯತ್ನದಲ್ಲಿ ಅಕ್ಷರ್ ಪಟೇಲ್ ನೇರವಾಗಿ ಚೆಂಡನ್ನು ವಿಕೆಟ್‌ಗೆ ಎಸೆದು ರನೌಟ್ ಮಾಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 41 ರನ್ ಒಟ್ಟುಗೂಡಿಸಿತು.

ರಿಜ್ವಾನ್-ಶಕೀಲ್ ಆಸರೆ: ಆರಂಭಿಕರಿಬ್ಬರ ವಿಕೆಟ್ ಪತನದ ಬಳಿಕ ಜತೆಯಾದ ನಾಯಕ ರಿಜ್ವಾನ್ ಮತ್ತು ಶಕೀಲ್ ತಾಳ್ಮೆಯುತ ಬ್ಯಾಟಿಂಗ್ ಮೂಲಕ ಕೆಲ ಕಾಲ ಭಾರತದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿ ರನ್ ಕಸಿದರು. ಉತ್ತಮವಾಗಿ ಆಡುತ್ತಿದ್ದ ಈ ಜೋಡಿಯನ್ನು ಕೊನೆಗೆ ಅಕ್ಷರ್ ಪಟೇಲ್ ಬೇರ್ಪಡಿಸಿದರು. 46 ರನ್ ಗಳಿಸಿದ್ದ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ರಿಜ್ವಾನ್ ವಿಕೆಟ್ ಪತನಗೊಂಡು 8 ರನ್ ಅಂತರದಲ್ಲಿ ಶಕೀಲ್ ವಿಕೆಟ್ ಕೂಡ ಬಿತ್ತು. ಮೂರನೇ ವಿಕೆಟ್‌ಗೆ ಶಕೀಲ್ ಮತ್ತು ರಿಜ್ವಾನ್ 104 ರನ್ ರಾಶಿ ಹಾಕಿದರು. ಶಕೀಲ್ 5 ಬೌಂಡರಿ ನೆರವಿನಿಂದ 62 ರನ್ ಬಾರಿಸಿ ಅರ್ಧಶತಕ ಪೂರ್ತಿಗೊಳಿಸಿದರು.

ವಿರಾಟ್ ಕೊಹ್ಲಿ ದಾಖಲೆ

ವಿರಾಟ್ ಕೊಹ್ಲಿ ಪಾಕಿಸ್ತಾನ ವಿರುದ್ಧದ ಚಾಂಪಿಯನ್ಸ್ ಟ್ರೋಫಿ ಪಂದ್ಯದಲ್ಲಿ ನಸೀಮ್ ಶಾ ಅವರ ಕ್ಯಾಚ್ ಪಡೆಯುತ್ತಿದ್ದಂತೆ, ವಿಕೆಟ್ ಕೀಪರ್ ಹೊರತುಪಡಿಸಿ ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ಕ್ಯಾಚ್ ಪಡೆದ ಮೊದಲ ಭಾರತೀಯ ಹಾಗೂ ವಿಶ್ವದ ಮೂರನೇ ಫೀಲ್ಡರ್ ಎನಿಸಿಕೊಂಡರು. ಇದೇ ವೇಳೆ ಮಾಜಿ ನಾಯಕ ಹಾಗೂ ಆಟಗಾರ ಮೊಹಮ್ಮದ್ ಅಜರುದ್ದೀನ್ (156) ದಾಖಲೆ ಪತನಗೊಂಡಿತು ಬಾಂಗ್ಲಾ ವಿರುದ್ಧದ ಕಳೆದ ಪಂದ್ಯದಲ್ಲಿ ಮೂರು ಕ್ಯಾಚ್ ಹಿಡಿದಿದ್ದ ವಿರಾಟ್ ಕೊಹ್ಲಿ, ಅಜರುದ್ದೀನ್ ದಾಖಲೆ ಸರಿಗಟ್ಟಿದ್ದರು. ಇದೀಗ ಪಾಕ್ ವಿರುದ್ಧ ಒಟ್ಟು 2 ಕ್ಯಾಚ್ ಪಡೆದು ಅಜರುದ್ದೀನ್ ಅವರನ್ನು ಹಿಂದಿಕ್ಕಿದ್ದಾರೆ. ಸದ್ಯ ಕೊಹ್ಲಿ 158 ಕ್ಯಾಚ್ ಹಿಡಿದಿದ್ದಾರೆ. ವಿಶ್ವ ದಾಖಲೆ ಶ್ರೀಲಂಕಾದ ಮಾಜಿ ಆಟಗಾರ ಮಹೇಲಾ ಜಯವರ್ಧನೆ ಹೆಸರಿನಲ್ಲಿದ್ದು, ಅವರು 218 ಕ್ಯಾಚ್ ಹಿಡಿದಿದ್ದಾರೆ. ದ್ವಿತೀಯ ಸ್ಥಾನದಲ್ಲಿ ಆಸೀಸ್‌ನ ರಿಕಿ ಪಾಂಟಿಂಗ್ (160) ಕಾಣಿಸಿಕೊಂಡಿದ್ದು, ಪಾಂಟಿಂಗ್ ದಾಖಲೆ ಮುರಿಯಲು ಕೊಹ್ಲಿಗೆ ಮೂರು ಕ್ಯಾಚ್‌ಗಳ ಅಗತ್ಯವಿದೆ.

ಆ ಬಳಿಕ ಪಾಕಿಸ್ತಾನದ ವಿಕೆಟ್‌ಗಳು ಒಂದೊಂದಾಗಿ ಬಿದ್ದು, 241 ರನ್‌ಗಳಿಗೆ ಆಲೌಟ್ ಆಯಿತು. ಮೊದಲ ಪಂದ್ಯದಲ್ಲ 5 ವಿಕೆಟ್ ಪಡೆದು ಮಿಂಚಿದ್ದ ಶಮಿ, ಈ ಪಂದ್ಯದಲ್ಲಿ ಒಂದೂ ವಿಕೆಟ್ ಪಡೆಯಲು ವಿಫಲರಾದರು. ಕುಲದೀಪ್ ಯಾದವ್ 40 ರನ್ ಕೊಟ್ಟು 3 ವಿಕೆಟ್, ಹಾರ್ದಿಕ್ ಪಾಂಡ್ಯ 2 ವಿಕೆಟ್, ಹರ್ಷಿತ್ ರಾಣಾ ಹಾಗೂ ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು.

242 ರನ್‌ಗಳ ಗುರಿ ಪಡೆದ ಟೀಂ ಇಂಡಿಯಾ ಉತ್ತಮವಾಗಿಯೇ ಅಡಿಪಾಯ ಹಾಕಿತು. ನಾಯಕ ರೋಹಿತ್ ಶರ್ಮಾ ಮತ್ತು ಶುಬ್‌ಮನ್ ಗಿಲ್ ಜೋಡಿ 5 ಓವರ್‌ಗಳಲ್ಲಿ ಆರಂಭದ ವಿಕೆಟ್‌ಗೆ 31 ರನ್ ಸಂಪಾದಿಸಿತು. 20 ರನ್ ಪಡೆದಾಗ ರೋಹಿತ್ ಶರ್ಮಾ ಅಫ್ರಿದಿ ಎಸೆದ ಬಾಲ್‌ಗೆ ಬೌಲ್ಡ್ ಆದರು. ಆ ಬಳಿಕ ಗಿಲ್ ಜೊತೆ ಸೇರಿದ ವಿರಾಟ್ ಕೊಹ್ಲಿ ಟೀಂ ಇಂಡಿಯಾದ ಇನ್ನಿಂಗ್ಸ್ ಕಟ್ಟಿ ಬೆಳೆಸಿದರು.

ಗಿಲ್ 52 ಎಸೆತಗಳಲ್ಲಿ 46 ರನ್ ಗಳಿಸಿದ್ದಾಗ ತನ್ನ ವಿಕೆಟ್ ಕಳೆದುಕೊಂಡರು. ಬಳಿಕ ಮೂರನೇ ವಿಕೆಟ್‌ಗೆ ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಭಾರತದ ಇನ್ನಿಂಗ್ಸ್‌ನ್ನು ಯಶಸ್ವಿಯಾಗಿ ಮುಂದುವರಿಸಿದರು. ಆದರೆ ತಂಡದ ಮೊತ್ತ 213 ಆಗಿದ್ದಾಗ 56 ರನ್ ಗಳಿಸಿದ್ದ ಶ್ರೇಯಸ್ ಅಯ್ಯರ್ ತಮ್ಮ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿದರು. ಬಳಿಕ ಬಂದ ಹಾರ್ದಿಕ್ ಪಾಂಡ್ಯ ಕೇವಲ 8 ರನ್ ಗಳಿಸಿ ಔಟ್ ಆದರು. ವಿರಾಟ್ ಕೊಹ್ಲಿ ಜತೆ ಸೇರಿದ ಅಕ್ಷರ್ ಪಟೇಲ್ ಇನ್ನಿಂಗ್ಸ್ ಮುಂದುವರಿಸಿದರು. ಕೊನೆಗೂ ಕೊಹ್ಲಿ 100 ರನ್ (111 ಬಾಲ್) ಗಳಿಸಿ ಭಾರತಕ್ಕೆ ಸುಲಭ ಜು ತಂದುಕೊಟ್ಟರು, ಅಕ್ಷರ್ ಪಟೇಲ್ 3 ರನ್ ಗಳಿಸಿ ಅಜೇಯರಾಗುಳಿದರು.ಡ

ಪಂತ್ ವೃತ್ತಿಜೀವನ ಹಾಳಾಗುತ್ತಿದೆ: ಗಂಭೀರ್ ವಿರುದ್ಧ ವಾಸನ್ ಆರೋಪ

ದೆಹಲಿ: ಭಾರತ ಏಕದಿನ ತಂಡದಲ್ಲಿ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ರಿಷಭ್ ಪಂತ್‌ಗೆ ಸರಿಯಾಗಿ ಅವಕಾಶ ನೀಡದ ಹೆಡ್‌ಕೋಚ್ ಗೌತಮ್ ಗಂಭೀರ್ ವಿರುದ್ಧ ಮಾಜಿ ವೇಗಿ ಅತುಲ್ ವಾಸನ್ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಪಂತ್‌ರನ್ನು ನಿಯಮಿತವಾಗಿ ಬೆಂಚ್ ಕಾಯಿಸುವ ಮೂಲಕ ಗಂಭೀರ್, ಅವರ ವೃತ್ತಿಜೀವನವನ್ನು ಹಾಳು ಮಾಡುತ್ತಿದ್ದಾರೆಂದು ಗಂಭೀರ ಆರೋಪ ಮಾಡಿದ್ದಾರೆ. ಗಾಯದಿಂದ ಕಮ್‌ಬ್ಯಾಕ್ ಮಾಡಿದ ಬಳಿಕ ಪಂತ್, ಶ್ರೀಲಂಕಾ ವಿರುದ್ಧದ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಆಡಿದ್ದರು. ನಂತರ, ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೂ ಆಯ್ಕೆಯಾಗಿದ್ದ ಅವರನ್ನು ಒಂದೇ ಒಂದು ಪಂದ್ಯದಲ್ಲಿಯೂ ಆಡಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಎಡಗೈ ಆಟಗಾರ ಮೂರೂ ಪಂದ್ಯಗಳಲ್ಲಿ ಬೆಂಚ್ ಕಾದಿದ್ದರು.

'ರಿಷಭ್ ಪಂತ್ ಆಡದೆ ಇರುವ ಬಗ್ಗೆ ನನಗೆ ಒಂದೇ ಒಂದು ಬೇಸರವಿದೆ. ಇದಕ್ಕೆ ಕಾರಣವೇನೆಂದು ನನಗೆ ತಿಳಿದಿಲ್ಲ. ತಂಡದಲ್ಲಿ ಏನು ನಡೆಯುತ್ತಿದೆ? ಪಂತ್ ಒಬ್ಬ ಚುರುಕಾದ ಆಟಗಾರ ಹಾಗೂ ಅವರ ಬಗ್ಗೆ ಎದುರಾಳಿ ತಂಡಗಳಿಗೆ ಆತಂಕವಿದೆ. ಪಂತ್ ಒಬ್ಬರೇ ತಂಡವನ್ನು ಗೆಲ್ಲಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆಂದು ಗಂಭೀರ್‌ಗೆ ಗೊತ್ತಿದೆ, ರಿಷಭ್ ಪಂತ್ ಇನ್ನೂ ಬೆಂಚ್ ಕಾಯುತ್ತಿದ್ದಾರೆ. ಆಟಗಾರರನ್ನು ಹೀಗೆಯೇ ಹಾಳು ಮಾಡುತ್ತೀರಿ. ಒಬ್ಬ ಒಳ್ಳೆಯ ಆಟಗಾರರನ್ನು ನೀವು ಈ ರೀತಿ ಇಟ್ಟರೆ, ಆಡುತ್ತೇನಾ? ಅಥವಾ ಇಲ್ಲವಾ ಎಂಬ ಬಗ್ಗೆ ಅವರು ಸದಾ ಯೋಚನೆ ಮಾಡುತ್ತಾ ಇರುತ್ತಾರೆ ಹಾಗೂ ಆ ಆಟಗಾರ ಜೀರೋ ಆಗುತ್ತಾರೆ' ಎಂದು ಅತುಲ್ ವಾಸನ್ ಹೇಳಿದ್ದಾರೆ.

2020ರಲ್ಲಿ ಭಾರತ ಏಕದಿನ ತಂಡದಲ್ಲಿ ರಿಷಭ್ ಪಂತ್ ತಮ್ಮ ಸ್ಥಾನವನ್ನು ಕೆ.ಎಲ್. ರಾಹುಲ್‌ಗೆ ಬಿಟ್ಟುಕೊಟ್ಟಿದ್ದರು. 2020ರಲ್ಲಿ ಅವರು ಒಂದೇ ಒಂದು ಏಕದಿನ ಪಂದ್ಯವನ್ನು ಆಡಿದ್ದರು. ನಂತರ 2021ರಲ್ಲಿ ಅವರು 2 ಪಂದ್ಯಗಳನ್ನು ಮಾತ್ರ ಆಡಿದ್ದರು. 2022ರಲ್ಲಿ ಭಾರತದ ಹನ್ನೊಂದರ ಬಳಗಲದಲಿ ಪಂತ್ ನಿಯಮಿತ ಆಟಗಾರರಾಗಿದ್ದರು, ಆದರೆ ಅವರು ಈಗ ತಮ್ಮ ಸ್ಥಾನವನ್ನು ಕಳೆದುಕೊಂಡಿದ್ದರು.

ತವರಿನ ಮೈದಾನದಲ್ಲಿ ಮಂದಾನ ತಂಡಕ್ಕೆ ದೀಪ್ತಿ ಶರ್ಮಾ ತಂಡ ಎದುರಾಳಿ

ಇಂದು ಆರ್‌ಸಿಬಿ vs ವಾರಿಯರ್ಸ್ ಪಂದ್ಯ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸೋಮವಾರ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ಟೂರ್ನಿಯ ಪಂದ್ಯದಲ್ಲಿ ಅತಿಥೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಯು.ಪಿ ವಾರಿಯರ್ಸ್ ತಂಡದ ವಿರುದ್ಧ ಸೆಣಸಲಿದೆ.

ಸ್ಮೃತಿ ಮಂದಾನ ನೇತೃತ್ವದ ಕಳೆದ ಬಾರಿಯ ಚಾಂಪಿಯನ್ ಆಗಿರುವ ಆರ್‌ಸಿಬಿ ತಂಡವು ಈ ಸಲದ ಟೂರ್ನಿಯಲ್ಲಿ ಈಗಾಗಲೇ ಒಟ್ಟು ಮೂರು ಪಂದ್ಯಗಳನ್ನು ಆಡಿದ್ದು, ಆ ಪೈಕಿ ಎರಡು ಪಂದ್ಯಗಳನ್ನು ಆಡಿ 4 ಪಾಯಿಂಟ್ ಕಲೆ ಹಾಕಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಮೊದಲ ಪಂದ್ಯದಲ್ಲಿ ಆರ್‌ಸಿಬಿ ತಂಡವು ಗುಜರಾತ್ ಜೈಂಟ್ಸ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿ ಪಂದ್ಯವನ್ನು ಗೆದ್ದಿತ್ತು. ಎರಡನೇ ಪಂದ್ಯದಲ್ಲಿ ಆರ್‌ಸಿಬಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 8 ವಿಕೆಟ್‌ಗಳ ಗೆಲುವನ್ನು ಕಂಡುಕೊಂಡಿತ್ತು. ಆದರೆ ಫೆ.21ರಂದು ನಡೆದಿದ್ದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಗೆದ್ದು, ಆರ್‌ಸಿಬಿ ಈ ಸಲ ಮೊದಲ ಸೋಲನ್ನು ಕಂಡಿತ್ತು. ಆರ್‌ಸಿಬಿ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲೂ ಸಮತೋಲನ ವಾಗಿರುವುದರಿಂದ ಸೋಮವಾರದ ಪಂದ್ಯದಲ್ಲಿ ತವರಿನ ಪ್ರೇಕ್ಷಕರ ಬೆಂಬಲ ಮಂದಾನ ನಾಯಕತ್ವದ ತಂಡಕ್ಕೆ ಚಿನ್ನಸ್ವಾಮಿ ಮೈದಾನದಲ್ಲಿ ಸಿಗುವುದಂತೂ ಖಚಿತ.

ಆರ್‌ಸಿಬಿಯನ್ನು ಎದುರಿಸುತ್ತಿರುವ ಯುಪಿ ವಾರಿಯರ್ಸ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಸೋಲೊಪ್ಪಿಕೊಂಡಿತ್ತು. ಮುಂದಿನ ಪಂದ್ಯದಲ್ಲೂ ವಾರಿಯರ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ ವಿರುದ್ಧ ಸೋಲೊಪ್ಪಿತ್ತು. ಆದರೆ ಆ ನಂತರದ ಪಂದ್ಯದಲ್ಲಿ ಯುಪಿ ವಾರಿಯರ್ಸ್ ಡೆಲ್ಲಿ ಕ್ಯಾಪಿಟಲ್ ವಿರುದ್ಧ 3 ವಿಕೆಟ್‌ಗಳಿಂದ ಗೆದ್ದು, ಎರಡು ಪಾಯಿಂಟ್‌ಗಳೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇದೀಗ ಜಯದ ಹಾದಿಗೆ ಮರಳಿರುವ ಕಾರಣಕ್ಕಾಗಿ ದೀಪ್ತಿ ಶರ್ಮಾ ನಾಯಕತ್ವದ ಯುಪಿ ವಾರಿಯರ್ಸ್ ತಂಡವು ಸೋಮವಾರದ ಪಂದ್ಯದಲ್ಲಿ ಆರ್‌ಸಿಬಿಗೆ ಪ್ರಬಲ ಪೈಪೋಟಿ ನೀಡುವ ಸಾಧ್ಯತೆ ಇದೆ.

6 ಟು 6ನಲ್ಲಿ ಥ್ರಿಲ್ಲರ್ ಕಥೆ



ಓಟಿಟಿ ಸ್ಟಾರ್ಸ್

ನಟ ವಿಜಯ್ ರಾಘವೇಂದ್ರ ಸಸ್ಪೆನ್ಸ್, ಥ್ರಿಲ್ಲರ್ ಕಥೆಗಳನ್ನೇ ಹೆಚ್ಚಾಗಿ ಆಯ್ದುಕೊಳ್ಳುತ್ತಿದ್ದಾರೆ. ಅಂತೆಯೇ ಈಗ ಎಫ್ ಐ ಆರ್ 6 ಟು 6 ಚಿತ್ರದಲ್ಲಿ ನಟಿಸಿದ್ದು ಚಿತ್ರ ಈ ವಾರ ತೆರೆಗೆ ಬರಲಿದೆ. ರಮಣ ರಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರವನ್ನು ಭಾಗ್ಯರಮೇಶ್ ನಿರ್ಮಾಣ ಮಾಡಿದ್ದಾರೆ.

ಒಂದೇ ರಾತ್ರಿಯಲ್ಲಿ ನಡೆಯುವ ಸಸ್ಪೆನ್ಸ್, ಥ್ರಿಲ್ಲಿಂಗ್ ಕಥೆಯಿದು. ಯುವಕನೊಬ್ಬ ಒಂದು ಸಮಸ್ಯೆಯಲ್ಲಿ ಸಿಲುಕಿ ನಂತರ ಆ ಸಂದರ್ಭವನ್ನು ಹೇಗೆ ಫೇಸ್ ಮಾಡುತ್ತಾನೆ ಎನ್ನುವುದನ್ನು ಸಂಜೆ ಆರರಿಂದ ಬೆಳಗಿನ ಜಾವ ಆರರವರೆಗೆ ನಡೆಯುವ ಕಥೆಯ ಮೂಲಕ ಥ್ರಿಲ್ಲಿಂಗ್ ಆಗಿ ಕಟ್ಟಿಕಕೊಟ್ಟಿದ್ದೇವೆ. ಮೂವತ್ತೈದು ದಿನ ರಾತ್ರಿ ವೇಳೆಯಲ್ಲೇ ಶೂಟ್ ಮಾಡಿದ್ದೇವೆ ಎಂದು ನಿರ್ದೇಶಕ ರಮಣ ರಾಜ್ ಹೇಳಿದರು.

ಸಿರಿರಾಜ್, ಸ್ವಾತಿ, ಯಶಾ ಶೆಟ್ಟಿ ಮೂವರು ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ನಾಗೇಂದ್ರ ಅರಸು, ಯಶ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಮಾಲಿವುಡ್ ನಲ್ಲಿ ಬೆಳಗಿದ ಭಾಸ್ಕರ

ಕನ್ನಡಿಗ ಭಾಸ್ಕರ್ ಕನ್ನಡದ ವೀರಪರಂಪರೆ, ವಾರೆವ್ಹಾ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಮಾತ್ರವಲ್ಲ ಎಂ.ಎಸ್.ಧೋನಿ, ನಾಮ್ ಶಭನಾ ದಂತಹ ಬಾಲಿವುಡ್ ಚಿತ್ರಗಳಲ್ಲಿಯೂ ಅಭಿನಯಿಸಿ ಮನಗೆದ್ದಿದ್ದಾರೆ. ಈಗ ಸದ್ದಿಲ್ಲದೆ ಮಾಲಿವುಡ್ ಅಂಗಳಕ್ಕೂ ಕಾಲಿಟ್ಟಿದ್ದಾರೆ. ಮಲೆಯಾಳಂನ ವೃಷಭ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ವಿಶೇಷ ಎಂದರೆ ವೃಷಭ ಚಿತ್ರದಲ್ಲಿ ಮಾಲಿವುಡ್ ಸೂಪರ್ ಸ್ಟಾರ್ ಮೋಹನ್ ಲಾಲ್ ಜತೆಗೆ ತೆರೆ ಹಂಚಿಕೊಂಡಿದ್ದಾರೆ. ಈಗಾಲೇ ಶೂಟಿಂಗ್ ಮುಗಿಸಿರುವ ವೃಷಭ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಇದೇ ವರ್ಷ ತೆರೆಗೆ ಬರಲಿದೆ. ವೃಷಭ ಚಿತ್ರದ ಕುರಿತಂತೆ ನಟ ಭಾಸ್ಕರ್, ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ: ಕ್ರಿಕೆಟರ್ ಆಗಿದ್ದ ನಿಮಗೆ ಸಿನಿಮಾ ನಂಟು ಬೆಳೆದಿದ್ದು ಹೇಗೆ?

ಭಾಸ್ಕರ್: ನಾನು ಸಿನಿಮಾಕ್ಕೆ ಬರುತ್ತೇನೆ ಅಂತ ಅಂದುಕೊಂಡಿರಲಿಲ್ಲ. ನನಗೆ ಸಿನಿಮಾದ ನಂಟು ಬೆಳೆದಿದ್ದು ಸ್ನೇಹಲೋಕದಿಂದ ಸ್ನೇಹಲೋಕದಿಂದ. ವಿಷ್ಣು ಸರ್ ಕಟ್ಟಿದ್ದ ಸ್ನೇಹಲೋಕದಿಂದ ಸಾಹಸ ಸಿಂಹ ಅವರ ಜತೆ ಒಡನಾಡ ಆರಂಭವಾಯಿತು. ಶಿವರಾಮಣ್ಣ, ಅಭಿಜಿತ್, ಶೋಭರಾಜ್, ವಿಜಯಕುಮಾರ್ ಜತೆಗೂ ಬಾಂಧವ್ಯ ಬೆಳೆಯಿತು. ಎಲ್ಲರೂ ಒಟ್ಟಿಗೆ ಕ್ರಿಕೆಟ್ ಆಡುತ್ತಿದ್ದೆವು. ಹಾಗಾಗಿ ಹಿರಿಯರ ಜತೆಗೆ ಬಾಂಧವ್ಯ ಗಟ್ಟಿಯಾಯಿತು. ಈ ನಡುವೆ ರಂಗಭೂಮಿ ನಿರ್ದೇಶಕರೊಬ್ಬರು ಪರಿಚಿತರಾದರು. ಅವರಿಂದ ನಟನೆ ಕಲಿತು, ಒಂದಷ್ಟು ನಾಟಕಗಳಲ್ಲಿಯೂ ಅಭಿನಯಿಸಿದೆ. ಒಂದು ದಿನ ನಮ್ಮ ಡ್ರಾಮಾ ಶೋಗೆ ನಿರ್ದೇಶಕ ಎಸ್.ನಾರಾಯಣ್ ಬಂದಿದ್ದರು. ನನ್ನ ಅಭಿನಯ ನೋಡಿ ವೀರಪರಂಪರೆ ಸಿನಿಮಾದಲ್ಲಿ ಅಭಿನಯಿಸಲು ಅವಕಾಶ ಕೊಟ್ಟರು.

ವೀರಪರಂಪರೆ ಚಿತ್ರದ ಬಳಿಕ ವಾರೆವ್ಹಾ ಸಿನಿಮಾ ಮಾಡಿದೆ. ಆ ನಂತರ ಈ ಕ್ಷಣ ಸಿನಿಮಾದಲ್ಲಿಯೂ ನಟಿಸಿದೆ. ಅಲ್ಲಿಂದ ಪೂರ್ಣ ಪ್ರಮಾಣದ ಸಿನಿಮಾ ನಟನೆ ಆರಂಭವಾಯಿತು.

ವಿ.ಸಿ: ಬಾಲಿವುಡ್ ಗೆ ಎಂಟ್ರಿಕೊಟ್ಟಿದ್ದು ಹೇಗೆ?

ಭಾಸ್ಕರ್: ನಾನು ಮುಂಬೈನಲ್ಲಿ ಹಿಂದಿ, ಉರ್ದು ನಾಟಕಗಳಲ್ಲಿ ಅಭಿನಯಿಸಿದೆ. ಒಂದು ದಿನ ಆ ನಾಟಕವನ್ನು ನಿರ್ದೇಶಕ ನೀರಜ್ ಪಾಂಡೆ ನೋಡಿದ್ದರು. ಅವರಿಂದ ಎಂ.ಎಸ್. ಧೋನಿ ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತು. ಅದಾದ ಮೇಲೆ ಅಕ್ಷಯ್ ಕುಮಾರ್, ತಾಪ್ಸೀ ಪನ್ನು ಅವರ ಜತೆಗೆ ನಾಮ್ ಶಬಾನಾ ಸಿನಿಮಾದಲ್ಲಿಯೂ ನಟಿಸಿದೆ. ನಿಧಾನಕ್ಕೆ ಹೆಚ್ಚೆಚ್ಚು ಆಫರ್‌ಗಳು ಸಿಗುತ್ತಾ ಹೋದವು. ಹೀಗಿರುವಾಗಲೇ ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿದ್ದ ಸಲಗ ಸಿನಿಮಾದಲ್ಲಿ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡೆ. ಸಲಗ ಚಿತ್ರದ ಪಾತ್ರವೂ ನನ್ನ ಕೆರಿಯರ್‌ಗೆ ಹೊಸ ತಿರುವು ತಂದುಕೊಟ್ಟಿತು.

ವಿ.ಸಿ: ವೃಷಭ ಚಿತ್ರದಲ್ಲಿ ನಿಮ್ಮ ಪಾತ್ರ?

ಭಾಸ್ಕರ್: ಇದೆಲ್ಲದರ ನಡುವೆ, ಮೋಹನ್ ಲಾಲ್ ಅವರ ವೃಷಭ ಸಿನಿಮಾದಲ್ಲಿಯೂ ಚಾನ್ಸ್ ಸಿಕ್ಕಿತು. ವೃಷಭ ಚಿತ್ರದಲ್ಲಿ ನನ್ನದು ಮನೋವೈದ್ಯನ ಪಾತ್ರ. ಮೋಹನ್ ಲಾಲ್ ಅವರಿಗೆ ಟ್ರೀಟ್‌ಮೆಂಟ್ ಕೊಡುವ ಡಾಕ್ಟರ್ ಆಗಿ ಕಾಣಿಸಿಕೊಂಡಿದ್ದೇನೆ. ಕನ್ನಡದ ನಿರ್ದೇಶಕ ನಂದಕಿಶೋರ್ ಈ ಚಿತ್ರಕ್ಕೆ ನಿರ್ದೇಶನ ಮಾಡುತ್ತಿದ್ದಾರೆ. ಈಗಾಗಲೇ ವೃಷಭ ಚಿತ್ರದಲ್ಲಿನ ನನ್ನ ಪಾತ್ರದ ಶೂಟಿಂಗ್ ಮುಗಿದಿದೆ.

ವಿ.ಸಿ: ಮೋಹನ್‌ಲಾಲ್ ಜತೆ ನಟಿಸಿದ್ದು ಹೇಗನ್ನಿಸಿತು?

ಭಾಸ್ಕರ್: ಮೋಹನ್ ಲಾಲ್ ಅವರ ಜತೆಗೆ ಸ್ಕ್ರೀನ್ ಶೇರ್ ಮಾಡಿದ್ದು ಸಂತಸದ ಜತೆಗೆ ಹೆಮ್ಮೆ ತಂದಿದೆ. ಮೋಹನ್ ಲಾಲ್ ಅವರ ಜತೆಗೆ ಒಂದೇ ಒಂದು ಪಾತ್ರ ಮಾಡಿದರೆ ಸಾಕು ಎಂಬುದು ಪ್ರತಿ ಕಲಾವಿದನ ಕನಸು. ಅದು ನನ್ನ ಕಸನು ಆಗಿತ್ತು. ಈ ಚಿತ್ರದ ಮೂಲಕ ಅದು ಈಡೇರಿದೆ. ಅವರಿಂದ ಕಲಿಯಲು ಸಾಕಷ್ಟು ವಿಷಯಗಳು ಸಿಗುತ್ತವೆ. ಅವು ಜೀವನದುದ್ದಕ್ಕೂ ನೆನಪಿನಲ್ಲಿ ಉಳಿಯುತ್ತವೆ.

ಬೆಳ್ಳಿತೆರೆಗೆ ಗಂಗೂಲಿ ಬಯೋಪಿಕ್

ವಿಶ್ವ ಕ್ರಿಕೆಟ್‌ನಲ್ಲಿ ಗುರುತಿಸಿಕೊಂಡ, ಟೀಂ ಇಂಡಿಯಾ ಮಾಜಿ ಕ್ಯಾಪ್ಟನ್ ಸೌರವ್ ಗಂಗೂಲಿ ಅವರ ಜೀವನ ಚರಿತೆ ಬೆಳ್ಳಿತೆರೆಗೆ ಬರಲಿದೆ. ಈ ಹಿಂದಿನಿಂದಲೂ ಗಂಗೂಲಿ ಬಯೋಪಿಕ್ ಸುದ್ದಿ ಸದ್ದು ಮಾಡುತ್ತಿತ್ತು. ಅಂತು ಈಗ ಚಿತ್ರ ಸೆಟ್ಟೇರಲು ಸಿದ್ಧವಾಗಿದೆ. ಸೌರವ್ ಗಂಗೂಲಿ ಅವರ ಪಾತ್ರದಲ್ಲಿ ಯಾರು ನಟಿಸಬಹುದು ಎಂಬ ಕುತೂಹಲವಿತ್ತು. ಅದಕ್ಕೆ ಈಗ ಉತ್ತರ ಸಿಕ್ಕಿದೆ. ನಟ ರಾಜ್‌ಕುಮಾರ್ ರಾವ್, ಗಂಗೂಲಿ ಪಾತ್ರದಲ್ಲಿ ಅಭಿನಯಿಸಲಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿರಲಿದೆ. ಸ್ತ್ರೀ 2 ಚಿತ್ರದ ಯಶಸ್ಸಿನ ಬಳಿಕ ಭರ್ಜರಿ ಬೇಡಿಕೆ ಪಡೆದಿರುವ ರಾಜ್ ಕುಮಾರ್ ರಾವ್ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಹಾಗಾಗಿ ಸೌರವ್ ಗಂಗೂಲಿ ಬಯೋಪಿಕ್ ಚಿತ್ರೀಕರಣ ಕೊಂಚ ತಡವಾಗಲಿದೆ. ಈ ಚಿತ್ರವನ್ನು ಕರಣ್ ಶರ್ಮ ನಿರ್ದೇಶನ ಮಾಡಲಿದ್ದಾರೆ. ಈಗಾಗಲೇ ಸಚಿನ್, ಧೋನಿ ಯಶೋ ಗಾಥೆಯೂ ತೆರೆಗೆ ಬಂದು ಪ್ರೇಕ್ಷಕರನ್ನು ಸೆಳೆದಿದೆ.

ಚಿತ್ರೀಕರಣ ಮುಗಿಸಿದ ಗಣಿ

ಈ ಹಿಂದೆ ತೆರೆಗೆ ಬಂದ ನಮ್ ಗಣಿ ಬಿ.ಕಾಂ.ಪಾಸ್ ಚಿತ್ರ ಭರ್ಜರಿ ಯಶಸ್ಸು ಪಡೆದಿತ್ತು. ಈ ಯಶಸ್ಸಿನ ಖುಷಿಯಲ್ಲಿ ಈ ಚಿತ್ರ ಎರಡನೇ ಭಾಗವೂ ಸೆಟ್ಟೇರಿತ್ತು. ಈಗ ಈ ಸಿನಿಮಾದ ಶೂಟಿಂಗ್ ಮುಕ್ತಾಯವಾಗಿದೆ.

ಗಣಿ ಬಿ ಕಾಂ ಪಾಸ್ 2 ಫ್ಯಾಮಿಲಿ ಡ್ರಾಮಾ ಚಿತ್ರವಾಗಿದ್ದು, ಕೌಟುಂಬಿಕ ಕಥೆಯ ಜತೆಗೆ ಸೆಂಟಿಮೆಂಟ್ ಸ್ಟೋರಿಯೂ ಇಲ್ಲಿ ಬೆರೆತಿದೆ. ಜೀವನದ ಮೌಲ್ಯಗಳು ಕಥೆಯಲ್ಲಿ ಹಾಸು ಹೊಕ್ಕಾಗಿವೆ.

ಈ ಚಿತ್ರವನ್ನು ಅಭಿಷೇಕ್ ಶೆಟ್ಟಿ ನಿರ್ದೇಶಿಸಿ ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದಾರೆ. ಆ ಮೂಲಕ ಪೂರ್ಣ ಪ್ರಮಾಣದ ನಾಯಕನಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಹೃತಿಕಾ ಶ್ರೀನಿವಾಸ್, ದಿವ್ಯಾ ಸುರೇಶ್, ಸುಧಾ ಬೆಳವಾಡಿ, ಜಹಂಗೀರ್, ರಾಘು ರಾಮನಕೊಪ್ಪ ಮುಂತಾದವರು ತಾರಾಗಣದಲ್ಲಿದ್ದಾರೆ. ಅದ್ವಿ ಕ್ರಿಯೇಷನ್ಸ್ ನಲ್ಲಿ ಎಸ್ ಪ್ರಶಾಂತ್ ಶೆಟ್ಟಿ ಮತ್ತು ಪ್ರಶಾಂತ್ ರೆಡ್ಡಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸಿನಿಮಾದ ಹಾಡುಗಳಿಗೆ ಆನಂದ್ ರಾಜವಿಕ್ರಮ್ ಸಂಗೀತ ಸಂಯೋಜಿಸಿದ್ದಾರೆ.

ನಿಂಬಿಯಾ ಬನಾದ ಮ್ಯಾಗ ಟೀಸರ್ ಮೆಚ್ಚಿದ ಶಿವಣ್ಣ

ದೊಡ್ಮನೆಯ ಮತ್ತೊಂದು ಕುಡಿ ಷಣ್ಮುಖ ಗೋವಿಂದರಾಜ್ ನಿಂಬಿಯಾ ಬನಾದ ಮ್ಯಾಗ ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಷಣ್ಮುಖ, ಅಶೋಕ್ ಕಡಬ ನಿರ್ದೇಶಿಸಿರುವ ಈ ಚಿತ್ರವನ್ನು ವಿ. ಮಾದೇಶ್ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದ ಟೀಸರ್ ಬಿಡುಹಡೆಯಾಗಿದೆ. ಟೀಸರ್ ವಿಕ್ಷಿಸಿದ ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್ ಮೆಚ್ಚಿಕೊಂಡಾಡಿದ್ದಾರೆ. ರಾಘವೇಂದ್ರ ರಾಜಕುಮಾರ್, ಅಶ್ವಿನಿ ಪುನೀತ್ ರಾಜಕುಮಾರ್ ಹಾಗೂ ಶ್ರೀಮುರಳಿ ಕೂಡ ಟೀಸರ್ ನೋಡಿ, ಚಿತ್ರತಂಡಕ್ಕೆ ಶುಭಹಾರೈಸಿದ್ದಾರೆ. ಚಿತ್ರೀಕರಣ ಪೂರ್ಣಗೊಳಿಸಿ ತೆರೆಗೆ ಬರಲು ಸಿದ್ದವಾಗಿರುವ ಈ ಚಿತ್ರದ ಟ್ರೇಲರ್ ಅನ್ನು ಶಿವರಾಜಕುಮಾರ್ ಅವರೆ ಬಿಡುಗಡೆ ಮಾಡಲಿದ್ದಾರೆ.

ಕೌಟುಂಬಿಕ ಕಥೆಯ ಈ ಚಿತ್ರವನ್ನು ಭಾವನಾತ್ಮಕ ನೆಲೆಗಟ್ಟಿನಲ್ಲಿ ಕಟ್ಟಿಕೊಡಲಾಗಿದೆ. ಮಲೆನಾಡಿನ ಸುಂದರ ತಾಣದಲ್ಲಿ ಚಿತ್ರೀಕರಣ ನಡೆಸಲಾಗಿದೆ.

ನಿಂಬಿಯಾ ಬನಾದ ಮ್ಯಾಗ ಚಿತ್ರ ಪೇಜ್ 1 ಹಾಗೂ ಪೇಜ್ 2 ಎಂದು ಎರಡು ಭಾಗಗಳಲ್ಲಿ ಮೂಡಿಬರಲಿದೆ. ಮೊದಲ ಪೇಜ್ 1 ಬಿಡುಗಡೆಯಾಗೆ ಸಿದ್ಧವಾಗಿದ್ದು, ಪೇಜ್ 2 ಚಿತ್ರೀಕರಣ ಭರದಿಂದ ಸಾಗಿದೆ.

ಷಣ್ಮುಖ ಅವರಿಗೆ ನಾಯಕಿಯಾಗಿ ತನುಶ್ರೀ ಅಭಿನಯಿಸಿದ್ದಾರೆ. ಇಪ್ಪತ್ತೈದು ವರ್ಷಗಳ ನಂತರ ಮೇಘಮಾಲೆ ಚಿತ್ರದ ಖ್ಯಾತಿಯ ಸುನಾದ್ ರಾಜ್ ಈ ಚಿತ್ರದಲ್ಲಿ ನಟಿಸಿದ್ದಾರೆ. ತ್ರಿಶಾ, ಪಂಕಜ್ ನಾರಾಯಣ್, ಸಂಗೀತಾ, ಭವ್ಯಾ, ರಾಮಕೃಷ್ಣ, ಮೂಗು ಸುರೇಶ್, ಪದ್ಮಾ ವಾಸಂತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಾಲ್ಕು ಹಾಡುಗಳಿರುವ ಈ ಚಿತ್ರಕ್ಕೆ ಆರೋನ್ ಕಾರ್ತಿಕ್ ಸಂಗೀತ ಸಂಯೋಜಿಸಿದ್ದಾರೆ. ಪಳನಿ ಡಿ ಸೇನಾಪತಿ ಹಿನ್ನೆಲೆ ಸಂಗೀತ, ಸಿದ್ದು ಕಾಂಚನಹಳ್ಳಿ ಛಾಯಾಗ್ರಹಣ, ರವಿತೇಜ ಸಂಕಲನ ಹಾಗೂ ಮದನ್ ಹರಿಣಿ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.